ಪ್ರಜಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಸಿಲಿಂಡರ್ 'ಭಾರ'

ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾದ ಕಾರಣ ಮಂಗಳೂರಿನಲ್ಲಿ ಮಹಿಳೆಯೊಬ್ಬರು ತಲೆ ಮೇಲೆ ಸಿಲಿಂಡರ್ ಹೊತ್ತುಕೊಂಡು ಪ್ರತಿಭಟನೆ ನಡೆಸಿದರು

ಜಲಸಂಧಿ ದಾಟಿದ 2 ಹಡಗುಗಳು

ಕೊಲ್ಲಿ ರಾಷ್ಟ್ರಗಳಿಂದ ಎಲ್‌ಪಿಜಿ ಹೊತ್ತು ತರುತ್ತಿರುವ ಭಾರತದ ನೌಕೆಗಳು

ನವದೆಹಲಿ (ಪಿಟಿಐ): ಕೊಲ್ಲಿ ರಾಷ್ಟ್ರಗಳಿಂದ ಎಲ್‌ಪಿಜಿ ಹೊತ್ತು ತರುತ್ತಿರುವ ಭಾರತದ ಎರಡು ಹಡಗುಗಳು ಹೊರ್ಮುಜ್ ಜಲಸಂಧಿಯನ್ನು ಶನಿವಾರ ಬೆಳಿಗ್ಗೆ ಸುರಕ್ಷಿತವಾಗಿ ದಾಟಿವೆ.

ಈಗ, ಯುದ್ಧಪೀಡಿತ ಪ್ರದೇಶದ ಈ ಜಲಸಂಧಿಯನ್ನು ದಾಟಿರುವ ಭಾರತದ ಹಡಗುಗಳ ಒಟ್ಟು ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಜಲಸಂಧಿಯ ಪಶ್ಚಿಮ ಭಾಗದಲ್ಲಿ ಇನ್ನೂ 22 ಹಡಗುಗಳು ತಮ್ಮ ಅವಕಾಶಕ್ಕಾಗಿ ಕಾಯುತ್ತ ನಿಂತಿವೆ. ಅವುಗಳಿಗೆ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಲು ನೆರವು ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಆ ಪ್ರದೇಶದ ವಿವಿಧ ದೇಶಗಳ ಸರ್ಕಾರಗಳ ಜೊತೆ ಸಮಾಲೋಚನೆ ನಡೆಸುತ್ತಿದೆ.

ಎಲ್‌ಪಿಜಿ ಹೊತ್ತಿರುವ 'ಶಿವಾಲಿಕ್' ಮತ್ತು 'ನಂದಾದೇವಿ' ಹಡಗುಗಳು ಗುಜರಾತ್‌ನ ಮುಂದ್ರಾ ಹಾಗೂ ಕಾಂಡ್ಲಾ ಬಂದರಿನತ್ತ ಪ್ರಯಾಣ ಬೆಳೆಸಿವೆ ಎಂದು ಕೇಂದ್ರ ಜಲಸಾರಿಗೆ ಸಚಿವಾಲಯದ

ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು. ಈ ಎರಡು ಹಡಗುಗಳು ಒಟ್ಟು 92,700 ಟನ್ ಎಲ್‌ಪಿಜಿ ಹೊತ್ತು ತರುತ್ತಿವೆ. ಶಿವಾಲಿಕ್ ಹಡಗು ಮುಂದ್ರಾ ಬಂದರಿಗೆ ಸೋಮವಾರ ತಲುಪುವ ನಿರೀಕ್ಷೆ ಇದೆ, ನಂದಾದೇವಿ ಹಡಗು ಕಾಂಡ್ಲಾ ಬಂದರಿಗೆ ಮಂಗಳವಾರ ಬರಬಹುದು ಎಂದು ಅವರು ಹೇಳಿದರು.

ಈ ಹಡಗುಗಳಿಗೆ ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಲು ಅವಕಾಶ ದೊರೆತಿರುವುದು ಭಾರತದ ರಾಜತಾಂತ್ರಿಕ ಪ್ರಯತ್ನಕ್ಕೆ ಸಿಕ್ಕಿರುವ ಯಶಸ್ಸು ಎಂದು ವಿಶ್ಲೇಷಿಸಲಾಗಿದೆ.

ಭಾರತವು ತನ್ನ ಎಲ್‌ಪಿಜಿ ಅಗತ್ಯದ ಶೇ 60ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಆಮದು ಮಾಡಿಕೊಳ್ಳಬೇಕಿರುವ ಎಲ್‌ಪಿಜಿ ಪೈಕಿ ಶೇ 85–90ರಷ್ಟು ಕೊಲ್ಲಿ ರಾಷ್ಟ್ರಗಳಾದ ಸೌದಿ ಅರೇಬಿಯಾ, ಯುಎಇಯಿಂದ ಬರುತ್ತದೆ. ಈ ದೇಶಗಳು ತೈಲ ಮತ್ತು ಅನಿಲವನ್ನು ರವಾನಿಸಲು ಹೊರ್ಮುಜ್ ಜಲಸಂಧಿಯನ್ನು ಬಳಸಿಕೊಳ್ಳುತ್ತವೆ. ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ಸಾರಿರುವ ಯುದ್ಧದ ಕಾರಣದಿಂದಾಗಿ ಈ ಜಲಸಂಧಿಯು ಬಂದ್ ಆಗಿದೆ.

'ನಮ್ಮ ಹಲವು ಹಡಗುಗಳು ಕೊಲ್ಲಿ ಪ್ರದೇಶದಿಂದ ಹೊರಡಲು ಅನುವಾಗಿ ನಿಂತಿವೆ. ಅವುಗಳಿಗೆ ಸುರಕ್ಷಿತವಾಗಿ ಪ್ರಯಾಣ ಬೆಳೆಸಲು ಅವಕಾಶ ಮಾಡಿಕೊಡುವ ದಿಸೆಯಲ್ಲಿ ಸಂಬಂಧಪಟ್ಟ ಎಲ್ಲ ದೇಶಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿರಲು ನಾವು ಬಯಸುತ್ತೇವೆ. ನಮ್ಮ ಇಂಧನ ಭದ್ರತೆಗಾಗಿ ನಮ್ಮ ಪ್ರಯತ್ನಗಳ ಭಾಗ ಇದು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ಜಲಸಂಧಿಯ ಪಶ್ಚಿಮ ಭಾಗದಲ್ಲಿ ಸಿಲುಕಿರುವ 22 ಹಡಗುಗಳಲ್ಲಿ ಒಟ್ಟು 611 ಮಂದಿ ಸಿಬ್ಬಂದಿ ಇದ್ದಾರೆ. ಜಲಸಂಧಿಯ ಪೂರ್ವ ಭಾಗದಲ್ಲಿ ಸಿಲುಕಿರುವ ಮೂರು ಹಡಗುಗಳಲ್ಲಿ ಒಟ್ಟು 76 ಸಿಬ್ಬಂದಿ ಇದ್ದಾರೆ' ಎಂದು ಜೈಸ್ವಾಲ್ ಮಾಹಿತಿ ನೀಡಿದ್ದಾರೆ.

ಭಾರತದ ಬಂದರುಗಳಲ್ಲಿ ಕಾರ್ಯಾಚರಣೆ ಎಂದಿನಂತೆ ನಡೆಯುತ್ತಿದೆ. ಎಲ್‌ಪಿಜಿ ಹೊತ್ತು ತರುವ ಹಡಗುಗಳ ನಿಲುಗಡೆಗೆ ಆದ್ಯತೆ ನೀಡಲಾಗಿದೆ ಎಂದಿದ್ದಾರೆ.

ಜಲಸಂಧಿಯಲ್ಲಿ ಸಿಲುಕಿರುವ ಹಡಗುಗಳ ಸ್ಥಿತಿ ಏನು?

- ಹೊರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ 22 ಹಡಗುಗಳು ಸಿಲುಕಿವೆ
- ಇವುಗಳಲ್ಲಿ ಆರು ಹಡಗುಗಳಲ್ಲಿ ಎಲ್‌ಪಿಜಿ ಇದೆ
- ಒಂದು ಹಡಗು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಹೊತ್ತಿದೆ
- ನಾಲ್ಕು ಹಡಗುಗಳಲ್ಲಿ ಕಚ್ಚಾ ತೈಲ ಇದೆ
- ಒಂದು ಹಡಗಿನಲ್ಲಿ ರಾಸಾಯನಿಕ ಉತ್ಪನ್ನಗಳು ಇವೆ
- ಮೂರು ಹಡಗುಗಳು ಸರಕು ಸಾಗಣೆ ಉದ್ದೇಶದ ಕಂಟೇನರ್ ಹೊಂದಿವೆ

ಯುಕೆಪಿಗೆ ₹5 ಸಾವಿರ ಕೋಟಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಮೂರನೇ ಹಂತ ಜಾರಿಗೆ ವಶಪಡಿಸಿಕೊಳ್ಳುವ ಜಮೀನುಗಳಿಗೆ ಪರಿಹಾರ ನೀಡಲು ಪೂರಕ ಬಜೆಟ್‌ನಲ್ಲಿ ₹5 ಸಾವಿರ ಕೋಟಿ ಅನುದಾನ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಇಲ್ಲಿ ಘೋಷಿಸಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಶಂಕುಸ್ಥಾಪನೆ ಹಾಗೂ ಯುಕೆಪಿ-3ರಡಿ ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ಚೆಕ್ ವಿತರಿಸಿ ಮಾತನಾಡಿದರು. '2026–27ರ ಬಜೆಟ್‌ನಲ್ಲಿ ಈಗಾಗಲೇ ₹3 ಸಾವಿರ ಕೋಟಿ ಅನುದಾನ ನೀಡಲಾಗಿತ್ತು. ಕಡಿಮೆಯಾಗುತ್ತದೆ ಎಂಬ ಮನವಿ ಮೇರೆಗೆ ಹೆಚ್ಚುವರಿ ಅನುದಾನ ನೀಡಲಾಗುತ್ತಿದೆ' ಎಂದರು. 'ಯುಕೆಪಿ ವಿಷಯದಲ್ಲಿ 13 ವರ್ಷಗಳಾದರೂ ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಷನ್ ಹೊರಡಿಸಿಲ್ಲ' ಎಂದು ದೂರಿದರು.

▶9

ಯುಕೆಪಿ 3ನೇ ಹಂತದ ಯೋಜನೆಗಾಗಿ ಜಮೀನು ಕಳೆದುಕೊಂಡ ರೈತರಿಗೆ ಶನಿವಾರ ಬಾಗಲಕೋಟೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪರಿಹಾರ ಧನದ ಚೆಕ್ ವಿತರಿಸಿದರು. ಸಚಿವ ಆರ್‌.ಬಿ. ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಸಚಿವ ಎಚ್‌.ಕೆ. ಪಾಟೀಲ, ಶಾಸಕ ಜೆ.ಟಿ. ಪಾಟೀಲ ಪಾಲ್ಗೊಂಡಿದ್ದರು

ಸೋನಂ ವಾಂಗ್ಚೂಕ್ ಬಿಡುಗಡೆ

ಪರಿಸರ ಹೋರಾಟಗಾರನ ಬಂಧನ ಆದೇಶ ದಿಢೀರ್ ರದ್ದುಮಾಡಿದ ಕೇಂದ್ರ

ನವದೆಹಲಿ/ಜೋಧಪುರ (ಪಿಟಿಐ/ಎಎಫ್‌ಪಿ): ಪರಿಸರ ಹೋರಾಟಗಾರ ಸೋನಂ ವಾಂಗ್ಚೂಕ್ ಅವರ ಬಂಧನದ ಆದೇಶವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದು ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ಪ್ರಕಟಿಸಿದೆ.

ಸೋನಂ ವಾಂಗ್ಚೂಕ್

ಇದರ ಬೆನ್ನಲ್ಲೇ ಜೋಧಪುರ ಕೇಂದ್ರ ಕಾರಾಗೃಹದಿಂದ ಅವರನ್ನು ಬಿಡುಗಡೆ ಮಾಡಲಾಗಿದೆ.

ಸೋನಂ ಅವರ ಬಂಧನವನ್ನು ಪ್ರಶ್ನಿಸಿ ಪತ್ನಿ ಗೀತಾಂಜಲಿ ಜೆ. ಆಂಗ್ಮೊ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 17ಕ್ಕೆ ಮುಂದೂಡಿತ್ತು. ಅದಾಗಿ ಕೆಲವೇ ದಿನಗಳಲ್ಲಿ ಕೇಂದ್ರವು ಈ ನಿರ್ಧಾರ ಕೈಗೊಂಡಿದೆ.

ಲೇಹ್‌ನಲ್ಲಿ ಹಿಂಸಾತ್ಮಕ ಪ್ರತಿಭಟನೆ ಭುಗಿಲೆದ್ದು ನಾಲ್ವರು ಮೃತಪಟ್ಟ ನಂತರ ಅವರನ್ನು ಬಂಧಿಸಿ, ಜೋಧಪುರ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಲಡಾಖ್‌ನಲ್ಲಿ 'ಶಾಂತಿ ಕಾಪಾಡುವ ಉದ್ದೇಶದಿಂದ ಬಂಧನವನ್ನು ರದ್ದು ಮಾಡಲಾಗಿದೆ' ಎಂದು ಕೇಂದ್ರ ಹೇಳಿದೆ. ಆದಾಗ್ಯೂ, ಅವರ ವಿರುದ್ಧದ ಪ್ರಕರಣವನ್ನು ಕೈಬಿಡಲಾಗಿದೆಯೇ ಎಂಬುದು ಸ್ಪಷ್ಟವಾಗಿಲ್ಲ.

ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಅವರನ್ನು ಶನಿವಾರ ಮಧ್ಯಾಹ್ನ 1.30ರ ಸುಮಾರಿಗೆ ಜೈಲಿನಿಂದ ಬಿಡುಗಡೆ ಮಾಡಲಾಯಿತು ಎಂದು ರಾತಾನಾಡಾ ಪೊಲೀಸ್ ಠಾಣೆಯ ಠಾಣಾಧಿಕಾರಿ ದಿನೇಶ್ ಲಖಾವತ್ ತಿಳಿಸಿದ್ದಾರೆ. ಈ ವೇಳೆ ಸೋನಂ ಅವರ ಪತ್ನಿ ಗೀತಾಂಜಲಿ ಅವರು ಔಪಚಾರಿಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಜೋಧಪುರದಲ್ಲಿದ್ದರು.

ಸಾರ್ವಜನಿಕ ಸುವ್ಯವಸ್ಥೆ ಕಾಪಾಡಲು ಮುನ್ನೆಚ್ಚರಿಕಾ ಕ್ರಮವಾಗಿ ಲೇಹ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಆದೇಶದ ಮೇರೆಗೆ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ (ಎನ್‌ಎಸ್‌ಎ) ಬಂಧಿಸಲಾಗಿದೆ ಎಂದು ಸೋನಂ ಅವರ ಬಂಧನವನ್ನು ಅಧಿಕಾರಿಗಳು ಸಮರ್ಥಿಸಿಕೊಂಡಿದ್ದರು. ಎನ್‌ಎಸ್‌ಎ ಕಠಿಣ ಕಾಯ್ದೆಯಾಗಿದ್ದು, ಇದರ ಅಡಿಯಲ್ಲಿ ಶಂಕಿತನನ್ನು ಔಪಚಾರಿಕ ಆರೋಪ ಹೊರಿಸದೆ 12 ತಿಂಗಳವರೆಗೆ ಬಂಧನದಲ್ಲಿ ಇಡಬಹುದಾಗಿದೆ.

ಲಡಾಖ್‌ನಲ್ಲಿ ಸ್ಥಳೀಯ ಶಾಲಾ ಶಿಕ್ಷಣವನ್ನು ಸುಧಾರಿಸಲು ಮಾಡಿದ ಕೆಲಸಗಳಿಗಾಗಿ ಸೋನಂ ಅವರಿಗೆ 2018ರಲ್ಲಿ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಅವರ ಜೀವನವನ್ನು ಸ್ಫೂರ್ತಿಯಾಗಿಟ್ಟುಕೊಂಡು ಹಿಂದಿ ಭಾಷೆಯಲ್ಲಿ 'ತ್ರೀ ಈಡಿಯಟ್ಸ್' ಚಿತ್ರ ನಿರ್ಮಿಸಲಾಗಿತ್ತು. ಚಿತ್ರದಲ್ಲಿ ಬಾಲಿವುಡ್ ತಾರೆ ಆಮಿರ್ ಖಾನ್ ಅವರು ಸೋನಂ ಅವರ ಪಾತ್ರವನ್ನು ನಿರ್ವಹಿಸಿದ್ದರು.

ಮುಖ್ಯಾಂಶಗಳು

- ಆರು ತಿಂಗಳಿನಿಂದ ಜೈಲಿನಲ್ಲಿದ್ದ ಹೋರಾಟಗಾರ
- ಕಠಿಣ ಎನ್‌ಎಸ್‌ಎ ಅಡಿಯಲ್ಲಿ ಬಂಧನಕ್ಕೆ ಒಳಗಾಗಿದ್ದ ಸೋನಂ
- ಶಾಂತಿ ಕಾಪಾಡುವ ಉದ್ದೇಶದಿಂದ ಬಂಧನ ರದ್ದು: ಕೇಂದ್ರ

ಅದೃಷ್ಟವಶಾತ್ ಸೋನಂ ಅವರಿಗೆ ತಮ್ಮ ಹಕ್ಕು ಸಿಕ್ಕಿದೆ. ಆದರೆ, ಯುಎಪಿಎ ಅಡಿಯಲ್ಲಿ ಇನ್ನೂ ಅನೇಕರು ವಿಚಾರಣೆಯಿಲ್ಲದೆ ಜೈಲಿನಲ್ಲಿ ಕೊಳೆಯುತ್ತಿದ್ದಾರೆ

ಮೆಹಬೂಬಾ ಮುಫ್ತಿ, ಪಿಡಿಪಿ ಮುಖ್ಯಸ್ಥೆ ಮತ್ತು ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿ

ಚಳವಳಿಗೆ ಅವಕಾಶವಿಲ್ಲ: ಲಡಾಖ್ ಲೆಫ್ಟಿನೆಂಟ್ ಗವರ್ನರ್

ವಿನಯ್ ಕುಮಾರ್ ಸಕ್ಸೇನಾ

ಸೋನಂ ಅವರ ಬಂಧನದ ರದ್ದತಿಯನ್ನು ಲಡಾಖ್ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಶನಿವಾರ ಸ್ವಾಗತಿಸಿದ್ದು, ಈ ನಿರ್ಧಾರವು ಒಂದು ಸಕಾರಾತ್ಮಕ ಹೆಜ್ಜೆ ಎಂದು ಬಣ್ಣಿಸಿದ್ದಾರೆ. 'ಆದರೆ, ಪ್ರದೇಶದಲ್ಲಿ ಚಳವಳಿ ಮತ್ತು ಹಿಂಸಾಚಾರಕ್ಕೆ ಅವಕಾಶ ಇಲ್ಲ' ಎಂದು ಅವರು ಹೇಳಿದ್ದು, 'ಜನರ ಆಕಾಂಕ್ಷೆ ಮತ್ತು ಕಳವಳವನ್ನು ಸಂವಾದದ ಮೂಲಕ ಪರಿಹರಿಸಲಾಗುವುದು' ಎಂದು ತಿಳಿಸಿದ್ದಾರೆ.

ಬಿಡುಗಡೆಗೆ ಒತ್ತಾಯಿಸಿದ್ದ ಎಲ್‌ಎಬಿ, ಕೆಡಿಎ

ಫೆಬ್ರುವರಿ 4ರಂದು ನಡೆದ ಉನ್ನತಾಧಿಕಾರ ಸಮಿತಿಯ ಸಭೆಯಲ್ಲಿ ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ) ಮತ್ತು ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ (ಕೆಡಿಎ) ಸಂಘಟನೆಗಳು ಸೋನಂ ಅವರ ಬಿಡುಗಡೆಗಾಗಿ ಒತ್ತಾಯಿಸಿದ್ದವು. ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ್ ರೈ ಅಧ್ಯಕ್ಷತೆಯಲ್ಲಿ ಈ ಸಭೆ ನಡೆದಿತ್ತು.

ಈ ಸಂಘಟನೆಗಳು ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡಬೇಕು ಮತ್ತು ಸಂವಿಧಾನದ ಆರನೇ ಪರಿಚ್ಛೇದದ ಅಡಿ ಅದಕ್ಕೆ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿ ಹೋರಾಟ ಮುನ್ನಡೆಸುತ್ತಿವೆ. ಅಲ್ಲದೆ, ಗೃಹ ಸಚಿವಾಲಯದೊಂದಿಗೆ ಉನ್ನತ ಮಟ್ಟದ ಮಾತುಕತೆಗಳಲ್ಲಿ ತೊಡಗಿವೆ.

ಲೇಹ್‌ನಲ್ಲಿ ಎಲ್‌ಎಬಿ ಮತ್ತು ಕೆಡಿಎ ನೇತೃತ್ವದಲ್ಲಿ ನಡೆದ ಪ್ರತಿಭಟನೆಗಳ ನಂತರ 2025ರ ಸೆಪ್ಟೆಂಬರ್ 26ರಂದು ಸೋನಂ ಅವರನ್ನು ಬಂಧಿಸಲಾಗಿತ್ತು. ಈ ಪ್ರತಿಭಟನೆಯಲ್ಲಿ 22 ಪೊಲೀಸರು ಸೇರಿದಂತೆ 45ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಕವಿ ವೈರಮುತ್ತುಗೆ ಜ್ಞಾನಪೀಠ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಕವಿ ಹಾಗೂ ಗೀತರಚನೆಕಾರ ವೈರಮುತ್ತು ಅವರು 2025ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದಾರೆ.

1975ರಲ್ಲಿ ಅಖಿಲನ್ ಮತ್ತು 2002ರಲ್ಲಿ ಜಯಕಾಂತನ್ ನಂತರ, ಜ್ಞಾನಪೀಠ ಪ್ರಶಸ್ತಿ ಪಡೆದ ತಮಿಳುನಾಡಿನ ಮೂರನೇ ಸಾಹಿತಿ ಇವರು. ತಮ್ಮ ಸಾಹಿತ್ಯಕ್ಕಾಗಿ ಏಳು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದು, ಪದ್ಮಶ್ರೀ ಮತ್ತು ಪದ್ಮಭೂಷಣ ಗೌರವಗಳಿಗೂ ಭಾಜನರಾಗಿದ್ದಾರೆ. 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, 7,500ಕ್ಕೂ ಹೆಚ್ಚು ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ.

'ಸಾಹಿತ್ಯದಲ್ಲಿ ಶ್ರೇಷ್ಠವಾದುದಕ್ಕಿಂತ ಜ್ಞಾನಪೀಠ ಶ್ರೇಷ್ಠ. ತಮಿಳಿಗೆ ಅದು ತೀರಾ ವಿರಳವಾದುದು. ಭಾರತೀಯ ಸಾಹಿತ್ಯದ ನೊಬೆಲ್ ಎಂದು ಅಕ್ಷರ ಜಗತ್ತು ಪರಿಗಣಿಸುವ ಜ್ಞಾನಪೀಠ ಪ್ರಶಸ್ತಿ ಸ್ವೀಕರಿಸಲು ನನಗೆ ತುಂಬಾ ಸಂತೋಷವಾಗುತ್ತದೆ' ಎಂದು ವೈರಮುತ್ತು ಸಂತಸ ವ್ಯಕ್ತಪಡಿಸಿದ್ದಾರೆ.

'ತಮಿಳು ಕಾವ್ಯಕ್ಕೆ ಎಂದಿಗೂ ಜ್ಞಾನಪೀಠ ಪ್ರಶಸ್ತಿ ಸಂದಿಲ್ಲ ಎಂಬ ದೀರ್ಘಕಾಲದ ಕೊರಗು ನನ್ನೊಂದಿಗೆ ಕೊನೆಗೊಳ್ಳುತ್ತದೆ. ನನ್ನನ್ನು ಪೋಷಿಸಿ, ಬೆಳೆಸಿದ ತಮಿಳು ಸಮಾಜವನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ' ಎಂದಿದ್ದಾರೆ.

'ವೈರಮುತ್ತು ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿರುವುದು ತಮಿಳುನಾಡು ಮತ್ತು ತಮಿಳು ಭಾಷೆಗೆ ಸಂದ ದೊಡ್ಡ ಗೌರವ' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಬಣ್ಣಿಸಿದ್ದಾರೆ.

ವಿವಾದಿತ ವ್ಯಕ್ತಿಗೆ ಪ್ರಶಸ್ತಿ: ಆರೋಪ

ವೈರಮುತ್ತು

ಹಿನ್ನೆಲೆ ಗಾಯಕಿ ಚಿನ್ಮಯಿ ಸೇರಿದಂತೆ ಅನೇಕ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ವೈರಮುತ್ತು ಅವರ ಮೇಲಿದೆ.

'ಅನೇಕ ಮಹಿಳೆಯರಿಂದ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಸಾಹಿತ್ಯದ ಉನ್ನತ ಪ್ರಶಸ್ತಿಯನ್ನು ಹೇಗೆ ನೀಡಲು ಸಾಧ್ಯ' ಎಂದು ಕೆಲವರು ಪ್ರಶ್ನಿಸಿದ್ದಾರೆ.

'ಕವಿ–ಗೀತರಚನೆಕಾರ ನಮ್ಮ ಮೇಲೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಅನೇಕ ಮಹಿಳೆಯರು 2018ರಲ್ಲಿ ಆರೋಪಿಸಿದ್ದರು. ಇಂದು ಅದೇ ವ್ಯಕ್ತಿಗೆ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಜಯಕಾಂತನ್ ಅವರಂತಹ ಮಹನೀಯರ ನಂತರ ಈ ಗೌರವ ಸಿಗುತ್ತಿದೆ. ಆದರೆ, ಜಯಕಾಂತನ್ ಅವರ ಪುತ್ರಿಯೇ ವೈರಮುತ್ತು ವಿರುದ್ಧ ಧ್ವನಿ ಎತ್ತಿದ್ದರು. ಜಯಕಾಂತನ್ ತನ್ನನ್ನು ಹೊಗಳಿದ್ದಾರೆ ಎಂಬಂತೆ ನಕಲಿ ಪತ್ರವೊಂದನ್ನು ವೈರಮುತ್ತು ಸೃಷ್ಟಿಸಿದ್ದರೆಂದು ಅವರು ಆರೋಪಿಸಿದ್ದರು' ಎಂದು ಹಿನ್ನೆಲೆ ಗಾಯಕಿ ಚಿನ್ಮಯಿ ಹೇಳಿದ್ದಾರೆ.

'ವೈರಮುತ್ತು ವಿರುದ್ಧ ಆರೋಪ ಮಾಡಿದ್ದ ಮಹಿಳೆಯರ ಧ್ವನಿಯನ್ನು ಅಡಗಿಸಲಾಗಿದೆ. ಅದಕ್ಕೆ ಅವರು ಭಾರಿ ಬೆಲೆ ತೆರಬೇಕಾಯಿತು. ತಮ್ಮ ಕನಸುಗಳನ್ನು ತ್ಯಜಿಸಿದ ಉಳಿದ ಮಹಿಳೆಯರು ನನ್ನಷ್ಟು ಅದೃಷ್ಟವಂತರಾಗಿರಲಿಲ್ಲ' ಎಂದು ತಿಳಿಸಿದ್ದಾರೆ.

ವೃಷಭಾವತಿ ಯೋಜನೆಗೆ ವಿರೋಧ

ನೆಲಮಂಗಲ: ವೃಷಭಾವತಿ ವ್ಯಾಲಿಯಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ ನೀರನ್ನು ಬೆಂಗಳೂರು ಉತ್ತರ ತಾಲ್ಲೂಕಿನ ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರದ 41 ಕೆರೆಗಳಿಗೆ ತುಂಬಿಸುವ ರಾಜ್ಯ ಸರ್ಕಾರದ ಯೋಜನೆಗೆ ವೃಷಭಾವತಿ ಹೋರಾಟ ಸಮಿತಿ ಅಧ್ಯಕ್ಷ ಅನ್ನದಾನಯ್ಯ ವಿರೋಧ ವ್ಯಕ್ತಪಡಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಈ ಯೋಜನೆ ಘೋಷಿಸಿದ್ದಾರೆ. ಯೋಜನೆಗೆ ನಮ್ಮ ವಿರೋಧ ಇಲ್ಲ. ನೀರನ್ನು ಹರಿಸುವುದೇ ಆದರೆ ಮೂರನೇ ಹಂತದಲ್ಲಿ ಸಂಸ್ಕರಿಸಿ ಕೆರೆಗಳನ್ನು ತುಂಬಿಸಬೇಕು. ಬೆಂಗಳೂರಿನ ಮಲಮೂತ್ರ ತ್ಯಾಜ್ಯ ಗಳಿಂದ ಕೂಡಿರುವ, ಕೃಷಿ, ಪಶು ಪಕ್ಷಿಗಳಿಗೆ ಮತ್ತು ಮನುಷ್ಯರು ಕುಡಿಯಲು ಯೋಗ್ಯವಲ್ಲದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ ವೃಷಭಾವತಿ ವ್ಯಾಲಿ ನೀರನ್ನು ತುಂಬಿಸುವುದು ಬೇಡ' ಎಂದರು.

ಈ ಯೋಜನೆಯನ್ನು ಕೈಬಿಡುವವರಗೂ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ದೊಡ್ಡಬಳ್ಳಾಪುರಕ್ಕೆ ಆಗಮಿಸಿದ ಸೋಮನಾಥ ಜ್ಯೋತಿರ್ಲಿಂಗದ ವಿಶೇಷ ಪೂಜೆ ಶನಿವಾರ ಸೋಮೇಶ್ವರ ದೇವಾಲಯದಲ್ಲಿ ನಡೆಯಿತು

ಸೋಮನಾಥ ಜ್ಯೋತಿರ್ಲಿಂಗ ದರ್ಶನ

ದೊಡ್ಡಬಳ್ಳಾಪುರ: ನಗರಕ್ಕೆ ಶನಿವಾರ ಬಂದ ಸೋಮನಾಥ ಜ್ಯೋತಿರ್ಲಿಂಗದ ದರ್ಶನಕ್ಕೆ ಸೋಮೇಶ್ವರ ದೇವಾಲಯದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ನೂರಾರು ಭಕ್ತರು ಸಾಲಿನಲ್ಲಿ ನಿಂತು ಜ್ಯೋತಿರ್ಲಿಂಗ ದರ್ಶನ ಪಡೆದರು.

ಜ್ಯೋತಿರ್ಲಿಂಗಕ್ಕೆ ವಿಶೇಷ ರುದ್ರಾಭಿಷೇಕ ನಡೆಯಿತು. ಆರ್ಟ್ ಆಫ್ ಲಿವಿಂಗ್ ತಂಡದಿಂದ ಭಜನೆ ನಡೆಯಿತು. ಶಾಸಕ ಧೀರಜ್ ಮುನಿರಾಜು, ಪುಷ್ಪಾಂಡಜ ಆಶ್ರಮದ ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, ಆರ್ಟ್ ಆಫ್ ಲಿವಿಂಗ್‌ನ ದಿವ್ಯಪಾದ ಸ್ವಾಮೀಜಿ, ಸುನಿಲ್ ವೆಂಕಟೇಶ್, ಶಿಕ್ಷಕ ವೆಂಕಟಸ್ವಾಮಿ, ಮಂಜುನಾಥ ನಾಗ್, ಲೋಕೇಶ್, ಶ್ರೀಧರ್, ಕಾರ್ತಿಕ್, ಮಂಜಣ್ಣ, ಸುರೇಶ್, ಶಿಲ್ಪಾ, ಸಂದೀಪ್ ಇದ್ದರು.

ಮಹಿಳೆಯರ ತ್ಯಾಗ ಎಲ್ಲರಿಗೂ ಸ್ಫೂರ್ತಿ ನೀಡಲಿ

30 ಶಿಕ್ಷಕರಿಗೆ ಫುಲೆ ದಂಪತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಆನೇಕಲ್: ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದಿಂದ ಪಟ್ಟಣದಲ್ಲಿ ವಿಶ್ವ ಮಹಿಳಾ ದಿನಾಚರಣೆ ಶನಿವಾರ ನಡೆಯಿತು. 30ಕ್ಕೂ ಹೆಚ್ಚು ಶಿಕ್ಷಕರಿಗೆ ಮಾತೆ ಸಾವಿತ್ರಿಬಾಯಿ ಫುಲೆ ಮತ್ತು ಜ್ಯೋತಿ ಬಾಫುಲೆ ತಾಲ್ಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಆನೇಕಲ್‌ನಲ್ಲಿ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದಿಂದ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಉತ್ತಮ ಶಿಕ್ಷಕ, ಶಿಕ್ಷಕಿ ಪ್ರಶಸ್ತಿ ಪ್ರದಾನ ಮಾಡಲಾಯಿತು

ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಪವಿತ್ರವಾದುದ್ದು, ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆ ಇರುತ್ತಾರೆ. ಶಿಕ್ಷಕಿಯರು ಮನೆಯ ಕೆಲಸದೊಂದಿಗೆ ಶಾಲೆಯಲ್ಲಿ ಮಕ್ಕಳನ್ನು ಸಮಾಜದ ಸತ್ಪ್ರಜೆಗಳಾಗಿ ಮಾಡಲು ಶ್ರಮಿಸುತ್ತಾರೆ. ಅವರ ತ್ಯಾಗ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಗುರುಮೂರ್ತಿ ಹೇಳಿದರು.

ಅಂಬೇಡ್ಕರ್ ಅವರು ಹಲವಾರು ಸಂವಿಧಾನದ ಮೂಲಕ ಮಹಿಳೆಯರಿಗೆ ಸವಲತ್ತುಗಳನ್ನು ನೀಡಿದ್ದಾರೆ. ಉದ್ಯೋಗದಲ್ಲಿ ಮೀಸಲಾತಿ, ಹೆರಿಗೆ ರಜೆ, ಶಿಶುಪಾಲನ ರಜೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ನೀಡಿದ್ದಾರೆ. ಹಾಗಾಗಿ ಅವರನ್ನು ಸ್ಮರಿಸಬೇಕಾದುದ್ದು ಶಿಕ್ಷಕಿಯರ ಜವಾಬ್ದಾರಿಯಾಗಿದೆ ಎಂದರು.

ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದ ವೃತ್ತಿಯಾಗಿದೆ. ಶಾಲೆಗಳಲ್ಲಿ ಶಿಕ್ಷಕರು ತಮ್ಮ ಮಕ್ಕಳನ್ನು ಸಮಾಜದ ಆಸ್ತಿಯಾಗಿ ಮಾಡಬೇಕು. ಪಠ್ಯದ ಜೊತೆಗೆ ನೈತಿಕತೆಯ ಪಾಠ ಮಾಡಬೇಕು. ಈ ನಿಟ್ಟಿನಲ್ಲಿ ತಾಲ್ಲೂಕಿನಲ್ಲಿ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗುವುದು ಎಂದರು.

ಬಿಆರ್‌ಸಿ ಭಾಸ್ಕರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷೆ ಶಾಂತಮ್ಮ, ಶಿಕ್ಷಣ ಸಂಯೋಜಕರಾದ ನಾರಾಯಣ, ಅಶ್ವಥಪ್ಪ, ಸಿಆರ್‌ಪಿ ಕೋಮಲಾ, ನೌಕರರ ಸಂಘದ ನಿರ್ದೇಶಕರಾದ ನಾಗರಾಜು, ಲಕ್ಷ್ಮೀಪತಿ, ಸಾವಿತ್ರಿಬಾಯಿ ಫುಲೆ ಸಂಘದ ಅಧ್ಯಕ್ಷ ಸರೋಜಮ್ಮ, ಗೌರವ ಅಧ್ಯಕ್ಷೆ ನಾರಾಯಣಮ್ಮ, ಖಜಾಂಚಿ ಪಿ.ಪಿ.ರೂಪಾ, ಪ್ರಧಾನ ಕಾರ್ಯದರ್ಶಿ ಸರಳಾ, ಜಿಲ್ಲಾ ಪದಾಧಿಕಾರಿಗಳಾದ ಧನಲಕ್ಷ್ಮಿ, ಸವಿತಾ, ಅಮರಾವತಿ, ಪ್ರಮೀಳಾ ಬಾಯಿ ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



(ರಾಜ್ಯಸಭೆಯಲ್ಲಿ ಕೇಂದ್ರ ಸರ್ಕಾರ ನೀಡಿದ ಉತ್ತರ)

ಮಮತಾ ಆಡಳಿತ ಅಂತ್ಯಕ್ಕೆ ಕ್ಷಣಗಣನೆ: ಮೋದಿ 7
‘₹4,824 ಕೋಟಿ ಹೂಡಿಕೆಗೆ ಒಪ್ಪಿಗೆ’ 8

ಆರೋಗ್ಯಕ್ಕೆ ದರ ಪರಿಷ್ಕರಣೆ ಶೀಘ್ರ ವಿವರ ಪುಟ 4

ಹಿತಾಸಕ್ತಿ ಸಂಘರ್ಷದಲ್ಲಿ ‘ಸಹಕಾರ’

ಆಡಳಿತ ಮಂಡಳಿಯಲ್ಲಿ ರಾಜಕೀಯ ಮೇಲಾಟ| ನಷ್ಟದಲ್ಲಿ 14,798 ಸಹಕಾರ ಸಂಘಗಳು

ಒಳನೋಟ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘ನಾನೊಬ್ಬ ನಿವೃತ್ತ ನೌಕರ. ಹೆಚ್ಚಿನ ಬಡ್ಡಿ ದೊರೆಯುತ್ತದೆ ಎನ್ನುವ ಕಾರಣಕ್ಕೆ ಸಹಕಾರಿ ಸೊಸೈಟಿಯಲ್ಲಿ ₹10 ಲಕ್ಷ ಠೇವಣಿ ಇರಿಸಿದ್ದೆ. ಆದರೆ, ಅಲ್ಲಿ ನಡೆದ ಅಕ್ರಮಗಳಿಂದಾಗಿ ನನಗೆ ಇನ್ನೂ ನಯಾಪೈಸೆ ಹಣ ಬಂದಿಲ್ಲ. ಅಸಲು ಇಲ್ಲ, ಬಡ್ಡಿಯೂ ಇಲ್ಲ. ಬಡ್ಡಿ ಸೇರಿ ಕನಿಷ್ಠ ₹13 ಲಕ್ಷ ದೊರೆಯಬೇಕಿತ್ತು...’

ಇದು ನಗರದ ಶ್ರೀ ಗುರುಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿಮಿಟೆಡ್‌ನ ಗ್ರಾಹಕರೊಬ್ಬರ ನೋವಿನ ಕತೆ. ಇದೇ ರೀತಿಯ ಪರಿಸ್ಥಿತಿ ಎದುರಿಸಿದವರು ಬೆಳಗಾವಿಯ ಜಿಲ್ಲೆಯಲ್ಲಿನ ಸಹಕಾರ ಸಂಸ್ಥೆಯೊಂದರ ಗ್ರಾಹಕರು.

‘ಆರು ಲಕ್ಷ ರೂಪಾಯಿ ಠೇವಣಿ ಇರಿಸಿದ್ದೆ. ಮನೆ ಕಟ್ಟುವ ಸಂದರ್ಭದಲ್ಲಿ ನೆರವಾಗಬಹುದು ಎಂದು ಕೂಡಿಟ್ಟ ಹಣ ಇದು. ಆದರೆ, ಬ್ಯಾಂಕ್‌ನ ಅಧ್ಯಕ್ಷ ವಂಚಿಸಿದ್ದ. ಆತ ಜೈಲಿಗೂ ಹೋದ. ಸರ್ಕಾರ ತನಿಖೆಗಾಗಿ ಮತ್ತು ಗ್ರಾಹಕರಿಗೆ ಹಣ ವಾಪಸ್ ಕೊಡಿಸಲು ಅಧಿಕಾರಿಗಳನ್ನು ನೇಮಿಸಿ ಕೈತೊಳೆದುಕೊಂಡಿತು. ಹಣಕ್ಕಾಗಿ ಸರ್ಕಾರಿ ಕಚೇರಿಗಳಿಗೆ ದಾಖಲೆಗಳ ಜತೆ ಅಲೆದಾಡಿ ನನಗೆ ಸಾಕಾಯಿತು. 5 ವರ್ಷಗಳಾದರೂ ಇನ್ನೂ ಹಣ ವಾಪಸ್ ಸಿಕ್ಕಿಲ್ಲ...’

ಇದು ಬೆಳಗಾವಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅರ್ಬನ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಯ ಗ್ರಾಹಕರೊಬ್ಬರ ಕಣ್ಣೀರ ಕಥೆ. ಇಂತಹ ಹಲವಾರು ಪ್ರಕರಣಗಳು ರಾಜ್ಯದಲ್ಲಿ ನಡೆಯುತ್ತಲೇ ಇವೆ.

ಬೆಂಗಳೂರಿನಲ್ಲಿ ಪ್ರಮುಖ ಸಹಕಾರಿ ಸಂಸ್ಥೆಯಾಗಿದ್ದ ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಅಕ್ರಮ ಹೆಚ್ಚು ಸದ್ದು ಮಾಡಿತ್ತು. ಇಲ್ಲಿ ಠೇವಣಿ ಇರಿಸಿ ಸಂಕಷ್ಟದ ಪರಿಸ್ಥಿತಿ ಎದುರಿಸಿ ಸಂತ್ರಸ್ತ ರಾದವರು ಹಲವರು. ಹಣ ವಾಪಸ್ ದೊರೆಯದ ಚಿಂತೆಯಲ್ಲೇ ಕೆಲವರು ಜೀವ ಕಳೆದುಕೊಂಡರು.

ಸಹಕಾರಿ ವಲಯದ ಇಂತಹ ಕೆಲವು ಸಂಸ್ಥೆಗಳ-ಲ್ಲಿನ ಅಕ್ರಮಗಳಿಂದ ಗ್ರಾಹಕರು ಸಂಕಷ್ಟದ ಪರಿಸ್ಥಿತಿ ಎದುರಿಸುವಂತಾಗಿದೆ. ತಮ್ಮ ಸಂಧ್ಯಾಕಾಲದ ನೆರವಿಗಾಗಿ ಬೆವರು ಸುರಿಸಿ ಗಳಿಸಿದ್ದ ಹಣವನ್ನು ಇಲ್ಲಿ ಠೇವಣಿ ಇರಿಸಿದ್ದ ನಾಗರಿಕರೇ ಹೆಚ್ಚು. ಹಗರಣಗಳಿಂದ ಸಂಸಾರಗಳು ಬೀದಿಪಾಲಾದ ಉದಾಹರಣೆಗಳಿವೆ.

▶ 6

‘ಆಂತರಿಕ ಲೆಕ್ಕಪರಿಶೋಧನೆ ಸಮರ್ಪಕವಾಗಿಲ್ಲ’

‘ಸಹಕಾರ ಸಂಸ್ಥೆಗಳಲ್ಲಿ ವೃತ್ತಿಪರವಾದ ಆಡಳಿತ ಇಲ್ಲ. ಹಣಕಾಸಿನ ನಿರ್ವಹಣೆಯೂ ದುರ್ಬಲವಾಗಿದೆ. ಲೆಕ್ಕ ಪರಿಶೋಧನೆಯಲ್ಲಿ ಮಡಿವಂತಿಕೆ ಇದೆ. ಆಗಿರುವ ತಪ್ಪುಗಳನ್ನು ತಿದ್ದುಕೊಳ್ಳುವ ಮನಸ್ಥಿತಿ ಇಲ್ಲ’ ಎಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಮಾಜಿ ನಿರ್ದೇಶಕ ಶಂಕರ ಸಿದ್ಧಾಂತಿ ಅಭಿಪ್ರಾಯಪಡುತ್ತಾರೆ.

‘ಈ ಕ್ಷೇತ್ರವು ಸದಸ್ಯರ ಕೇಂದ್ರೀಕೃತವಾದ ಸಂಸ್ಥೆ. ಸದಸ್ಯರು ಕ್ರಿಯಾಶೀಲವಾಗಿದ್ದರೆ ಮಾತ್ರ ಸಂಸ್ಥೆ ಪ್ರಗತಿ ಪಥದಲ್ಲಿ ಸಾಗಲು ಸಾಧ್ಯ. ಸಹಕಾರ ಸಂಸ್ಥೆಗಳಲ್ಲಿ ಆಂತರಿಕವಾಗಿ ಮೂರು ತಿಂಗಳಿಗೊಮ್ಮೆ ಲೆಕ್ಕ ಪರಿಶೋಧನೆ ನಡೆಸಬೇಕು ಎನ್ನುವುದು ಗೊತ್ತೇ ಇಲ್ಲ ಎನ್ನುವ ಸ್ಥಿತಿ ಇದೆ. ಲೆಕ್ಕಪರಿಶೋಧಕರು ಸೂಚಿಸುವ ಸಲಹೆ ಗಳನ್ನು ಸಹ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಇದರಿಂದ ಸಹಕಾರ ಸಂಸ್ಥೆಗಳ ಮೇಲೆ ಪೆಟ್ಟು ಬೀಳುತ್ತಿದೆ’ ಎಂದು ಅವರು ವಿಶ್ಲೇಷಿಸುತ್ತಾರೆ.

▶ 6

ರಾಜ್ಯದ ವಿವಿಧೆಡೆ 316 ಸಿಲಿಂಡರ್‌ಗಳ ವಶ
ವಿವರ ಪುಟ 8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಪಶ್ಚಿಮ ಏಷ್ಯಾದಲ್ಲಿ ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆ ನಿಯೋಜಿಸಿದ ಅಮೆರಿಕ

ರಾಯಭಾರ ಕಚೇರಿ ಮೇಲೆ ದಾಳಿ

ದುಬೈ (ಎಪಿ): ಇರಾನ್‌ನ ಖಾರ್ಗ್ ದ್ವೀಪ-ದಲ್ಲಿರುವ ತೈಲ ಘಟಕಗಳನ್ನು ಗುರಿಯಾಗಿಸಿ ದಾಳಿ ನಡೆಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ ಬೆನ್ನಲ್ಲೇ, ಬಾಗ್ದಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯನ್ನು ಗುರಿಯಾಗಿಸಿ ಇರಾನ್ ಶನಿವಾರ ದಾಳಿ ನಡೆಸಿದೆ.

ರಾಯಭಾರ ಕಚೇರಿ ಆವರಣದ ಹೆಲಿಪ್ಯಾಡ್‌ಗೆ ಇರಾನ್‌ನ ಕ್ಷಿಪಣಿ ಅಪ್ಪಳಿಸಿದೆ. ಆವರಣದಲ್ಲಿ ದಟ್ಟ ಹೊಗೆ, ಬೆಂಕಿ ಮೇಲೆದ್ದಿದೆ. ಕೊಲ್ಲಿ ರಾಷ್ಟ್ರಗಳ ಮೇಲೂ ದಾಳಿ ಮುಂದುವರಿಸಿರುವ ಇರಾನ್, ಯುಎಇನ ಫುಜೈರಾ ಬಂದರಿ-ನಲ್ಲಿರುವ ತೈಲ ಘಟಕದ ಮೇಲೆ ಡ್ರೋನ್ ದಾಳಿ ನಡೆಸಿದೆ. ಒಮಾನ್‌ನ ಸೊಹರ್ ಪ್ರದೇಶದಲ್ಲಿ ನಡೆದ ಕ್ಷಿಪಣಿ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

‘ಹೊರ್ಮುಜ್ ಜಲಸಂಧಿ ಮೂಲಕ ತೈಲ ನೌಕೆಗಳು ಸಾಗಲು ಅಡ್ಡಿಪಡಿಸಿದರೆ ಮುಂದಿನ ದಾಳಿ ಖಾರ್ಗ್ ದ್ವೀಪದ ತೈಲ ಘಟಕವನ್ನು ಗುರಿಯಾಗಿಸಿ ಇರುತ್ತದೆ’ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದರು. ಇರಾನ್‌ನ ತೈಲ ರಫ್ತು ನಿರ್ವಹಿಸುವ ಪ್ರಮುಖ ಘಟಕ ಇದೇ ದೀಪದಲ್ಲಿದ್ದು, ಇರಾನ್ ಪ್ರತಿದಾಳಿಯನ್ನು ತೀವ್ರಗೊಳಿಸಿದೆ. ಶುಕ್ರವಾರ ಅಮೆರಿಕ ಪಡೆ ಇದೇ ದ್ವೀಪದಲ್ಲಿದ್ದ ಇರಾನ್‌ನ ಮಿಲಿಟರಿ ನೆಲೆಯನ್ನು ಧ್ವಂಸಗೊಳಿಸಿತ್ತು.

ಯುದ್ಧನೌಕೆ ನಿಯೋಜನೆ: ಇರಾನ್ ವಿರುದ್ಧದ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿರುವ ಅಮೆರಿಕ, 2,500 ನೌಕಾಪಡೆ ಸಿಬ್ಬಂದಿ, ನೆಲ ಮತ್ತು ನೀರಿನಲ್ಲಿ ಕಾರ್ಯನಿರ್ವಹಿಸುವ ವಿಶೇಷ ಸಾಮರ್ಥ್ಯದ ಯುದ್ಧನೌಕೆ ‘ಯುಎಸ್‌ಎಸ್ ಟ್ರಿಪೋಲಿ’ಯನ್ನು ಶನಿವಾರ ಪಶ್ಚಿಮ ಏಷ್ಯಾದಲ್ಲಿ ನಿಯೋಜಿಸಿದೆ.

ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರಿ ಕಚೇರಿಯ ಆವರಣದಲ್ಲಿ ಕ್ಷಿಪಣಿ ದಾಳಿ ಬಳಿಕ ದಟ್ಟ ಹೊಗೆ ಆವರಿಸಿತ್ತು ಎಎಫ್‌ಪಿ ಚಿತ್ರ

ಎಲ್‌ಪಿಜಿ ಸಿಲಿಂಡರ್ ದರ ಏರಿಕೆಗೆ ಖಂಡನೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಸದಸ್ಯರ ಪ್ರತಿಭಟನೆ • ಕೇಂದ್ರದ ವಿರುದ್ಧ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಸಿಪಿಐಎಂ ಬೆಂಗಳೂರು ಉತ್ತರ–ದಕ್ಷಿಣ ಜಿಲ್ಲಾ ಸಮಿತಿಗಳು ಹಾಗೂ ಐ.ಟಿ ಸ್ಥಳೀಯ ಸಮಿತಿ ನೇತೃತ್ವದಲ್ಲಿ ಖಾಲಿ ಸಿಲಿಂಡರ್, ಸೌದೆ ಒಲೆಯಿಟ್ಟು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸಬ್ಸಿಡಿ ಸಹಿತ– ಸಬ್ಸಿಡಿ ರಹಿತ ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆಗಳನ್ನು ಹೆಚ್ಚಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿದರು.

ಮುಖ್ಯಾಂಶಗಳು

- ಖಾಲಿ ಸಿಲಿಂಡರ್, ಸೌದೆ ಒಲೆಯಿಟ್ಟು ಕಾರ್ಯಕರ್ತರ ಆಕ್ರೋಶ
- ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ: ಕ್ರಮಕ್ಕೆ ಒತ್ತಾಯ

‘ಬೆಲೆ ಏರಿಕೆ ಬವಣೆಯಿಂದ ಬಳಲುತ್ತಿರುವ ದೇಶದ ಜನರ ಮೇಲೆ ತೈಲ ಬೆಲೆ ಏರಿಕೆಯು ಭಾರವಾದ ಹೊರೆಯನ್ನು ಹೆಚ್ಚಿಸಿದೆ. ಇದರ ಜೊತೆಗೆ, ಜನರು ಅಡುಗೆ ಅನಿಲದ ತೀವ್ರ ಕೊರತೆಯನ್ನು ಎದುರಿಸುತ್ತಿದ್ದಾರೆ. ಜನರು ಮರು ಸಿಲಿಂಡರ್‌ಗೆ ಎರಡು ತಿಂಗಳ ಮೊದಲೇ ನೋಂದಾಯಿಸಿಕೊಳ್ಳಲು, ಸರದಿಯಲ್ಲಿ ಕಾಯುವಂತಹ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರ ನಿರ್ಮಿಸಿದೆ’ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

‘ಅಮೆರಿಕ–ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧವು ನಮ್ಮ ದೇಶದಲ್ಲಿ ಜನರ ಜೀವನದ ಮೇಲೆ ದುಷ್ಪರಿಣಾಮ ಬೀರುವುದನ್ನು ತಡೆಯಬೇಕು. ಅನಿಲ ದರ ಏರಿಕೆ ಹಿಂಪಡೆಯಬೇಕು’ ಎಂದು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಎಲ್‌ಪಿಜಿ ಸಿಲಿಂಡರ್ ಸಂಗ್ರಹಿಸಿ ಮಾರಾಟ ಮಾಡುವ ಕಾಳಸಂತೆ ಮಾರುಕಟ್ಟೆದಾರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಖಾದ್ಯ ತೈಲಗಳ ಬೆಲೆಗಳ ನಿಯಂತ್ರಣ ಮಾಡಬೇಕು. ಆಹಾರ ವಿತರಣೆಯನ್ನು ಅವಲಂಬಿಸಿರುವ ಗಿಗ್ ಕಾರ್ಮಿಕರಿಗೆ, ಉದ್ಯೋಗ ಕಳೆದುಕೊಂಡವರಿಗೆ ಸೂಕ್ತ ಪರಿಹಾರ ನೀಡಬೇಕು’ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್, ಮಂಡಳಿ ಸದಸ್ಯರಾದ ಗೋಪಾಲಕೃಷ್ಣ ಅರಳಹಳ್ಳಿ, ಕೆ.ಎಸ್.ವಿಮಲಾ, ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಬಿ.ಎನ್. ಮಂಜುನಾಥ್, ಪಕ್ಷದ ಜಿಲ್ಲಾ ಮುಖಂಡರಾದ ಕೆ.ಎಸ್.ಲಕ್ಷ್ಮಿ, ಗೌರಮ್ಮ, ಮುನಿರಾಜು, ಐಟಿ ಸ್ಥಳೀಯ ಸಮಿತಿ ಮುಖಂಡರಾದ ಚಿತ್ರಾ ಹಾಜರಿದ್ದರು.

ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು

ಸುದ್ದಿ 2 ನಿಮಿಷ

ಅಕ್ಷಯಪಾತ್ರೆ ಫೌಂಡೇಷನ್ 500 ಕೋಟಿ ಊಟ ವಿತರಣೆ

ಬೆಂಗಳೂರು: ಶಾಲಾ ಮಕ್ಕಳ ಹಸಿವು ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅಕ್ಷಯಪಾತ್ರೆ ಫೌಂಡೇಷನ್, 500 ಕೋಟಿ ಊಟ ವಿತರಿಸಿದ ಸಾಧನೆ ಮಾಡಿದೆ.

ಸಂಸ್ಥೆಯು 25 ವರ್ಷಗಳ ಅವಧಿಯಲ್ಲಿ, ಕೇಂದ್ರ ಸರ್ಕಾರದ ‘ಪಿಎಂ ಪೋಷಣ್’ ಯೋಜನೆಯಡಿ ಈ ಸಾಧನೆ ಮಾಡಿದೆ. ಕೇಂದ್ರ ಸರ್ಕಾರವು ‘ವಿಕಸಿತ ಭಾರತಕ್ಕಾಗಿ ಪೌಷ್ಟಿಕ ಮತ್ತು ಸುಶಿಕ್ಷಿತ ಭಾರತ’ ಎಂಬ ಆಶಯದೊಂದಿಗೆ, ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಇದೇ 17ರಂದು ಅಭಿನಂದನಾ ಸಮಾರಂಭ ಹಮ್ಮಿಕೊಂಡಿದೆ.

ಫೌಂಡೇಷನ್‌ನ ಅಧ್ಯಕ್ಷ ಮಧು ಪಂಡಿತ ದಾಸ, ಉಪಾಧ್ಯಕ್ಷ ಚಂಚಲಪತಿ ದಾಸ ಹಾಗೂ ಟ್ರಸ್ಟಿಗಳು ಪಾಲ್ಗೊಳ್ಳಲಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸ್ಥೆಯ ಪ್ರತಿನಿಧಿಗಳನ್ನು ಗೌರವಿಸಲಿದ್ದಾರೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭಾಗವಹಿಸಲಿದ್ದಾರೆ.

‘2000ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಆರಂಭವಾದ ಅಕ್ಷಯ ಪಾತ್ರೆಯ ಮಧ್ಯಾಹ್ನದ ಬಿಸಿಯೂಟ ಯೋಜನೆ ಇಂದು ಹೆಮ್ಮರವಾಗಿ ಬೆಳೆದಿದೆ. ಪ್ರಸ್ತುತ ದೇಶದ 16 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳ ಸುಮಾರು 23.5 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಪ್ರತಿದಿನ ಪೌಷ್ಟಿಕ ಆಹಾರವನ್ನು ತಲುಪಿಸಲಾಗುತ್ತಿದೆ. ಶಾಲಾ ಹಂತದಲ್ಲಿಯೇ ಹಸಿವನ್ನು ನೀಗಿಸುವ ಮೂಲಕ ಮಕ್ಕಳನ್ನು ಶಿಕ್ಷಣದತ್ತ ಸೆಳೆಯುವ, ಸದೃಢ ಭಾರತ ನಿರ್ಮಿಸುವ ಸಂಸ್ಥೆಯ ಈ 25 ವರ್ಷಗಳ ಪಯಣವು ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ’ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮಹಿಳಾ ಸಬಲೀಕರಣದ ಜಾಗೃತಿಗಾಗಿ ವಾಕಥಾನ್

ಪೀಣ್ಯ ದಾಸರಹಳ್ಳಿ: ಸಿಡೇದಹಳ್ಳಿಯ ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆ್ಯಂಡ್ ಸೈನ್ಸ್ ಕಾಲೇಜು ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ 4 ಕಿ.ಮೀ ವಾಕಥಾನ್ ಹಮ್ಮಿಕೊಳ್ಳಲಾಯಿತು.

ಕಾಲೇಜಿನ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಭಾಗವಹಿಸಿದ್ದರು. ಎಂಟನೇ ಮೈಲಿ ಜಂಕ್ಷನ್ ಬಳಿ ಪ್ರಾರಂಭವಾಗಿ ಹೆಸರಘಟ್ಟ ಮುಖ್ಯ ರಸ್ತೆಯ ಮಾರ್ಗವಾಗಿ ಬೋನ್‌ಮಿಲ್ ಮೂಲಕ ಸಿಡೇದಹಳ್ಳಿಯ ಸೌಂದರ್ಯ ಕಾಲೇಜಿನಲ್ಲಿ ಮುಕ್ತಾಯವಾಯಿತು.

‘ಮಹಿಳಾ ಸಬಲೀಕರಣದ ಜಾಗೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ಈ ವಾಕಥಾನ್ ನಡೆಸಲಾಗುತ್ತಿದೆ’ ಎಂದು ಸೌಂದರ್ಯ ಎಜುಕೇಷನಲ್ ಟ್ರಸ್ಟ್‌ನ ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ ಹೇಳಿದರು.

ಸೌಂದರ್ಯ ಎಜುಕೇಷನಲ್ ಟ್ರಸ್ಟ್‌ನ ಸಿಇಒ ಎಂ. ಕೀರ್ತನ್ ಕುಮಾರ್, ವ್ಯವಸ್ಥಾಪಕ ಟ್ರಸ್ಟಿಗಳಾದ ವರುಣ್ ಕುಮಾರ್ ಮತ್ತು ನಿಶ್ಮಿತಾ ವರುಣ್, ಸೌಂದರ್ಯ ಕಾಲೇಜಿನ ಪ್ರಾಂಶುಪಾಲ ಡಾ. ಪ್ರಕಾಶ್ ಎಚ್.ಎಸ್, ಕಾಲೇಜಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

‘ವಿದ್ಯುತ್ ಬಿಲ್: ರಿಯಾಯಿತಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಹಿನ್ನೆಲೆಯಲ್ಲಿ ಹೋಟೆಲ್ ಮಾಲೀಕರು ಇಂಡಕ್ಷನ್ ಸ್ಟೌ ಬಳಕೆ ಮಾಡುತ್ತಿದ್ದಾರೆ. ಆದ್ದರಿಂದ ವಿದ್ಯುತ್ ಬಿಲ್‌ನಲ್ಲಿ ರಿಯಾಯಿತಿ ನೀಡಬೇಕು ಎಂದು ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಸುಬ್ರಮಣ್ಯ ಎಸ್. ಹೊಳ್ಳ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ‘ಹೋಟೆಲ್ ಉದ್ಯಮ ಅಗತ್ಯ ಸೇವೆಗಳ ಅಡಿಯಲ್ಲಿ ಬರುತ್ತದೆ. ಎಲ್‌ಪಿಜಿ ಸರಬರಾಜು ಸ್ಥಗಿತವಾಗಿದ್ದರೂ, ಇಂಡಕ್ಷನ್ ಸ್ಟೌ ಬಳಸಿ, ಉದ್ಯಮ ನಡೆಸುತ್ತಿದ್ದೇವೆ. ಎಲ್‌ಪಿಜಿ ಸಮಸ್ಯೆ ನಿವಾರಣೆ ಆಗುವವರೆಗೆ ವಿದ್ಯುತ್ ಬಿಲ್‌ನ ಪ್ರತಿ ಯೂನಿಟ್‌ಗೆ ಕನಿಷ್ಠ ₹2 ರಿಯಾಯಿತಿ ನೀಡಬೇಕು. ಹೋಟೆಲ್ ಉದ್ಯಮಿಗಳ ಹಿತ ಕಾಪಾಡಬೇಕು’ ಎಂದು ಮನವಿ ಮಾಡಿದ್ದಾರೆ.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18,
ದೂರವಾಣಿ: 26709689/ 26706775, Email: endowmentcommissioner@gmail.com.
ನಂ. ಎಡಿಎಂ/01/293/2025–ಇ–1743497 ದಿನಾಂಕ: 13.03.2026
ಅಲ್ಪಾವಧಿ ಟೆಂಡರ್
Providing All-in-One PCs (V2), Multifunction Printers (Xerox Machines), Scanners (V3), High-End Laptop Notebooks, Tablet Computers (V2), and Multifunction Printers (Print, Scan, Copy) for the HRICE Commissioner Office, Bangalore.
UNDER TWO BID SYSTEMAS PER KTPP ACT
Tender No: HRICE/2025-26/IND0977/CALL-2
E-mail: endowmentcommissioner@gmail.com
Contact No: 080-26704871, 26709689
ಸಹಿ/–
ಆಯುಕ್ತರ ಪರವಾಗಿ,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ವಾಸಾಸಂಇ/ವಾಪ್ರ/ಶಿರಡಿ ಸಾಯಿ/6269/2025–26

ಸ್ವರ ಸಪ್ತತಿ ಸಮಾರಂಭದಲ್ಲಿ ಪಂಡಿತ್ ಪರಮೇಶ್ವರ ಹೆಗಡೆ ಅಭಿಮತ

‘ಸ್ವವಿಮರ್ಶೆ ಬೆಳವಣಿಗೆಗೆ ಸಹಕಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಲ್ಯದಲ್ಲಿ ಒಂದು ರೀತಿಯ ಶಿಕ್ಷೆಯಂತಾಗಿದ್ದ ಸಂಗೀತಾಭ್ಯಾಸ, ಕಾಲೇಜು ದಿನಗಳಲ್ಲಿ ನನ್ನ ಜೀವನಕ್ಕೆ ಅನಿವಾರ್ಯ ಎನಿಸಿತು. ಇದರಿಂದಾಗಿ ಸಂಗೀತ ಕ್ಷೇತ್ರದಲ್ಲಿ ಕಲಿಕೆಯ ಹಸಿವು ಜಾಸ್ತಿಯಾಯಿತು. ಸ್ವವಿಮರ್ಶೆಯ ಸ್ವಭಾವ ನನ್ನ ಬೆಳವಣಿಗೆಗೆ ಸಹಕಾರಿಯಾಯಿತು...’

ಹೀಗೆ ಸಂಗೀತ ಕ್ಷೇತ್ರದಲ್ಲಿನ ತಮ್ಮ ಪಯಣವನ್ನು ಸ್ಮರಿಸಿಕೊಂಡವರು ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಪಂಡಿತ ಪರಮೇಶ್ವರ ಹೆಗಡೆ. ಅವರ 70ನೇ ವರ್ಷದ ಜನ್ಮದಿನದ ಪ್ರಯುಕ್ತ ಅವರ ಶಿಷ್ಯರು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಸ್ವರ ಸಪ್ತತಿ’ ಕಾರ್ಯಕ್ರಮದಲ್ಲಿ ಗೌರವ ಸ್ವೀಕರಿಸಿ, ಮಾತನಾಡಿದರು.

‘62 ವರ್ಷಗಳಿಂದ ಸಂಗೀತದ ನಂಟನ್ನು ಹೊಂದಿದ್ದೇನೆ. 8ನೇ ವರ್ಷವಿರುವಾಗಲೇ ಅಪ್ಪನ ಆಸೆಯಂತೆ ನಾನು ಸಂಗೀತಾಭ್ಯಾಸ ಪ್ರಾರಂಭಿಸಿದೆ. ಪಂಡಿತ್ ಎಸ್.ಎಂ. ಭಟ್ ಕಟ್ಟಿಗೆ, ಚಂದ್ರಶೇಖರ್ ಪುರಾಣಿಕಮಠ ಅವರ ಬಳಿ ಸಂಗೀತಾಭ್ಯಾಸ ಮಾಡಿದೆ. ಸಂಗೀತ ದಿಗ್ಗಜ ಬಸವರಾಜ ರಾಜಗುರು ಅವರು ನನ್ನ ಸಂಗೀತ ಬದುಕಿಗೆ ಹೊಸ ತಿರುವು ನೀಡಿದರು’ ಎಂದರು.

‘ಶಾಸ್ತ್ರೀಯ ಸಂಗೀತ ಕಬ್ಬಿಣದ ಕಡಲೆಯೆಂದು ವರ್ಣಿಸುತ್ತಾರೆ. ಶಾಸ್ತ್ರ ಸಂಗೀತವನ್ನು ಕಟ್ಟಿಹಾಕಲಿಕ್ಕಲ್ಲ, ಕಾಯಲು ಇದೆ. ಅದನ್ನು ತಿಳಿದುಕೊಳ್ಳಬೇಕು. ಸಂಗೀತದಲ್ಲಿ ಸದಾ ಹೊಸ ಹೊಸ ಪ್ರಯೋಗ, ಹುಡುಕಾಟದಲ್ಲಿ ಇರುತ್ತೇನೆ’ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ನಾಗರಾಜರಾವ್ ಹವಾಲ್ದಾರ್, ರವೀಂದ್ರ ಯಾವಗಲ್, ವಿನಾಯಕ ತೊರವಿ, ಪರಮೇಶ್ವರ ಹೆಗಡೆ, ಎಸ್. ದಿವಾಕರ್ ಮತ್ತು ಕುಮಾರ್ ಬಂಗಾರಪ್ಪ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಹಿಂದೂಸ್ತಾನಿ ಗಾಯಕ ವಿನಾಯಕ ತೊರವಿ, ‘ಹಿಂದಿನ ಕಾಲದಲ್ಲಿ ಸಂಗೀತ ಕಲಿಕೆಗೆ ಕಠಿಣ ಪರಿಶ್ರಮ ಅಗತ್ಯವಾಗಿತ್ತು. ಅಷ್ಟೇ ಭಯ ಭಕ್ತಿಯಿಂದ ಗುರುವನ್ನು ಕಾಣುತ್ತಿದ್ದೆವು. ಗುರು–ಶಿಷ್ಯರ ಸಂಬಂಧ ವಿಶಿಷ್ಟವಾದದ್ದು’ ಎಂದು ಸ್ಮರಿಸಿಕೊಂಡರು.

ಕತೆಗಾರ ಎಸ್. ದಿವಾಕರ್, ‘ನಾದ ಭಾಷೆಯು ಮಾತಿನ ಅರ್ಥಕ್ಕೆ ಮೀರಿದೆ. ಅದು ಹೃದಯದ ಜತೆಗೆ ಮಾತನಾಡಲಿದೆ. ಪ್ರಪಂಚಕ್ಕೆ ಭಾರತ ನೀಡಿದ ನಿಜವಾದ ಕೊಡುಗೆ ಸಂಗೀತ’ ಎಂದರು.

ಮಾಜಿ ಸಚಿವ ಕುಮಾರ್ ಬಂಗಾರಪ್ಪ, ‘ತಂದೆ ಅವರಿಗೆ ನನ್ನನ್ನು ಸಂಗೀತಗಾರನನ್ನಾಗಿ ಮಾಡಬೇಕೆಂಬ ಕನಸಿತ್ತು. ಹಾಗಾಗಿ, ನಾನು ಪ್ರೌಢಶಾಲಾ ದಿನಗಳಲ್ಲಿಯೇ ಸಂಗೀತ ಕಲಿಕೆಗೆ ತೊಡಗಿದೆ. ಪರಮೇಶ್ವರ ಹೆಗಡೆ ಅವರ ಬಳಿಯೂ ಕಲಿತೆ. ಈಗಿನ ಡಿಜಿಟಲ್ ಯುಗದಲ್ಲಿ ಚಿತ್ರಗೀತೆಗಳನ್ನು ತುಂಡರಿಸುತ್ತಾ ಬರಲಾಗಿದೆ. ಶುದ್ಧ ಸಂಗೀತಕ್ಕೆ ಮತ್ತೆ ಆದ್ಯತೆ ದೊರೆಯುವಂತಾಗಬೇಕು’ ಎಂದು ಹೇಳಿದರು.

ತಬಲಾ ವಾದಕ ರವೀಂದ್ರ ಯಾವಗಲ್, ಗಾಯಕ ನಾಗರಾಜರಾವ್ ಹವಾಲ್ದಾರ್ ಅವರು ಪರಮೇಶ್ವರ ಹೆಗಡೆ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದಕ್ಕೂ ಮೊದಲು ದತ್ತಾತ್ರೇಯ ವೆಲಂಕರ್ ಅವರ ‘ಗಾನ ತಪಸ್ವಿ– ಪಂಡಿತ್ ಪರಮೇಶ್ವರ ಹೆಗಡೆ’ ಪುಸ್ತಕ ಜನಾರ್ಪಣೆ ಮಾಡಲಾಯಿತು. ಬಳಿಕ ಶುಭಾ ಮುದ್ಗಲ್ ಮತ್ತು ತಂಡದಿಂದ ಸಂಗೀತ ಕಛೇರಿ ನಡೆಯಿತು.

JOCKEY
FACTORY SECONDS UPTO 50% OFF*
*T & C apply
10 am to 8 pm · Open All Days · Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS
Venues In Bangalore
Infantry Road: Safina Plaza, No.84/85 - 560 001
Jayanagar: Hema Chandra Kalyan Mahal, 2nd Block, (Near Ashoka Pillar) - 11
Banshankari: Sri Hari Kalyana Mantap, 30th Main, B.S.K. 3rd Stage, Near K.I.M.S. Hospital - 560085
Rajarajeshwari Nagar: Vasavi Mahal Kalyana Mantapa, Next To Reliance Digital, Ideal Homes I Phase - 560098
Vijaya Nagar: Five O Gallery, 17th Cross, M.C. Road, Near Vijay Nagar Bus Stop - 560040
Rajajinagar: Raja Rajeshwari Kalyana Mantapa, 2nd Block, Next To Blue Hyunday Showroom, Dr. Rajkumar Road - 560010
Malleswaram: Sri Yadugiri Yathiraja Mutt, No.198, 11th Cross, Sampige Road - 560003
Koramangala: Apoorva International, #35A, Raheja Arcade, Opp Star Box - 560095
Basavanagudi: Amolak Apparels, 7/3, 1st Floor, Opp. Karnataka Bank - 560004
Org. by: Surya Agency Pvt. Ltd.

‘ಜನರ ಸೇವೆಯೇ ನಿಜವಾದ ಧರ್ಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಾನ, ಧರ್ಮ, ಸಂಕಷ್ಟದಲ್ಲಿರುವ ಕಡುಬಡವರ ಸೇವೆ ಮಾಡುವುದೇ ನಿಜವಾದ ಪುಣ್ಯದ ಕೆಲಸ’ ಎಂದು ಪುಲಕೇಶಿನಗರ ಕ್ಷೇತ್ರದ ಶಾಸಕ ಎ.ಸಿ. ಶ್ರೀನಿವಾಸ್ ಹೇಳಿದರು.

ರಂಜಾನ್ ಪ್ರಯುಕ್ತ ಡಿ.ಜೆ.ಹಳ್ಳಿಯಲ್ಲಿ ವೈಯಕ್ತಿಕವಾಗಿ ಹತ್ತು ಸಾವಿರ ಕುಟುಂಬಗಳಿಗೆ ಆಹಾರ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು.

‘ಕ್ಷೇತ್ರದ ಜನರಿಗೆ ಸ್ವಲ್ಪ ಸಹಾಯ ಮಾಡಲಾಗುತ್ತಿದೆ. ಯುಗಾದಿ ಹಬ್ಬದಂದು ಹಿಂದೂಗಳಿಗೂ ಆಹಾರ ಕಿಟ್‌ಗಳನ್ನು ನೀಡಲಾಗುವುದು. ಇಲ್ಲಿ ಜಾತಿ, ಧರ್ಮ ಮುಖ್ಯವಲ್ಲ. ಜನರ ಸೇವೆ ಮಾಡುವುದೇ ನಿಜವಾದ ಧರ್ಮ. ನಾವೆಲ್ಲರೂ ಪ್ರೀತಿ, ಸ್ನೇಹ, ನಂಬಿಕೆಯಿಂದ ಕೂಡಿ ಬಾಳುವುದನ್ನು ಕಲಿತಾಗ ಮಾತ್ರ ಮಾನವ ಜನ್ಮ ಸಾರ್ಥಕ’ ಎಂದರು.

‘ಪುಲಕೇಶಿನಗರ ವ್ಯಾಪ್ತಿಯ ವಾರ್ಡ್‌ಗಳಲ್ಲಿ ತಲಾ ₹30 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕೆಲಸ ಮತ್ತು ₹40 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಕಾಮಗಾರಿ ನಡೆಯುತ್ತಿದ್ದು, ಶೀಘ್ರದಲ್ಲಿಯೇ ವಿಶೇಷ ಮತ್ತು ಶಾಸಕರ ಅನುದಾನದ ₹100 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ, ಒಳಚರಂಡಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ’ ಎಂದರು.

ಮೌಲಾನಗಳಾದ ಜಲ್ಫಿಕರ್, ಆಸೀಫ್ ಮಾತನಾಡಿ ‘ಎಲ್ಲ ಧರ್ಮಗಳು ಶಾಂತಿಯನ್ನು ಬಯಸುತ್ತವೆ. ನಿರ್ಗತಿಕರು, ಶೋಷಿತರು, ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದವರ ಸೇವೆಯನ್ನು ಯಾರು ಮಾಡುತ್ತಾರೆಯೋ ಅಲ್ಲಿ ಶಾಂತಿ ಮತ್ತು ಸೌಹಾರ್ದ ಕಾಣಬಹುದು’ ಎಂದರು.

ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಾಜೀದ್ ಸೇರಿದಂತೆ ಪಾಲಿಕೆ ಮಾಜಿ ಸದಸ್ಯರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಉಪಸ್ಥಿತರಿದ್ದರು.

ಡಿ.ಜೆ.ಹಳ್ಳಿಯಲ್ಲಿ ಎ.ಸಿ. ಶ್ರೀನಿವಾಸ್ ಅವರು ರಂಜಾನ್ ಹಬ್ಬದ ಪ್ರಯುಕ್ತ ಹತ್ತು ಸಾವಿರ ಕಡು ಬಡ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಉಪಸ್ಥಿತರಿದ್ದರು

ಬಜೆಟ್: ‘ಕೈ’ ಶಾಸಕ ವಾಗ್ದಾಳಿ

ರಾಮನಗರ: ‘ಪ್ರವಾಹದಿಂದ ನನ್ನ ಕ್ಷೇತ್ರದಲ್ಲಾಗಿರುವ ಹಾನಿಯ ಚಿತ್ರಗಳನ್ನು ಮುಖ್ಯಮಂತ್ರಿಗೆ ತೋರಿಸಿ ಅನುದಾನ ಕೇಳಿದ್ದೆ. ₹100 ಕೇಳಿದ್ರೆ ಕನಿಷ್ಠ ₹5 ಆದ್ರೂ ಕೊಡಬಾರದಾ? ಬಜೆಟ್‌ನಲ್ಲಿ ನನ್ನ ಕ್ಷೇತ್ರಕ್ಕೆ ಏನು ಆಗಬೇಕಿತ್ತೊ ಅದು ಆಗಿಲ್ಲ’ ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಬಜೆಟ್ ಕುರಿತು ಮತ್ತೆ ತಮ್ಮ ಅಸಮಾಧಾನ ಹೊರ ಹಾಕಿದರು.


ಇಕ್ಬಾಲ್ ಹುಸೇನ್

ಬಜೆಟ್ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಕ್ಕಾಗಿ ಪಕ್ಷದಿಂದ ಹೊರಹಾಕಬೇಕು ಎಂದು ಸ್ವಪಕ್ಷದವರೇ ಆಕ್ರೋಶ ವ್ಯಕ್ತಪಡಿಸಿರುವುದರ ಕುರಿತು ನಗರದಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ನನಗೆ ಹಾಗೂ ಕ್ಷೇತ್ರಕ್ಕೆ ಆಗಿರುವ ನೋವನ್ನು ನಾನು ತೋಡಿಕೊಂಡಿದ್ದೇನೆ. ಯಾರು ಏನಾದರೂ ಹೇಳಿಕೊಳ್ಳಲಿ’ ಎಂದರು.

‘ಬೇರಾವುದೇ ವಿಷಯದ ಬಗ್ಗೆ ನಾನು ಮಾತನಾಡಿಲ್ಲ. ನಾನು ಹೇಳಿದ್ದು ಒಳ್ಳೆಯದಾಗಿದ್ದರೆ ಒಪ್ಪಿಕೊಳ್ಳಲಿ. ಕೆಟ್ಟದಾಗಿದ್ದರೆ ತಿರಸ್ಕರಿಸಲಿ. ಕ್ಷೇತ್ರದ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಲ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ಮುಖಾಮುಖಿ ಭೇಟಿಯಾಗಿದ್ದೇನೆ. ಮೂರು ವರ್ಷದ ಹಿಂದೆ ಪ್ರವಾಹದ ಫೋಟೊಗಳ ಸಮೇತ ವಾಸ್ತವ ಸ್ಥಿತಿ ವಿವರಿಸಿದ್ದೇನೆ. ಆದರೂ, ನನ್ನ ಮನವಿಗೆ ಸ್ಪಂದಿಸಿಲ್ಲ ಎಂಬ ನೋವಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಮೈಕ್ರೊ ಫೈನಾನ್ಸ್‌ನಿಂದಾಗಿ ಕ್ಷೇತ್ರದಲ್ಲಿ 2,800 ಮನೆಗಳು ಹರಾಜಿಗೆ ಬಂದಿವೆ. ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ (ಕೆಎಸ್‌ಎಂಬಿ) ಪುನರುಜ್ಜೀವನಕ್ಕಾಗಿ ಕೇಳಿದ್ದ ₹100 ಕೋಟಿ ಅನುದಾನ ಸಹ ಕೊಟ್ಟಿಲ್ಲ. ರಸ್ತೆ ಮತ್ತು ಚರಂಡಿ ದುರಸ್ತಿಗೂ ಹಣವಿಲ್ಲ. ನನ್ನ ಕ್ಷೇತ್ರಕ್ಕಾಗಿರುವ ನೋವನ್ನು ಹೇಳಿದ್ದೇನೆಯೇ ಹೊರತು ಬಜೆಟ್ ಬಗೆಯಲ್ಲ’ ಎಂದು ಸ್ಪಷ್ಟಪಡಿಸಿದರು.

‘ಬಹಿರಂಗ ಹೇಳಿಕೆ ನೀಡಿದರೆ ಮುಂದೆ ಟಿಕೆಟ್ ನೀಡುವಾಗ ಹೈಕಮಾಂಡ್ ಅದನ್ನು ಗಮನಿಸುತ್ತದೆ’ ಎಂಬ ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿಕೆ ಕುರಿತ ಪ್ರಶ್ನೆಗೆ, ‘ಅವರು ನಮ್ಮ ನಾಯಕರು. ಏನು ಬೇಕಾದರೂ ಹೇಳಲಿ. 2018ರಲ್ಲಿ ನಾನು ಸೋತಾಗ ಅವರೇ ಟಿಕೆಟ್ ಕೊಟ್ಟಿದ್ದರು. ನೀನು ಗೆಲ್ಲಬೇಕು ಎಂದು ಬೆನ್ನು ತಟ್ಟಿದ್ದರು. ಕೆಲವು ಸಂದರ್ಭದಲ್ಲಿ ಅವರ ಆಶೀರ್ವಾದ ನನಗೆ ಇರುತ್ತದೆ’ ಎಂದು ಪ್ರತಿಕ್ರಿಯಿಸಿದರು.

ಕನ್ನಡಪರ ಸಂಘಟನೆಗಳ ಮುಖಂಡರು ಕರ್ನಾಟಕ ಪಠ್ಯಪುಸ್ತಕ ಸಂಘದ ಅಧಿಕಾರಿಗೆ ಮನವಿ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

‘ಪಾಸ್ ವಿತೌಟ್ ಹಿಂದಿ ಜಾರಿಗೊಳಿಸಿ’

ಬೆಂಗಳೂರು: ದ್ವಿಭಾಷಾ ನೀತಿ ಜಾರಿಯಾಗುವವರೆಗೂ ವಿದ್ಯಾರ್ಥಿಗಳಿಗೆ ಹಿಂದಿ ಪರೀಕ್ಷೆಯನ್ನು ಕಡ್ಡಾಯಗೊಳಿಸದಂತೆ ‘ಪಾಸ್ ವಿತೌಟ್ ಹಿಂದಿ’ ನಿಯಮವನ್ನು ಕೂಡಲೇ ಜಾರಿಗೊಳಿಸುವಂತೆ ಆಗ್ರಹಿಸಿ ಹಿಂದಿ ಹೇರಿಕೆ ವಿರೋಧಿ ಒಕ್ಕೂಟದ ಸದಸ್ಯರು ಮಲ್ಲೇಶ್ವರದಲ್ಲಿರುವ ಕರ್ನಾಟಕ ಪಠ್ಯಪುಸ್ತಕ ಸಂಘದ ಎದುರು ಪ್ರತಿಭಟನೆ ನಡೆಸಿದರು.

‘ಪಾಸ್ ವಿತೌಟ್ ಹಿಂದಿ’ ನಿಯಮ ಜಾರಿಗೊಳಿಸದಿದ್ದರೆ ಮಾರ್ಚ್ 30ರಂದು ನಡೆಯುವ ಹಿಂದಿ ಪರೀಕ್ಷೆ ದಿನದಂದು ಪರೀಕ್ಷಾ ಕೇಂದ್ರಗಳಿಗೆ ಮುತ್ತಿಗೆ ಹಾಕಲಾಗುವುದು. ಈ ಹಿಂದಿನ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಹಿಂದಿ ಭಾಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಉತ್ತೀರ್ಣರೆಂದು ಘೋಷಿಸಿ, ಅವರ ಶೈಕ್ಷಣಿಕ ಮುನ್ನಡೆಗೆ ಅವಕಾಶ ಕಲ್ಪಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘2026–27ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿಭಾಷಾ ನೀತಿಯನ್ನು ಜಾರಿಗೊಳಿಸಬೇಕು. ಥೋರಟ್ ಆಯೋಗದ ವರದಿಯನ್ನು ಸಾರ್ವಜನಿಕ ಚರ್ಚೆಗೆ ಅವಕಾಶ ಕಲ್ಪಿಸಬೇಕು. ಹಿಂದಿ ಭಾಷಾ ಶಿಕ್ಷಕರ ನೇಮಕಾತಿಯನ್ನು ರದ್ದುಪಡಿಸಬೇಕು. ಈಗಾಗಲೇ ನೇಮಕಗೊಂಡಿರುವ ಶಿಕ್ಷಕರನ್ನು ಕನ್ನಡ ಭಾಷಾ ಶಿಕ್ಷಕರಾಗಿ ನಿಯೋಜಿಸಲು ಕ್ರಮ ಕೈಗೊಳ್ಳಬೇಕು. ರಾಜ್ಯದ ಯಾವುದೇ ಹಂತದ ಪಠ್ಯಕ್ರಮದಲ್ಲಿ ಹಿಂದಿ ರಾಷ್ಟ್ರ ಭಾಷೆ ಎಂದು ಬಿಂಬಿಸುವ ಕಲ್ಪಿತ ವಿಷಯವನ್ನು ತೆಗೆದು ಹಾಕಬೇಕು’ ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಕನ್ನಡಪರ ಹೋರಾಟಗಾರರಾದ ಶಿವರಾಮೇಗೌಡ, ಸಾ.ರಾ. ಗೋವಿಂದು, ಅಭಿಗೌಡ, ಪಾರ್ವತೀಶ್ ಬಿಳಿದಾಳೆ, ಜಾಣಗೆರೆ ವೆಂಕಟರಾಮಯ್ಯ, ರಾಧಾಕೃಷ್ಣ ಪಾಲ್ಗೊಂಡಿದ್ದರು.

DS MAX®
Your Homes are Ready... Are you? Homes Exceptionally Yours!
Luxurious Ready-to-Move-In Homes - Limited Units Left
JOY OF LIVING
CREDAI BENGALURU
READY-TO-MOVE
PRM/KA/RERA/1251/308/PR/290122/004660
ಸರ್ಜಾಪುರ
DS MAX SPOORTHI
8880 003 003
SARJAPURA
SARJAPUR - ATTIBELE ROAD
₹ 60 - 84 Lakhs*
2 & 3-BHK | G+4 FLOORS
8880 465 465
HENNUR
NEAR HENNUR DECATHLON
₹ 70 L - 1.21 Cr*
2 & 3-BHK | G+4 FLOORS
DS MAX SWASTIKA
ಹೆಣ್ಣೂರು
PRM/KA/RERA/1251/309/PR/030524/006841
PRM/KA/RERA/1251/308/PR/280222/004739
ಚಂದಾಪುರ
DS MAX SUKRUTH
8880 003 003
CHANDAPURA
BOMMASANDRA METRO - 10 MINS.
₹ 52 - 69 Lakhs*
2 & 3-BHK | G+4 FLOORS
8880 461 461
WHITEFIELD
KADUGODI METRO - 5 MINS.
₹ 60 - 88 Lakhs*
2-BHK | G+4 FLOORS
DS MAX SANGAM GRAND
ವೈಟ್‌ಫೀಲ್ಡ್
PRM/KA/RERA/1251/446/PR/190301/002464
www.dsmaxproperties.com
*T & C Apply
2, 3 & 4-BHK APARTMENTS FOR SALE IN VARIOUS LOCATIONS
PRM/KA/RERA/1250/304/PR/251024/007179 WHITEFIELD 10 MINS. HOPEFARM METRO ₹ 77.91 L - 1.32 Cr* 8880 461 461 G+14
PRM/KA/RERA/1251/310/PR/210324/006724 SILKBOARD NEAR SINGASANDRA METRO STN. ₹ 91.27 L - 1.47 Cr* 8880 013 310 G+14
PRM/KA/RERA/1251/472/PR/250225/007524 AIRPORT ROAD NEAR PRESTIGE TECH IT PARK ₹ 87.89 L - 1.21 Cr* 8880 465 465 G+14
PRM/KA/RERA/1251/310/PR/150223/005721 MYSORE ROAD NEAR CHALLAGHATTA METRO STN. ₹ 75 L - 1.06 Cr* 8880 461 461 G+14
PRM/KA/RERA/1251/308/PR/291225/008366 HOSUR ROAD 10 MINS. ELECTRONIC CITY ₹ 62.71 L - 1.01 Cr* 8880 003 003 G+22
PRM/KA/RERA/1250/301/PR/251024/007178 YELAHANKA 5 MINS. RAJANUKUNTE ₹ 54.85 - 97.21 Lakhs* 8880 465 465 G+14
PRM/KA/RERA/1251/308/PR/281125/008287 JIGANI 5 MINS. APC CIRCLE ₹ 60.78 - 95.35 Lakhs* 8880 003 003 G+14
PRM/KA/RERA/1251/308/PR/160824/006972 HOSA ROAD METRO NEAR ELECTRONIC CITY ₹ 73.58 L - 1.44 Cr* 8880 013 310 G+4
PRM/KA/RERA/1251/308/PR/160824/006973 BANNERGHATTA RD. NEAR KOPPA GATE ₹ 62.42 - 85.23 Lakhs* 8880 013 310 G+14
PRM/KA/RERA/1251/310/PR/151223/006489 BANASHANKARI OPP. NPS SCHOOL (3 & 4-BHK) ₹ 1.45 - 2.17 Cr* 8880 461 461 G+3
Visit our website or talk to our advisors for the complete portfolio
Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit: www.rera.karnataka.gov.in *T & C Apply

ಜೈವಿಕ ಅನಿಲ ಘಟಕ ಸ್ಥಾಪನೆಗೆ ಒತ್ತು

ಕೋರಮಂಗಲದಲ್ಲಿ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್; ಹೋಟೆಲ್‌ಗೆ ಸರಬರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಹಸಿ ಕಸದಿಂದ ಅನಿಲ ತಯಾರಿಸುವ ಜೈವಿಕ ಅನಿಲ ಘಟಕಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಕೋರಮಂಗಲದಲ್ಲಿರುವ 'ಕಸ-ರಸ ಘಟಕ'ಕ್ಕೆ ಶನಿವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ನಗರದಲ್ಲಿ ಹಸಿ ಕಸದಿಂದ ಜೈವಿಕ ಅನಿಲ ಉತ್ಪತ್ತಿ ಮಾಡುವ ಸಲುವಾಗಿ ಸಮಗ್ರವಾಗಿ ಅಧ್ಯಯನ ನಡೆಸಿ, ಜಿಬಿಎ ನಗರ ಪಾಲಿಕೆಗಳಲ್ಲಿ ಜೈವಿಕ ಅನಿಲ ಘಟಕಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುವುದೆಂದು ಹೇಳಿದರು.

ನಗರದಲ್ಲಿ ವಿಕೇಂದ್ರೀಕೃತ ಕೇಂದ್ರಗಳನ್ನು ಸ್ಥಾಪಿಸಬೇಕಾದರೆ ಆಯಾ ನಗರ ಪಾಲಿಕೆಗಳಲ್ಲಿ ಎರಡರಿಂದ ಮೂರು ಎಕರೆ ಜಾಗ ಬೇಕಾಗುತ್ತದೆ. ಕಡಿಮೆ ಅವಧಿಯಲ್ಲಿ ಪ್ರಸ್ತುತ ಇರುವಂತಹ ಘಟಕಗಳನ್ನು ಉನ್ನತೀಕರಣಗೊಳಿಸಿ ಅಲ್ಲಿ ಜೈವಿಕ ಅನಿಲ ಉತ್ಪತ್ತಿ ಮಾಡಿ, ಸ್ಥಳೀಯ ಹೋಟೆಲ್‌ಗಳಿಗೆ ವಿತರಣೆ ಮಾಡಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಕಸ-ರಸ ಘಟಕದಲ್ಲಿ 10 ಟನ್ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸಿ, ಹತ್ತಿರದ ಹೋಟೆಲ್‌ಗೆ ವಿತರಣೆ ಮಾಡಲಾಗುತ್ತಿದೆ. ಆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಕ್ರಮವಹಿಸಲಾಗುತ್ತದೆ ಎಂದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ಮಾತನಾಡಿ, 'ಹಸಿ ಘನತ್ಯಾಜ್ಯದ ವ್ಯವಸ್ಥಿತ ಹಾಗೂ ವೈಜ್ಞಾನಿಕ ಸಂಸ್ಕರಣೆ ಘನತ್ಯಾಜ್ಯ ನಿರ್ವಹಣೆಯ ಪ್ರಮುಖ ಅಂಶವಾಗಿದೆ. ಈ ನಿಟ್ಟಿನಲ್ಲಿ ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ಹಸಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸಲು ವಿವಿಧ 'ಬಯೋಮೆಥನೈಸೇಷನ್ ಘಟಕ'ಗಳನ್ನು ನಿರ್ಮಿಸಿ, ನಿರ್ವಹಿಸಲಾಗುತ್ತಿದೆ' ಎಂದರು.

'ಈ ಹಿಂದೆ ಬಿಬಿಎಂಪಿ ವತಿಯಿಂದ ನಿರ್ಮಾಣಗೊಂಡ 12 ಜೈವಿಕ ಅನಿಲ ಘಟಕಗಳಲ್ಲಿ ಆರು ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿ ಘಟಕದಲ್ಲಿ ದಿನಕ್ಕೆ 5 ಟನ್ ಹಸಿ ತ್ಯಾಜ್ಯ ಸಂಸ್ಕರಿಸಿ ಒಟ್ಟಾರೆ ಸುಮಾರು 30 ಟನ್ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸಲಾಗುತ್ತಿದೆ. ಉಳಿದ ಆರು ಘಟಕಗಳನ್ನು ನವೀಕರಣಗೊಳಿಸುವ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕೋರಮಂಗಲದಲ್ಲಿರುವ 8.5 ಟನ್ ಸಾಮರ್ಥ್ಯದ ಘಟಕದಿಂದ ಸಮೀಪದ ಹೋಟೆಲ್‌ಗೆ ಪ್ರತಿದಿನ ಸುಮಾರು 120 ಕೆ.ಜಿ ಜೈವಿಕ ಅನಿಲ ಸರಬರಾಜು ಮಾಡಲಾಗುತ್ತಿದೆ. ಪ್ರತಿ ಕೆ.ಜಿಗೆ ₹70ರಂತೆ ದಿನಕ್ಕೆ ಸುಮಾರು ₹8,400 ಆದಾಯ ಲಭ್ಯವಾಗುತ್ತಿದೆ. ಇದರ ಮೂಲಕ ಹಸಿ ತ್ಯಾಜ್ಯದಿಂದ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ಅಡುಗೆ ಇಂಧನವಾಗಿ ಬಳಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೋರಮಂಗಲದಲ್ಲಿರುವ 'ಕಸ ರಸ ಘಟಕ'ದಿಂದ ಹೋಟೆಲ್‌ಗೆ ಸರಬರಾಗುವ ಜೈವಿಕ ಅನಿಲದಲ್ಲಿ ತಯಾರಾಗುವ ಆಹಾರವನ್ನು ಕರೀಗೌಡ ಪರಿಶೀಲಿಸಿದರು. ಮಹೇಶ್ವರ್ ರಾವ್ ಉಪಸ್ಥಿತರಿದ್ದರು

ನಾಲ್ಕು ವಿಕೇಂದ್ರೀಕೃತ ಘಟಕ ನಿರ್ಮಾಣ

ನಾಲ್ಕು ವಿಕೇಂದ್ರೀಕೃತ 'ಬಯೋಮೆಥನೈಸೇಷನ್ ಘಟಕ'ಗಳನ್ನು ನಿರ್ಮಿಸಲಾಗುತ್ತಿದೆ. ವಾರ್ಡ್ 27 ಮತ್ತು 151ರಲ್ಲಿ ಘಟಕಗಳು ಶೀಘ್ರ ಕಾರ್ಯಾರಂಭ ಮಾಡಲಿವೆ. ಉಳಿದ ಎರಡು ಘಟಕಗಳು ವಾರ್ಡ್ 56 ಮತ್ತು 196ರಲ್ಲಿ ನಿರ್ಮಾಣವಾಗುತ್ತಿವೆ ಎಂದು ಕರೀಗೌಡ ಮಾಹಿತಿ ನೀಡಿದರು.

ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ದಿನಕ್ಕೆ ಸುಮಾರು 300 ಟನ್ ಹಸಿ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಹೊಸ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೂ ಚಾಲನೆ ನೀಡಲಾಗಿದೆ. ಇದಲ್ಲದೆ ಕನ್ನಹಳ್ಳಿ ಪ್ರದೇಶದಲ್ಲಿ ಸುಮಾರು 1,000 ಟನ್ ಹಸಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸುವ ಘಟಕ ನಿರ್ಮಾಣಕ್ಕೆ ಸಾತರಾಂ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿದೆ ಎಂದರು.

ಉತ್ಪಾದನೆಯಾಗುವ ಜೈವಿಕ ಅನಿಲವನ್ನು ಭವಿಷ್ಯದಲ್ಲಿ ಕೊಳವೆ ಮಾರ್ಗದಲ್ಲಿ ಮನೆಮನೆಗೆ ತಲುಪಿಸುವ ಯೋಜನೆಯೂ ಇದೆ ಎಂದು ಹೇಳಿದರು.

ಸಮಗ್ರ ಘನತ್ಯಾಜ್ಯ ನಿರ್ವಹಣೆ ಟೆಂಡರ್‌ನಲ್ಲಿ ನಗರದಲ್ಲಿ ಉತ್ಪತ್ತಿಯಾಗುವ ಕಸದಲ್ಲಿ, 3000 ಟನ್ ಹಸಿ ಕಸದಿಂದ ಜೈವಿಕ ಅನಿಲ ಉತ್ಪಾದಿಸುವ ಯೋಜನೆ ಇದೆ. ಈ ಕ್ರಮಗಳಿಂದ ಹಸಿ ತ್ಯಾಜ್ಯದ ವೈಜ್ಞಾನಿಕ ಸಂಸ್ಕರಣೆಯ ಮೂಲಕ ಇಂಧನ ಉತ್ಪಾದನೆ ಸಾಧ್ಯವಾಗುತ್ತದೆ ಎಂದರು.

'ಮನೆಯಲ್ಲೂ ಘಟಕ ನಿರ್ಮಾಣ ಸಾಧ್ಯ'

ಜೈವಿಕ ಅನಿಲ ಉತ್ಪಾದಿಸುವ ಘಟಕಗಳನ್ನು ಮನೆಗಳಲ್ಲಿಯೂ ಅಳವಡಿಸಿಕೊಳ್ಳಬಹುದು. ಇದಕ್ಕೆ ಸುಮಾರು ₹20 ಸಾವಿರ ವೆಚ್ಚವಾಗುತ್ತದೆ. ಮನೆಯಲ್ಲಿ ಉತ್ಪತ್ತಿಯಾಗುವ ಹಸಿ ಕಸದಿಂದ ಅನಿಲ ಉತ್ಪಾದಿಸಿ, ಅದನ್ನು ಅಡುಗೆ ಇಂಧನವಾಗಿ ಬಳಸಬಹುದು ಎಂದು ಕರೀಗೌಡ ಹೇಳಿದರು.

ಸಾರ್ವಜನಿಕರು ಹಾಗೂ ಹೋಟೆಲ್ ಮಾಲೀಕರು ತಮ್ಮ ಆವರಣದಲ್ಲಿಯೇ ವಿಕೇಂದ್ರೀಕೃತ ಜೈವಿಕ ಅನಿಲ ಘಟಕಗಳನ್ನು ಸ್ಥಾಪಿಸಿಕೊಳ್ಳಬೇಕು. ಈ ಕ್ರಮಗಳಿಂದ ಹಸಿ ತ್ಯಾಜ್ಯವನ್ನು ಮರುಬಳಕೆಗೆ ಬಳಸಿಕೊಳ್ಳುವುದರೊಂದಿಗೆ ಪರಿಸರ ಸಂರಕ್ಷಣೆಯತ್ತ ಮಹತ್ವದ ಹೆಜ್ಜೆ ಇಡಲಾಗುತ್ತದೆ ಎಂದರು.

ಒಳ ಮೀಸಲಾತಿ ಹೋರಾಟ ಸಮಿತಿ ಆಗ್ರಹ
'ನೇಮಕಾತಿ ಆದೇಶ ಹಿಂಪಡೆಯಿರಿ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಾರ್ಚ್ 27ರ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ
- ಸಚಿವ ಸ್ಥಾನದಿಂದ ಎಚ್.ಸಿ.ಮಹದೇವಪ್ಪ ಬದಲಾವಣೆಗೆ ಒತ್ತಾಯ

ಬೆಂಗಳೂರು: 'ಪರಿಶಿಷ್ಟ ಜಾತಿಯ ಒಳ ಮೀಸಲಾತಿಯನ್ನು ಜಾರಿಗೊಳಿಸದೇ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು' ಎಂದು ಒಳ ಮೀಸಲಾತಿ ಹೋರಾಟ ಸಮಿತಿ ಆಗ್ರಹಿಸಿದೆ.

ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಮುಖಂಡರಾದ ಮಾರಸಂದ್ರ ಮುನಿಯಪ್ಪ, ಅಂಬಣ್ಣ ಅರೋಲಿಕರ್, ಬಿ.ಆರ್. ಭಾಸ್ಕರ್ ಪ್ರಸಾದ್, 'ಮಾರ್ಚ್ 27 ರಂದು ನಡೆಯುವ ವಿಶೇಷ ಸಚಿವ ಸಂಪುಟದಲ್ಲಿ ರಾಜ್ಯ ಸರ್ಕಾರ ಒಳ ಮೀಸಲಾತಿ ಪರವಾದ ತೀರ್ಮಾನವನ್ನು ತೆಗೆದುಕೊಳ್ಳಲು ಎಲ್ಲ ಸಮುದಾಯದ ಸಚಿವರು, ಹೋರಾಟಗಾರರು ಸಹಕರಿಸಬೇಕು. ಇದು ಸಾಮಾಜಿಕ ನ್ಯಾಯದ ಪರವಾಗಿರುವ ಹೋರಾಟವಾಗಿದ್ದು, ಯಾವುದೇ ಸಮುದಾಯದ ವಿರುದ್ಧದ ಹೋರಾಟವಲ್ಲ' ಎಂದು ತಿಳಿಸಿದರು.

'ನೇರ ನೇಮಕಾತಿ, ಬಡ್ತಿ ನೇಮಕಾತಿ ಹಾಗೂ ಮುಂಬಡ್ತಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಲ್ಲಿ 2001ರ ಹಿಂದಿನ ಬ್ಯಾಕ್‌ಲಾಗ್ ಹುದ್ದೆಗಳಿಗೆ ಮಾತ್ರ ಅನ್ವಯಿಸುತ್ತಿದೆ. ಇದನ್ನು 2001ರ ನಂತರದ ಬ್ಯಾಕ್‌ಲಾಗ್ ಹುದ್ದೆಗಳಿಗೂ ಮುಂದುವರಿಸಬೇಕು. ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಒಳ ಮೀಸಲಾತಿಯನ್ನು ಅನುಷ್ಠಾನಗೊಳಿಸಬೇಕು' ಎಂದರು.

'ನೇಮಕಾತಿಯ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳನ್ನು ಒಂದು ಘಟಕವೆಂದು ಪರಿಗಣಿಸಬೇಕೆನ್ನುವ ಪ್ರಸ್ತಾವ ಕೈಬಿಡಬೇಕು. ಅಲೆಮಾರಿ ಸಮುದಾಯಗಳಿಗೆ ಶೇಕಡ 1ರಷ್ಟು ಪ್ರತ್ಯೇಕ ಒಳ ಮೀಸಲಾತಿ ಪ್ರಮಾಣ ಹಂಚಿಕೆ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಿಸದೇ ಪಕ್ಷಪಾತಿಯಾಗಿ ಕಾರ್ಯನಿರ್ವಹಿಸುತ್ತಿರುವ ಎಚ್.ಸಿ. ಮಹದೇವಪ್ಪ ಅವರನ್ನು ಬದಲಾವಣೆ ಮಾಡಬೇಕು' ಎಂದು ಆಗ್ರಹಿಸಿದರು.

'ಮಾರ್ಚ್ 27ರಂದು ಒಳ ಮೀಸಲಾತಿಯನ್ನು ಎಲ್ಲ ಹಂತಗಳಲ್ಲೂ ಅನ್ವಯಿಸಿ ಆದೇಶ ಹೊರಡಿಸದಿದ್ದರೆ, ನಮ್ಮ ಹೋರಾಟ ಇನ್ನಷ್ಟು ತೀವ್ರವಾಗಲಿದೆ' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.



'ದ್ವಾರನಕುಂಟೆ ಪಾತಣ್ಣ ಕಾದಂಬರಿ' ಪ್ರಶಸ್ತಿ ಪ್ರದಾನ
'ದಲಿತ ಪರ ದನಿ ಎತ್ತಿದವರನ್ನು ಉಳಿಸಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತರು, ಮಹಿಳೆಯರ ಪರವಾಗಿ ಮಾತನಾಡಿದವರನ್ನು ದೇಶದಲ್ಲಿ ಜೀವಂತವಾಗಿ ಉಳಿಸಿಲ್ಲ' ಎಂದು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಲ್.ಎನ್. ಮುಕುಂದರಾಜ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಆಯೋಜಿಸಿದ್ದ 'ದ್ವಾರನಕುಂಟೆ ಪಾತಣ್ಣ ಕಾದಂಬರಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮಹಿಳೆಯರ, ದಲಿತರ, ಶೂದ್ರರ ಪರವಾಗಿ ಮೊದಲಿಗೆ ಮಾತನಾಡಿದ್ದು ಬುದ್ಧ. ಅಂತಹ ಮಹಾತ್ಮರನ್ನು ದೇಶ ಬಿಟ್ಟು ಓಡಿಸಿದರು. ಆ ಬಳಿಕ ಮಾತನಾಡಿದ್ದು ಬಸವಣ್ಣ' ಎಂದರು.

'ದಲಿತರ ಪರವಾಗಿ ಮಾತನಾಡಿದ ಗಾಂಧೀಜಿ ಅವರನ್ನು ಗುಂಡಿಕ್ಕಿ ಕೊಂದರು. ಅಂಬೇಡ್ಕರ್ ಅವರಿಗೂ ತೊಂದರೆ ಕೊಟ್ಟರು. ಈ ದೇಶದಲ್ಲಿ ದಲಿತರ, ಶೂದ್ರರ ಮಹಿಳೆಯರ ಸ್ವಾತಂತ್ರಕ್ಕಾಗಿ ಯಾರೇ ಮಾತನಾಡಿದರೂ ಅವರನ್ನು ಇಲ್ಲವಾಗಿಸುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಶಶಿಧರ್ ಹಾಲಾಡಿ ಅವರಿಗೆ 'ದ್ವಾರನಕುಂಟೆ ಅತ್ಯುತ್ತಮ ಕಾದಂಬರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ದ್ವಾರನಕುಂಟೆ ಪಾತಣ್ಣ, ಎನ್. ಸಂಧ್ಯಾರಾಣಿ, ಎಚ್.ಎಸ್. ರಾಘವೇಂದ್ರ ರಾವ್, ಎಲ್.ಎನ್. ಮುಕುಂದರಾಜ್, ಬಿ.ಎಂ. ಹನೀಫ್ ಮತ್ತು ಎಚ್. ಎಲ್. ಪುಷ್ಪ ಉಪಸ್ಥಿತರಿದ್ದರು

'ಯುದ್ಧದ ಪರಿಣಾಮ ಎಲ್ಲ ವಸ್ತುಗಳ ಬೆಲೆ ಏರಿಕೆಯಾಗುತ್ತದೆ ಎನ್ನುವುದು 1945ರಲ್ಲಿ ಅರ್ಥವಾಗಿತ್ತು. ಈಗಲೂ ಅದೇ ಪರಿಸ್ಥಿತಿ ಮುಂದಿದೆ. ಇದರಿಂದಾಗಿ ಜನರಿಗೆ ಅನೇಕ ಸಮಸ್ಯೆಗಳಾಗುತ್ತಿವೆ. ಯುದ್ಧ ಅಪಾಯಕಾರಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಸಾಹಿತಿ ಕಿ.ರಂ.ನಾಗರಾಜು ಹೇಳಿದಂತೆ ಯುದ್ಧ ಎನ್ನುವುದು ಮಾನವ ಲೋಕದ ಮಾಯದ ಗಾಯ. ಯುದ್ಧದಿಂದ ದೂರ ಉಳಿದ ಬುದ್ಧ, ಅಶೋಕ, ಕನಕದಾಸ ಇವರೆಲ್ಲರೂ ಎತ್ತರದಲ್ಲಿದ್ದಾರೆ' ಎಂದರು.

ಲೇಖಕ ಶಶಿಧರ ಹಾಲಾಡಿ ಅವರ 'ನದಿ ದಾಟಿ ಬಂದವರು' ಕಾದಂಬರಿಗೆ ದ್ವಾರನಕುಂಟೆ ಪಾತಣ್ಣ ಕಾದಂಬರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪತ್ರಕರ್ತ ಬಿ.ಎಂ.ಹನೀಫ್, ದ್ವಾರನಕುಂಟೆ ಪಾತಣ್ಣ, ಎಂ.ಎಸ್.ಆಶಾದೇವಿ, ಎಚ್.ಎಲ್.ಪುಷ್ಪ, ಬಸವರಾಜು ಭಾಗವಹಿಸಿದ್ದರು.

'ಗ್ಲಾಕೋಮಾ ಪತ್ತೆಯಿಂದ ಅಂಧತ್ವ ತಡೆ'

ಬೆಂಗಳೂರು: 'ಗ್ಲಾಕೋಮಾ ಕಾಯಿಲೆ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ನರಗಳಿಗೆ ಹಾನಿ ಮಾಡುತ್ತದೆ. ಆರಂಭದಲ್ಲೇ ತಪಾಸಣೆ ನಡೆಸಿ, ಚಿಕಿತ್ಸೆ ಪಡೆದರೆ ಅಂಧತ್ವ ತಡೆಯಲು ಸಾಧ್ಯ' ಎಂದು ನಾರಾಯಣ ನೇತ್ರಾಲಯದ ನೇತ್ರತಜ್ಞರು ಹೇಳಿದರು.

ವಿಶ್ವ ಗ್ಲಾಕೋಮಾ ಸಪ್ತಾಹದ ಪ್ರಯುಕ್ತ ಸಂಸ್ಥೆ ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ಸಾವಿರಾರು ಮೇಣದಬತ್ತಿಗಳನ್ನು ಬೆಳಗಿಸಿ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಸಂಸ್ಥೆಯ ನಿರ್ದೇಶಕ ಡಾ. ನರೇನ್ ಶೆಟ್ಟಿ, 'ರೋಗ ಲಕ್ಷಣಗಳಿಲ್ಲದೆ ದೃಷ್ಟಿಯನ್ನು ಹಾನಿಗೊಳಿಸುವ ಕಾಯಿಲೆ ಗ್ಲಾಕೋಮಾ. 40 ವಯಸ್ಸಿನ ನಂತರ ಪ್ರತಿಯೊಬ್ಬರು ವರ್ಷಕ್ಕೊಮ್ಮೆ ಕಣ್ಣಿನ ಒತ್ತಡವನ್ನು ಪರೀಕ್ಷಿಸಿಕೊಳ್ಳಬೇಕು ಎಂದರು.

'ಮಧುಮೇಹ, ರಕ್ತದೊತ್ತಡ ಹಾಗೂ ಸಮೀಪ ದೃಷ್ಟಿದೋಷ ಇದ್ದವರಲ್ಲಿ ಗ್ಲಾಕೋಮಾ ಆಗುವ ಸಂಭವ ಹೆಚ್ಚು. ಕನ್ನಡಕದ ಸಂಖ್ಯೆ ಬದಲಿಸುವಾಗ ಕಡ್ಡಾಯವಾಗಿ ಕಣ್ಣಿನ ಒತ್ತಡ ಪರೀಕ್ಷೆ ಮಾಡಿಸಿಕೊಳ್ಳಬೇಕು. ಪೋಷಕರು ಗ್ಲಾಕೋಮಾದಿಂದ ಬಳಲುತ್ತಿದ್ದರೆ ಇತರ ಸದಸ್ಯರು ಕಣ್ಣಿನ ಒತ್ತಡ ಪರೀಕ್ಷೆ ಮಾಡಿಸಿಕೊಳ್ಳಿ. ಚಿಕಿತ್ಸೆ ಪಡೆಯದಿದ್ದಲ್ಲಿ ಶಾಶ್ವತ ಅಂಧತ್ವ ಉಂಟಾಗಬಹುದು' ಎಂದರು.

ಕಾರ್ಯಕ್ರಮದ ಭಾಗವಾಗಿ 'ಆರೋಹಣ್ ಮಿಸ್ಟಿಕ್ ಬ್ರೀಜ್' ತಂಡ ಸಂಗೀತ ಪ್ರಸ್ತುತಪಡಿಸಿತು.

ಕಾರ್ಯಕ್ರಮದಲ್ಲಿ 'ಆರೋಹಣ್ ಮಿಸ್ಟಿಕ್ ಬ್ರೀಜ್' ತಂಡ ಸಂಗೀತ ಪ್ರಸ್ತುತಪಡಿಸಿತು

ಎಲೆಕೊಡಿಗೇಹಳ್ಳಿಯಲ್ಲಿ ನಡೆದ ಧರ್ಮ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಮಠಾಧೀಶರು

'ಧರ್ಮ ಉಳಿದರೆ ಸಂಸ್ಕೃತಿ ಉಳಿಯಲಿದೆ'
ಇತಿಹಾಸ ಪ್ರಸಿದ್ಧ ನಂದಿಬಸವೇಶ್ವರ ದೇಗುಲ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮ ಮತ್ತು ಸಂಸ್ಕೃತಿ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಇತ್ತೀಚೆಗೆ ಸಮಾಜದಲ್ಲಿ ಧರ್ಮವನ್ನು ಮರೆಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಧರ್ಮ ಉಳಿದರೆ ಮಾತ್ರ ಸಂಸ್ಕೃತಿ ಉಳಿಯಲು ಸಾಧ್ಯ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು' ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮಾಗಡಿ ರಸ್ತೆಯ ನೈಸ್ ರಸ್ತೆ ಸಮೀಪದ ಎಲೆಕೊಡಿಗೇಹಳ್ಳಿಯಲ್ಲಿ ಯಜಮಾನರು ಡಾ.ಎನ್. ನಂಜುಂಡೇಶ್ವರ ಅವರ ನೇತೃತ್ವದಲ್ಲಿ ನಿರ್ಮಾಣಗೊಂಡಿರುವ ಚೋಳರ ಕಾಲದ ಇತಿಹಾಸ ಪ್ರಸಿದ್ಧ 'ಶ್ರೀನಂದಿ ಬಸವೇಶ್ವರಸ್ವಾಮಿ, ಪಂಚಮುಖ ಶಂಭುಲಿಂಗೇಶ್ವರ, ಮಹಾಗಣಪತಿ ನೂತನ ದೇವಾಲಯದ ಲೋಕಾರ್ಪಣೆ ಮತ್ತು ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮ ಆಚಾರ-ವಿಚಾರ ಸಂಸ್ಕೃತಿ ಉಳಿಯಬೇಕಾದರೆ, ನಮ್ಮ ಧರ್ಮವನ್ನು ಗೌರವಿಸಬೇಕು. ಸಂಸ್ಕೃತಿ ಉಳಿವಿಗೆ ಮಠಾಧಿಪತಿಗಳ ಮಾರ್ಗದರ್ಶನ ಅಗತ್ಯ. ಧಾರ್ಮಿಕ ಆಚರಣೆಗಳತ್ತ ಮಾನವ ವಿಕಸಿತನಾಗಬೇಕು. ಧಾರ್ಮಿಕ ನೆಲೆಗಟ್ಟಿನಲ್ಲಿ ಸಮಾಜ ನಿರ್ಮಾಣವಾಗಬೇಕು. ಆಗ ಮಾತ್ರ ಸುಖ ಶಾಂತಿ ಸಮೃದ್ಧಿ ಸಾಧ್ಯ' ಎಂದು ಹೇಳಿದರು.

ಬಾಳೆಹೊನ್ನೂರಿನ ರಂಭಾಪುರಿ ಪೀಠದ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಉಜ್ಜಯಿನಿ ಮಹಾಸಂಸ್ಥಾನದ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಶಾಸಕ ಎಸ್.ಟಿ. ಸೋಮಶೇಖರ್, ಎಲೆಕೊಡಿಗೇಹಳ್ಳಿಯ ಯಜಮಾನರಾದ ಡಾ. ಎನ್. ನಂಜುಂಡೇಶ್ವರ, ನೈಸ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ, ಅಶೋಕ್ ಖೇಣಿ ಉಪಸ್ಥಿತರಿದ್ದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವಾರ್ಡ್‌ವಾರು ಅಂತಿಮ ಮೀಸಲಾತಿ

ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಮೀಸಲಾತಿ
	ಶಿವಾಜಿನಗರ ವಿಧಾನಸಭಾ ಕ್ಷೇತ್ರ	
ವಾರ್ಡ್ 1	ರಾಮಸ್ವಾಮಿ ಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 2	ಜಯಮಹಲ್	ಪರಿಶಿಷ್ಟ ಜಾತಿ
ವಾರ್ಡ್ 3	ವಸಂತ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 4	ಸಂಪಂಗಿರಾಮ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 5	ಶಿವಾಜಿನಗರ	ಸಾಮಾನ್ಯ
ವಾರ್ಡ್ 6	ಭಾರತಿ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 7	ಕೆ. ಕಾಮರಾಜ್ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 8	ಹಲಸೂರು	ಪರಿಶಿಷ್ಟ ಜಾತಿ (ಮಹಿಳೆ)
	ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರ	
ವಾರ್ಡ್ 9	ಹೊಯ್ಸಳ ನಗರ ಕೇಂದ್ರ	ಪರಿಶಿಷ್ಟ ಜಾತಿ
ವಾರ್ಡ್ 10	ಕಾಕ್ಸ್ ಟೌನ್	ಸಾಮಾನ್ಯ
ವಾರ್ಡ್ 11	ಹಳೆ ಬೈಯಪ್ಪನಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 12	ಕಸ್ತೂರಿ ನಗರ	ಹಿಂದುಳಿದ ವರ್ಗ ಬಿ
ವಾರ್ಡ್ 13	ಕೃಷ್ಣಯ್ಯನಪಾಳ್ಯ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 14	ನಾಗವಾರಪಾಳ್ಯ	ಸಾಮಾನ್ಯ
ವಾರ್ಡ್ 15	ಇಂದಿರಾನಗರ	ಸಾಮಾನ್ಯ (ಮಹಿಳೆ)
ವಾರ್ಡ್ 16	ನ್ಯೂ ತಿಪ್ಪಸಂದ್ರ	ಸಾಮಾನ್ಯ (ಮಹಿಳೆ)
ವಾರ್ಡ್ 17	ಕಗ್ಗದಾಸಪುರ	ಹಿಂದುಳಿದ ವರ್ಗ ಎ
ವಾರ್ಡ್ 18	ಜಿ.ಎಂ ಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 19	ಜೀವನ್ ವಿಮಾನಗರ	ಹಿಂದುಳಿದ ವರ್ಗ ಎ
ವಾರ್ಡ್ 20	ಕೋಡಿಹಳ್ಳಿ	ಸಾಮಾನ್ಯ
ವಾರ್ಡ್ 21	ಕೋನೇನ ಅಗ್ರಹಾರ	ಸಾಮಾನ್ಯ (ಮಹಿಳೆ)
	ಶಾಂತಿನಗರ ವಿಧಾನಸಭಾ ಕ್ಷೇತ್ರ	
ವಾರ್ಡ್ 22	ದೊಮ್ಮಲೂರು	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 23	ಜೋಗುಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 24	ಅಗರಂ	ಪರಿಶಿಷ್ಟ ಜಾತಿ
ವಾರ್ಡ್ 25	ಅಶೋಕನಗರ	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 26	ವನ್ನಾರಪೇಟೆ	ಪರಿಶಿಷ್ಟ ಪಂಗಡ
ವಾರ್ಡ್ 27	ಅಂಬೇಡ್ಕರ್ ನಗರ	ಪರಿಶಿಷ್ಟ ಜಾತಿ
ವಾರ್ಡ್ 28	ನೀಲಸಂದ್ರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 29	ಆಸ್ಟಿನ್ ಟೌನ್	ಹಿಂದುಳಿದ ವರ್ಗ ಎ
ವಾರ್ಡ್ 30	ವಿನಾಯಕನಗರ	ಸಾಮಾನ್ಯ (ಮಹಿಳೆ)
ವಾರ್ಡ್ 31	ಶಾಂತಿನಗರ	ಹಿಂದುಳಿದ ವರ್ಗ ಬಿ
	ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ	
ವಾರ್ಡ್ 32	ಸಿಲ್ವರ್ ಜುಬಿಲಿ ಪಾರ್ಕ್ ವಾರ್ಡ್	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 33	ಧರ್ಮರಾಯ ಸ್ವಾಮಿ ದೇವಸ್ಥಾನ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 34	ಡಿ.ವಿ ಗುಂಡಪ್ಪ ವಾರ್ಡ್	ಸಾಮಾನ್ಯ
ವಾರ್ಡ್ 35	ಹೊಂಬೇಗೌಡ ನಗರ	ಸಾಮಾನ್ಯ
ವಾರ್ಡ್ 36	ಸೋಮೇಶ್ವರ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 37	ಬಿಎಚ್‌ಇಎಲ್ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 38	ಕನಕನಪಾಳ್ಯ	ಹಿಂದುಳಿದ ವರ್ಗ ಎ
ವಾರ್ಡ್ 39	ವೆಂಕಟರೆಡ್ಡಿ ನಗರ	ಸಾಮಾನ್ಯ
ವಾರ್ಡ್ 40	ಅಶೋಕ ಪಿಲ್ಲರ್	ಸಾಮಾನ್ಯ
ವಾರ್ಡ್ 41	ವಿ.ವಿ ಪುರ	ಸಾಮಾನ್ಯ (ಮಹಿಳೆ)
ವಾರ್ಡ್ 42	ಸುಂಕೇನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 43	ದೇವರಾಜ್ ಅರಸು ವಾರ್ಡ್	ಸಾಮಾನ್ಯ
	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ	
ವಾರ್ಡ್ 44	ಚಾಮರಾಜಪೇಟೆ	ಸಾಮಾನ್ಯ
ವಾರ್ಡ್ 45	ಕೆ.ಆರ್ ಮಾರುಕಟ್ಟೆ	ಹಿಂದುಳಿದ ವರ್ಗ ಎ
ವಾರ್ಡ್ 46	ಚಲುವಾದಿ ಪಾಳ್ಯ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 47	ಐಪಿಡಿ ಸಾಲಪ್ಪ ವಾರ್ಡ್	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 48	ಆಜಾದ್ ನಗರ	ಸಾಮಾನ್ಯ
ವಾರ್ಡ್ 49	ಕಸ್ತೂರಬಾ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 50	ಜೆಜೆಆರ್ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 51	ಹಳೆ ಗುಡ್ಡದಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 52	ಪಾದರಾಯನಪುರ	ಸಾಮಾನ್ಯ
ವಾರ್ಡ್ 53	ರಾಯಪುರಂ	ಪರಿಶಿಷ್ಟ ಜಾತಿ
	ಗಾಂಧಿನಗರ ವಿಧಾನಸಭಾ ಕ್ಷೇತ್ರ	
ವಾರ್ಡ್ 54	ಬಿನ್ನಿಪೇಟೆ	ಸಾಮಾನ್ಯ
ವಾರ್ಡ್ 55	ಭುವನೇಶ್ವರಿ ನಗರ	ಹಿಂದುಳಿದ ವರ್ಗ ಎ
ವಾರ್ಡ್ 56	ಗೋಪಾಲಪುರ	ಹಿಂದುಳಿದ ವರ್ಗ ಎ
ವಾರ್ಡ್ 57	ಕಾಟನ್ ಪೇಟೆ	ಸಾಮಾನ್ಯ
ವಾರ್ಡ್ 58	ಚಿಕ್ಕಪೇಟೆ	ಸಾಮಾನ್ಯ (ಮಹಿಳೆ)
ವಾರ್ಡ್ 59	ನೆಹರೂ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 60	ಶೇಷಾದ್ರಿಪುರ	ಸಾಮಾನ್ಯ
ವಾರ್ಡ್ 61	ದತ್ತಾತ್ರೇಯ ವಾರ್ಡ್	ಸಾಮಾನ್ಯ
ವಾರ್ಡ್ 62	ಸ್ವತಂತ್ರ ಪಾಳ್ಯ ವಾರ್ಡ್	ಪರಿಶಿಷ್ಟ ಜಾತಿ
ವಾರ್ಡ್ 63	ಓಕಳಿಪುರ	ಹಿಂದುಳಿದ ವರ್ಗ ಎ (ಮಹಿಳೆ)

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ADDRESS MAKER

RERA REGISTRATION : PRM/KA/RERA/1251/310/PR/250822/005190

THE AKSHARA VALLEY ADDRESS

PREMIUM PLOTS NEAR KENGERI METRO STATION

BDA APPROVED | OC RECEIVED

Actual shot of Main Entrance

Actual shot : Multi-Court

Actual shot : Miyawaki Forest

Actual shot : Pickelball Court

Aerial View

AVAIL ZERO STAMP DUTY & REGISTRATION*.

OFFER VALID TILL 31.03.26

NEW INVENTORY, NOW UNVEILED.

With the release of new inventory at "The Akshara Valley Address", you can now claim your space in a community where nature takes center stage. Nestled close to Kengeri Metro Station and NICE Road, it offers the perfect escape from city congestion while keeping every convenience within reach.

Step in today and build the villa you've always imagined.

ADD-ON SERVICES : Villa Design | Design Approvals | Villa Execution

30 ACRES | 378 PLOTS | 08 GARDENS

20000+ TREES

₹1.15 Cr* onwards

ADDRESS MAKER

VILLAS, VILLA PLOTS, APARTMENTS & COMMERCIAL

9.8 Million SQFT
6.7Mn Delivered+3.1Mn In Progress

Disclaimer : The images and impressions contained herein are artist's impression indicative of the actual design for information purpose only. This information and the contents herein mentioned are subject to change and is being updated by us in the light of enactment and commencement of the Real Estate (Regulation and Development) Act, 2016. The Company reserves the right to change by adding, deleting or altering the information/material including designs, plans, specifications, facilities, images, features, amenities such as clubhouse, parks etc without any prior notice. Any interested party should verify all the information including designs, plans, specifications, facilities, features etc. independently with the Company prior to concluding any decision for buying in the project. For RERA registration information, visit www.rera.karnataka.gov.in

*T& C Apply | Add-on services offered at additional charges.

88847 44244

www.addressmaker.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

ANJANAPURA BDA 50x80 Site for Sale Commercial North Facing 80 Feet Road: Call: 9972338060/ 9880448478

Arkavathi Layout

SALE 30X40 BDA Site W/F 3rd Block Arkavathi Layout Price.1.9cr Negotiable 9880270482 Broker Excuse

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage 11th Block, 40x60 West Facing 80 Feet Road Parallel, Call: 9483748768/ 9986076018.

30X40,BDA NORTH Facing Plot For Sale At Banashankari 6th Stage, 3rd Block, Genuine Buyers: 9980775693

BANASHANKARI 3RD Stage, 30x45.75 Site, East Facing, 30k/sqft, Brokers Excuse. PH :6364841986.

Bannerghatta Road

BANNERAGATTA ROAD AkshayaNagar 52x72 SEC 14000/, 50X97 SF 12000/- 45X90 EF 14000/- NEGOTIABLE: 9449655947/ 6361162072

SITE FOR sale: 40/60ft, NF, @Raja Iris Residencial layout,1.5 cr. ,Begur koppa road, Cont: 9035917223

Basaweshwaranagar

***BASAVESHWARANAGAR* 40X60** VVS COLLEGE back-side RESIDENTIAL EAST FACING BDA SITE FOR SALE. Contact: 9945079777

Hennur

HENNUR 30X45 West Facing B ekatha Site sale HIREMATH LAYOUT, KOTHANUR Rs. 6000/-. Contact: 9945033366

SALE 40X60 Residential Site Bileshivale Hennur, near Purva Palm Beach. Call: 8431659271, 8904254549

J P Nagar

JPNAGAR 7TH PHASE AVAILABLE 45x40, 2 SITES SOUTH EAST CORNER AND SOUTH WEST CORNER BBMP E KHATA (11B). 7022435107

Kengeri

SITE FOR Sale 40×50 Kengeri Kodipalya Vinayaka layout Near Kengeri Metro Station, Price 10,000. Contact: 9731819633

FOR SALE: BBMP A Khatha Sites at Kengeri, 500 meters from the Metro Station with Cauvery Water. Contact: 9606342643

Kempegowda Layout

ARKAVATI ALATRNENT Site Sale SF BDA 30ft Road Rs. 1Cr 5Lac Negotiable Nada Prbhu Kempegowda Layout 8th Block D Sector Near Mysore Road: 9611577666

Multiple Locations

BANASHANKARI 6TH Stage, Nadaprabhu Kempegowda Layout, Vishweshwariah, BDA Site, Houses are available. Contact: 9900999919.

Nagarabhavi

"NAGARABHAVI DEEPA-COMPLEX 40x60 North East Corner, 30x48 West 40 feet Road Immediate Registration. 9448432633"

Rajarajeshwari Nagar

SALE Building 20X35 Duplex House. Ideal Homes sites 40X60, 80X110, BDA, Direct Owner Meeting, 9164409377

SITE FOR Sale at Ideal homes society, 40X62, south facing. RR Nagar, Bangalore. Contact: 9844013941

RMV

RMV EXTENSION Vinayaka Housing Society 30x40 WF, 40x60 EF C'Block Sahakarnagar Genuine Buyers Brokers Excuse: 9071257515

Sadashiva Nagar

RMV 1ST BLOCK Sadashivanagar, R.R.Nagar 40x60 Bangalow. Kumarpark Malleshwaram Vijayanagar Basavanagudi Jayanagara Any Measurements: 9845057822

Sanjaynagar

SANJAYNAGAR KEB LAYOUT BDA 1050 sft North West corner 40 feet Road E-Khatha, 9341260828 7829203369

Vishweshwariah Layout

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

"VISVESHWARAIAH 7TH BLOCK 30x40 East, Nagarabhavi BDA Complex near 30X50 40 feet Road. 9448733456/ 7259675150"

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

40X60, EAST, BDA, Vishweshwaraiah Layout 8th Block FE, Near Bindu Amulya Apartments, Contact Owner 7795368515

***SMVL 2ND** BLOCK* 20x30 NORTH FACING SITE next to corner 78,00,000/- Negotiable. ABHILASHA CONSULTANT: 9480565758

Vidyaranyapura

SAMBRAM COLLEGE Near Amba Bhavani Temple Back Side 30x40 WF, 37x40 BBMP B/E Katha Vidyaranyapura: 8296895858

Yelahanka

RESIDENTIAL SITE FOR SALE in YELAHANKA-JUDICIAL LAYOUT, 30x40.5, on 40 Feet Road, South Facing, Expected Rs.20,000/Sft. Call Owner: 9945304836/ 9980800306

Kengeri Satellite Town

**"1050`SQFT SOUTH FACING** BBMP A-Katha Site`for`Sale Ready`to Construction near`Hoysala`Circle Kengeri Satellite Town near`NPS`&`Metro Station. Call 9880031654"

House

Jayanagar

SALE 45X90 East Facing Jayanagar 1st Block With old House on 40feet Road Excellent Location Ct: 9844134068

Kanakapura Road

"FOR RENT 2BHK close to Forum South Mall, Konanakunte Metro Station, Kumaran School. 9845286505"

Mysore Road

30X50 EAST 3 Floor Railway Layout Near Christ College Mysore Road With All Amenities 9448081380

Commercial Space for Rent

- Building area G+5 floors 900 sqft per Floor
- Elevetor Facility is Available.
- Toilet On Each Floor.
- 6000 Litres Water sump, BWSSB facility,
- Ideal for Offices, Clinics, Showroom, Bank Etc.

Address: 10/2, 5th Main, 8th Cross Chamrajpete, Bangalore-560018
Contact +91 7975994583

Nagarabhavi

BDA 20X20 G+2 Building N/F Pattegarapalya, Nagarabhavi, A/E Katha, Price 66 Lakh Owner 9740073482

Mysore

NEWLY BUILT Unfurnished 53 square House for immediate Sale at Nanjangud, Mysore. Call Kumar: 9164673276.

Flat

Basaveshwaranagar

SALE BASAWEHWARNGR 2BHK, Ground Floor Flat, Measuring 750sqft, Clear Titles, Near Subramanya Swamy Temple. Owner. 9480060249.

Jayanagar

FOR SALE SITES And 3BHK Flat at Jayanagar 4th & 5th Block PRIME LOCATION Genuine Buyers Only: 9844732229

Nagarabhavi

FLATS FOR-SALE @ Nagarabhavi Chandra Layout 2 & 3 BHK Ready to Move In Good Location Call:9538472420 9845066608

Agricultural Land

General

AGRICULTURE LAND 6-Acres, Kanaka Pura to-Ramnagar Road 3-Acres In Somnahalli,1 Acre in Cheeluru. Sale 9448473358

Tumkur

2ACRES- 10ACRES Available 80kms- 100kms from Bangalore on Koratagere- Madhugeri Road Clear Titles, Water Source: 9483959862

Commercial Land

Yeshwanthpur

PRIME-COMMERCIAL-LAND 56,000SQ.FT. on Tumkur Road, Yeshwantpur, Near Sparsh Hospital. Ph: 9845202433

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Basavanagudi

SALE COMMERCIAL 60x110 East Facing Basavanagudi With old House on 100ft Road Excellent Location Ct: 9844134068

J P Nagar

NORTHEAST CORNER COMMERCIAL ODD SITE 6300 SFT BOTH BUSY ROADS 8TH PHASE JPNAGAR, BANGALORE, SALE AT RS. 18000 PSQFT SLIGHTLY NEGOTIABLE. MAHESH: 8618122033

Mysore Road

GODOWN SALE G+1 Space on Railway Parallel Road, BCC Layout, near Mysore Road, Bangalore Contact: 9620401011 9738111312

Yeshwanthpur

YESHWANTHPURA MAIN ROAD 56,000 Sqft, Dabaspete 1 To 100 Acres, Doddaballapura 100 Acres Land: 9845057822

Villas/Bunglows

K R Puram

VILLA FOR SALE 5 years old Villa, 5100 sft, 4 BHK on 3600 sft site, HEBRON near KR Puram, East facing with Servants quarters, Fully furnished. Contact V Somasundaram, mob. 9845036309

ಜನಸೇವಾ ವಿದ್ಯಾಕೇಂದ್ರ
ಬಾಲಕರ ನಿಲಯ ಶಾಲೆಗಳು
ಚನ್ನೇನಹಳ್ಳಿ ಮಾಗಡಿ ರಸ್ತೆ, ಬೆಂಗಳೂರು ನಗರ ಜಿಲ್ಲೆ–562130
ದೂರವಾಣಿ: 9241216119/ 9480609078/ 7022428464
email:123jsvkhighschool@gmail.com

2026–27ನೇ ಸಾಲಿನ ಪ್ರವೇಶಗಳಿಗೆ ಕರೆ

5, 6, 7ನೇ ತರಗತಿಗಳು:	ಉತ್ತಮ ಇಂಗ್ಲೀಷ್ ಭಾಷಾ ಕಲಿಕೆಯೊಂದಿಗೆ ಕನ್ನಡ ಮಾಧ್ಯಮ (ಸ್ಥಳೀಯ ವಿದ್ಯಾರ್ಥಿಗಳಿಗೆ ಕೂಡಾ ಅವಕಾಶವಿದೆ)
8ನೇ ತರಗತಿ:	ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ ಪ್ರಥಮ ಭಾಷೆ: ಕನ್ನಡ / ಸಂಸ್ಕೃತ
9ನೇ ತರಗತಿ:	ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ

ಎಲ್ಲಾ ವಿವರಗಳುಳ್ಳ ಪರಿಚಾಯಿಕೆಗೆ ರೂ.350/- ಮಾತ್ರ. ಯಾವುದೇ ಬ್ಯಾಂಕಿನ ಆನ್‌ಲೈನ್ ಅಥವಾ ನಗದು ಮೂಲಕ ಪಡೆಯಬಹುದು.
Contact: 9241216119 / 9480609078
ಪರಿಚಾಯಿಕೆ ಪಡೆಯಲು ಕೊನೆಯ ದಿನಾಂಕ: 28–03–2026

ಪ್ರವೇಶ ಪರೀಕ್ಷೆಗಳು

5, 6, 7ನೇ ಮತ್ತು 9ನೇ ತರಗತಿಗಳು:	29-03-2026 ಭಾನುವಾರ	ಪರೀಕ್ಷೆಯ ಸಮಯ: ಬೆಳಿಗ್ಗೆನ 11.00 ಘಂಟೆಗೆ
8ನೇ ತರಗತಿ ಎಲ್ಲಾ ಜಿಲ್ಲೆಯವರಿಗೆ	29-03-2026 ಭಾನುವಾರ	ಪರೀಕ್ಷೆಯ ಸಮಯ: ಬೆಳಿಗ್ಗೆನ 11.00 ಘಂಟೆಗೆ

ಗೌರವ ಕಾರ್ಯದರ್ಶಿ

JANASEVA P.U.COLLEGE
Residential for Boys
Channenahalli,20th K.M.Magadi Main Road,Bangalore-562130
Email:janasevapuc@gmail.com, 123jsvkhighschool@gmail.com
ADMISSIONS OPEN FOR THE ACADEMIC YEAR 2026-27
First Year PUC Science (PCMB/PCMCs) Commerce (SEBA & CEBA)
Excellent coaching by experienced and highly qualified faculty members, Very Good Hostel Facility in natural environment.
Local Students (Boys & Girls) may also apply
Application forms are available in the college Office between 10 a.m. to 5 p.m.
Mob:080-23901414/9148275341
-Hon Secretary

Farm House/ Land/ Resorts

Out-Station

FOR SALE
Vacant Land 13.5 Grounds Sale in CHENNAI MUTTUKADU Behind: Buckingham Garden Resorts, ECR, CHENNAI
Genuine Buyers Contact
94441 33085

Industrial & Factory

Bommasandra

BOMMASANDRA 5 ACRES KIADB Land, Hoskote, Devanahalli, Mysore Road, Peenya 5000 To 5 Acres: 9845057822

Jigani

ANEKAL INDUSTRIAL PARK, 7Acres Land, 2MNC's Tenanted, 8Years Locking Period, 35Lakhs Rent getting 70Cr.: 9845057822

Kanakapura Road

HAROHALLI INDUSTRIAL AREA 3.6Acres Industrial Conversion Land Getting Rent 12Lakhs PM, Locking Period 8Years, 30Cr.: 9845057822

Tumkur Road

SALE, 10 Acres Industrial Land Dabaspet. Also 30 Acres suitable for Warehouse, Industry, Residencial. 9141326819

SALE KIADB 3Acres Red Zone. Corner_plot. Sompura 1st stage. Dabaspet. Clear Titles. Sale_Deed. Arun 9845077299.

General

Out-Station

MUMBAI SEA FACE JOINT DEVELOPMENT PROPERTIES AVAILABLE SRADEVELOPMENTS, REDEVELOPMENTS. GOA SALE CASINO 5STAR HOTEL. 9702932709

REAL ESTATE BUYING

Sites

Anjanapura

BDA-SITES Wanted @ Banashankari 6th`Stg Visveshwaraiah Lyt Anjanapura Kempegowda`Lyt 30x40,40x60,50x80 Immediate Settlement Rajesh 9945610779

Banashankari

BDA SITES WANTED ARKAVATI, ANJANAPURA, BANASHANKARI 6TH STAGE, VISHWESWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office):: 9036360366

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED BDA Site Vishweshwaria Layout 30x40, 40x60 Contact: 7899570235

Farm House/ Land/ Resorts

General

WANTED 1 Acre to 100 Acre Land . Ct : 8754809650

Industrial & Factory

Multiple Locations

WANTED FOR Purchase: Industrial Shed/ Land (3500-5000 SQFT) in Bommasandra Industrial_Area, Jigani Link_Road or Electronic_City. Direct owners only Call: 9481773963/ 9945111099.

Peenya

WANTED INDUSTRIAL Shed 3000 Sq.Ft. with 50 HP around Peenya 1st Stage and 2nd Stage Industrial Estate. Brokers are not entertained.Contact 8217290258.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

KMT APARTMENT for PG. Nagenahalli, near Hotel Management Army, Hennur Ring Road, 7 km for Apartment. Total 15 Flats all 2 BHK, Parking, Lift, Borewell facilities available. Total Rs. 2,80,000/-. Two Lakh Eighty Thousand only. Office: Kammanahalli, Kullappa circle. Contact: M. Subramani (Owner)- 9341242570.

HSR LAYOUT, 2000 sqft. Each 3 Floors 40X60 Furnished/ Twenty Single Bedroom Apartments 50x80, 98453-76147.

GIRINAGAR OFF 50' Road, 2400x4 Floors for House /Guest-Wearhouse/ Diagnostic Centre for Lease/ Rent. 9844041814.

Flats

3 BHK Flat 1475 sqft Lease 3 yrs Sahakarnagar, Hebbal, 35 Lakhs, Negotiable with terrace garden. 8660867713.

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

Accommodation Wanted

Industrial And Factory

WAREHOUSE REQUIRED on RENT 15-20,000Sft, Height 12-15 Metres HSR, Sarjapur, Jigini, Yelahanka. Whatsapp Details: PROPERTY POINT 99860-37215

AUTOMOTIVE

Four Wheelers Selling

Toyota

TOYOTA- INNOVA 2010 Model for Sale- 2.5V (M4) VX, 8-Seater, Single Owner, 3.2L Kms, Well Maintained, FC & Insurance Valid. Location: Girinagar, Bengaluru. Contact: Sumanth Narayan: 9606353036

BUSINESS

Business to Business

Events And Exhibitions

GR.EVENTS ATOZ Events Management, BANGALORE. Birthday`Party Weddings Naming Ceremony House`Warming Baby`Shower Flower Decoration Engagements Mehandi/Sangeet Ceremony Corporate Events. CALL:7411112565

PERSONAL

Change of Name

CHANGE OF NAME
I, **Ramesh Kumar,** residing at No. 175, 23rd Cross, 25th Main, Judicial Layout, Bangalore-560065, have changed my name to **RAMESH KUMAR D JAIN** vide affidavit dated 16-12-2025 before notary B.S. Padmaprasad, Bangalore.
Henceforth I shall be called **RAMESH KUMAR D JAIN** only

I, D BABU and BABU, R/at No.22, 3rd Cross, Gayathri Layout, KR Puram, Bengaluru- 560036, declare that the above name pertain to me only. Henceforth I shall be known as D babu, vide affidavit dated 06-03-2026 before notary Nijagunaradhya, Bengaluru.

I MAVILLA MANVITH SRINIVAS, A308, Splendid Royale Apartment, ITI Layout, 3rd Main, Bengaluru-68, have changed my name to MAVILLA SRINIVASA MANNVITH vide affidavit dated: 14/03/2026

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds Ads on Subsequent Pages

DH Classifieds DECCAN HERALD More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

ಟ್ಯಾನರಿ ರಸ್ತೆ: ದಟ್ಟಣೆ.. ನಿತ್ಯವೂ ಬವಣೆ

ನಿಯಮ ಪಾಲಿಸದ ವಾಹನ ಸವಾರರು • ಪೊಲೀಸರಿಂದ ಹರಸಾಹಸ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕಿರಿದಾದ ಟ್ಯಾನರಿ ರಸ್ತೆಯಲ್ಲಿ ದಿನವಿಡೀ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಬೆಳಿಗ್ಗೆ ಮತ್ತು ಸಂಜೆ ದಟ್ಟಣೆ ಬಿಗಡಾಯಿಸುತ್ತಿದೆ. ಸಂಚಾರ ಪೊಲೀಸರ ಸೂಚನೆಗಳನ್ನು ಪಾಲಿಸದೇ ಅಡ್ಡಾದಿಡ್ಡಿ ನುಗ್ಗುವ ವಾಹನಗಳು ಸಂಚಾರವನ್ನು ಇನ್ನಷ್ಟು ಕಗ್ಗಂಟುಗೊಳಿಸಿವೆ.

ನಿಯಮ ಪಾಲಿಸದ, ಮಾತು ಕೇಳದ ಚಾಲಕರು, ನಿರ್ಲಕ್ಷ್ಯ ವಹಿಸಿರುವ ಅಧಿಕಾರಿಗಳೂ ಈ ಸಮಸ್ಯೆ ನಿರಂತರವಾಗಿ ಉಳಿಯಲು ಕಾರಣ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಫ್ರೇಸರ್ ಟೌನ್, ರಿಚರ್ಡ್ಸ್ ಟೌನ್, ಗಿಡ್ಡಪ್ಪ ಬ್ಲಾಕ್, ಪೆರಿಯಾರ್ ನಗರ, ಪಿಳ್ಳಣ್ಣ ಉದ್ಯಾನ ಕಡೆಯಿಂದ ವಾಹನಗಳು ಒಂದೇ ಸಮನೆ ಬರುತ್ತಿರುತ್ತವೆ. ನಾಗವಾರ, ಕೋಗಿಲು ಕಡೆಯಿಂದ ಬಸ್‌ಗಳೂ ಇದೇ ಮಾರ್ಗವಾಗಿ ಶಿವಾಜಿನಗರ, ಮೆಜೆಸ್ಟಿಕ್ ಕಡೆಗೆ ಹಾದು ಹೋಗುತ್ತವೆ. ಡಾ.ಬಿ. ಆರ್. ಅಂಬೇಡ್ಕರ್ ಪ್ರತಿಮೆ ಇರುವ ಸರ್ಕಲ್‌ನಲ್ಲಿ ನಾಲ್ಕು ಕಡೆಯಿಂದ ವಾಹನಗಳು ಒಂದೇ ಸಮನೆ ಬರುತ್ತವೆ. ಯಾರಿಗೂ ಕಾಯುವ ತಾಳ್ಮೆ ಇಲ್ಲದೇ ನುಗ್ಗುವುದರಿಂದ ಬ್ಲಾಕ್ ಆಗುತ್ತಿದೆ.

'ರಸ್ತೆಯ ಕಿರಿದು ನಿಜ. ಆದರೆ, ವಾಹನ ಚಾಲಕರು ಎರಡು ನಿಮಿಷ ತಾಳ್ಮೆ ವಹಿಸಿದರೆ ಅರ್ಧಕ್ಕರ್ಧ ದಟ್ಟಣೆ ಕಡಿಮೆ ಮಾಡಬಹುದು. ನಿಲ್ಲಿ ಎಂದು ಸೂಚನೆ ನೀಡಿದರೂ ಕೇಳದೇ ಸ್ಥಳೀಯ ದ್ವಿಚಕ್ರ ವಾಹನಗಳು, ಆಟೊಗಳ ಚಾಲಕರು ವಾಹನಗಳನ್ನು ಮುಂದಕ್ಕೆ ಚಲಾಯಿಸುತ್ತಾರೆ. ನಾಲ್ಕು ಕಡೆಯಿಂದಲೂ ಈ ರೀತಿ ಬಂದರೆ ನಿಯಂತ್ರಿಸುವುದು ಹೇಗೆ' ಎಂದು ಸಂಚಾರ ಪೊಲೀಸರು ಪ್ರಶ್ನಿಸಿದರು.

'ಸಿಗ್ನಲ್ ಇಲ್ಲದ, ಪೊಲೀಸರ 'ಸಿಗ್ನಲ್'ಗೆ ಬೆಲೆ ನೀಡದ ಸಾರ್ವಜನಿಕರು ಇರುವ ಈ ವೃತ್ತದಲ್ಲಿ ಒಮ್ಮೆ ಬ್ಲಾಕ್ ಆದರೆ, ನಾಲ್ಕೂ ಕಡೆಗೆ ಕಿಲೋಮೀಟರ್ ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಹಗಲು ಮಾತ್ರವಲ್ಲ, ರಾತ್ರಿ 10ರ ನಂತರವೂ ಇಲ್ಲಿನ ಪರಿಸ್ಥಿತಿ ಬದಲಾಗಿರುವುದಿಲ್ಲ. ಇಲ್ಲಿ ಎಲ್ಲರೂ ಅನಾಗರಿಕರಂತೆ ವರ್ತಿಸುತ್ತಿರುವುದರಿಂದ ಸಮಸ್ಯೆ ಸರಿಪಡಿಸಲು ಆಗಿಲ್ಲ' ಎಂದು ಸ್ಥಳೀಯ ನಿವಾಸಿ ಸೈಯದ್ ಇಜಾದ್ ಎಂಬ ವೃದ್ಧರು ಅಸಹಾಯಕತೆ ವ್ಯಕ್ತಪಡಿಸಿದರು.

'ನಾಗವಾರ–ಕಾಳೇನ ಅಗ್ರಹಾರ ನಮ್ಮ ಮೆಟ್ರೊ ಇಲ್ಲಿಂದಲೇ ಹಾದು ಹೋಗುತ್ತಿದ್ದು, ಮೆಟ್ರೊ ಕಾಮಗಾರಿಯಿಂದ ದಟ್ಟಣೆ ಸಮಸ್ಯೆ ಹೆಚ್ಚಾಗಿತ್ತು. ಈಗ ಕಾಮಗಾರಿ ಮುಗಿದಿದೆ. ಒಮ್ಮೆ ಮೆಟ್ರೊ ಸಂಚಾರ ಆರಂಭವಾದರೆ ವಾಹನಗಳ ದಟ್ಟಣೆ ಪ್ರಮಾಣ ಸ್ವಲ್ಪ ಕಡಿಮೆಯಾಗಬಹುದು. ಅಲ್ಲದೇ ಮೆಟ್ರೊ ಪಕ್ಕದಲ್ಲಿರುವ ರಸ್ತೆ ವಿಸ್ತರಣೆಗೊಳ್ಳಲಿದೆ' ಎಂದು ಆಟೊ ಚಾಲಕ ಮುಜಾ ಮಿಲ್ ತಿಳಿಸಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯನ್ನು ಸಂಪರ್ಕಿಸುವ ಟ್ಯಾನರಿ ರಸ್ತೆಯನ್ನು ಅಭಿವೃದ್ಧಿಪಡಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದರು.

ನಗರದ ಟ್ಯಾನರಿ ರಸ್ತೆಯಲ್ಲಿ ವಾಹನಗಳು ಅಡ್ಡಾದಿಡ್ಡಿಯಾಗಿ ಚಲಿಸಿದ್ದರಿಂದ ವಾಹನದಟ್ಟಣೆ ಉಂಟಾಗಿರುವುದು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ದಶಕಗಳ ಪ್ರಯತ್ನ ಕೈಗೂಡಿಲ್ಲ

ಈ ರಸ್ತೆಯನ್ನು ವಿಸ್ತರಿಸಬೇಕು ಎಂಬ ಪ್ರಯತ್ನ ದಶಕಗಳಿಂದ ನಡೆದಿದ್ದರೂ ಸ್ಥಳೀಯ ಕಟ್ಟಡ ಮಾಲೀಕರ ವಿರೋಧದಿಂದಾಗಿ ವಿಸ್ತರಣೆ ಮಾಡಲು ಬಿಬಿಎಂಪಿ ಹಿಂದೇಟು ಹಾಕಿತ್ತು. ಬಿಬಿಎಂಪಿ ಹೋಗಿ ಜಿಬಿಎ ಅಸ್ತಿತ್ವಕ್ಕೆ ಬಂದ ಬಳಿಕ ಮತ್ತೆ ರಸ್ತೆ ವಿಸ್ತರಣೆಗೆ ಅಧಿಕಾರಿಗಳು ಮುಂದಾಗಿದ್ದರು. 40 ಅಡಿ ರಸ್ತೆಯನ್ನು 80 ಅಡಿ ರಸ್ತೆಯನ್ನಾಗಿ ಮಾಡುವಾಗ ಹಲವು ಕಟ್ಟಡಗಳು ನೆಲಸಮ ವಾಗುತ್ತವೆ. ಆದರೆ, ಕಟ್ಟಡ ಮಾಲೀಕರು ಕಟ್ಟಡ ತೆರವುಗೊಳಿಸಲು ಮತ್ತೆ ವಿರೋಧಿಸಿದ್ದಾರೆ. ಪಾರದರ್ಶಕ ಅಭಿವೃದ್ಧಿ ಹಕ್ಕು (ಟಿಡಿಆರ್) ಸ್ವೀಕರಿಸಲು ಸ್ಥಳೀಯ ಜಮೀನು ಮಾಲೀಕರು, ಕಟ್ಟಡ ಮಾಲೀಕರು ನಿರಾಕರಿಸಿದ್ದಾರೆ. ಇದರಿಂದ ಅಭಿವೃದ್ಧಿ ಸಾಧ್ಯವಾಗಿಲ್ಲ.

ಮೊಹಮ್ಮದ್, ಫ್ರೇಜರ್‌ಟೌನ್ ನಿವಾಸಿ

ರಸ್ತೆ ವಿಸ್ತರಣೆ ಮಾಡಿ

ಮಾಲೀಕರು ಒಪ್ಪುತ್ತಿಲ್ಲ ಎಂದು ಅಧಿಕಾರಿಗಳು ಹಿಂಜರಿಯುತ್ತಾ ಕುಳಿತರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಮಾಲೀಕರೊಂದಿಗೆ ಮಾತುಕತೆ ನಡೆಸಿ, ಒಪ್ಪಿಸಿ ರಸ್ತೆ ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕು. ಜಮೀನು, ಕಟ್ಟಡಗಳು ಹೋಗುತ್ತವೆ ಎಂದು ಗೊತ್ತಾದಾಗ ವಿರೋಧ ಬಂದೇ ಬರುತ್ತದೆ. ನಗರದ ಬೇರೆಡೆಗಳಲ್ಲಿ ವಿರೋಧಕ್ಕೆ ಪರಿಹಾರ ಕಂಡುಕೊಂಡು ಕೆಲಸ ಮಾಡಿದ್ದಾರೆ. ಇಲ್ಲಿ ವಿರೋಧ ಇದೆ ಎಂದು ನೆಪ ಹೇಳಿಕೊಂಡು ಕೆಲಸ ಮಾಡುತ್ತಿಲ್ಲ. ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಮನಸ್ಸಿದ್ದರೆ ರಸ್ತೆ ವಿಸ್ತರಣೆ ಮಾಡುವುದು ಕಷ್ಟದ ಕೆಲಸವಲ್ಲ.

ಜಾವಿದ್‌ಖಾನ್, ಸ್ಥಳೀಯ ನಿವಾಸಿ

ನಿಯಮ ಪಾಲನೆ ಇಲ್ಲ

ರಸ್ತೆ ಸುರಕ್ಷತಾ ನಿಯಮಗಳನ್ನು ಇಲ್ಲಿ ಯಾರೂ ಪಾಲಿಸುತ್ತಿಲ್ಲ. ಬೈಕ್‌ಗಳನ್ನು ಮಕ್ಕಳು ಚಲಾಯಿಸಿಕೊಂಡು ಹೋಗುತ್ತಾರೆ. ಒಂದೊಂದು ಬೈಕಲ್ಲಿ ಮೂರ್ನಾಲ್ಕು ಜನರು ಇರುತ್ತಾರೆ. ಒಬ್ಬರೂ ಹೆಲ್ಮೆಟ್ ಧರಿಸಿರುವುದಿಲ್ಲ. ಬೆಂಗಳೂರು ಹೊರನೋಟಕ್ಕೆ ಭಾರಿ ಅಭಿವೃದ್ಧಿ ಹೊಂದಿದ ನಗರವಾಗಿ ಕಾಣುತ್ತದೆ. ಈ ನಗರದ ಒಳಗೆ ಯೋಜನಾಬದ್ಧವಲ್ಲದ ಟ್ಯಾನರಿ ರಸ್ತೆಯಂಥವು ಹಲವು ಇವೆ. ಬೇರೆಡೆ ಪಾಲನೆಯಾಗುವ ನಿಯಮಗಳು ಇಲ್ಲಿಯೂ ಪಾಲನೆಯಾಗುವಂತೆ ಮಾಡಬೇಕು ಎಂದು ಯಾವ ಅಧಿಕಾರಿಯೂ ಯೋಚಿಸುತ್ತಿಲ್ಲ.

ಸಮೀನ್‌ಖಾನ್, ಸ್ಥಳೀಯ ನಿವಾಸಿ

'ಶಾಂತವೇರಿ ಗೋಪಾಲಗೌಡ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ

ರಾಜಕೀಯ ವಿಡಂಬನೆ, ಹಾಸ್ಯದ ಹೊನಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರವು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ರಾಜಕೀಯ ವಿಡಂಬನೆ, ಹಾಸ್ಯ, ವ್ಯಂಗ್ಯೋಕ್ತಿ, ಹಳೇ ರಾಜಕಾರಣದ ಮೌಲ್ಯಗಳ ಸ್ಮರಣೆಗಳಿಗೆ ವೇದಿಕೆಯಾಯಿತು.

ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್, ಮಾಜಿ ಸಚಿವೆ ಮೋಟಮ್ಮ, 'ಶಾಂತವೇರಿ ಗೋಪಾಲಗೌಡ ಪ್ರಶಸ್ತಿ' ಸ್ವೀಕರಿಸಿದ ವೈ.ಎಸ್.ವಿ. ದತ್ತ ಅವರ ಮಾತುಗಳಲ್ಲಿ ಹಿಂದಿನ ಮತ್ತು ಈಗಿನ ರಾಜಕಾರಣ ತೆರೆದುಕೊಂಡಿತು.

'ಕಾಗೋಡು ಸತ್ಯಾಗ್ರಹದ ಮೂಲಕ ಭೂಮಿ ಇಲ್ಲದ ರೈತರಿಗೆ ಭೂಮಿ ಕೊಡಿಸಿದ್ದ ಕೀರ್ತಿ ಶಾಂತವೇರಿ ಗೋಪಾಲಗೌಡ ಅವರಿಗೆ ಸಲ್ಲುತ್ತದೆ. ಗೋಪಾಲಗೌಡರ ಹೋರಾಟದ ಫಲವಾಗಿಯೇ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರು ರಾಜ್ಯದ 21 ಲಕ್ಷ ಭೂಹೀನರಿಗೆ ಭೂಮಿ ನೀಡಿದ್ದರು. ಈಗ ಕೆಲವರು 2 ಕೆ.ಜಿ. ಅಕ್ಕಿ ನೀಡಿ ನಾನೇ ನೀಡಿದ್ದೇನೆ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಇವತ್ತಿನ ರಾಜಕಾರಣ ಆ ಮಟ್ಟಕ್ಕೆ ಬಂದು ತಲುಪಿದೆ' ಎಂದು ವಿಶ್ವನಾಥ್ ಬೇಸರ ವ್ಯಕ್ತಪಡಿಸಿದರು.

'ಅರಸು ನೀಡಿರುವಂತಹ ಒಂದಾದರೂ ಯೋಜನೆ ಈಗ ಜಾರಿಯಾಗಿದೆಯೇ? ನಾವು ಮಾಡಿದ್ದೇ ಸರಿ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಬಾಯಿಯಲ್ಲಿ ಸಮಾಜವಾದ ಅಂದರಷ್ಟೇ ಸಾಲದು. ನಾವು ಮಾಡುವ ಕೆಲಸದಲ್ಲಿ ಕೂಡ ಇರಬೇಕು' ಎಂದು ಕುಟುಕಿದರು.

'ಗ್ಯಾರಂಟಿಯ ಹೆಚ್ಚು ಯೋಜನೆಗಳು ಹೆಣ್ಣುಮಕ್ಕಳಿಗೆ ಅನುಕೂಲ ಮಾಡಿಕೊಟ್ಟಿವೆ. ಅದನ್ನು ನಂಬಿ ಗೆಲ್ಲಬಹುದು ಎಂಬ ಭ್ರಮೆ ಇಟ್ಟುಕೊಳ್ಳಬಾರದು. ಹೆಣ್ಣುಮಕ್ಕಳ ವೋಟಿಗೆ ಗ್ಯಾರಂಟಿ ಇಲ್ಲ. ಚುನಾವಣೆಯ ಸಂದರ್ಭದ 'ಟ್ರೆಂಡ್', ಹಂಚುವ ದುಡ್ಡೇ ಮತವನ್ನು ನಿರ್ಧರಿಸುತ್ತದೆ' ಎಂದು ಮೋಟಮ್ಮ ಹೇಳಿದರು.

'ರಾಜ್ಯದಲ್ಲಿ ಕಾಂಗ್ರೆಸ್ 180 ಸೀಟ್ ಗೆದ್ದಿದ್ದ ಸಮಯದಲ್ಲಿ ಪಕ್ಷವು ಅಧಿಕಾರಕ್ಕಾಗಿ ಒಡೆದು ಹೋಯಿತು. ಎಲ್ಲ ಕಾಲದಲ್ಲಿ ಎಲ್ಲ ದೇಶಗಳಲ್ಲಿ, ಎಲ್ಲ ಪಕ್ಷಗಳಲ್ಲಿ ಅಧಿಕಾರದ ಮಹಿಮೆ ಇಂಥದ್ದನ್ನು ಮಾಡಿಸಿದೆ. ಈಗಲೂ ನೀನಾ ನಾನಾ ಎಂಬ ಹಗ್ಗಜಗ್ಗಾಟ ನಡೆಯುತ್ತಿದೆ. ಹೈಕಮಾಂಡ್ ಯಾಕೆ ಸ್ಪಷ್ಟ ನಿರ್ಧಾರ ಕೈಗೊಳ್ಳುತ್ತಿಲ್ಲ ಎಂಬುದು ಗೊತ್ತಾಗುತ್ತಿಲ್ಲ' ಎಂದು ಹೇಳಿದರು.

'ಜೆಡಿಎಸ್‌ಗೆ ಪ್ರಾದೇಶಿಕ ಪಕ್ಷವಾಗಿ ತನ್ನದೇ ಆದ ಮಹತ್ವ ಇತ್ತು. ತೆನೆ ಹೊತ್ತ ಮಹಿಳೆ ಚಿಹ್ನೆಯಲ್ಲಿ ತೆನೆಯು ಜಾತ್ಯತೀತ ತತ್ವದಂತಿತ್ತು. ಅದನ್ನು ಕೊಂಡೊಯ್ದು ಮೋದಿಯ ಕಾಲಬುಡದಲ್ಲಿ ಯಾಕೆ ಇಡಲು ಬಿಟ್ರಿ ದತ್ತ ಅವರೇ? ನಿಮಗೆ ದೇವೇಗೌಡರು ಆತ್ಮೀಯರು. ನೀವು ತತ್ವ ಸಿದ್ಧಾಂತಕ್ಕೆ ಬದ್ಧರಾದವರು. ನೀವಾದರೂ ದೇವೇಗೌಡರಿಗೆ ಹೇಳಬೇಕಿತ್ತು' ಎಂದು ದತ್ತ ಅವರ ಕಾಲೆಳೆದರು.

'ನೀವು ನಮ್ಮ ಪಕ್ಷಕ್ಕೂ ಬರಬಹುದು' ಎಂದು ದತ್ತ ಅವರನ್ನು ಆಹ್ವಾನಿಸಿದ ಮೋಟಮ್ಮ, 'ನಮ್ಮ ಪಕ್ಷದಲ್ಲಿಯೂ ಮೇಲಾಟ ನಡೆಯುತ್ತಿದೆ' ಎಂದು ಎಚ್ಚರಿಸಿದರು. ದತ್ತ ಅವರು ಕಾಂಗ್ರೆಸ್‌ಗೆ ಬಂದಿದ್ದರು. 'ಟಿಕೆಟ್ ಸಿಗದೇ ವಾಪಸ್ಸಾದರು' ಎಂದು ಸಭಿಕರು ನೆನಪು ಮಾಡಿದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಗೌರವಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಉಪಾಧ್ಯಕ್ಷ ಶಂಕರ್ ಹೂಗಾರ ಉಪಸ್ಥಿತರಿದ್ದರು.

ವೈ.ಎಸ್.ವಿ. ದತ್ತ ಅವರಿಗೆ 'ಶಾಂತವೇರಿ ಗೋಪಾಲಗೌಡ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಮೋಟಮ್ಮ, ಎಚ್.ವಿಶ್ವನಾಥ್, ಪಿ. ಮಲ್ಲಿಕಾರ್ಜುನಪ್ಪ, ಸಿ.ಕೆ. ರಾಮೇಗೌಡ, ಎಂ.ಎಲ್. ರಾಮಕೃಷ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಸೋಲಿಸಿದ ಧರ್ಮಸ್ಥಳ ಮಂಜುನಾಥ'

'ಏನೂ ಇಲ್ಲದ ನನ್ನನ್ನು ಕಡೂರಿನ ಜನರು ಭಾರಿ ಅಂತರದಿಂದ ಗೆಲ್ಲಿಸಿದ್ದರು. ಆನಂತರ 2018ರ ಚುನಾವಣೆಯ ಸಂದರ್ಭದಲ್ಲಿ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿಯೇ ಸುಮಾರು 30 ಸಾವಿರ ಜನರು ಬಂದಿದ್ದರು. ಅಲ್ಲಿ ಸೇರಿದ್ದವರ ಮನೆಗಳಿಂದ ತಲಾ ಇನ್ನೊಂದು ಓಟು ಬಂದರೂ ಸಾಕು ಗೆಲುವು ಗ್ಯಾರಂಟಿ ಅಂತಾ ಅಂದುಕೊಂಡಿದ್ದೆ. ಆದರೆ, ಸೋತುಬಿಟ್ಟೆ. ಯಾಕೆ ಸೋತೆ ಎಂದು ವಿಚಾರಿಸಿದಾಗ ನನ್ನ ಪ್ರತಿಸ್ಪರ್ಧಿ ಮನೆ ಮನೆಗೆ ಕವರ್ ನೀಡುವುದರ ಜೊತೆಗೆ ಧರ್ಮಸ್ಥಳ ಮಂಜುನಾಥನ ಫೋಟೊ ನೀಡಿ ಅದರ ಮೇಲೆ ಆಣೆ ಮಾಡಿಸಿಕೊಂಡಿದ್ದರು. ದೇವರಿಗೆ ಆಣೆ ಮಾಡಿದಂತೆ ನಡೆದುಕೊಳ್ಳಲೇಬೇಕಿತ್ತು. ಹಾಗಾಗಿ ಗಂಡ–ಹೆಂಡತಿಯಲ್ಲಿ ಒಬ್ಬರ ಓಟು ದೇವರಿಗೆ ಒಬ್ಬರ ವೋಟು ನಿಮಗೆ ಹಾಕಿದ್ದೇವೆ ಎಂದು ಹಲವರು ಹೇಳಿಕೊಂಡರು' ಎಂದು ವೈ.ಎಸ್.ವಿ. ದತ್ತ ಹೇಳಿದರು.

'ಧರ್ಮಸ್ಥಳದ ಮಂಜುನಾಥ ಸೋಲಿಸಿದ ಪ್ರಥಮ ವ್ಯಕ್ತಿ ನಾನೇ ಅಂತಾ ಅಂದುಕೊಂಡಿದ್ದೆ. ಶಾಂತವೇರಿ ಗೋಪಾಲಗೌಡರ ಚರಿತ್ರೆಯನ್ನು ಓದಿದ ಮೇಲೆ ನಾನು ಮೊದಲಿಗನಲ್ಲ, ಗೋಪಾಲ ಗೌಡರೇ ಮೊದಲಿಗರು ಎಂದು ಗೊತ್ತಾಯಿತು. 1952ರಲ್ಲಿ ಹಣವನ್ನೂ ಕೊಟ್ಟು, ಮತವನ್ನೂ ನೀಡಿ ಜನರು ಗೋಪಾಲಗೌಡರನ್ನು ಗೆಲ್ಲಿಸಿದ್ದರು. 1957ರ ಚುನಾವಣೆಯ ಸಂದರ್ಭದಲ್ಲಿ ತೀರ್ಥಹಳ್ಳಿಯಲ್ಲಿ ಜನರು ಸೋಲಿಸಿದ್ದರು. ನೋಡಿದರೆ, ಆಗಲೂ ಪ್ರತಿಸ್ಪರ್ಧಿಗಳು ಧರ್ಮಸ್ಥಳ ಮಂಜುನಾಥನ ಫೋಟೊ ಮೇಲೆ ಆಣೆ ಮಾಡಿಸಿಕೊಂಡಿದ್ದರು' ಎಂದರು.

ಬಜೆಟ್‌ನಲ್ಲಿ ಕ್ರೈಸ್ತರಿಗೆ ಬಿಡಿಗಾಸು: ಡಿಎಪಿಸಿ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 48 ಲಕ್ಷ ಜನಸಂಖ್ಯೆ ಹೊಂದಿರುವ ಕ್ರೈಸ್ತ ಸಮುದಾಯಗಳಿಗೆ ಈ ಬಾರಿಯ ಬಜೆಟ್‌ನಲ್ಲಿ ಕೇವಲ ₹93.5 ಕೋಟಿ ಒದಗಿಸಲಾಗಿದೆ ಎಂದು ಪ್ರೊಟೆಸ್ಟಂಟ್ ಕ್ರೈಸ್ತರ ಮಹಾಸಭಾ (ಡಿಎಪಿಸಿ) ಅಸಮಾಧಾನ ವ್ಯಕ್ತಪಡಿಸಿದೆ.

ಮಹಾಸಭಾದ ಆರ್ಚ್ ಬಿಷಪ್ ವಿನೋದ್ ಎಂ. ಚಾಕೊ, ಸಹಾಯಕ ಆರ್ಚ್ ಬಿಷಪ್ ಸುನೀಲ್ ವಿ. ಜೇಕಬ್, ಸಿನೋಡ್ ಕಾರ್ಯದರ್ಶಿ ಬಿಷಪ್ ವೆನಿಯಲ್ ಮೋಸಸ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕರ್ನಾಟಕ ಕ್ರೈಸ್ತ ಸಮುದಾಯ ಅಭಿವೃದ್ಧಿ ನಿಗಮ (ಕೆಸಿಸಿಡಿಸಿಎಲ್) ಆರಂಭಿಸಿದ್ದು ಉತ್ತಮ. ಆದರೆ, ಕೆಸಿಸಿಡಿಸಿಎಲ್‌ಗೆ ನೀಡುತ್ತಿರುವ ಅನುದಾನ ಸಾಕಾಗುತ್ತಿಲ್ಲ' ಎಂದರು.

ಬಜೆಟ್‌ನಲ್ಲಿ ಕೆಸಿಸಿಡಿಸಿಎಲ್‌ಗೆ ₹ 250 ಕೋಟಿ ಘೋಷಣೆ ಮಾಡಲಾಗಿತ್ತು. ಆದರೆ, ₹ 85 ಕೋಟಿ ಬಿಡುಗಡೆ ಆಗಿದ್ದು, ಉಳಿದ ₹165 ಕೋಟಿಯನ್ನು ಈ ಹಣಕಾಸು ವರ್ಷದೊಳಗೆ ಬಿಡುಗಡೆ ಮಾಡಬೇಕು. ಎಸ್‌ಸಿಎಸ್‌ಪಿ, ಟಿಎಸ್‌ಪಿ ಮಾದರಿಯಲ್ಲಿ ಕಾಯ್ದೆ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ಬೆಂಗಳೂರಿನಲ್ಲಿ ಕ್ರೈಸ್ತ ಪುರುಷ, ಮಹಿಳೆಯರಿಗೆ ಪ್ರತ್ಯೇಕ ವಿದ್ಯಾರ್ಥಿ ಹಾಗೂ ಉದ್ಯೋಗಿ ವಸತಿ ನಿಲಯ ಸ್ಥಾಪಿಸಬೇಕು. ಕ್ರೈಸ್ತರ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಮತ್ತು ಸಾಮಾಜಿಕ ಕೊಡುಗೆಗಳನ್ನು ಸಂರಕ್ಷಿಸಲು ಸಂಗ್ರಹಾಲಯ ಸ್ಥಾಪಿಸಬೇಕು. ರಾಜ್ಯದ ನಾಲ್ಕು ವಿಭಾಗಗಳಲ್ಲಿ ಕ್ರೈಸ್ತ ಅಧ್ಯಯನ ಮತ್ತು ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಬೇಕು. ಕ್ರೈಸ್ತ ಯುವಕರಿಗೆ ಕೃತಕ ಬುದ್ಧಿಮತ್ತೆ (ಎ.ಐ), ಡಿಜಿಟಲ್ ತಂತ್ರಜ್ಞಾನ ಮತ್ತು ಕೌಶಲಾಭಿವೃದ್ಧಿ ಹಾಗೂ ಮರುಕೌಶಲ ಕಾರ್ಯಕ್ರಮ ಆರಂಭಿಸಬೇಕು ಎಂದರು.

ಕೆಸಿಸಿಡಿಸಿಎಲ್‌ನಲ್ಲಿ ಪ್ರೊಟೆಸ್ಟಂಟರಿಗೂ ಪ್ರಾತಿನಿಧ್ಯ ನೀಡಬೇಕು. ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕ್ರೈಸ್ತ ಸಮುದಾಯ ಭವನಗಳನ್ನು ನಿರ್ಮಿಸಬೇಕು. ಪ್ರವರ್ಗ 2ಸಿ ರಚಿಸಿ ಕ್ರೈಸ್ತರಿಗೆ ಪ್ರತ್ಯೇಕ ಮೀಸಲಾತಿ ನೀಡಬೇಕು. ಚರ್ಚ್‌ಗಳು, ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ತಡೆಯಬೇಕು ಎಂದರು.

ಕ್ರೈಸ್ತ ಧಾರ್ಮಿಕ ಸಂಸ್ಥೆ ಮತ್ತು ಡಯೋಸಿಸ್ ಆಫ್ ಆಲ್ ಪ್ರೊಟೆಸ್ಟಂಟ್ ಚರ್ಚ್‌ಗಳಿಗೂ ಸರ್ಕಾರ ವಾರ್ಷಿಕ ಅನುದಾನ ನೀಡಬೇಕು. ಜೆರುಸಲೇಮ್‌ಗೆ ತೆರಳುವ ಕ್ರೈಸ್ತ ಯಾತ್ರಿಕರಿಗೂ ಆರ್ಥಿಕ ನೆರವು ನೀಡಬೇಕು. ಕ್ರೈಸ್ತ ಪಾಸ್ಟರ್ ಮತ್ತು ರೆವರೆಂಡ್‌ಗಳಿಗೆ ಮಾಸಿಕ ಗೌರವಧನ, ಪಾಸ್ಟರ್‌ಗಳಿಗೆ ಗುರುತಿನ ಚೀಟಿ ನೀಡಬೇಕು ಎಂದು ಆಗ್ರಹಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

PREMIER HIGH SCHOOL, SRIRAMPURAM requires Headmistress & Teachers for Primary (English, Social) and High School (Maths, Science) (Ladies Preferred). Contact: 9538836721.

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
CA Site No. 48, New Thippasandra, HAL 3rd Stage, Bengaluru -75
English Medium School affiliated to CBSE Board invites application for the following post:
SCIENCE TEACHER
B.Sc/ M.Sc (CBZ) with B.Ed/ M.Ed- Min 3 years experience
ENGLISH TEACHER
BA/ MA in English with B.Ed/ M.Ed- Min 3 years experience
HINDI TEACHER
BA/ MA in Hindi with B.Ed/ M.Ed- Min 3 years experience
KANNADA TEACHER
BA/ MA in Kannada with B.Ed/ M.Ed- Min 3 years experience
SANSKRIT TEACHER
BA/ MA in Sanskrit with B.Ed/ M.Ed- Min 2 years experience
MATHS TEACHER
B.Sc/ M.Sc with B.Ed- Min 3 years experience
PRIMARY ASSISTANT TEACHER
Any Degree with Min 1 year experience
SCIENCE LAB DEMONSTRATOR
B.Sc/ M.Sc with Min 1 year experience
PRE-PRIMARY ASSISTANT TEACHER
PUC with D.Ed/ NTT (Preference to Graduates)
OFFICE ASSISTANT
Any Degree with Computer Knowledge
Apply immediately to Hon. Secretary
Email: contact.indiranagar@ppec.edu.in
last date 23rd March 2026, Monday

ST FLOWERS ENGLISH SCHOOL ICSE-STATE, Bangalore 9686732171, 080-23399884/ 080-23408832, stflowerenglishschool@gmail.com Required Experience Trained Teachers for the Academic Year 2026-2027 For Primary and High School Kannada, Hindi, English, Social Teacher (MA , B.Ed) Maths, Science (M.Sc , B.Ed) Physical Education (BPEd, MPEd) Computer Science (M.Sc, B.Ed) Nursery Teachers NTT, Basic Degree with B.Ed Trained teachers.

NISARGA HIGH SCHOOL Opposite Govt Hospital, Hegganahalli, Bangalore-560091 Walk-in Interview PRINCIPAL (Trained Post Graduate with minimum 5'years experience) Pre-Primary/ Primary Teacher (Grade 1to7) NTT/ D.Ed/ B.Ed with minimum 3'years experience. High-School TEACHER: MA/ M.Sc B.Ed with 4'years experience (Kan, Eng, Hin, Math) COMPUTER TEACHER: (MCA/'M.Sc) PE TEACHER (B.P.Ed/ M.P.Ed) Walk-in Interview on 16/03/2026 (Monday) 17/03/2026 (Tuesday) Time: 10.00AM-1.00PM. Bring your resume and orginal Testimonials 08028362314, 7012714659, 8317454729

DH
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

VIDYANIKETAN PUBLIC SCHOOL™
Together We Explore, Engage & Evolve
#498, Ullal Road Cross, Ullal Upanagar, Bangalore - 560056
Ph: +91 80 2324 0364 / 77 / 95
www.vidyaniketan.edu.in
WE ARE LOOKING TO RECRUIT TALENTED EDUCATORS TO JOIN OUR TEAM
PRIMARY SCHOOL
English / EVS
MIDDLE AND SECONDARY SCHOOL TEACHERS
English / Science / Social Studies / Computer Science / Arficial Intelligence (AI)
Eligibility Criteria:
- Candidates with Bachelor's Degree in the relevant subject and a Bachelor's Degree in Education mandatory.
- Minimum 3 years of relevant work experience is preferred.
- Good Command over English language and Proficiency in using computers and software is essential.
- Freshers who are exceptionally talented and with the requisite qualifications can apply.

ASSOCIATE TEACHERS FOR PRIMARY
- Bachelor's Degree in any discipline (B.A, B.Sc or B.Com / equivalent) from a recognized university.
- B.Ed / D.El.Ed or equivalent is desirable.
- Fresh Graduates can apply.

SPECIAL EDUCATORS
- B.Sc / B.A with specialization relevant to child development psychology.
- B.Ed (Special Education) in any recognized disability area OR Diploma in Special Education.
- RCI Registration is desirable.
- Minimum 3 years of hands-on experience working with Special Educational Needs in a school setting.

Apply with your resume to
careers@vidyaniketan.edu.in
or WhatsApp your resume to + 91 8431278465

REQUIRED EXPERIENCED Primary and High School Teachers with B.A / B.Sc, B.Ed / M.A / M.Sc, M.Ed to teach Science, Social Science, Mathemetics, English, Hindi & PE Teacher. Required Librarian, Lab Assistant & Drivers. Walk-in-interview. Contact: Lalith Castle International School, Rajarajeshwari Nagar, Blore-98. Mob: 9620464800 Email: lcis.rrnagar@gmail.com

REQUIRES EXPERIENCED Primary and High School Teachers with B.A / B.Sc., B.Ed / M.A / M.Sc., M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail- maxmullerpublicschool.mlayout@gmail.com

JANASEVA VIDYA KENDRA
Residential for Boys
Channenahalli,20th K.M.Magadi Main Road, Bangalore-562130
WANTED TEACHERS
M.Sc, or B.Sc., B.Ed. (PCM, CBZ)
MA. Or B.A., B.Ed., English and Social
(English Medium)
Hindi Teachers (MA or B.A., B.Ed)
P.E. Teachers (B.P.Ed)
Music Teacher, Drawing Teacher, Craft Teacher
Wardens (Graduates) Gents Only
Walk In Interview 20-03-2026, Friday 10.00 a.m.
Email: 123jsvkhighschool@gmail.com
Kindly Send your Resume to the above Email ID
Contact :7022428464/ 9480609078/ 9241216119
Hon. Secretary.

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27 for High School Ist Language English, Mathematics, Science &SocialScience. STATE & ICSE. Qualification: B.A./B.Sc.,B.Ed/ M.A./M.Sc.,M.Ed. Only English Medium Candidates need to apply.

TRIVENI PUBLIC School, (CBSE & ICSE) Bagalagunte invites applications from qualified and experienced teachers for the following subjects: English, Hindi, Mathematics, Science (PCM & CBZ), EVS, and All Subjects (Primary & high school). Contact number 6360291124 Mail ashakashyap1380@gmail.com

NEW MILLENNIUM SCHOOL
Horamavu Agara, Bangalore-560043
[Affiliated to CISCE New Delhi]
Invites application for the following position from suitably qualified and experienced on a full-time basis.
COORDINATOR – Kindergarten and Primary School
SPECIAL EDUCATOR
MUSIC TEACHER
DANCE TEACHER
ENGLISH TEACHER – Middle and Senior School
Send your CV to newmilleniumschool@gmail.com
Walk in interview between 8 am to 12.30 pm on a working day.
Contact: 86605 41421/7892839366
Visit: www.newmillenniumschool.com

Applications are invited for the following positions
- HINDI TEACHER: Trained Graduate / Post Graduate with D.Ed. or TCH in Hindi.
- PHYSICAL EDUCATION TEACHER: B.P.Ed or M.P.Ed.
Email your resume/bio-data clearly indicating the post applied for.
SAMVED SCHOOL
Managed by A.V.Education Society
13, 17th Cross, 20th Main, J.P.Nagar, V Phase, Bangalore - 78.
Ph : 2659 0952, 2659 0017
E-mail: aves1967@gmail.com
Website: www.samvedschool.com

Engg/ Production Technical

REQUIRED TECHNICAL & MARKETING MANAGER. (BE or Diploma) 3 Years Experience. Contact: 9110637878 9110637876 9110637870

EDUCATION CORNER
ಕ್ಲಾಸಿಫೈಡ್ಸ್

BHARATH EDUCATION SOCIETY®
BES Pre-University College of Science, Commerce & Arts
27, Sahakararathna B.L. Lakke Gowda Road, 16th Main, Jayanagar 4th Block, Bengaluru-560011
Email: principalas018@gmail.com
Website: www.besinstitutions.edu.in
080-26637018 / 98863 52466
Free Integrated Course NEET, JEE, K-CET, COMED-K
Affordable Fee for I & II PUC Science



Sahakararathna B.L. Lakke Gowda
Founder
B.E.S Institutions

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

COURSES OFFERED FOR : 2026-27
PUC: PCMB, PCMC, HEBA, SEBA, CEBA, HEPS
Languages Offered: English, Kannada, Hindi & Sanskrit
BES EVENING PU COLLEGE OF COMMERCE & ARTS
080-26533736 / 9886352466 Email: beseveningpucollege@gmail.com
PUC: HEBA, HEPS
Sri Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Sri Srinivasa C., Principal, BES Day PU College
Sri Suresh, Principal, BES Evening PU College
BES-25606

AFPRO A national level NGO requires 2-Civil Engineers for Sindhanur and Mysuru, Diploma/B.Tech/M.Tech. Email to-aro.blr@afpro.org

General

SUPERVISORS WITH 5+ years experience & basic computer skills required for a manufacturing firm at Peenya . Suitable candidates contact 080 26603729 Email. anvesh@mahendraperfumery.com

WANTED IMPORT/ Export Executive for an Export/ Import Company based in South Bangalore. Knowledge of Computers Excel word Mails essential. Send your Resume to mohan@aqsin.net

WANTED PROFESSIONAL Experienced GYM TRAINER, good salary, incentives gym at Vishweshwaraiah Layout 8th block. 9964567849

Accounts & Finance

"REQUIRED 5+YEARS Exeprienced Accountant" for`Shekar Hospital`Bull-temple`Road, Bangalore-19. Compitative Salary-offered. Mail`ID: ca.shreehari@kutsalegal.in

MORE Classifieds Ads on Subsequent Pages

Stores/ Purchase

WANTED DIPLOMA with 5 years experience in Industrial Stores. Work place at Kanakapura factory. Email resume to rollondg@rollonbearings.com

DH Classifieds ಪ್ರಜಾವಾಣಿ
More value, more impact
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact: 9845114560 9886213331
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಎಲ್‌ಪಿಜಿ ಕೊರತೆ ಮಧ್ಯೆಯೇ ಹೊಂದಾಣಿಕೆ

ಮತ್ತಷ್ಟು ಹೋಟೆಲ್‌ಗಳು ಬಂದ್ • ಹೋಟೆಲ್ ತಿಂಡಿಗಳ ಬೆಲೆ ತುಸು ಹೆಚ್ಚಳ • ಮದುವೆ ಸಮಾರಂಭಗಳಿಗೂ ತಟ್ಟಿದ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿನ ವ್ಯತ್ಯಯದಿಂದ ಉಂಟಾಗಿರುವ ಬಿಕ್ಕಟ್ಟು ತುಸು ಹೆಚ್ಚಾಗಿದ್ದು, ಶನಿವಾರ ಇನ್ನಷ್ಟು ಹೋಟೆಲ್‌ಗಳು ಮತ್ತು ಆಟೊ ಎಲ್‌ಪಿಜಿ ಬಂಕ್‌ಗಳು ಬಂದ್ ಆಗಿದ್ದವು. ಈ ಬಿಕ್ಕಟಿನ ಸ್ಥಿತಿಗೆ ಜನರು ಅನಿವಾರ್ಯವಾಗಿ ಒಂದಷ್ಟು ಹೊಂದಾಣಿಕೆ ಮಾಡಿಕೊಳ್ಳುವಂತಾಗಿದೆ.

ನಗರದ ಮಲ್ಲೇಶ್ವರದ ಎಲ್‌ಪಿಜಿ ವಿತರಣಾ ಕೇಂದ್ರದ ಎದುರು ವಾಣಿಜ್ಯ ಸಿಲಿಂಡರ್ ತುಂಬಿರುವ ಸರಕು ಸಾಗಣೆ ಆಟೊ ನಿಂತಿರುವುದು

–ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ನಗರದ ವಿವಿಧ ಭಾಗಗಳಲ್ಲಿ ಇರುವ ಹೋಟೆಲ್‌ಗಳ ಮೆನು ಫಲಕಗಳ ಮೇಲೆ, 'ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಆಗಿರುವುದರಿಂದ ಕೆಲವು ತಿನಿಸುಗಳನ್ನು ಕಡಿತ ಮಾಡಲಾಗಿದೆ', 'ಎಲ್‌ಪಿಜಿಗೆ ಹೆಚ್ಚಿನ ದರ ನೀಡಬೇಕಾಗಿರುವುದಿಂದ ಎಲ್ಲ ತಿನಿಸುಗಳ ಮೇಲೆ ಹೆಚ್ಚುವರಿಯಾಗಿ ₹5–₹10 ವಿಧಿಸಲಾಗುತ್ತದೆ' ಎಂಬ ಭಿತ್ತಿಪತ್ರಗಳನ್ನು ಅಂಟಿಸಲಾಗಿದೆ.

'ನಾನು ಬುಧವಾರವೇ ಈ ಭಿತ್ತಿಪತ್ರ ಹಾಕಿದ್ದೆ. ಮೊದಲ ದಿನ ಕೆಲವರು, 'ಹೆಚ್ಚು ಹಣ ಏಕೆ ನೀಡಬೇಕು' ಎಂದರು. ಇಂದು ತಕರಾರು ಮಾಡದೇ ತಿನಿಸು ಖರೀದಿಸುತ್ತಿದ್ದಾರೆ. ಜನಕ್ಕೂ ನಮ್ಮ ಸಮಸ್ಯೆ ಅರ್ಥವಾಗಿದೆ' ಎನ್ನುತ್ತಾರೆ ವಿಜಯನಗರದ ಮಾರೇನಹಳ್ಳಿ ಮುಖ್ಯರಸ್ತೆಯಲ್ಲಿ ರೆಸ್ಟೋರೆಂಟ್ ನಡೆಸುತ್ತಿರುವ ಮಂಜುನಾಥ್.

ವಿಜಯನಗರದ ವಾಟರ್‌ಟ್ಯಾಂಕ್ ಬಳಿ ಹೋಟೆಲ್ ನಡೆಸುತ್ತಿರುವ ಭೇಲ್‌ಪುರಿ ಶಂಕರಣ್ಣ, '32 ವರ್ಷಗಳಿಂದ ಹೋಟೆಲ್ ನಡೆಸುತ್ತಿದ್ದೇನೆ. ಕೋವಿಡ್ ಅವಧಿಯಲ್ಲೂ ಸಮಸ್ಯೆ ಆಗಿರಲಿಲ್ಲ. ಈಗ ಸಿಲಿಂಡರ್ ಕೊರತೆಯಿಂದ ಹಲವು ತಿಂಡಿಗಳನ್ನು ನಿಲ್ಲಿಸಿದ್ದೇನೆ. ಎಲ್‌ಪಿಜಿ ಒಲೆಗಳ ಬಳಕೆ ಕಡಿಮೆ ಮಾಡಿದ್ದೇವೆ. ರೊಟ್ಟಿ ಮತ್ತಿತರ ತಿನಿಸುಗಳಿಗೆ ಸೌದೆ ಒಲೆ ಬಳಸುತ್ತಿದ್ದೇವೆ. ರೊಟ್ಟಿ–ದೋಸೆ ಸಿದ್ಧವಾಗುವುದು ತುಸು ನಿಧಾನವಾದರೂ, ಜನರು ಕಾಯುತ್ತಾರೆ' ಎಂದರು.

ವಿಜಯನಗರದ ತಿಂಡಿ ಬೀದಿ, ಶೇಷಾದ್ರಿಪುರದ ನಟರಾಜ ಚಿತ್ರಮಂದಿರ ಬಳಿ ಕಿರು ಹೋಟೆಲ್ ನಡೆಸುವವರದ್ದೂ ಇದೇ ಅಭಿಪ್ರಾಯ. ಈ ಮಧ್ಯೆ ನಗರದ ಹಲವೆಡೆ ಶನಿವಾರ ಇನ್ನಷ್ಟು ಹೋಟೆಲ್‌ಗಳು ಸ್ಥಗಿತವಾಗಿವೆ. ಮಹಾತ್ಮ ಗಾಂಧಿ ರಸ್ತೆ, ಚರ್ಚ್ ರಸ್ತೆಯ ಹಲವು ಕಿರು ಹೋಟೆಲ್‌ಗಳಲ್ಲಿ ತಿನಿಸುಗಳ ಬೆಲೆಯನ್ನು ಹೆಚ್ಚಿಸಲಾಗಿದೆ. ದೊಡ್ಡ ಹೋಟೆಲ್‌ಗಳಲ್ಲಿ ತಿನಿಸು ಮತ್ತು ಆಹಾರ ಪದಾರ್ಥಗಳ ಸಂಖ್ಯೆಯಲ್ಲಿ ಕಡಿಮೆ ಮಾಡಲಾಗಿದೆ.

ಮದುವೆ–ಸಮಾರಂಭಗಳಿಗೆ ತಿನಿಸಿನ ಕಡಿತ: ನಗರದಲ್ಲಿ ಮದುವೆ ಮತ್ತಿತರ ಸಮಾರಂಭಗಳಿಗೆ ಸಾಮಾನ್ಯವಾಗಿ 30–40 ಮತ್ತು 45 ತಿನಿಸುಗಳ ಪ್ಯಾಕೇಜ್ ನೀಡಲಾಗುತ್ತಿತ್ತು. ಈಗ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ವ್ಯತ್ಯಯ ಆಗಿರುವ ಕಾರಣ, ತಿನಿಸುಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ.

ನಾಗರಬಾವಿಯಲ್ಲಿ ಕೇಟರಿಂಗ್ ವಹಿವಾಟು ನಡೆಸುವ ಪಾರ್ವತಿ ಟೆಂಟ್‌ಹೌಸ್‌ನ ಮಾಲೀಕ ಲಿಂಗಣ್ಣ, 'ಈಗಾಗಲೇ ಬುಕ್ಕಿಂಗ್ ಆಗಿರುವ ಸಮಾರಂಭಗಳಿಗೆ ಸೌದೆ ಒಲೆ ಬಳಸಿ, ಎಲ್ಲ ತಿನಿಸಿಗಳನ್ನೂ ಸಿದ್ಧಪಡಿಸಿಕೊಡಲಾಗುತ್ತಿದೆ. ಹೊಸದಾಗಿ ಬುಕ್ಕಿಂಗ್ ಮಾಡುವವರಿಗೆ 15–20 ತಿನಿಸುಗಳ ಪ್ಯಾಕೇಜ್ ನೀಡಲಾಗುತ್ತಿದೆ. ಗ್ರಾಹಕರೂ, ಊಟದ ವ್ಯವಸ್ಥೆ ಆದರೆ ಸಾಕು ಎಂಬ ಸ್ಥಿತಿಗೆ ಬಂದಿದ್ದಾರೆ. ಆದರೆ ಇದೇ ಸ್ಥಿತಿ ಮುಂದುವರಿದರೆ, ವಹಿವಾಟು ನಡೆಸುವುದು ಕಷ್ಟವಾಗುತ್ತದೆ' ಎಂದು ಕಳವಳ ವ್ಯಕ್ತಪಡಿಸಿದರು.

'ನಿಮಗೆ ಸಿಲಿಂಡರ್ ಸಿಕ್ಕಿತಾ': 'ನಿಮಗೆ ಸಿಲಿಂಡರ್ ಸಿಕ್ಕಿತಾ'... ನಗರದಲ್ಲಿ ಪರಿಚಯಸ್ಥರು ಎದುರಾದಾಗ ಉಭಯಕುಶಲೋಪರಿ ವಿಚಾರಿಸುವ ಹೊಸ ಬಗೆ ಇದು.

ತರಕಾರಿ–ದಿನಸಿ ಅಂಗಡಿ, ಉದ್ಯಾನ ಮತ್ತು ದೇವಾಲಯಗಳ ಬಳಿ ಪರಿಚಯಸ್ಥರು ಎದುರಾದಾಗ, 'ನೀವು ಸಿಲಿಂಡರ್ ಬುಕ್ ಮಾಡಿದಿರಾ', 'ನಾವು ಬುಕ್ ಮಾಡಿ ಮೂರು ದಿನ ಆಗಿದೆ. ನಾಳೆ ಕೊಡುತ್ತೇವೆ ಎಂದಿದ್ದಾರೆ', 'ನಮ್ಮ ಮನೆಯಲ್ಲಿ ಇನ್ನೂ ಒಂದೂವರೆ ತಿಂಗಳಿಗೆ ಆಗುತ್ತದೆ', 'ನಮಗೂ ಎರಡು ತಿಂಗಳಿಗೆ ಸಾಲುತ್ತದೆ. ತೊಂದರೆ ಏಕೆ ಎಂದು ಈಗಲೇ ಬುಕ್ ಮಾಡಿದ್ದೇನೆ' ಎಂಬ ಮಾತುಗಳು ವಿನಿಮಯವಾಗುವುದು ಈಗ ಸಾಮಾನ್ಯವಾಗಿದೆ.

'ಮನೆಯಿಂದಲೇ ಊಟ ತನ್ನಿ'

ನಗರದ ಕೆಲವು ಪ್ರತಿಷ್ಠಿತ ಐ.ಟಿ ಕಂಪನಿಗಳು, 'ಮನೆಯಿಂದ ಊಟ ತನ್ನಿ' ಎಂದು ತಮ್ಮ ಉದ್ಯೋಗಿಗಳಿಗೆ ಸೂಚಿಸಿವೆ.

'ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಕಾರಣ, ಸಂಸ್ಥೆಯ ಕ್ಯಾಂಟೀನ್ ಮೇಲಿನ ಒತ್ತಡವನ್ನು ತುಸು ಕಡಿಮೆ ಮಾಡೋಣ. ಇಲ್ಲಿ ಏನನ್ನೂ ಪೂರೈಸುವುದಿಲ್ಲ ಎಂದಲ್ಲ. ಸಾಧ್ಯವಾದಷ್ಟೂ ಮನೆಯಿಂದಲೇ ಊಟ ತನ್ನಿ, ಸಹಕರಿಸಿ' ಎಂದು ಕಂಪನಿಯೊಂದು ತನ್ನ ಉದ್ಯೋಗಿಗಳಿಗೆ ಇ-ಮೇಲ್ ಮಾಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ನಗರದ ರಾಜಕುಮಾರ್ ರಸ್ತೆಯಲ್ಲಿ ಹಲವು ರೆಸ್ಟೋರೆಂಟ್ ಬಾಗಿಲು ಹಾಕಿವೆ

ಆಟೊಗಳಿಗೆ ಎಲ್‌ಪಿಜಿ ಸಿಗುತ್ತಿಲ್ಲ...

ದೇಶದಲ್ಲಿಯೇ ಅತಿಹೆಚ್ಚು ಎಲ್‌ಪಿಜಿ ಚಾಲಿತ ಆಟೊಗಳು ಇರುವುದು ಬೆಂಗಳೂರಿನಲ್ಲಿ. ನಗರದಲ್ಲಿ ಅಂದಾಜು 1.50 ಲಕ್ಷ ಎಲ್‌ಪಿಜಿ ಆಟೊಗಳು ಮತ್ತು 30,000ದಷ್ಟು ಎಲ್‌ಪಿಜಿ ಚಾಲಿತ ಕಾರುಗಳು ಇವೆ. ಶನಿವಾರದ ಹೊತ್ತಿಗೆ ನಗರದ ವಿವಿಧ ಭಾಗಗಳಲ್ಲಿ ಇರುವ ಆಟೊ ಎಲ್‌ಪಿಜಿ ಬಂಕ್‌ಗಳು ಬಂದ್ ಆಗಿದ್ದು, ಆಟೊ ಸೇವೆಗೆ ತೊಡಕಾಗಿದೆ.

'ಎಲ್‌ಪಿಜಿ ಲಭ್ಯವಿಲ್ಲದೆ ಆಟೊಗಳು ರಸ್ತೆಗೆ ಇಳಿಯಲು ಸಾಧ್ಯವಾಗದಿರುವುದು ಒಂದು ಸಮಸ್ಯೆಯಾದರೆ, ಆಟೊ ಎಲ್‌ಪಿಜಿ ದರ ಏರಿಕೆಯಾಗಿರುವುದು ಇನ್ನೊಂದು ಸಮಸ್ಯೆ. ಹತ್ತು ದಿನದ ಹಿಂದೆ ಒಂದು ಕೆ.ಜಿ ಆಟೊ ಎಲ್‌ಪಿಜಿ ದರ ₹55ರಷ್ಟಿತ್ತು. ಈಗ ₹80ರಿಂದ ₹90ರಷ್ಟಾಗಿದೆ. ಅಷ್ಟೊಂದು ಹಣ ನೀಡಿ, ಆಟೊ ಓಡಿಸುವುದು ಹೇಗೆ' ಎಂಬ ಪ್ರಶ್ನೆ ರಾಜಾಜಿನಗರ 6ನೇ ಬ್ಲಾಕ್‌ನ ಆಟೊ ಚಾಲಕ ಪರಶುರಾಮ ಅವರದ್ದು.

ವಿಜಯನಗರ, ರಾಜಾಜಿನಗರ, ಮಾಗಡಿ ರಸ್ತೆ, ಗಾಂಧಿನಗರ, ಜಯನಗರ, ಬಸವನಗುಡಿ, ಗಿರಿನಗರ, ನಾಯಂಡಹಳ್ಳಿ, ಬನಶಂಕರಿ, ಜೆ.ಪಿ.ನಗರ ಸೇರಿ ಬೆಂಗಳೂರು ದಕ್ಷಿಣ ಭಾಗದ ಹಲವೆಡೆ ಆಟೊ ಎಲ್‌ಪಿಜಿ ಬಂಕ್‌ಗಳು ಶನಿವಾರ ಬಂದ್ ಮಾಡಿದ್ದವು.

ಶಾಲಾ ಮಕ್ಕಳನ್ನು ಶಾಲೆಗೆ ಕರೆದೊಯ್ದು, ವಾಪಸ್ ಕರೆತರುವ ಸೇವೆ ನೀಡುವ ಸಾವಿರಾರು ಮಾರುತಿ ಓಮ್ನಿಗಳು ನಗರದಲ್ಲಿ ಕಾರ್ಯನಿರ್ವಹಿಸುತ್ತಿವೆ. 'ಆಟೊ ಎಲ್‌ಪಿಜಿ ದೊರೆಯದೇ ಇರುವುದರಿಂದ ಈ ಓಮ್ನಿಗಳಲ್ಲಿ ಅನಿವಾರ್ಯವಾಗಿ ಪೆಟ್ರೋಲ್ ಬಳಸುವಂತಾಗಿದೆ. ₹55 ಖರ್ಚು ಮಾಡುತ್ತಿದ್ದಲ್ಲಿ, ₹105 ತೆರಬೇಕಾಗಿದೆ. ನಾವು ತಿಂಗಳ ಲೆಕ್ಕಾಚಾರದಲ್ಲಿ ಹಣ ಪಡೆಯುವುದರಿಂದ, ಪೋಷಕರಿಂದ ಹೆಚ್ಚಿನ ಹಣ ಪಡೆಯಲು ಸಾಧ್ಯವಿಲ್ಲ' ಎಂಬುದು ಕಾಮಾಕ್ಷಿಪಾಳ್ಯದ ನಿವಾಸಿ–ಶಾಲಾ ಓಮ್ನಿ ಚಾಲಕ ಶ್ರೀನಿವಾಸ್ ಅವರ ಕಳವಳ.

ಗೆಳತಿ ಕೊಂದು ಆತ್ಮಹತ್ಯೆ ಎಂದು ಬಿಂಬಿಸಿದ್ದ

ಪ್ರಜಾವಾಣಿ ವಾರ್ತೆ

ಅಯ್ಯಪ್ಪ

ರಂಜಿತಾ

ಅಪರಾಧ ಸುದ್ದಿ

ಬೆಂಗಳೂರು: ಗೆಳತಿಯನ್ನು ಕೊಂದು ಆಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಕಥೆ ಕಟ್ಟಿದ್ದ ಆರೋಪಿಯನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಂಜಿತಾ (23) ಕೊಲೆಯಾದವರು. ಅಯ್ಯಪ್ಪ (26) ಬಂಧಿತ ಆರೋಪಿ.

ಕೊಲೆಯಾದ ರಂಜಿತಾ ಮತ್ತು ಆರೋಪಿ ಅಯ್ಯಪ್ಪ ಇಬ್ಬರೂ ಕೊಡಗಿನ ಪೊನ್ನಂಪೇಟೆಯವರು. ಕೊಡತಿ ಗ್ರಾಮದ ಡೆಲ್ಲಿ ಪಬ್ಲಿಕ್ ಸ್ಕೂಲ್ ರಸ್ತೆಯ ರಾಮದಾಸ್ ಲೇಔಟ್ ಗೋಪಾಲ್ ಎಂಬುವವರ ಮನೆಯಲ್ಲಿ ಇಬ್ಬರೂ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಸಹಜೀವನ ನಡೆಸುತ್ತಿದ್ದರು. ಅಯ್ಯಪ್ಪಗೆ ಈಗಾಗಲೇ ಮದುವೆಯಾಗಿತ್ತು. ಪತ್ನಿಯಿಂದ ದೂರವಾಗಿ ರಂಜಿತಾ ಜತೆಗೆ ಸಹಜೀವನ ನಡೆಸುತ್ತಿದ್ದ ಎಂದು ಪೊಲೀಸರು ಹೇಳಿದರು.

'ರಂಜಿತಾ ಅವರನ್ನು ಪ್ರೀತಿಸುತ್ತಿದ್ದ ಅಯ್ಯಪ್ಪ, ಮದುವೆ ಆಗುವುದಾಗಿ ನಂಬಿಸಿದ್ದ. ರಂಜಿತಾ ಅವರ ಪೋಷಕರಲ್ಲೂ ನಂಬಿಕೆ ಬರುವಂತೆ ಮಾತನಾಡಿದ್ದ. ರಂಜಿತಾ ಮನೆ ಬಿಟ್ಟು ಬೆಂಗಳೂರಿಗೆ ಬಂದು, ಅಯ್ಯಪ್ಪನ ಜತೆಗೆ ಬಾಡಿಗೆ ಮನೆ ಪಡೆದು ನೆಲಸಿದ್ದರು' ಎಂದು ಪೊಲೀಸರು ಹೇಳಿದರು.

'ಒಣಹಣ್ಣುಗಳ ಮಾರಾಟದ ಅಂಗಡಿಯಲ್ಲಿ ಆರೋಪಿ 'ಸೂಪರ್ ವೈಸರ್' ಆಗಿ ಕೆಲಸ ಮಾಡುತ್ತಿದ್ದರೆ, ಯುವತಿ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡುತ್ತಿದ್ದರು. 15 ದಿನಗಳ ಹಿಂದೆ ಪೋಷಕರಿಗೆ ಕರೆ ಮಾಡಿದ್ದ ಯುವತಿ, ಅಯ್ಯಪ್ಪ ಪ್ರತಿನಿತ್ಯ ತನಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿರುವುದಾಗಿ ತಿಳಿಸಿದ್ದಳು' ಎಂದು ಮೂಲಗಳು ತಿಳಿಸಿವೆ.

ಎರಡು ದಿನಗಳ ಹಿಂದೆ ಜೋರು ಗಲಾಟೆ: ಎರಡು ದಿನಗಳ ಹಿಂದೆ ಇಬ್ಬರ ಮಧ್ಯೆ ಜಗಳ ವಿಕೋಪಕ್ಕೆ ಹೋಗಿತ್ತು. ಈ ವೇಳೆ ಕೇಬಲ್ ವೈರ್‌ನಿಂದ ಯುವತಿಯ ಕುತ್ತಿಗೆ ಬಿಗಿದು ಆರೋಪಿ ಕೊಲೆ ಮಾಡಿದ್ದ. ಬಳಿಕ, ಯುವತಿ ಕುಟುಂಬಸ್ಥರಿಗೆ ಕರೆ ಮಾಡಿ, 'ನಿಮ್ಮ ಮಗಳು ನೇಣು ಹಾಕಿಕೊಂಡಿದ್ದಾಳೆ' ಎಂದು ಸುಳ್ಳು ಹೇಳಿದ್ದ' ಎಂದು ಪೊಲೀಸರು ಹೇಳಿದರು.

ಕೃತ್ಯ ಒಪ್ಪಿಕೊಂಡ ಆರೋಪಿ

'ಮಗಳ ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿದ್ದ ಯುವತಿಯ ಪೋಷಕರು ದೂರು ನೀಡಿದ್ದರು. ಸ್ಥಳಕ್ಕೆ ಭೇಟಿ ನೀಡಿದ ವರ್ತೂರು ಪೊಲೀಸರು ಪರಿಶೀಲನೆ ನಡೆಸಿದಾಗ ಅಯ್ಯಪ್ಪನ ನಾಟಕ ಬಯಲಾಗಿದೆ. ಕುತ್ತಿಗೆಯ ಮೇಲಿದ್ದ ಗುರುತುಗಳು ಮತ್ತು ಮನೆಯಲ್ಲಿದ್ದ ಸಾಕ್ಷ್ಯಗಳು, ಇದು ನೇಣು ಬಿಗಿದುಕೊಂಡಿದ್ದಲ್ಲ, ಬದಲಾಗಿ ಕೊಲೆ ಎಂಬುವುದನ್ನು ಪುಷ್ಟೀಕರಿಸಿದ್ದವು. ತೀವ್ರ ವಿಚಾರಣೆ ನಡೆಸಿದಾಗ ಅಯ್ಯಪ್ಪ ತನ್ನ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ' ಎಂದು ಮೂಲಗಳು ಹೇಳಿವೆ.

ಚಿಟಿಕೆ ಸುದ್ದಿ

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವು (ಯುವಿಸಿಇ) ಅತಿಥಿ ಉಪನ್ಯಾಸಕರ ವಿವಿಧ ಹುದ್ದೆಗಳಿಗೆ ಅರ್ಜಿ ಅಹ್ವಾನಿಸಿದೆ.

ಎಂ.ಟೆಕ್ ಎರಡನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಶಿಕ್ಷಣ (ಪೆಡಗಾಜಿ) ವಿಷಯ ಕುರಿತು ಬೋಧನೆ ಮಾಡಲು ಅರ್ಹ ಅಭ್ಯರ್ಥಿಗಳು www.uvce.karnataka.gov.in ವೆಬ್‌ಸೈಟ್‌ನಲ್ಲಿರುವ ಅರ್ಜಿ ನಮೂನೆ ಪಡೆದು ಮಾರ್ಚ್ 23ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕುಲಸಚಿವರು, ಯುವಿಸಿಇ, ಕೆ.ಆರ್ ವೃತ್ತ, ಬೆಂಗಳೂರು–560 001.

25ರಂದು ಎಡೆಯೂರು ರಥೋತ್ಸವ

ತುಮಕೂರು: ರಾಜ್ಯದಾದ್ಯಂತ ಭಕ್ತರನ್ನು ಹೊಂದಿರುವ ಕುಣಿಗಲ್ ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ರಥೋತ್ಸವ ಮಾರ್ಚ್ 25ರಂದು ಜರುಗಲಿದೆ.

ಪ್ರತಿ ವರ್ಷದಂತೆ ರಥೋತ್ಸವ ಪ್ರಯುಕ್ತ ದನಗಳ ಜಾತ್ರೆ ಇರಲಿದೆ. ಉತ್ತಮ ರಾಸುಗಳಿಗೆ ಮಾರ್ಚ್ 25ರಂದು ಬಹುಮಾನ ವಿತರಿಸಲಾಗುತ್ತದೆ.

ಮಾರ್ಚ್ 18ರಿಂದ ಏಪ್ರಿಲ್ 2ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ. ಮಾರ್ಚ್ 26ರಂದು ಬಿಲ್ವ ವೃಕ್ಷ ವಾಹನೋತ್ಸವ, 27ರಂದು ಬೆಳ್ಳಿ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಜೈಲಿನಲ್ಲಿ ಇದ್ದರೆ ಜೀವನ ನರಕ: ಬಿಡುಗಡೆಗೊಂಡವರ ಮಾತು

ಸನ್ನಡತೆ: 13 ಕೈದಿಗಳಿಗೆ ಬಿಡುಗಡೆ ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸನ್ನಡತೆ ಆಧಾರದ ಮೇಲೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ 13 ಸಜಾಬಂದಿಗಳನ್ನು ಶುಕ್ರವಾರ ಬಿಡುಗಡೆ ಮಾಡಲಾಗಿದೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದಂತೆ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ 31 ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆಗೆ ಸರ್ಕಾರ ಆದೇಶಿಸಿತ್ತು.

ಕಾರಾಗೃಹಗಳ ಸಲಹಾ ಮಂಡಳಿ ಸಭೆಯ ತೀರ್ಮಾನದಂತೆ ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 54 ಮಂದಿ ಜೀವಾವಧಿ ಶಿಕ್ಷೆ ಬಂದಿಗಳನ್ನು ಅವಧಿ ಪೂರ್ವ ಬಿಡುಗಡೆಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಆ ಪೈಕಿ 31 ಮಂದಿಯ ಬಿಡುಗಡೆಗೆ ರಾಜ್ಯಪಾಲ ಅನುಮೋದನೆ ನೀಡಿದ್ದರು.

'ಕೋಪದ ಕೈಗೆ ಬುದ್ಧಿ ಕೊಟ್ಟು ಕಾರಾಗೃಹದಲ್ಲಿ ನರಕಯಾತನೆ ಅನುಭವಿಸಿದ್ದೇವೆ. ಮಕ್ಕಳನ್ನು ಬಿಟ್ಟು ಬದುಕುವುದು ನರಕಕ್ಕಿಂತಲೂ ಕಡೆ. ಊಟ, ವಸತಿ ಎಲ್ಲ ಇದ್ದರೂ ನೆಮ್ಮದಿ ಇರಲಿಲ್ಲ. ಯಾರೂ ಸಹ ಆತುರದಿಂದ ಅಪರಾಧ ಕೃತ್ಯ ಎಸಗಬಾರದು. ಕೋಪ ಬಂದಾಗ ತಾಳ್ಮೆಯಿಂದ ವರ್ತಿಸಿ' ಎಂದು ಬಿಡುಗಡೆಯಾದವರು ಹೇಳಿದರು.

'ಜೈಲಿನಲ್ಲಿದ್ದರೆ ಜೀವನ ನರಕ. ಕೊಲೆ ಕೆಲವೇ ಸೆಕೆಂಡ್‌ಗಳಲ್ಲಿ ನಡೆಯಿತು. ಆದರೆ, ನಾನು 13 ವರ್ಷ ಜೈಲಿನಲ್ಲಿ ಕಳೆದೆ' ಎಂದು ಸನ್ನಡತೆ ಆಧಾರದ ಮೇಲೆ ಬಿಡುಗಡೆಯಾದ ಲಿಂಗರಾಜು ಹೇಳಿದರು.

ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆ ಡಿಜಿಪಿ ಅಲೋಕ್ ಕುಮಾರ್ ಮಾತನಾಡಿ, 'ಸನ್ನಡತೆ ಆಧಾರದ ಮೇಲೆ ರಾಜ್ಯದ ಬೇರೆ ಬೇರೆ ಕಾರಾಗೃಹದಿಂದ ಕೈದಿಗಳು ಬಿಡುಗಡೆ ಆಗಿದ್ದಾರೆ. ಅದರಲ್ಲಿ ಹೆಚ್ಚಿನವರು ಕೊಲೆ ಪ್ರಕರಣಗಳಲ್ಲಿ ಭಾಗಿ ಆಗಿದ್ದರು. ಇದೀಗ ಒಳ್ಳೆಯ ನಡತೆ ತೋರಿದ ಪರಿಣಾಮ ಅವರನ್ನು ಬಿಡುಗಡೆ ಮಾಡಲಾಗಿದೆ' ಎಂದು ಹೇಳಿದರು.

ಮುಖ್ಯಾಂಶಗಳು

- 54 ಬಂದಿಗಳ ಅವಧಿ ಪೂರ್ವ ಬಿಡುಗಡೆಗೆ ಸಲ್ಲಿಸಲಾಗಿದ್ದ ಪ್ರಸ್ತಾವ
- 31 ಮಂದಿಗೆ ಮಾತ್ರ ದೊರೆತ ರಾಜ್ಯಪಾಲರ ಅನುಮೋದನೆ

ಡ್ರಗ್ಸ್ ಸೇವನೆ: ತಪಾಸಣೆ

ಕಾರಾಗೃಹಗಳಿಗೆ ಪೂರೈಕೆ ಆಗುತ್ತಿರುವ ಡ್ರಗ್ಸ್ ಅನ್ನು ಸಂಪೂರ್ಣವಾಗಿ ತಡೆಗಟ್ಟಲು ಕಾರಾಗೃಹ ಹಾಗೂ ಸುಧಾರಣೆಗಳ ಸೇವಾ ಇಲಾಖೆ ಮುಂದಾಗಿದ್ದು, ಎಲ್ಲಾ ಜೈಲುಗಳಲ್ಲಿ ಇರುವ ಎಲ್ಲ ಕೈದಿಗಳನ್ನು ಮಾದಕ ವಸ್ತು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ಪರಪ್ಪನ ಅಗ್ರಹಾರದಲ್ಲಿ 4,834 ಕೈದಿಗಳಿದ್ದಾರೆ. ಆ ಪೈಕಿ ಶೇ 10 ಕೈದಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ನಿಮ್ಹಾನ್ಸ್ ಆಸ್ಪತ್ರೆಯ ವೈದ್ಯರ ನೆರವು ಪಡೆದು ಉಳಿದ ಕೈದಿಗಳನ್ನು ಹಂತಹಂತವಾಗಿ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ಕಾರಾಗೃಹದ ಮೂಲಗಳು ತಿಳಿಸಿವೆ.

ಪರೀಕ್ಷೆಯಲ್ಲಿ ಕೈದಿಗಳು ಮಾದಕ ವಸ್ತು ತೆಗೆದುಕೊಂಡಿರುವುದು ದೃಢಪಟ್ಟರೆ ತಕ್ಷಣವೇ ಅವರಿಗೆ ಕೌನ್ಸೆಲಿಂಗ್ ನಡೆಸಲಾಗುವುದು. ಡ್ರಗ್ಸ್ ವ್ಯಸನಿಗಳಾಗಿದ್ದರೆ ಅಂಥವರನ್ನು ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿವೆ.

'ಸದ್ಯಕ್ಕೆ ಕ್ರಿಮಿನಲ್ ಪ್ರಕರಣ ದಾಖಲಿಸುವ ಆಲೋಚನೆ ಇಲ್ಲ. ಆರಂಭಿಕ ಹಂತದಲ್ಲಿ ಕೌನ್ಸೆಲಿಂಗ್ ಹಾಗೂ ಚಿಕಿತ್ಸೆ ನೀಡಲಾಗುವುದು' ಎಂದು ಮೂಲಗಳು ತಿಳಿಸಿವೆ.

ಹೆಡ್ ಕಾನ್‌ಸ್ಟೆಬಲ್‌ಗೆ ಬೆದರಿಕೆ: ಸವಾರನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯನಿರತ ಹೆಡ್ ಕಾನ್‌ಸ್ಟೆಬಲ್‌ಗೆ ನಿಂದಿಸಿ ಹಾಗೂ ಬೆದರಿಕೆ ಹಾಕಿದ್ದ ಆರೋಪದಡಿ ದ್ವಿಚಕ್ರ ವಾಹನ ಸವಾರನ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಬ್ಬನ್‌ಪಾರ್ಕ್ ಸಂಚಾರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಡಿ.ಚಂದ್ರಕುಮಾರ್ ನೀಡಿದ ದೂರಿನ ಮೇಲೆ ಬೆನ್ಸನ್ ಟೌನ್‌ನ ನಿವಾಸಿ ಹುಸೇನ್ ಖಾನ್ ವಿರುದ್ಧ ಪ್ರಕರಣ ದಾಖಲಾಗಿದೆ.

ತಿಮ್ಮಯ್ಯ ವೃತ್ತದಲ್ಲಿ ಪಿಎಸ್‌ಐ ಬಿ.ಸುರೇಶ್ ಅವರೊಂದಿಗೆ ಚಂದ್ರಕುಮಾರ್ ಸಂಚಾರ ನಿರ್ವಹಣೆಯ ಕರ್ತವ್ಯದಲ್ಲಿ ಇದ್ದರು. ನಂಬರ್ ಪ್ಲೇಟ್ ಇಲ್ಲದ ಹಾಗೂ ದೋಷಪೂರಿತ ಸೈಲೆನ್ಸರ್ ಅಳವಡಿಸಿಕೊಂಡು ಆರೋಪಿ ಬೈಕ್‌ನಲ್ಲಿ ಕಾಫಿ ಬೋರ್ಡ್ ಜಂಕ್ಷನ್‌ನಿಂದ ತಿಮ್ಮಯ್ಯ ವೃತ್ತದ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದ. ಬೈಕ್ ನಿಲ್ಲಿಸುವಂತೆ ಸೂಚಿಸಿದ್ದರೂ ಮುಂದೆ ಹೋಗಲು ಪ್ರಯತ್ನಿಸಿದ್ದ. ಆಗ ಬೈಕ್ ತಡೆದಾಗ ಕುಪಿತಗೊಂಡ ಆತ, 'ಕೈಬೆರಳು ತೋರಿಸುತ್ತಾ ಅವಹೇಳನಕಾರಿಯಾಗಿ ನಿಂದಿಸಿದ್ದ' ಎಂದು ದೂರು ನೀಡಲಾಗಿದೆ.

'ನನ್ನ ತಂಟೆಗೆ ಬಂದರೆ ಸಾಯಿಸುತ್ತೇನೆ. ಸಮವಸ್ತ್ರದಲ್ಲಿ ಇರುವ ಕಾರಣಕ್ಕೆ ಬಿಟ್ಟಿದ್ದೇನೆ. ನೀನು ಸಮವಸ್ತ್ರ ಬಿಚ್ಚಿ ಬಾ. ಆಗ ನಾನು ಯಾರೆಂದು ತೋರಿಸುತ್ತೇನೆ ಎಂಬುದಾಗಿ ಬೆದರಿಕೆ ಒಡ್ಡಿದ್ದ' ಎಂದು ಚಂದ್ರಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನಗರದ ಗಾಂಧಿ ಭವನದಲ್ಲಿ ಇತ್ತೀಚೆಗೆ ಗಿರಿಧರ ರಾವ್ ಹವಲ್ದಾರ್ (ಬಲಬದಿ) ಅವರ 'ಕೊರಚರು, ನೀವೂ ನಾಣ್ಯ ಸಂಗ್ರಾಹಕರಾಗಿ,ನಾಡು ನುಡಿ ಸಾಧಕರು,ಚಿವ್ ಚಿವ್ ಗುಬ್ಬಚ್ಚಿ' ಪುಸ್ತಕಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಸಾಹಿತಿ ಟಿ.ಎಸ್. ನಾಗರಾಜ ಶೆಟ್ಟಿ, ಪತ್ರಕರ್ತೆ ಆರ್. ಪೂರ್ಣಿಮಾ, ನಾಣ್ಯ ಶಾಸ್ತ್ರಜ್ಞ ಪಿ. ಸುಬ್ರಹ್ಮಣ್ಯ ಶೆಟ್ಟಿ, ಸಾಹಿತಿ ಬಸವರಾಜ ಸಬರದ, ಪ್ರಕಾಶಕ ಎಚ್. ನಾಗಭೂಷಣ ರಾವ್, ಅರ್ಥಶಾಸ್ತ್ರಜ್ಞ ಟಿ.ಆರ್. ಚಂದ್ರಶೇಖರ್, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ನಾಣ್ಯಶಾಸ್ತ್ರಜ್ಞ ಪಿ.ಕೆ. ಕೇಶವಮೂರ್ತಿ,ಅಗ್ರಹಾರ ಕೃಷ್ಣಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಅಲೆಮಾರಿಗಳಿಗೆ ಶೇ 1ರಷ್ಟು ಮೀಸಲು ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರಚ ಸಮುದಾಯ ಸೇರಿದಂತೆ ಅಲೆಮಾರಿಗಳಿಗೆ ಒಳಮೀಸಲಾತಿಯಲ್ಲಿ ಶೇ 1ರಷ್ಟು ಆದ್ಯತೆ ನೀಡಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ಹೇಳಿದರು.

ಗುಡಿಸಲು ಪ್ರಕಾಶನ ಗಾಂಧಿ ಭವನದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಗಿರಿಧರ ರಾವ್ ಹವಲ್ದಾರ್ ಅವರ ಕೊರಚರು, ನೀವೂ ನಾಣ್ಯ ಸಂಗ್ರಾಹಕರಾಗಿ, ನಾಡು ನುಡಿ ಸಾಧಕರು, ಚಿವ್ ಚಿವ್ ಗುಬ್ಬಚ್ಚಿ ಪುಸ್ತಕಗಳ ಜನಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.

'ಸಾಮಾಜಿಕ ನ್ಯಾಯದಿಂದ ವಂಚಿತವಾಗಿರುವ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯ ಸಿಗಬೇಕು ಎನ್ನುವ ಉದ್ದೇಶದಿಂದಲೇ ಒಳಮೀಸಲಾತಿ ನೀಡಲಾಗಿದೆ. ಇದರಲ್ಲಿ ಅಲೆಮಾರಿಗಳಿಗೆ ನ್ಯಾಯ ಸಿಗದೇ ಇರುವ ಕುರಿತು ಚರ್ಚೆಗಳು ನಡೆದಿವೆ. ಹವಲ್ದಾರ್ ಅವರು ಕೊರಚ ಸಮುದಾಯದ ಸ್ಥಿತಿಗತಿ ಕುರಿತು ದಾಖಲಿಸಿರುವ ಪುಸ್ತಕದಲ್ಲಿ ಸಾಕಷ್ಟು ಮಾಹಿತಿಯಿದೆ. ಕೊರಚ ಸಮುದಾಯಕ್ಕೂ ಸಾಮಾಜಿಕ ನ್ಯಾಯ ಕೊಡಿಸುವುದು ನಮ್ಮ ಜವಾಬ್ದಾರಿಯೂ ಹೌದು' ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಆರಂಭವಾದಾಗಿನಿಂದ ಎಚ್.ವಿ. ನಂಜುಂಡಯ್ಯ ಅವರಿಂದ ಹಿಡಿದು ಮನು ಬಳಿಗಾರ್ ಅವರವರೆಗಿನ ಅವಧಿಯಲ್ಲಿ ಕನ್ನಡದ ಹಲವು ಕೆಲಸಗಳು ದಾಖಲೆ ರೀತಿ ಆಗಿವೆ. ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದಾಗ ನಾಡು ನುಡಿಗಾಗಿ ದುಡಿದವರನ್ನು ಪರಿಚಯಿಸುವ ಪ್ರಯತ್ನವೂ ಆಯಿತು. ಈಗಂತೂ ದುಡ್ಡು ನೀಡಿದರೆ ಪ್ರಶಸ್ತಿ, ಗೌರವವನ್ನು ನೀಡುವ ವ್ಯವಸ್ಥೆಯೇ ಹುಟ್ಟಿಕೊಂಡಿದೆ. ಆದರೆ ಸಮಾಜಕ್ಕಾಗಿ ದುಡಿದ ಸಾಧಕರನ್ನು ಗುರುತಿಸಿ ಹವಲ್ದಾರ್ ಅವರು ನಾಡು ನುಡಿ ಸಾಧಕರು ಪುಸ್ತಕ ಹೊರ ತಂದು ಗೌರವ ಹೆಚ್ಚಿಸಿದ್ದಾರೆ' ಎಂದು ತಿಳಿಸಿದರು.

ಅರ್ಥಶಾಸ್ತ್ರಜ್ಞ ಟಿ.ಆರ್. ಚಂದ್ರಶೇಖರ್ ಮಾತನಾಡಿ, 'ನ್ಯಾಯಮೂರ್ತಿ ನಾಗಮೋಹನದಾಸ್ ಅವರೊಂದಿಗೆ ಗಣತಿ ಕಾರ್ಯಕ್ರಮಗಳಿಗೆ ತೆರಳಿದಾಗ ಕೊಪ್ಪಳದಲ್ಲಿ ಕೊರಚ ಸಮುದಾಯದ ಸ್ಥಿತಿಗತಿಯನ್ನು ಹತ್ತಿರದಿಂದ ಕಂಡಿದ್ದೇನೆ. ಅವರಿಗೆ ಮೀಸಲು ಒದಗಿಸುವುದು ಅಗತ್ಯವೂ ಹೌದು' ಎಂದು ಹೇಳಿದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, ಟಿ.ಎಸ್. ನಾಗರಾಜ ಶೆಟ್ಟಿ, ಬಸವರಾಜ ಸಬರದ, ಪತ್ರಕರ್ತೆ ಆರ್.ಪೂರ್ಣಿಮಾ, ನಾಣ್ಯಶಾಸ್ತ್ರಜ್ಞರಾದ ಪಿ.ಕೆ. ಕೇಶವಮೂರ್ತಿ ಪಿ. ಸುಬ್ರಹ್ಮಣ್ಯ ಶೆಟ್ಟಿ, ಲೇಖಕ ಗಿರಿಧರ ರಾವ್ ಹವಲ್ದಾರ್, ಗುಡಿಸಲು ಪ್ರಕಾಶನದ ಎಚ್. ನಾಗಭೂಷಣರಾವ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಕೊರಚ ಸಮುದಾಯಕ್ಕೆ ನ್ಯಾಯ ಸಿಗಲಿ: ಎಸ್.ಜಿ.ಸಿದ್ದರಾಮಯ್ಯ
- ದುಡ್ಡು ಕೊಟ್ಟರೆ ಪ್ರಶಸ್ತಿ ನೀಡುವ ಪರಿಪಾಟ: ಬೇಸರ

ಸುಳ್ಯ: ಯುವಕರಿಗೆ ಚೂರಿ ಇರಿತ

ಪ್ರಜಾವಾಣಿ ವಾರ್ತೆ

ಸುಳ್ಯ: ಇಲ್ಲಿನ ಶ್ರೀರಾಮ ಪೇಟೆಯ ಬಾರ್ ಎದುರು ನಿಂತಿದ್ದ ಸುಳ್ಯ ಬೀರಮಂಗಲದ ಯುವಕ ಹರೀಶ್‌ಗೆ ಚೂರಿಯಿಂದ ಇರಿದ ಘಟನೆ ಶನಿವಾರ ರಾತ್ರಿ ನಡೆದಿದೆ. ಹರೀಶ್ ಜೊತೆಗಿದ್ದ ನೀತುಗೂ ಇರಿತದಿಂದ ಗಾಯವಾಗಿದೆ.



ಚೂರಿ ಇರಿದವರು ಕಾಂತಮಂಗಲದವರೆಂದು ಹೇಳಲಾಗಿದ್ದು ಇಬ್ಬರನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹರೀಶ್ ಹಾಗೂ ನೀತು ಸುಳ್ಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಬೈ ರೇಸ್

ಇವಾಲ್ಡೊ ಗೆಲ್ಲುವ ನಿರೀಕ್ಷೆ

ಸಿ.ಎನ್.ವಾಡಿಯಾ ಗೋಲ್ಡ್ ಕಪ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಾವರಿನ್ ಕಿಂಗ್ ಗೆಲ್ಲುವ ನಿರೀಕ್ಷೆ ಇದೆ. ಸಂಜೆ 4ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜಕಾರಿಯಾಸ್ 3, ನಮಿರಿ 5, ಥಂಡರಿಂಗ್ ಫಿನಿಕ್ಸ್ 1

2ನೇ ರೇಸ್: ಅಶ್ವ ಅಂಕಾರ 6, ಫಾಂಟಸ್ಮಿಕ್ 3, ಸಂಟಾನ ರೋ 4

3ನೇ ರೇಸ್: ಡರ್ಟಗ್ನಾನ್ 2, ಅಲೆಕ್ಸಿಯೊಸ್ 1, ಲಯನ್ ಹಾರ್ಟ್ 6

4ನೇ ರೇಸ್: ಪಿನ್ನಾಕಲ್ 3, ಏಂಜೆಲಿಸಾ 1, ಮೆನೋರ್ಕ 2

5ನೇ ರೇಸ್: ಸೈಕಿಕ್ ಸ್ಟಾರ್ 1, ಆಫ್ರಿಕನ್ ಗೋಲ್ಡ್ 2, ದಿ ಮಿಲೆನಿಯಮ್ ಫೋರ್ಸ್ 7

6ನೇ ರೇಸ್: ಸಾವರಿನ್ ಕಿಂಗ್ 1, ಇವಾಲ್ಡೊ 3, ಥಲಸ್ಸಾ 7

7ನೇ ರೇಸ್: ಸ್ಟಾರ್‌ಸೀಡ್ 4, ಅಶ್ವ ಗಿಪ್ಸಿ 1, ಚಾರಿಸ್ಸೆ 5

8ನೇ ರೇಸ್: ಇನ್ವಿಕ್ಟರ್ 1, ಗನ್‌ಫೈರ್ 2, ಮಿಸ್ಟಿಕಾ 9

9ನೇ ರೇಸ್: ಮಿಸ್ ಅಮೆರಿಕನ್ ಪೈ 1, ಡ್ರೀಮ್ ಸೆಲ್ಲರ್ 2, ಶಂಬಾಲ 3

10ನೇ ರೇಸ್: ಚಾರ್ಲಿ ಬ್ರೌನ್ 8, ಸ್ಕಂದ 6, ಶಿರ್ಸ 5

ಉತ್ತಮ ಬೆಟ್: ಡರ್ಟಗ್ನಾನ್

1ನೇ ಜಾಕ್‌ಪಾಟ್‌ಗೆ **3,4,5,6,7** | 2ನೇ ಜಾಕ್‌ಪಾಟ್‌ಗೆ **6,7,8,9,10**

1ನೇ ಟ್ರಿಬಲ್ **4,5,6** | 2ನೇ ಟ್ರಿಬಲ್ **7,8,9** | 3ನೇ ಟ್ರಿಬಲ್ **8,9,10.**

ನಗರದಲ್ಲಿ ಇಂದು

'ಗೋಮಾತೆಯ ಗೌರವದ ಅಭಿಯಾನ' ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರ: ಸ್ಥಳ: ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರ, ಬೆಳಿಗ್ಗೆ 8ರಿಂದ

ಫಾಲ್ಗುಣ ಮಾಸದ ಸಂಗೀತೋತ್ಸವ: ತಿರುಮಲೆ ಶ್ರೀನಿವಾಸ್, ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ಸಮನ್ವಯ ಕಲಾ ಕೇಂದ್ರ ಹಾಗೂ ಶ್ರೀ ಲಾಲ್ ದಾಸ್ ಭಕ್ತ ಆಂಜನೇಯ ಸ್ವಾಮಿ ಭಜನಾ ಮಂಡಳಿ, ಸ್ಥಳ: ಶ್ರೀ ಲಾಲ್‌ದಾಸ್ ವೆಂಕಟರಮಣ ಸ್ವಾಮಿ ದೇವಸ್ಥಾನ, ಬಳೇಪೇಟೆ, ಬೆಳಿಗ್ಗೆ 9 ರಿಂದ

ರಾಜ್ಯಮಟ್ಟದ ಕವಿ ಸಮ್ಮೇಳನ: ಉದ್ಘಾಟನೆ: ಆರ್.ಕೆ. ನಲ್ಲೂರು ಪ್ರಸಾದ್, ಸಮ್ಮೇಳನಾಧ್ಯಕ್ಷತೆ: ನಾಗವೀಣಾ ಮಂಜುನಾಥ, ಕದಂಬ ರತ್ನ ಪ್ರಶಸ್ತಿ ಪುರಸ್ಕೃತರು: ಶಿವಾನಂದ ತಗಡೂರು, ಅಧ್ಯಕ್ಷತೆ: ಮಣಿಶ್ರೀ, ಅತಿಥಿ: ನಾಗರತ್ನ ಕಲಾಧಾರೆ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಮೂರನೇ ಮಹಡಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಲಂಕೇಶ್ ಅವರ 'ಟೀಕೆ–ಟಿಪ್ಪಣಿ' ಮೂರು ಸಂಪುಟಗಳ ಹಾಗೂ ಲಂಕೇಶರ ಕಥೆಗಳ ಆಡಿಯೊ ಬುಕ್ ಬಿಡುಗಡೆ: ಸಿದ್ದರಾಮಯ್ಯ, ಪ್ರಾಸ್ತಾವಿಕ ನುಡಿ: ಎಂ.ಎಸ್. ಆಶಾದೇವಿ, ಸಂಪಾದಕರ ನುಡಿ: ನಟರಾಜ್ ಹುಳಿಯಾರ್, ಅತಿಥಿಗಳು: ಟಿ.ಎನ್. ಸೀತಾರಾಮ್, ಪ್ರಕಾಶ್ ರೈ, ಉಪಸ್ಥಿತಿ: ಕವಿತಾ ಲಂಕೇಶ್, ಇಂದಿರಾ ಲಂಕೇಶ್, ಬಾಲಾಜಿ ಮನೋಹರ್, ವೆಂಕಟೇಶ್ ಪ್ರಸಾದ್, ಎಂ.ಡಿ. ಪಲ್ಲವಿ, ಚಂದ್ರೇಗೌಡ, ಸಾಸ್ವೆಹಳ್ಳಿ ಸತೀಶ್, ಸುಷ್ಮಾ, ಮೋಹನ್ ಕೊಂಡಜ್ಜಿ, ಸುಬ್ಬು ಹೊಲೆಯಾರ್, ಆಯೋಜನೆ: ಇಂದಿರಾ ಲಂಕೇಶ್ ಪ್ರಕಾಶನ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11ರಿಂದ

ಸಾಮೂಹಿಕ ಸತ್ಯನಾರಾಯಣ ಪೂಜಾ ಸಮೇತ ಮಹಿಳಾ ದಿನಾಚರಣೆ: ಉದ್ಘಾಟನೆ: ದಿನೇಶ್ ಗುಂಡೂರಾವ್, ಕೆ. ಹರೀಶ್ ಕುಮಾರ್, ಅಧ್ಯಕ್ಷತೆ: ನಳಿನಾಕ್ಷಿ ಸಣ್ಣಪ್ಪ, ಅತಿಥಿಗಳು: ಸೌಮ್ಯಾರೆಡ್ಡಿ, ಮಮತಾ ಪೂಜಾರಿ, ಭಾಗ್ಯಲಕ್ಷ್ಮಿ ಮುರಳಿ, ಪ್ರತಿಭಾ ಕುಳಾಯಿ, ಧನಲಕ್ಷ್ಮಿ ಪೂಜಾರಿ, ಆಯೋಜನೆ: ಬಿಲ್ಲ ಅಸೋಸಿಯೇಷನ್, ಸ್ಥಳ: ದೇವಕಿ ಆನಂದ ಸುವರ್ಣ ಕನ್ವೆನ್ಷನ್ ಹಾಲ್, ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

'ಬಂಡಾಯ ಸಾಹಿತ್ಯ–ಹೊಸ ತಲೆಮಾರು' ಅಭಿಯಾನದ ಅಂಗವಾಗಿ ಒಂದು ದಿನದ ವಿಚಾರಸಂಕಿರಣ, ಕವಿಗೋಷ್ಠಿ 'ಜನ ಚಳವಳಿಗಳು ಮತ್ತು ಸಾಹಿತ್ಯ': ಆಶಯ ನುಡಿ: ಬರಗೂರು ರಾಮಚಂದ್ರಪ್ಪ, 'ಜನ ಚಳವಳಿಗಳು ಮತ್ತು ಸೃಜನಶೀಲ ಸವಾಲುಗಳು' ವಿಷಯ ಮಂಡನೆ: ವಿಕ್ರಮ್ ವಿಸಾಜಿ, 'ಜಾಗತಿಕ ಜನ ಚಳವಳಿಗಳು ಮತ್ತು ಸಾಹಿತ್ಯ' ವಿಷಯ ಮಂಡನೆ: ಕಿರಣ್ ಎಂ. ಗಾಜನೂರು, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, 'ಭಾರತದ ಜನ ಚಳವಳಿಗಳು ಮತ್ತು ಸಾಹಿತ್ಯ' ವಿಷಯ ಮಂಡನೆ: ಎಚ್.ವಿ. ವಾಸು, 'ಕರ್ನಾಟಕದ ಜನ ಚಳವಳಿಗಳು ಮತ್ತು ಸಾಹಿತ್ಯ' ವಿಷಯ ಮಂಡನೆ: ಅಖ್ತರ್ ಎಸ್., ಅಧ್ಯಕ್ಷತೆ: ರಾಜಪ್ಪ ದಳವಾಯಿ, ಕವಿಗೋಷ್ಠಿ: ಅಧ್ಯಕ್ಷತೆ: ಸುಬ್ಬು ಹೊಲೆಯಾರ್, ಭಾಗವಹಿಸುವ ಕವಿಗಳು: ಮಂಜುಳಾ ಹುಲಿಕುಂಟೆ, ಸುಜಾತ ಲಕ್ಷ್ಮೀಪುರ, ಲಕ್ಷ್ಮೀನಾರಾಯಣಸ್ವಾಮಿ, ಹಾಜಿರಾ ಖಾನಂ, ಚನ್ನು ಪ್ರಕಾಶ್ ಶ್ರೀರಾಮನಹಳ್ಳಿ, ಹುಲಿಕುಂಟೆ ಮೂರ್ತಿ, ಎಸ್. ಮಂಜುನಾಥ್, ನೂರುಲ್ಲಾ ತ್ಯಾಮಗೊಂಡ್ಲು, ಕರಿಯಣ್ಣ ನಿಷಾದ, ವಿಶ್ವನಾಥ ಗುಂಡಿಗೆರೆ, ಗೋವಿಂದಪ್ಪ ಪಾವಗಡ, ವೈ.ಬಿ. ಹಾಲಬಾವಿ, ಸಮಾರೋಪ: ಅತಿಥಿಗಳು: ಸುಕನ್ಯಾ ಮಾರುತಿ, ಭಕ್ತರಹಳ್ಳಿ ಕಾಮರಾಜ್, ಅಧ್ಯಕ್ಷತೆ: ಬಸವರಾಜ ಸಬರದ, ಆಯೋಜನೆ: ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ



ಬರಗೂರು ರಾಮಚಂದ್ರಪ್ಪ

ನೂಪುರ ನಾದ ಗೆಜ್ಜೆ ಪೂಜೆ: ಬಿ.ಎಸ್. ವಂದಿತಾ ಸಾರಿಕಾ, ಅತಿಥಿಗಳು: ನಂಜುಂಡರಾವ್, ಎಸ್.ಪಿ. ಶೈಲಜಾ, ಆಯೋಜನೆ: ಶ್ರೀಗಣೇಶ ನೃತ್ಯಾಲಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಬಿ.ಎಸ್. ವಂದಿತಾ ಸಾರಿಕಾ

'ಸ್ವರ ಮಯೂರ' ನಾದನೃತ್ಯೋತ್ಸವ: ಸಂಗೀತ ಕಛೇರಿ: ಸಂಪಗೋಡು ಎಸ್. ವಿಘ್ನರಾಜ್, ಎಂ.ಎಸ್. ದೀಪಕ್, ಅಮಿತ್ ಎ. ನಾಡಿಗ್, ರಕ್ಷಿತಾ ರಮೇಶ್, ವೈಭವ ರಮಣಿ, ಶಿವ ತಾಂಡವ ನೃತ್ಯ ನಾಟಕ ಪ್ರದರ್ಶನ: ಸಂಜಯ್ ಶಾಂತಾರಾಮ್ ಮತ್ತು ಶಿವಪ್ರಿಯ ತಂಡ, ಆಯೋಜನೆ ಮತ್ತು ಸ್ಥಳ: ನಾದಾಮೃತ ಕಲಾದೀಪ, ಉತ್ತರಹಳ್ಳಿ, ಮಧ್ಯಾಹ್ನ 2.30ರಿಂದ

ಸಾಮ ವಾರ್ಷಿಕೋತ್ಸವ: ಅತಿಥಿಗಳು: ಟಿ.ಎಸ್. ಸತ್ಯವತಿ, ರಜನೀಶ್ ಶರ್ಮಾ, ಗಾಯನ: ಮಾಧುರಿ ಕೌಶಿಕ್, ಪಿಟೀಲು: ಸಿ.ವಿ. ಶ್ರುತಿ, ಮೃಂದಗ: ಅದ್ಯಮ ಆರ್., ಮೋರ್ಸಿಂಗ್: ಕಾರ್ತಿಕ್ ಪ್ರಣವ್, ಗಾಯನ: ಎಂ.ಕೆ. ತೇಜಸ್ವಿನಿ, ಬಿ.ಆರ್. ಸೋಮಶೇಖರ್ ಜೋಯಿಸ್, ಮೃದಂಗ: ಆನೂರು ವಿನೋದ್ ಶ್ಯಾಮ್, ಪಿಟೀಲು: ಡಿ. ಶ್ರೀವಿದ್ಯಾ, ಕೊಳಲು: ರಘು ಸಿಂಹ, ಆಯೋಜನೆ: ಸಮಾ, ಸ್ಥಳ: ಬಿಇಎಲ್ ಕಲಾಕ್ಷೇತ್ರ ಸಭಾಂಗಣ, ಮಧ್ಯಾಹ್ನ 3.30ರಿಂದ



ಲಕ್ಷ್ಮಣರಾವ್

'ಗೌರಿಸುಂದರ್ ವಾರ್ಷಿಕ ಪ್ರಶಸ್ತಿ' ಪ್ರದಾನ: ಬಿ.ಆರ್. ಲಕ್ಷ್ಮಣರಾವ್, ಪ್ರಶಸ್ತಿ ಸ್ವೀಕರಿಸುವವರು: ಮೃತ್ಯುಂಜಯ ದೊಡ್ಡವಾಡ, ಅತಿಥಿಗಳು: ನಾ. ದಾಮೋದರ ಶೆಟ್ಟಿ, ವೈ.ಕೆ. ಮುದ್ದುಕೃಷ್ಣ, ಆಯೋಜನೆ: ಸುಂದರ ಪ್ರಕಾಶನ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30ರಿಂದ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಅತಿಥಿಗಳು: ವಾಣಿಶ್ರೀ ವಿಶ್ವನಾಥ್, ಹೇಮಲತಾ ಚಿದಾನಂದ್, ಅಧ್ಯಕ್ಷತೆ: ಸಿ. ಭುವನೇಶ್ವರಿ, ಆಯೋಜನೆ: ಅವೇಕ್, ಸ್ಥಳ: ನಿಸರ್ಗ ಗ್ರೌಂಡ್, ಶಿವಕುಮಾರಸ್ವಾಮಿ ಸಭಾಂಗಣ, ನಾಲ್ಕನೇ ಫೇಸ್ ಯಲಹಂಕ, ಸಂಜೆ 4.30

ಸಾಂಸ್ಕೃತಿಕ ಹಬ್ಬ: ಉದ್ಘಾಟನೆ: ಜಿ.ಸಿ. ರಾಜು, ಅಧ್ಯಕ್ಷತೆ: ಪ್ರಕಾಶ್ ವೈ.ಎಸ್., ಆಯೋಜನೆ: ಆವರ್ತ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ವಿಕ್ರಮ್ ಸಂಪತ್ ಅವರ 'ನನ್ನ ಹೆಸರು ಗೌಹರ್ ಜಾನ್' ಪುಸ್ತಕ ಬಿಡುಗಡೆ: ಅತಿಥಿಗಳು: ಮೈಸೂರು ಮಂಜುನಾಥ, ರೋಹಿಣಿ ಶ್ರೀವತ್ಸ, ಉಪಸ್ಥಿತಿ: ಸಂದೀಪ್ ಸಿಂಗ್, ಗೌರಿ ಎಸ್. ಜೋಶಿ, ಜಿ.ಎಲ್. ಶೇಖರ್, ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ವಿವೇಕ ಸಭಾಂಗಣ, ಯುವಕ ಸಂಘ, ಯುವಪಥ, ನಾಲ್ಕನೇ ಟಿ ಬ್ಲಾಕ್, ಜಯನಗರ, ಸಂಜೆ 5.30

ಪಾಲನೇತ್ರ ಅವರಿಗೆ ಕನ್ನಡ ಸೇವಾಭಿನಂದನಾ ಸಮಾರಂಭ: ಅಧ್ಯಕ್ಷತೆ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಎಲ್. ಹನುಮಂತಯ್ಯ, ಅಭಿನಂದಿಸುವವರು: ಎಲ್.ಎನ್. ಮುಕುಂದರಾಜ್, ಅತಿಥಿ: ಪ್ರೇಮ ಸಿದ್ಧರಾಜು, ಆಶಯ ನುಡಿ: ವಿಜಯಕುಮಾರ್ ಎಸ್., ಆಯೋಜನೆ: ಕನ್ನಡಿಗರ ವಿಜಯಸೇನೆ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಕಲಾಸಂಜನ–15 ನೃತ್ಯ ಪ್ರದರ್ಶನ: ಎಸ್. ಅನನ್ಯ, ಶ್ರಾವ್ಯ ಭಟ್, ಶ್ರೇಯಾ ಭಟ್, ಅತಿಥಿ: ವೈ.ಕೆ. ಸಂಧ್ಯಾ ಶರ್ಮ, ಆಯೋಜನೆ ಮತ್ತು ಸ್ಥಳ: ಶಿವಗಂಗಾ ಅಕಾಡೆಮಿ, ಯಲಚೇನ ಹಳ್ಳಿ, ಸಂಜೆ 5.30

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಎಸ್.ಆರ್. ಮಾರುತಿ ಪ್ರಸಾದ್, ಪಿಟೀಲು: ಜಿ.ಕೆ. ಶ್ರೀಧರ್, ಮೃದಂಗ: ಎ. ರೇಣುಕಾ ಪ್ರಸಾದ್, ಖಂಜೀರಾ: ಟಿ.ಎನ್. ಅಜಿತ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

'ರಾಮ ಶಾಮ ಡ್ರಾಮ' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಶಮ್ಯ ದಾಸಗುಪ್ತ ಅವರ 'ಅನ್‌ಮೆಕ್ಯಾನಿಕಲ್–ರಿತ್ವಿಕ್ ಘಾಟಕ್ ಇನ್ 50 ಫ್ರಾಗ್ಮೆಂಟ್ಸ್' ಪುಸ್ತಕದ ಚರ್ಚೆ: ಭಾಗವಹಿಸುವವರು: ಶಮ್ಯ ದಾಸಗುಪ್ತ, ಜಯಂತ್ ಕಾಯ್ಕಿಣಿ, ಶ್ರೇಯಶಿ ದಸ್ತಿದಾರ್, ಆಯೋಜನೆ ಮತ್ತು ಸ್ಥಳ: ಚಂಪಕ ಬುಕ್ ಸ್ಟೋರ್, ಇಂದಿರಾನಗರ, ಸಂಜೆ 6.30

ಜಯಂತ್ ಕಾಯ್ಕಿಣಿ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಆರೋಗ್ಯಕ್ಕೆ ದರ ಪರಿಷ್ಕರಣೆಯೇ ‘ಸಂಜೀವಿನಿ’

ಐದೂವರೆ ತಿಂಗಳಲ್ಲಿ ನಗದು ರಹಿತ ಚಿಕಿತ್ಸೆ ಪಡೆದ ಸರ್ಕಾರಿ ನೌಕರರು 7,200

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ಫೋನ್–ಇನ್

ಬೆಂಗಳೂರು: ‘ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ನಗದು ರಹಿತ ಚಿಕಿತ್ಸೆ ಒದಗಿಸುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (ಕೆಎಎಸ್‌ಎಸ್) ಅನುಷ್ಠಾನದಲ್ಲಿನ ಎಲ್ಲ ತೊಡಕುಗಳು ಕೆಲ ತಿಂಗಳಲ್ಲೇ ಬಗೆಹರಿಯಲಿವೆ. ಚಿಕಿತ್ಸಾ ವೆಚ್ಚಗಳ ದರ ಪರಿಷ್ಕರಣೆಗೆ ಸರ್ಕಾರ ಸಮ್ಮತಿಸಿದ್ದು, ಹೊಸ ದರಗಳ ಜಾರಿಯ ನಂತರ ಯೋಜನೆ ವ್ಯಾಪ್ತಿಗೆ ಒಳಪಡುವ ಆಸ್ಪತ್ರೆಗಳ ಸಂಖ್ಯೆ 1,000 ದಾಟಲಿದೆ. ಎಲ್ಲ ಪ್ರಕಾರದ ಆರೋಗ್ಯ ಸೇವೆಗಳೂ ಸುಲಭವಾಗಿ ಕೈಗೆಟುಕಲಿವೆ...’

ಸರ್ಕಾರಿ ನೌಕರರ ಸಮಸ್ಯೆಗಳ ಕುರಿತು ‘ಪ್ರಜಾವಾಣಿ’ ಶನಿವಾರ ಹಮ್ಮಿಕೊಂಡಿದ್ದ ಫೋನ್‌ಇನ್ ಕಾರ್ಯಕ್ರಮದಲ್ಲಿ ಅತಿಹೆಚ್ಚು ಕರೆಗಳು ಸ್ವೀಕೃತವಾದ ಆರೋಗ್ಯ ಸಂಜೀವಿನಿ ಸಮಸ್ಯೆಗಳ ಕುರಿತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದ ಭರವಸೆಯ ಮಾತುಗಳಿವು.

ಆರೋಗ್ಯ ಸಂಜೀವಿನಿ 2025ರ ಅಕ್ಟೋಬರ್ 1ರಿಂದ ಜಾರಿಯಾಗಿದೆ. ಐದೂವರೆ ತಿಂಗಳಲ್ಲಿ ಹಲವು ಸಮಸ್ಯೆಗಳು ಎದುರಾಗಿವೆ. ಖಾಸಗಿ ಆಸ್ಪತ್ರೆಗಳಿಗೆ ನೀಡುವ ಚಿಕಿತ್ಸಾ ವೆಚ್ಚ ಕಡಿಮೆ ಇರುವ ಕಾರಣ ಹೆಚ್ಚಿನ ಆಸ್ಪತ್ರೆಗಳು ಯೋಜನೆಗೆ ಒಳಪಟ್ಟಿಲ್ಲ. ಉದಾಹರಣೆ, ಹೆರಿಗೆಗೆ ನೀಡುವ ಚಿಕಿತ್ಸಾ ವೆಚ್ಚ ₹12,000 ಇದೆ. ಪರಿಷ್ಕೃತ ದರ ಜಾರಿಯಾದರೆ ₹35,600ಕ್ಕೆ ಏರಿಕೆಯಾಗಲಿದೆ. ಸುಮಾರು 1,200 ಕಾಯಿಲೆಗಳ ಚಿಕಿತ್ಸಾ ವೆಚ್ಚ ಶೇ 50ರಷ್ಟು ಹೆಚ್ಚಾಗಲಿವೆ. ಆಗ ಯೋಜನೆ ಅಳಡಿಸಿಕೊಳ್ಳಲು ಅಧಿಕ ಸಂಖ್ಯೆಯ ಆಸ್ಪತ್ರೆಗಳು ಒಲವು ತೋರಲಿವೆ ಎಂದರು.

ಅನುಷ್ಠಾನದಲ್ಲಿ ಇಂತಹ ತಾಂತ್ರಿಕ ಕಾರಣ-ಗಳಿಂದಾಗಿಯೇ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯವನ್ನೂ ಸರ್ಕಾರ ವಿಸ್ತರಿಸಿದೆ. ಮುಂಗಡ ಪಾವತಿಸಿ, ಚಿಕಿತ್ಸೆ ಪಡೆದ ನೌಕರರು ತಾವು ಮಾಡಿದ ವೆಚ್ಚದ ಮೊತ್ತವನ್ನು ಮರಳಿ ಪಡೆಯಬಹುದು. 4.83 ಲಕ್ಷ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತರೂ ಸೇರಿ ಸುಮಾರು 25 ಲಕ್ಷ ಮಂದಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಸುವರ್ಣ ಕರ್ನಾಟಕ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಯ ಅನುಷ್ಠಾನದ ಸಂಸ್ಥೆಯಾಗಿ ಹೊಣೆ ನಿರ್ವಹಿಸುತ್ತಿದೆ. ಇದುವರೆಗೆ 7,200 ನೌಕರರು ಯೋಜನೆಯ ಮೂಲಕ ನಗದು ರಹಿತ ಚಿಕಿತ್ಸೆ ಪಡೆದಿದ್ದಾರೆ. ಸರ್ಕಾರ ₹35 ಕೋಟಿ ಖರ್ಚು ಮಾಡಿದೆ. ₹50 ಸಾವಿರದಿಂದ ₹25 ಲಕ್ಷದವರೆಗೂ ಚಿಕಿತ್ಸಾ ವೆಚ್ಚ ಪಡೆದುಕೊಂಡಿ-ದ್ದಾರೆ ಎಂದು ಮಾಹಿತಿ ನೀಡಿದರು.

• ಆರೋಗ್ಯ ಸಂಜೀವಿನಿಯಲ್ಲಿ ಮೂಲವ್ಯಾಧಿಗೆ ಶಸ್ತ್ರ ಚಿಕಿತ್ಸೆ ಇಲ್ಲವೆನ್ನುತ್ತಿದ್ದಾರೆ?
ಮಾನಪ್ಪ, ಶಹಾಪುರ, ಯಾದಗಿರಿ ತಾಲ್ಲೂಕು

ಮೂಲವ್ಯಾಧಿಗೆ ಲೇಸರ್ ಶಸ್ತ್ರ ಚಿಕಿತ್ಸೆಗೆ ಅವಕಾಶ ಇಲ್ಲ. ಕೆಲವು ಆಸ್ಪತ್ರೆಗಳು ಶಸ್ತ್ರ ಚಿಕಿತ್ಸೆಗೆ ಒಪ್ಪದೇ ಇರುವುದು ಗಮನಕ್ಕೆ ಬಂದಿದೆ. ಚಿಕಿತ್ಸೆ ನಿರಾಕರಿಸುವಂತಿಲ್ಲ ಎಂಬ ಆದೇಶ ಹೊರಡಿಸಲಾಗಿದೆ. ಮೊದಲ ಹಂತದಲ್ಲಿ ಕೆಲವು ಕಾಯಿಲೆಗಳನ್ನು ಪಟ್ಟಿ ಮಾಡಲಾಗಿದ್ದು, ಎರಡನೇ ಹಂತದಲ್ಲಿ ಮತ್ತಷ್ಟು ಕಾಯಿಲೆಗಳ ಚಿಕಿತ್ಸೆಗೆ ಅವಕಾಶ ಕಲ್ಪಿಸಲಾಗುತ್ತಿದೆ.

• ಗ್ರಾಮ ಆಡಳಿತ ಅಧಿಕಾರಿಗಳಿಗೆ ಅಂತರ ಜಿಲ್ಲಾ ವರ್ಗಾವಣೆ ಆಗುತ್ತಿಲ್ಲ?
ನಾಗರಾಜ್, ಶಿವಮೊಗ್ಗ

ನಿಯಮ 16 ರದ್ದು ಮಾಡಲಾಗಿದೆ. ಪತಿ–ಪತ್ನಿ ಪ್ರಕರಣಗಳಲ್ಲಿ ಏಳು ವರ್ಷ ಪೂರ್ಣಗೊಂ-ಡಿದ್ದರೂ ಒಂದೇ ಜಿಲ್ಲೆಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಂತರ ಜಿಲ್ಲಾ ವರ್ಗಾವಣೆ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು.

• ಅತ್ತೆ, ಮಾವನಿಗೂ ಚಿಕಿತ್ಸೆ ಲಭ್ಯವಿದೆಯೇ?
ಶಶಿಕಲಾ, ಶಿಕ್ಷಕಿ, ಹೊಸದುರ್ಗ

ಸರ್ಕಾರಿ ನೌಕರರ ತಂದೆ, ತಾಯಿ ಮತ್ತು ಅವಲಂಬಿತರಿಗೆ ಅವಕಾಶ ಇದೆ. ಆದರೆ, ನಿಮ್ಮ ಪತಿ ಖಾಸಗಿ ಕಂಪನಿ ಉದ್ಯೋಗಿ. ಹಾಗಾಗಿ ಅತ್ತೆ, ಮಾವನಿಗೆ ಚಿಕಿತ್ಸೆಗೆ ಈಗ ಅವಕಾಶ ಇಲ್ಲ. ಚಿಕಿತ್ಸೆಗೆ ಅವಕಾಶ ನೀಡುವ ಕುರಿತು ಸರ್ಕಾರಕ್ಕೆ ಮನವಿ ಮಾಡಲಾಗಿದೆ.

• ಸ್ಥಳೀಯ ಸಂಸ್ಥೆಗಳ ನೌಕರರಿಗೆ ಆರೋಗ್ಯ ಯೋಜನೆ ಅನ್ವಯವಾಗಿಲ್ಲ?
ಶಾಂತಕುಮಾರ್, ಮಧುಗಿರಿ, ಪುರಸಭೆ

ಸ್ಥಳೀಯ ಸಂಸ್ಥೆಗಳ ನೌಕರರ ಸಮಸ್ಯೆಗಳು ಗಮನಕ್ಕೆ ಬಂದಿದೆ. ಸರ್ಕಾರೇತರ ನೌಕರರು ಎಂದು ಪರಿಗಣಿಸಿರುವ ಕಾರಣ ಯೋಜನೆ ಅನ್ವಯವಾಗಿಲ್ಲ. ಸ್ಥಳೀಯ ಅನುದಾನದ ಮೂಲಕ ವೇತನ, ಭತ್ಯೆ ನೀಡಲಾಗುತ್ತಿದೆ. ಪುರಸಭೆ, ಪಟ್ಟಣ ಪಂಚಾಯಿತಿ, ನಗರ ಪಾಲಿಕೆ, ಮಹಾನಗರ ಪಾಲಿಕೆಗೂ ಯೋಜನೆ ವಿಸ್ತರಣೆ ಮಾಡುವ ಕುರಿತು ಚರ್ಚೆ ನಡೆದಿದೆ.

• ಪೊಲೀಸರಿಗೆ ಔಷಧ ಮತ್ತು ಚಿಕಿತ್ಸಾ ವೆಚ್ಚ ಮರುಪಾವತಿ ಮಾಡುತ್ತಿಲ್ಲ?
ಗುರುರಾಜ್, ಬೆಂಗಳೂರು ಗ್ರಾಮಾಂತರ

ಪೊಲೀಸ್ ಇಲಾಖೆಗೆ ‘ಆರೋಗ್ಯ ಭಾಗ್ಯ’ ಎಂಬ ಪ್ರತ್ಯೇಕ ಯೋಜನೆ ಇದೆ. ಸರ್ಕಾರದಿಂದ ಅನುದಾನ ಬಂದ ಬಳಿಕ ಹಣ ಮರುಪಾವತಿಸಲಾಗುತ್ತದೆ. ಇಲಾಖೆಗೆ ಸಲ್ಲಿಸಿರುವ ಚಿಕಿತ್ಸಾ ವೆಚ್ಚದ ಬಿಲ್‌ಗಳನ್ನು ಕಳಿಸಿಕೊಟ್ಟರೆ ಸಹಾಯ ಮಾಡಲಾಗುವುದು.

‘ಪ್ರಜಾವಾಣಿ ಫೋನ್ ಇನ್’ ಕಾರ್ಯಕ್ರಮದಲ್ಲಿ ಸಿ.ಎಸ್. ಷಡಾಕ್ಷರಿ

ಒಪಿಎಸ್ ವರದಿಯ ನಿರೀಕ್ಷೆ

ಹಳೆಯ ಪಿಂಚಣಿ ವ್ಯವಸ್ಥೆ ಮರು ಜಾರಿಗೆ ಸರ್ಕಾರ ರಚಿಸಿದ್ದ ಸಮಿತಿ ವರದಿ ನಿರೀಕ್ಷೆಯಲ್ಲಿ ಇದ್ದೇವೆ. ವರದಿ ಬಂದ ನಂತರ ಸರ್ಕಾರದ ಮೇಲೆ ಒತ್ತಡ ಹೆಚ್ಚಿಸಲಾಗುವುದು ಎಂದು ಷಡಾಕ್ಷರಿ ಹೇಳಿದರು.

ಬೀದರ್‌ನ ಬಸವರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಮರುಜಾರಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಭರವಸೆ ನೀಡಿದ್ದಾರೆ. ವರದಿ ಸಲ್ಲಿಕೆಯಾಗುತ್ತಿದ್ದಂತೆ ಸೂಕ್ತ ನಿರ್ಧಾರ ಕೈಗೊಳ್ಳಲಾಗು-ವುದು. 2006 ನಂತರ ನೇಮಕವಾದ ನೌಕರರ ಬೆಂಬಲಕ್ಕೆ ಸಂಘ ನಿಲ್ಲಲಿದೆ ಎಂದರು.

• ರಸ್ತೆ ಅಪಘಾತದಲ್ಲಿ ಶಿಕ್ಷಕರಾಗಿದ್ದ ಪತಿ ಮೃತಪಟ್ಟಿದ್ದಾರೆ. ಪರಿಹಾರ ಕೊಟ್ಟಿಲ್ಲ?
ಸುಮಾ, ಗಂಗಾವತಿ

ಪರಿಹಾರ ಕೊಡಲೇಬೇಕು. ಆರ್ಥಿಕ ಇಲಾಖೆ ಕಾರ್ಯದರ್ಶಿ ಜತೆ ಮೂರು ದಿನಗಳ ಹಿಂದೆ ಸಭೆ ಆಗಿದೆ. ಎಸ್‌ಬಿಐ ಅಧಿಕಾರಿಯ ಜತೆ ಸಭೆ ಆಗಿದೆ. ಕಾನೂನು ಅಡಿ ತಂದು ಮಾಡಿಕೊಡುವಂತೆ ಸೂಚಿಸಲಾಗಿದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಸ್ವಲ್ಪ ದಿನ ಸಮಯ ಆಗಬಹುದು.

• ಲೋಕೋಪಯೋಗಿ ಇಲಾಖೆ ನಿವೃತ್ತ ನೌಕರ, ಪಿಂಚಣಿ ₹4,125. ಜೀವನ ನಡೆಸುವುದು ಕಷ್ಟವಾಗಿದೆ?
ಈರಪ್ಪ ಅಳಿಯಪ್ಪ, ಬೆಳಗಾವಿ, ಚಿಕ್ಕೋಡಿ

ಎನ್‌ಪಿಎಸ್ ಕುರಿತು ಚರ್ಚೆ ನಡೆದಿದೆ. ಸರ್ಕಾರ ವರದಿ ಸ್ವೀಕರಿಸಿ, ಸಂಪುಟಸಭೆಯಲ್ಲಿ ಚರ್ಚಿಸಿ ಅನುಷ್ಠಾನಗೊಳಿಸ ಬೇಕು. ಜಾರಿಯಾದರೆ, ನಿವೃತ್ತರಿಗೂ ಅನ್ವಯವಾಗುವಂತೆ ಒತ್ತಡ ಹಾಕಲಾಗುವುದು.

• ವಿದ್ಯುತ್ ವಿಚಾರಕ್ಕೆ ನನ್ನ ಮೇಲೆ ಹಲ್ಲೆ ನಡೆಸಲಾಗಿದೆ, ತೊಂದರೆ ಕೊಡುತ್ತಿದ್ದಾರೆ. ಏನು ಮಾಡಬೇಕು?
ರಾಜಶೇಖರ್, ಹರಿಹರ

ಸರ್ಕಾರಿ ನೌಕರರ ಮೇಲೆ ಹಲ್ಲೆ ಮಾಡಿದರೆ ಪೊಲೀಸರಿಗೆ ದೂರು ನೀಡಬೇಕು. ವಿನಾಕರಣ ತೊಂದರೆ ಕೊಡುವಂತಿಲ್ಲ. ಕಾನೂನು ಸಹಕಾರ ನೀಡಲಾಗುವುದು. ಪೊಲೀಸರಿಂದ ರಕ್ಷಣೆ ಪಡೆದುಕೊಳ್ಳಬಹುದು. ಈ ಕುರಿತು ಎಸ್.ಪಿ., ಪಿಎಸ್‌ಐ ಜತೆ ಮಾತನಾಡಲಾಗುವುದು.

• ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಹುದ್ದೆಗಳ ನೇಮಕ ಆಗಿಲ್ಲ?
ಜ್ಯೋತಿ, ಮಂಡ್ಯ

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಕುರಿತು ಚರ್ಚೆ ಆಗಿದೆ. 55 ಸಾವಿರ ಹುದ್ದೆಗಳ ನೇಮಕಾತಿಯಲ್ಲಿ 2 ಸಾವಿರ ಆರೋಗ್ಯ ಇಲಾಖೆಗೆ ಸೇರಿದ ಹುದ್ದೆಗಳನ್ನು ಭರ್ತಿ ಮಾಡಲು ಆರೋಗ್ಯ ಸಚಿವರ ಜತೆ ಚರ್ಚಿಸಲಾಗಿದೆ.

• ಆರೋಗ್ಯ ಸಂಜೀವಿನಿಯಲ್ಲಿ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ನೀಡುತ್ತಿಲ್ಲ?
ಮಲ್ಲಿಕಾರ್ಜುನ್, ಕಲಬುರಗಿ

ಚಿಕಿತ್ಸೆ ಪ್ಯಾಕೇಜ್ ಕಡಿಮೆ ಎಂಬ ಕಾರಣಕ್ಕೆ ಕೆಲ ಆಸ್ಪತ್ರೆಗಳು ನೋಂದಣಿಗೆ ನಿರಾಸಕ್ತಿ ತೋರಿವೆ. ಮಣಿಪಾಲ್ ಸೇರಿದಂತೆ ಹಲವು ಆಸ್ಪತ್ರೆಗಳ ಆಡಳಿತ ಮಂಡಳಿ ಜತೆ ಚರ್ಚೆ ನಡೆಸಲಾಗುತ್ತಿದೆ. 12 ವರ್ಷದ ಹಿಂದಿನ ದರ ಚಾಲ್ತಿಯಲ್ಲಿದೆ. ದರ ಪರಿಷ್ಕರಣೆಗೆ ಸರ್ಕಾರ ಒಪ್ಪಿಗೆ ಸೂಚಿಸಿದ ಬಳಿಕ ಮತ್ತಷ್ಟು ಆಸ್ಪತ್ರೆಗಳು ನೋಂದಾಯಿಸಿಕೊಳ್ಳಲಿವೆ.

ಚಿಟಿಕೆ ಸುದ್ದಿ

ಒಳ ಮೀಸಲಾತಿ ವಿವಾದಕ್ಕೆ 27ರಂದು ತೆರೆ: ಪರಮೇಶ್ವರ

ತುಮಕೂರು: ಪರಿಶಿಷ್ಟ ಜಾತಿಯಲ್ಲಿಯ ಒಳ ಮೀಸಲಾತಿ ವಿವಾದ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 27ರಂದು ವಿಶೇಷ ಸಭೆ ಕರೆದಿದ್ದಾರೆ. ಅಂದು ಸಮಸ್ಯೆಗೆ ಪರಿಹಾರ ಸಿಗಬಹುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಶನಿವಾರ ಆಶಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಸ್ಯೆ ಬಗೆಹರಿದ ನಂತರ ಖಾಲಿ ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ಪೊಲೀಸ್ ಇಲಾಖೆಯಲ್ಲೇ ಎಂಟು ಸಾವಿರ ಹುದ್ದೆ ಭರ್ತಿ ಮಾಡಲಾಗುವುದು ಎಂದರು.

ಒಡಿಶಾ ಶಾಸಕರಿಗೆ ಮೈಸೂರು ಪ್ರವಾಸ

ಮೈಸೂರು: ರಾಜ್ಯಸಭೆ ಚುನಾವಣೆಯಲ್ಲಿ ‘ಅಡ್ಡ ಮತದಾನ’ದಿಂದ ತಪ್ಪಿಸಿಕೊಳ್ಳಲು ಬಿಡದಿಯ ವಂಡರ್‌ಲಾ ರೆಸಾರ್ಟ್‌ಗೆ ಕರೆತರಲಾಗಿರುವ ಒಡಿಶಾದ ಕಾಂಗ್ರೆಸ್‌ನ ಎಂಟು ಶಾಸಕರ ತಂಡಕ್ಕೆ ಶನಿವಾರ ಮೈಸೂರು ಪ್ರವಾಸ ಮಾಡಿಸಲಾಯಿತು.

ಎಐಸಿಸಿ ಕಾರ್ಯದರ್ಶಿಗಳಾದ ಮಯೂರ್‌ಕುಮಾರ್ ಹಾಗೂ ಕುಸುಮಕುಮಾರ್ ಜೆಟ್ಟಿ ಅವರ ನೇತೃತ್ವದಲ್ಲಿ ನಗರಕ್ಕೆ ಬಂದಿದ್ದ ತಂಡವನ್ನು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಮತ್ತು ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್ ಬರಮಾಡಿಕೊಂಡರು.

ತಂಡ ಚಾಮುಂಡೇಶ್ವರಿ ದೇವಸ್ಥಾನ, ನಂತರ ಅಂಬಾವಿಲಾಸ ಅರಮನೆಗೆ ಭೇಟಿ ನೀಡಿತು. ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಬೃಂದಾವನಕ್ಕೆ ಭೇಟಿ ನೀಡಿ ನಂತರ ವಾಪಸಾಯಿತು.

ಪ್ರಭಾಕರ ಕೋರೆಗೆ ‘ಕೆ.ಎಚ್.ಪಾಟೀಲ ಪ್ರಶಸ್ತಿ’ಗೆ ಆಯ್ಕೆ



ಪ್ರಭಾಕರ ಕೋರೆ

ಗದಗ: ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರನ್ನು ‘ಕೆ.ಎಚ್.ಪಾಟೀಲ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ’ ಎಂದು ಮಾಜಿ ಶಾಸಕ ಡಿ.ಆರ್.ಪಾಟೀಲ ತಿಳಿಸಿದ್ದಾರೆ.

‘ಇಲ್ಲಿ ಮಾರ್ಚ್ 16ರಂದು ಕೆ.ಎಚ್.ಪಾಟೀಲ ಅವರ 101ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ ₹5 ಲಕ್ಷ ನಗದು ಮತ್ತು ಫಲಕ ಒಳಗೊಂಡಿದೆ’ ಎಂದು ತಿಳಿಸಿದ್ದಾರೆ.

ಚನ್ನಕೇಶವ ದೇಗುಲ ಅನ್ನದಾಸೋಹ ಪುನರಾರಂಭ

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಚನ್ನಕೇಶವಸ್ವಾಮಿ ದೇಗುಲದಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದಾಗಿ ಸ್ಥಗಿತಗೊಳಿಸಲಾಗಿದ್ದ ಅನ್ನ ದಾಸೋಹವನ್ನು ಶನಿವಾರ ಮತ್ತೆ ಆರಂಭಿಸಲಾಯಿತು.

ಬೆಳಿಗ್ಗೆ ದಾಸೋಹ ಭವನಕ್ಕೆ ಭೇಟಿ ನೀಡಿದ್ದ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ‘ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ಕಾರಣ ಸಿಲಿಂಡರ್ ಪೂರೈಕೆಗೆ ಕ್ರಮವಹಿಸಲಾಗಿದೆ. ಸೌದೆ ಬಾಯ್ಲರ್ ದುರಸ್ತಿಗೂ ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಕಾಂಗ್ರೆಸ್ ತಪ್ಪು ದಾರಿಗೆ ಎಳೆಯುತ್ತಿದೆ, ಆತಂಕ ಬೇಡ – ಕೇಂದ್ರ ಸಚಿವ

‘ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲ’

ಪ್ರಜಾವಾಣಿ ವಾರ್ತೆ

ಪ್ರಲ್ಹಾದ ಜೋಶಿ

ಹುಬ್ಬಳ್ಳಿ: ‘ಪಶ್ಚಿಮ ಏಷ್ಯಾದ ಯುದ್ಧ ಸಂಘರ್ಷದ ಪರಿಸ್ಥಿತಿಯಲ್ಲೂ ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಕೊರತೆ ಇಲ್ಲ. ಜನರು ಈ ವಿಷಯದಲ್ಲಿ ಆತಂಕ ಪಡುವ ಅಗತ್ಯವಿಲ್ಲ’ ಎಂದು ಕೇಂದ್ರ ಇಂಧನ ಸಚಿವ ಪ್ರಲ್ಹಾದ ಜೋಶಿ ಅವರು ಶನಿವಾರ ಸುದ್ದಿಗಾರರಿಗೆ ಹೇಳಿದರು.

‘ಗೃಹ, ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಸಮಸ್ಯೆಯಿಲ್ಲ. ಜನರಿಗೆ ಪೂರೈಸುವಷ್ಟು ದಾಸ್ತಾನಿದೆ. ಆದರೆ, ಕಾಂಗ್ರೆಸ್ ಸರ್ಕಾರವು ಜನರನ್ನು ಕೇಂದ್ರದ ವಿರುದ್ಧ ಎತ್ತಿಕಟ್ಟಿ ತಪ್ಪು ದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದೆ’ ಎಂದರು.

‘ದೇಶದಲ್ಲಿ ಎಲ್ಲಿಯೂ ಎಲ್‌ಪಿಜಿ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಹಾಗೂ ಸೀಮೆಎಣ್ಣೆ ಕೊರತೆ ಕುರಿತು ದೂರುಗಳು ಬಂದಿಲ್ಲ. ಜನರು ಧಾವಂತದಿಂದ ಮುಂಚಿತವಾಗಿಯೇ ಸಿಲಿಂಡರ್ ಬುಕ್ ಮಾಡಲು ಯತ್ನಿಸುತ್ತಿದ್ದಾರೆ. ಇದನ್ನು ನಿಯಂತ್ರಿಸಲು ಕೆಲ ನಿಬಂಧನೆ ವಿಧಿಸಲಾಗಿದೆ’ ಎಂದು ತಿಳಿಸಿದರು.

‘ರಾಹುಲ್ ಗಾಂಧಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಅಡುಗೆ ಅನಿಲ ಪೂರೈಕೆಯಾಗುತ್ತಿಲ್ಲ. ಕೇಂದ್ರದ ವಿರುದ್ಧ ಪ್ರತಿಭಟನೆ ಮಾಡಿ’ ಎಂದು ಜನರನ್ನು ಎತ್ತಿಕಟ್ಟುತ್ತಿರುವುದು ಅವರ ನೈತಿಕ ಅಧಃಪತನವನ್ನು ತೋರಿಸುತ್ತದೆ’ ಎಂದು ಟೀಕಿಸಿದರು.

‘ದೇಶದಲ್ಲಿ ಹಿಂದೆ ಸಮಸ್ಯೆ ಉಂಟಾದಾಗ ವಿರೋಧಪಕ್ಷದಲ್ಲಿದ್ದ ನಾವು ಜವಾಬ್ದಾರಿಯಿಂದ ವರ್ತಿಸಿದ್ದೆವು. ಆದರೀಗ ವಿಪಕ್ಷ ಕಾಂಗ್ರೆಸ್ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ದೇಶದಲ್ಲಿ ಈಗಾಗಲೇ ಶೇ 30ರಷ್ಟು ಎಲ್‌ಪಿಜಿ ಸಿಲಿಂಡರ್ ಉತ್ಪಾದನೆ ಹೆಚ್ಚಿಸಲಾಗಿದೆ. ರಷ್ಯಾ, ಆಫ್ರಿಕಾ, ಅಮೆರಿಕ ಹಾಗೂ ಕೆನಡಾದಿಂದಲೂ ಆಮದು ಮಾಡಿಕೊಳ್ಳಲಾಗುವುದು. ಆ ಸಾಮರ್ಥ್ಯ ಭಾರತಕ್ಕೆ ಇದೆ. ಯಾವುದೇ ಕಾರಣಕ್ಕೂ ಜನರು ಆತಂಕಕ್ಕೆ ಒಳಗಾಗಬಾರದು’ ಎಂದರು.

ಎಲ್‌ಪಿಜಿ ಸಿಲಿಂಡರ್ ಪೂರೈಕೆ ಕೇಂದ್ರದ ಹೊಣೆ: ಸಿ.ಎಂ ಸಿದ್ದರಾಮಯ್ಯ

ಬಾಗಲಕೋಟೆ: ‘ಅಡುಗೆ ಅನಿಲ ಸಿಲಿಂಡರ್‌ಗಳ ಕೊರತೆ ಆಗದಂತೆ ಸಕಾಲಕ್ಕೆ ಜನರಿಗೆ ಪೂರೈಸಬೇಕಾದದ್ದು ಕೇಂದ್ರ ಸರ್ಕಾರದ ಜವಾಬ್ದಾರಿ. ಅದು ತನ್ನ ಕಾರ್ಯವನ್ನು ಸಮರ್ಪಕವಾಗಿ ನಿಭಾಯಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ಸಿಲಿಂಡರ್ ಕೊರತೆಗೆ ಸಂಬಂಧಿಸಿದಂತೆ ಆಹಾರ ಇಲಾಖೆ ಸಚಿವರು ಈಗಾಗಲೇ ಸಭೆ ನಡೆಸಿದ್ದಾರೆ. ನಾವೂ ಪರಿಸ್ಥಿತಿ ಬಗ್ಗೆ ನಿಗಾ ವಹಿಸಿದ್ದೇವೆ. ಕೇಂದ್ರ ಅಗತ್ಯ ವ್ಯವಸ್ಥೆ ಮಾಡಿದರೆ, ರಾಜ್ಯದಲ್ಲಿ ತೊಂದರೆ ಆಗುವುದಿಲ್ಲ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಕಣ್ಣಿಗೂ ತಂಪು...

ರಾಜಸ್ಥಾನದಿಂದ ತರಲಾದ ಬಣ್ಣದ ಚಿತ್ತಾರದ ಮಣ್ಣಿನ ಮಡಿಕೆಗಳನ್ನು ಹುಬ್ಬಳ್ಳಿಯ ಉಣಕಲ್ ಬಳಿ ವ್ಯಾಪಾರಿ ಬಸವಣ್ಣೆಪ್ಪ ಕುಂಬಾರ ಮಾರುತ್ತಿರುವುದು ಶನಿವಾರ ಕಂಡು ಬಂತು

ಚರ್ಚೆಗೆ ಗ್ರಾಸವಾದ ‘ಮಠ ದಾರಿ ತಪ್ಪಿದೆ’ ಮಾತು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಕ್ಷೇತ್ರದ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ಶನಿವಾರ ಆಡಿದ ‘ಆದಿಚುಂಚನಗಿರಿ ಮಠ ದಾರಿ ತಪ್ಪುತ್ತಿದೆ’ ಮಾತು ಬಿಸಿ ಚರ್ಚೆಗೆ ಗ್ರಾಸವಾಯಿತು.

ಪಟ್ಟಣದ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಬಾಲ ಜಗತ್ ಶಾಲಾ ಕಟ್ಟಡ, ಮಹಾ ಗಣಪತಿ ದೇಗುಲ ಲೋಕಾರ್ಪಣೆ, ಬಾಲಗಂಗಾಧರನಾಥ ಸ್ವಾಮೀಜಿ ಅವರ 81ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮಠಕ್ಕೆ ಬಾಲಗಂಗಾಧರನಾಥ ಸ್ವಾಮೀಜಿ ಭದ್ರ ಬುನಾದಿ ಹಾಕಿದ್ದಾರೆ. ಎಲ್ಲರನ್ನೂ ಒಟ್ಟಿಗೇ ಕರೆದೊಯ್ಯುವ ಪರಂಪರೆ ಮಠದ್ದು. ಮಠದ ಪೀಠಾಧಿಪತಿಗಳಾದ ಇಂದಿನ ಸ್ವಾಮೀಜಿಯ ನಡೆ– ನುಡಿಯಲ್ಲಿ ವ್ಯತ್ಯಾಸ ಕಾಣುತ್ತಿದೆ ಎಂಬ ಭಾವನೆ ಮೂಡುತ್ತಿದೆ. ಈ ಮಾತನ್ನು ನೋವಿನಿಂದ ಹೇಳುತ್ತಿದ್ದೇನೆ’ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಹೇಳಿದರು.

ಈ ಮಾತಿಗೆ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿ, ‘ಮಠ ಹಾದಿ ತಪ್ಪುತ್ತಿದೆ ಎಂಬ ಮಾತು ಒಪ್ಪುವಂತಹದ್ದಲ್ಲ. ನಮ್ಮ ಸ್ವಾಮೀಜಿಯ ವ್ಯಕ್ತಿತ್ವ ಇತರ ಸ್ವಾಮೀಜಿಗಳಿಗೆ ಮೇಲ್ಪಂಕ್ತಿಯಾಗಿದೆ. ಸ್ವಾಮೀಜಿಯವರಿಗೆ ನಿಮ್ಮ ಹಾದಿ ಸರಿಪಡಿಸಿಕೊಳ್ಳಿ ಎಂದು ಹೇಳುವ ಮಟ್ಟಿಗೆ ದೊಡ್ಡವರಾಗಿದ್ದೇವಾ? ಇಂಥ ಮಾತುಗಳು ತರವಲ್ಲ’ ಎಂದರು.

ಆಶೀರ್ವಚನ ನೀಡಿದ ನಿರ್ಮಲಾನಂದನಾಥ ಸ್ವಾಮೀಜಿ, ‘ಮಠ ದಾರಿ ತಪ್ಪದ ಹಾಗೆ ನಡೆಯುತ್ತಿದೆ, ಅನುಮಾನ ಬೇಡ’ ಎಂದರು.

‘ಯಾರು ಏನೇ ಹೇಳಿದರೂ ಮಠದ ಕೆಲಸ ಮಾದರಿಯಾದುದು’ ಎಂದು ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಅವರು ಸ್ವಾಮೀಜಿ ಮಾತನ್ನು ಬೆಂಬಲಿಸಿದರು.

ಈ ಸನ್ನಿವೇಶಕ್ಕೆ ವಿವಿಧ ಶಾಖಾ ಮಠಗಳ ಸ್ವಾಮೀಜಿಗಳು, ರಾಜಕಾರಣಿಗಳು ಮತ್ತು ಸಂಘ ಸಂಸ್ಥೆಗಳ ಮುಖ್ಯಸ್ಥರು ಸಾಕ್ಷಿಯಾದರು.



ಶ್ರೀರಂಗಪಟ್ಟಣದ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ಶನಿವಾರ ನಡೆದ ಬಾಲ ಜಗತ್ ಶಾಲಾ ಕಟ್ಟಡ, ಮಹಾ ಗಣಪತಿ ದೇಗುಲ ಲೋಕಾರ್ಪಣೆ ಹಾಗೂ ಬಾಲ ಗಂಗಾಧರನಾಥ ಸ್ವಾಮೀಜಿ ಅವರ 81ನೇ ಜಯಂತ್ಯುತ್ಸವ ಸಮಾರಂಭವನ್ನು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಶನಿವಾರ ಉದ್ಘಾಟಿಸಿದರು. ನಿರ್ಮಲಾನಂದನಾಥ ಸ್ವಾಮೀಜಿ, ಸಿ.ಟಿ. ರವಿ, ರಮೇಶ ಬಂಡಿಸಿದ್ದೇಗೌಡ ಇದ್ದಾರೆ

ಧಾರವಾಡ, ಬೈಲಹೊಂಗಲದಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಧಾರವಾಡ: ಧಾರವಾಡ ನಗರ ಮತ್ತು ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಶನಿವಾರ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆ ಸುರಿಯಿತು.

ಸಂಸದರ ಕ್ರೀಡಾ ಮಹೋತ್ಸವದ ಪ್ರಯುಕ್ತ ಧಾರವಾಡದ ಕರ್ನಾಟಕ ಕಾಲೇಜು (ಕೆಸಿಡಿ) ಮೈದಾನದಲ್ಲಿ ನಡೆಯಬೇಕಿದ್ದ ಕುಸ್ತಿ ಪಂದ್ಯಾವಳಿ ಮಳೆಯಿಂದ ರದ್ದಾಯಿತು.

ಜಂಗಿ ನಿಕಾಲಿ ಕುಸ್ತಿ ಪಂದ್ಯದ ಸಮಾರಂಭದಲ್ಲಿ ಕೇಂದ್ರ ಕ್ರೀಡಾ ಸಚಿವ ಮನ್‌ಸುಖ್ ಮಾಂಡವಿಯಾ ಭಾಷಣ ಆರಂಭಿಸಿದ ಕೂಡಲೇ ಮಳೆ ಶುರುವಾಯಿತು. ಅವರು ತಕ್ಷಣವೇ ಭಾಷಣ ಮುಗಿಸಿ, ತೆರಳಿದರು.

ಮಳೆಯಿಂದ ಕುಸ್ತಿ ಅಖಾಡ ಕೆಸರುಮಯ ಆಯಿತು. ಪ್ರೇಕ್ಷಕರು, ಪೈಲ್ವಾನರು ಮೈದಾನದಿಂದ ತೆರಳಿದರು. ಹಲವರು ಕರ್ನಾಟಕ ಕಾಲೇಜು ಕಟ್ಟಡದ ಪಡಸಾಲೆಯಲ್ಲಿ ರಕ್ಷಣೆ ಪಡೆದರು.

ಬೈಲಹೊಂಗಲ ನಗರ ಸೇರಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮಳೆ ಸುರಿಯಿತು. ಸಂಗೊಳ್ಳಿ, ಗರ್ಜೂರ, ಕೆಂಗಾನೂರ, ಜಾಲಿಕೊಪ್ಪ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಉತ್ತಮ ಮಳೆಯಾಯಿತು.

ಬಿಸಿಲಿನಿಂದ ರಕ್ಷಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತಾಪಮಾನ ಹೆಚ್ಚುತ್ತಿರುವ ಕಾರಣ, ಬಿಸಿಲಿನಿಂದ ಮಕ್ಕಳು, ವೃದ್ಧರು ಹಾಗೂ ಗರ್ಭಿಣಿಯರ ರಕ್ಷಣೆಗೆ ಆದ್ಯತೆ ನೀಡುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಹವಾಮಾನ ಇಲಾಖೆ ಮುನ್ನೋಟದಂತೆ ಈ ಬಾರಿ ಬೇಸಿಗೆ ಅವಧಿಯಲ್ಲಿ ಅಧಿಕ ಉಷ್ಣಾಂಶ ವರದಿಯಾಗುವ ಸಾಧ್ಯತೆಯಿದೆ. ಸೂರ್ಯನ ವಿಪರೀತ ಶಾಖದಿಂದ ರಕ್ಷಿಸಿಕೊಳ್ಳಬೇಕಿದ್ದು, ಅಧಿಕ ಬಿಸಿಲಿರುವ ಅವಧಿಯಲ್ಲಿ ಹೊರಗಡೆ ಹೋಗುವುದನ್ನು ತಪ್ಪಿಸಬೇಕಿದೆ. ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಬಿಸಿಲು ಹೆಚ್ಚಿರುತ್ತದೆ. ಬಿಸಿಗಾಳಿಯಿಂದ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗಿ, ‘ಸನ್ ಸ್ಟ್ರೋಕ್’ (ಬಿಸಿಲಾಘಾತ) ಆಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ತಾಜಾ ಹಣ್ಣುಗಳ ಸೇವನೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು’ ಎಂದು ಇಲಾಖೆ ತಿಳಿಸಿದೆ.

ತಾಪಮಾನ ಹೆಚ್ಚಳ

ಕ್ರಮಗಳೇನು?

- ಬಾಯಾರಿಕೆ ಇಲ್ಲದಿದ್ದರೂ ಆಗಾಗ ನೀರು ಕುಡಿಯಬೇಕು. ಹೊರಗಡೆ ಹೋಗುವಾಗ ನೀರಿನ ಬಾಟಲಿ ಜತೆಗಿರಲಿ
- ತಿಳಿ ಬಣ್ಣದ ಸಡಿಲವಾದ ಹತ್ತಿ ಬಟ್ಟೆಯನ್ನು ಧರಿಸಬೇಕು. ಹೊರಹೋಗುವಾಗ ಛತ್ರಿ, ಟೋಪಿ, ಕನ್ನಡಕ ಬಳಸಿ
- ದೇಹ ತಂಪಾಗಿಸುವ ಎಳನೀರು, ಮಜ್ಜಿಗೆಯಂತಯ ಪಾನೀಯ ಸೇವಿಸಿ
- ಮದ್ಯಪಾನ, ಚಹ, ಕಾಫಿ ಹಾಗೂ ಹೆಚ್ಚು ಸಕ್ಕರೆ ಅಂಶವಿರುವ ಪಾನೀಯಗಳಿಂದ ದೂರವಿರಿ. ಇದರಿಂದ ನಿರ್ಜಲೀಕರಣ ಉಂಟಾಗುತ್ತದೆ
- ಮಕ್ಕಳು, ವೃದ್ಧರು, ಗರ್ಭಿಣಿಯರು ನೇರ ಬಿಸಿಲಿಗೆ ಒಡ್ಡಿಕೊಳ್ಳದಂತೆ ನೋಡಿಕೊಳ್ಳಿ
- ನಿಲ್ಲಿಸಿದ ವಾಹನಗಳ ಒಳಗೆ ಮಕ್ಕಳನ್ನು, ಸಾಕು ಪ್ರಾಣಿಗಳನ್ನು ಬಿಡಬೇಡಿ
- ಕಲ್ಲಂಗಡಿ, ಸೌತೆಕಾಯಿ, ಕಿತ್ತಳೆ, ಸೊಪ್ಪು ಹಾಗೂ ತರಕಾರಿಗಳನ್ನು ಹೆಚ್ಚಾಗಿ ಸೇವಿಸಿ
- ಮನೆಯೊಳಗೆ ಗಾಳಿಯಾಡುವಂತೆ ನೋಡಿಕೊಳ್ಳಿ
- ತಲೆಸುತ್ತು, ವಾಕರಿಕೆ, ಅತಿಯಾದ ಬೆವರು, ಸ್ನಾಯು ಸೆಳೆತ ಕಂಡುಬಂದರೆ ಕೂಡಲೇ ವಿಶ್ರಾಂತಿ ಪಡೆಯಿರಿ
- ಬಿಸಿಲಿಗೆ ಆರೋಗ್ಯದಲ್ಲಿ ಏರುಪೇರಾದರೆ ತಕ್ಷಣ ನೆರಳಿರುವ ಜಾಗಕ್ಕೆ ತೆರಳಿ, ನೀರು ಕುಡಿಯಿರಿ. ಚಿಕಿತ್ಸೆ ಅಗತ್ಯವಿದ್ದಲ್ಲಿ ವೈದ್ಯರನ್ನು ಸಂಪರ್ಕಿಸಿ

ಏ. 4ರವರೆಗೆ ಉತ್ಸವ • ವಿವಿಧ ನಗರಗಳಿಂದ ಭಕ್ತರಿಗೆ ವಿಶೇಷ ಸಾರಿಗೆ ಬಸ್ ಸೌಕರ್ಯ

ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವ 28ಕ್ಕೆ

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ಇಲ್ಲಿನ ಚೆಲುವನಾರಾಯಣಸ್ವಾಮಿಯ ವಿಶ್ವವಿಖ್ಯಾತ ‘ವೈರಮುಡಿ ಕಿರೀಟಧಾರಣಾ ಮಹೋತ್ಸವ’ವು ಮಾರ್ಚ್ 28ರಂದು ರಾತ್ರಿ 8ರಿಂದ ಮುಂಜಾನೆ 4ರವರೆಗೆ ನಡೆಯಲಿದೆ.

ವೈರಮುಡಿ ಉತ್ಸವ ಮುಗಿ-ಯುತ್ತಿದ್ದಂತೆ ಮೈಸೂರು ರಾಜರು ಸಮರ್ಪಿಸಿದ ವಜ್ರಖಚಿತ ರಾಜಮುಡಿ ಕಿರೀಟ ಧಾರಣೆ ಮಾಡಿ ‘ರಾಜಮುಡಿ ಉತ್ಸವ’ ನಡೆಯಲಿದೆ. ಒಂದೇ ರಾತ್ರಿ ಎರಡು ವಜ್ರದ ಕಿರೀಟಗಳ ಧಾರಣೆಯೊಂದಿಗೆ ಉತ್ಸವ ನಡೆಯುವುದು ವಿಶೇಷ.

ಧಾರ್ಮಿಕ ಕಾರ್ಯಕ್ರಮಗಳು ಮಾರ್ಚ್ 23ರಿಂದ ಏ. 4ರವರೆಗೆ ವೈಭವದಿಂದ ನಡೆಯಲಿವೆ. ವೈರಮುಡಿ, ರಥೋತ್ಸವ, ಮಹಾಭಿಷೇಕ ನಡೆಯುವ ದಿನಗಳಲ್ಲಿ ಸರ್ಕಾರಿ ರಜೆ ಇರುವುದರಿಂದ ಹೆಚ್ಚು ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜಿಲ್ಲಾ ಕೇಂದ್ರ ಮಂಡ್ಯ, ಮೈಸೂರು ಸೇರಿ ವಿವಿಧ ನಗರಗಳಿಂದ ಭಕ್ತರಿಗೆ ಸಾರಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ.

ಮಾ.23ರಂದು ಬ್ರಹ್ಮೋತ್ಸವಕ್ಕೆ ಅಂಕುರಾರ್ಪಣ, 24ರಂದು ಸಂಜೆ 5ರಿಂದ 10ರವರೆಗೆ ಕಲ್ಯಾಣೋತ್ಸವ, 25ರಂದು ಬೆಳಿಗ್ಗೆ 8ರಿಂದ 10ರವರೆಗೆ ಗರುಡ ಧ್ವಜಾರೋಹಣ, 26ರಂದು ರಾಮಾನುಜಾಚಾರ್ಯರಿಗೆ ಅಭಿಷೇಕ, 27ರಂದು ಶ್ರೀರಾಮನವಮಿ, ಮಧ್ಯಾಹ್ನ 2ರಿಂದ 9ರವರೆಗೆ ನಾಗವಲ್ಲಿ ಮಹೋತ್ಸವ ನಡೆಯಲಿದೆ.

30ರಂದು ಗಜೇಂದ್ರಮೋಕ್ಷ ಉತ್ಸವ ನಡೆಯಲಿದೆ. ಚೆಲುವ ನಾರಾಯಣಸ್ವಾಮಿ ಮಹಾರಥೋತ್ಸವ ಮಾರ್ಚ್ 31ರಂದು ಬೆಳಿಗ್ಗೆ 7.30ಕ್ಕೆ ಆರಂಭವಾಗಲಿದೆ. ಬಂಗಾರದ ಪಲ್ಲಕ್ಕಿ ಉತ್ಸವ ರಾತ್ರಿ ನಡೆಯಲಿದೆ.

ಏ.1ರಂದು ರಾತ್ರಿ ತೆಪ್ಪೋತ್ಸವ, 2ರಂದು ನಾರಾಯಣಸ್ವಾಮಿ ಜಯಂತಿ, ಬೆಳಿಗ್ಗೆ ತೀರ್ಥಸ್ನಾನ, ಸಂಜೆ ಪಟ್ಟಾಭಿಷೇಕ, 3ರಂದು ಚೆಲುವನಾ-ರಾಯಣಸ್ವಾಮಿಗೆ ಮಹಾಭಿಷೇಕ, 4ರಂದು ಬೆಟ್ಟದೊಡೆಯ ಯೋಗ ನರಸಿಂಹಸ್ವಾಮಿ, ಮಹಾಲಕ್ಷ್ಮೀ ಅಮ್ಮನವರಿಗೆ ಮಹಾಭಿಷೇಕ ನಡೆಯಲಿದೆ.

ಚೆಲುವನಾರಾಯಣ ಸ್ವಾಮಿಯ ‘ವೈರಮುಡಿ ಬ್ರಹ್ಮೋತ್ಸವ’ (ಸಂಗ್ರಹ ಚಿತ್ರ)

ವಿವಿಧ ವಾಹನೋತ್ಸವ

ಮಾರ್ಚ್ 25ರಂದು ಬೆಳಿಗ್ಗೆ ಮಂಟಪ ವಾಹನೋತ್ಸವ, ರಾತ್ರಿ ಹಂಸ ವಾಹನೋತ್ಸವ, 26ರ ರಾತ್ರಿ ಶೇಷ ವಾಹನೋತ್ಸವ, 27ರಂದು ರಾತ್ರಿ ಚಂದ್ರಮಂಡಲ ವಾಹನೋತ್ಸವ, 29ರಂದು ರಾತ್ರಿ ಗರುಡವಾಹನೋತ್ಸವ, 30ರಂದು ರಾತ್ರಿ ಗಜ ಮತ್ತು ಅಶ್ವ ವಾಹನೋತ್ಸವ, ಏ.1ರಂದು ರಾತ್ರಿ ಕುದುರೆ ವಾಹನೋತ್ಸವ, 2ರಂದು ಸಂಜೆ ಸಮರಭೂಪಾಲ ವಾಹನೋತ್ಸವ, 3ರಂದು ರಾತ್ರಿ ಹನುಮಂತ ವಾಹನೋತ್ಸವಗಳು ನಡೆಯಲಿವೆ.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ನೇತೃತ್ವದಲ್ಲಿ ವೈರಮುಡಿ ಬ್ರಹ್ಮೋತ್ಸವ ಅದ್ಧೂರಿಯಾಗಿ ನಡೆಸಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ
ಪರಮೇಶ್ ಗೌಡ, ಅಧ್ಯಕ್ಷ, ದೇವಾಲಯ ಅಭಿವೃದ್ಧಿ ಆಡಳಿತ ಮಂಡಳಿ

‘ಅಕ್ರಮ ನೇಮಕಾತಿಗಳ ತನಿಖೆ’

ಪ್ರಜಾವಾಣಿ ವಾರ್ತೆ

ಕೆಪಿಎಸ್‌ಸಿ

ಕಲಬುರಗಿ: ಕರ್ನಾಟಕ ಲೋಕಸೇವಾ ಆಯೋಗದಿಂದ (ಕೆಪಿಎಸ್‌ಸಿ) ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಆರೋಪಗಳ ಹಿನ್ನೆಲೆಯಲ್ಲಿ ಸರ್ಕಾರ ತನಿಖೆಗೆ ವಹಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಜಿಲ್ಲೆಯ ಚಿಂಚೋಳಿಯ ಚಂದ್ರಂಪಳ್ಳಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕೆಪಿಎಸ್‌ಸಿ ನಡೆಸಿದ ಪಿಡಿಒ, ಬಿಬಿಎಂಪಿ ಸಹಾಯಕ ಎಂಜಿನಿಯರ್, ವಾಣಿಜ್ಯ ತೆರಿಗೆ ಪರಿವೀಕ್ಷಕ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದಿದ್ದವು. ಹೀಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತನಿಖೆಗೆ ವಹಿಸಿದ್ದಾರೆ’ ಎಂದರು.

‘ಅಕ್ರಮವಾಗಿ ನೇಮಕವಾಗಿರುವ ಪಿಡಿಒಗಳನ್ನು ನಾವು ಸೇರಿಸಿಕೊಳ್ಳುವುದಿಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ಗ್ರಾಮೀಣ ನೀರು ಸರಬರಾಜು ವಿಭಾಗದ ಸಹಾಯಕ ಎಂಜಿನಿಯರ್‌ಗಳನ್ನು ಅಕ್ರಮಕ್ಕೆ ಆಸ್ಪದವಿಲ್ಲದಂತೆ ನೇಮಕಾತಿ ಮಾಡಿಕೊಳ್ಳಲಾಗಿತ್ತು’ ಎಂದು ಹೇಳಿದರು.

‘ಟಿಕೆಟ್ ಹೈಕಮಾಂಡ್ ತೀರ್ಮಾನ’

ಸಿದ್ದರಾಮಯ್ಯ

ಬಾಗಲಕೋಟೆ: ‘ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿ ಆಯ್ಕೆಯನ್ನು ಹೈಕಮಾಂಡ್ ತೀರ್ಮಾನಿಸಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಸುದ್ದಿಗಾರರಿಗೆ ಹೇಳಿದರು.

‘ವಾರದೊಳಗೆ ಚುನಾವಣೆ ಘೋಷಣೆಯಾಗಬಹುದು’ ಎಂದರು. ಎಚ್.ವೈ.ಮೇಟಿ ಕುಟುಂಬದವರಿಗೆ ಆಯ್ಕೆ ಮಾಡಲಾಗುವುದೇ ಎಂಬ ಪ್ರಶ್ನೆಗೆ, ‘ಆಕಾಂಕ್ಷಿಗಳಲ್ಲಿ ಅವರೂ ಒಬ್ಬರು. ಎಷ್ಟು ಜನ ಕೇಳಿದರೂ, ಒಬ್ಬರಿಗೆ ಮಾತ್ರ ಟಿಕೆಟ್ ಸಾಧ್ಯ’ ಎಂದರು.

18ರಿಂದ 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ'

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ನಾಗತಿಹಳ್ಳಿಯಲ್ಲಿ ಮಾರ್ಚ್ 18 ಮತ್ತು 19ರಂದು 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ - 2026' ಕಾರ್ಯಕ್ರಮ ಆಯೋಜಿಸಲಾಗಿದೆ.

ಮೊದಲ ದಿನ ಬೆಳಿಗ್ಗೆ 10ರಿಂದ ಉಚಿತ ವೈದ್ಯಕೀಯ ಶಿಬಿರಗಳು ಹಾಗೂ ಸಂಜೆ 6ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸುಗಮ ಸಂಗೀತ ಪರಿಷತ್ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಅಧ್ಯಕ್ಷತೆಯಲ್ಲಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ತಂಡದಿಂದ ಕನ್ನಡ ಗೀತ ಗಾಯನ ನಡೆಯಲಿದೆ. ರಾತ್ರಿ 8ರಿಂದ ವಿದ್ಯಾರ್ಥಿಗಳಿಂದ ನೃತ್ಯ ಮತ್ತು ನಾಟಕ ಪ್ರದರ್ಶನ ಇರಲಿದೆ.

19ರಂದು ಸಂಜೆ 4ರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಜನಪದ ನೃತ್ಯ ಪ್ರದರ್ಶನ ನಡೆಯಲಿದೆ. ಸಂಜೆ 6ಕ್ಕೆ ಶಿವಕುಮಾರ್ ಕಾರೇಪುರ ಸಂಪಾದಕತ್ವದ ರೈತರೇ ಬರೆದ ಸಮೂಹ ಪ್ರವಾಸ ಕಥನ 'ಉತ್ತರ ಪ್ರದೇಶದಲ್ಲಿ ನಾವು' ಕೃತಿ ಬಿಡುಗಡೆ ಸಮಾರಂಭ ನಡೆಯಲಿದೆ. ಚಲನಚಿತ್ರ ನಟ ಮಂಡ್ಯ ರಮೇಶ್ ಉಪಸ್ಥಿತರಿರಲಿದ್ದಾರೆ.

ಪದ್ಮಶ್ರೀ ಪುರಸ್ಕೃತ 'ಪುಸ್ತಕ ಮನೆ'ಯ ಅಂಕೇಗೌಡ ಅವರನ್ನು ಸನ್ಮಾನಿಸಲಾಗುವುದು. ಅಂಕಣಕಾರ ಪ್ರೊ.ಎಂ. ಕೃಷ್ಣೇಗೌಡ 'ಕಿರಿಯರಿಗಾಗಿ ನಾಳೆಗಳನ್ನು ಕಟ್ಟೋಣ' ಕುರಿತು ಮಾತನಾಡಲಿದ್ದಾರೆ. 'ರಾತ್ರಿ 8ರಿಂದ ಮಂಡ್ಯ ರಮೇಶ್ ಸಾರಥ್ಯದಲ್ಲಿ 'ಸಂಸಾರದಲ್ಲಿ ಸನಿದಪ' ನಾಟಕ ಪ್ರದರ್ಶನಗೊಳ್ಳಲಿದೆ' ಎಂದು ನಾಗತಿಹಳ್ಳಿ ಚಂದ್ರಶೇಖರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಪುಸ್ತಕ ಪಟ್ಟಿ ದೋಷ: ಪ್ರಕಾಶಕರ ಆಕ್ರೋಶ

ಶಾಲೆಗಳಿಗೆ ಪೂರೈಸಲು ಆಯ್ಕೆ ಮಾಡಲಾಗಿರುವ ಪುಸ್ತಕಗಳ ಪಟ್ಟಿ: ಹಲವು ಕಡೆ ದೋಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಅಡಿಯಲ್ಲಿ ಶಾಲೆಗಳಿಗೆ ಪೂರೈಸಲು ಆಯ್ಕೆ ಮಾಡಲಾಗಿರುವ ಪುಸ್ತಕಗಳ ಪಟ್ಟಿಯು ದೋಷದಿಂದ ಕೂಡಿದೆ ಎಂದು ಪ್ರಕಾಶಕರ ವಲಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷೆ ವಸುಂಧರಾ ಭೂಪತಿ, ಪ್ರಧಾನ ಕಾರ್ಯದರ್ಶಿ ನ. ರವಿಕುಮಾರ ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದರೆ, ಪಟ್ಟಿಯ ಬಗ್ಗೆ ಅನೇಕ ಪ್ರಕಾಶಕರು ಆಕ್ರೋಶ ಹೊರಹಾಕಿದ್ದಾರೆ.

'2025-26ನೇ ಸಾಲಿನಲ್ಲಿ ಖರೀದಿಸಲು ಆಯ್ಕೆ ಮಾಡಲಾದ ಪುಸ್ತಕಗಳ ಪಟ್ಟಿಯನ್ನು ಇಲಾಖೆಯು ಈಚೆಗೆ ಪ್ರಕಟಿಸಿದೆ. ಆದರೆ, ಅದರಲ್ಲಿ ಪುಸ್ತಕ, ಲೇಖಕ ಮತ್ತು ಪ್ರಕಾಶನ ಸಂಸ್ಥೆಯ ಹೆಸರು ತಪ್ಪಾಗಿ ಪ್ರಕಟವಾಗಿದೆ' ಎಂದು ಸಂಘದ ಪ್ರಕಟಣೆ ದೂರಿದೆ.

'ಒಂದು ಪ್ರಕಾಶನದ ಪುಸ್ತಕವನ್ನು ಮತ್ತೊಂದು ಪ್ರಕಾಶನದ ಸಂಸ್ಥೆಯದ್ದು ಎಂದು ಪಟ್ಟಿಯಲ್ಲಿ ತೋರಿಸಲಾಗಿದೆ. ಈ ರೀತಿಯ ದೋಷ ಒಂದೆರಡು ಕಡೆ ಮಾತ್ರವಲ್ಲ. ಹಲವು ಕಡೆ ಇದೆ. ಜತೆಗೆ ಪುಸ್ತಕದ ಮುಖ ಬೆಲೆಗಿಂತ ಒಂದು ಪಟ್ಟು ಹೆಚ್ಚು ಮೊತ್ತವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ' ಎಂದು ವಿವರಿಸಿದ್ದಾರೆ.

'ಈ ಪುಸ್ತಕಗಳನ್ನು ಇದೇ ಮಾರ್ಚ್ 31ರೊಳಗೆ ಖರೀದಿಸುವಂತೆ ಶಾಲೆಗಳಿಗೆ ಸೂಚಿಸಲಾಗಿದೆ. ಹೀಗಾಗಿ, ಇಲಾಖೆಯು ದೋಷಪೂರಿತ ಪಟ್ಟಿಯನ್ನು ತಕ್ಷಣವೇ ಹಿಂಪಡೆಯಬೇಕು. ಪಟ್ಟಿಯನ್ನು ಸರಿಪಡಿಸಿ, ಮರುಪ್ರಕಟಿಸಬೇಕು' ಎಂದು ಒತ್ತಾಯಿಸಿದ್ದಾರೆ.

ನಾಕುತಂತಿ ಕರ್ತೃ 'ಕಾರಂತ'!

- ದ.ರಾ.ಬೇಂದ್ರೆ ಅವರ 'ನಾಕುತಂತಿ'ಯ ಕರ್ತೃ ಕೆ.ಶಿವರಾಮ ಕಾರಂತ ಎಂದು ಪಟ್ಟಿಯಲ್ಲಿದೆ
- ದ.ರಾ.ಬೇಂದ್ರೆ ಅವರ 'ಅರಳುಮರಳು' ಕೃತಿಯ ಕರ್ತೃ ತ್ರಿವೇಣಿ ಎಂದಿದೆ
- ಶಿವರಾಮ ಕಾರಂತ ಅವರ 'ಬಾಲ ಪ್ರಪಂಚ' ಪುಸ್ತಕದ ಪ್ರಕಾಶಕರು ಸಪ್ನಾ ಎಂದು ತಪ್ಪಾಗಿ ತೋರಿಸಲಾಗಿದೆ
- ರಾಘವೇಂದ್ರ ಪಾಟೀಲ ಅವರ 'ತೇರು' ಕರ್ತೃ ಎಸ್.ಎಲ್.ಭೈರಪ್ಪ ಎಂದಿದೆ
- ದೇವನೂರ ಮಹಾದೇವ ಅವರ 'ಕುಸುಮಬಾಲೆ' ಕೃತಿಯನ್ನು ಅಕ್ಷರ ಪ್ರಕಾಶನವು ಪ್ರಕಟಿಸಿದೆ ಎಂದು ತಪ್ಪಾಗಿ ತೋರಿಸಿದೆ. ಜತೆಗೆ, ಪುಸ್ತಕದ ಬೆಲೆ ₹150 ಆಗಿದ್ದರೂ ₹290 ಎಂದು ನಮೂದಿಸಲಾಗಿದೆ

'ನಮ್ಮದಲ್ಲದ ಪುಸ್ತಕ...'

ನವಕರ್ನಾಟಕ ಪ್ರಕಾಶನದ ಹೆಸರಿನಲ್ಲಿ 36 ಪುಸ್ತಕಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ಆದರೆ, ಆ ಯಾವ ಪುಸ್ತಕಗಳನ್ನೂ ನಾವು ಪ್ರಕಟಿಸಿಲ್ಲ. ನಮ್ಮದಲ್ಲದ ಪುಸ್ತಕವನ್ನು ನಮ್ಮ ಸಂಸ್ಥೆಯ ಹೆಸರಿನಲ್ಲಿ ಖರೀದಿಸುವ ಮೂಲಕ ವಂಚಿಸಲು ಯತ್ನಿಸಲಾಗುತ್ತಿದೆ ಮತ್ತು ನಮ್ಮ ಸಂಸ್ಥೆಗೆ ಕೆಟ್ಟ ಹೆಸರು ತರುವ ಪ್ರಯತ್ನವಾಗಿದೆ. ಈ ಪಟ್ಟಿಯನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದೇ ಇದ್ದಲ್ಲಿ, ವಂಚನೆ ಪ್ರಕರಣ ದಾಖಲಿಸಲಾಗುವುದು.

ಯು. ಪ್ರೇಮಚಂದ್ರ, ಕಾರ್ಯನಿರ್ವಾಹಕ ನಿರ್ದೇಶಕ, ನವಕರ್ನಾಟಕ ಪ್ರಕಾಶನ

'ಪ್ರಕಟವೇ ಆಗದ ರಾಯ್ ಪುಸ್ತಕವೂ ಆಯ್ಕೆ'

ಅರುಂಧತಿ ರಾಯ್ ಅವರ 'ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಕಾದಂಬರಿಯನ್ನು ಇಲಾಖೆಯು ಆಯ್ಕೆ ಮಾಡಿದ್ದು, ನವಕರ್ನಾಟಕ ಪ್ರಕಾಶನ ಸಂಸ್ಥೆಯ ಪುಸ್ತಕ ಎಂದು ನಮೂದಿಸಲಾಗಿದೆ. ಆದರೆ ಈ ಪುಸ್ತಕದ ಕನ್ನಡದ ಅನುವಾದ ಮತ್ತು ಪ್ರಕಟಣೆಯ ಹಕ್ಕನ್ನು ನಮ್ಮ 'ಛಂದ ಪುಸ್ತಕ' ಸಂಸ್ಥೆಯು ಪಡೆದುಕೊಂಡಿದೆ. ಇದಕ್ಕಾಗಿ ದೊಡ್ಡ ಮೊತ್ತದ ರಾಯಧನವನ್ನು ನಮ್ಮ ಸಂಸ್ಥೆಯು ಲೇಖಕಿಗೆ ಪಾವತಿಸಿದೆ. ಈ ಪುಸ್ತಕ ಇನ್ನೂ ಪ್ರಕಟವಾಗಿಲ್ಲ. ಪ್ರಕಟವಾಗದೇ ಇರುವ ಪುಸ್ತಕವನ್ನು, ತಪ್ಪು ಮಾಹಿತಿಯೊಂದಿಗೆ ಖರೀದಿಗೆ ಆಯ್ಕೆ ಮಾಡಿರುವುದರಿಂದ ನಮಗೆ ಬೇಸರವಾಗಿದೆ. ಈ ದೋಷವನ್ನು ಕೂಡಲೇ ಸರಿಪಡಿಸಿ.

ವಸುಧೇಂದ್ರ, ಛಂದ ಪುಸ್ತಕ

ಇದರ ಹಿಂದೆ ಕೆಲವು ಮುದ್ರಕರ ಹುನ್ನಾರವಿದೆ ಎಂದು ಹಲವು ಪ್ರಕಾಶಕರು ಅನುಮಾನ ವ್ಯಕ್ತಪಡಿಸಿದ್ದು, ಕಾನೂನು ಹೋರಾಟ ನಡೆಸುವ ಆಯ್ಕೆಗಳನ್ನು ಪರಿಶೀಲಿಸುತ್ತಿದ್ದಾರೆ

ವಸುಂಧರಾ ಭೂಪತಿ, ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷೆ

ಆಯ್ಕೆ ಪ್ರಕ್ರಿಯೆಗೆ ಅರ್ಜಿ ಸಲ್ಲಿಸದೇ ಇದ್ದ ಪ್ರಕಾಶನ ಸಂಸ್ಥೆಗಳ ಪುಸ್ತಕಗಳನ್ನೂ ಪಟ್ಟಿಯಲ್ಲಿ ಸೇರಿಸಲಾಗಿದೆ. ಅಂತಹ ಪುಸ್ತಕಗಳನ್ನು ಪಟ್ಟಿಯಿಂದ ಕೈಬಿಡಬೇಕು

ನ.ರವಿಕುಮಾರ, ಕರ್ನಾಟಕ ಪ್ರಕಾಶಕರ ಸಂಘದ ಪ್ರಧಾನ ಕಾರ್ಯದರ್ಶಿ

ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನೇ ಪ್ರಕಟಿಸಲಾಗಿದೆ. ಟೈಪಿಂಗ್ ದೋಷಗಳಿಂದ ಲೋಪಗಳಾಗಿರಬಹುದು. ಪಟ್ಟಿ ವಾಪಸ್ ಪಡೆದು ಸರಿಪಡಿಸಿ ಪುನರ್ ಪ್ರಕಟಿಸಲಾಗುವುದು

ವಿದ್ಯಾಕುಮಾರಿ, ರಾಜ್ಯ ಯೋಜನಾ ನಿರ್ದೇಶಕಿ, ಸಮಗ್ರ ಶಿಕ್ಷಣ ಕರ್ನಾಟಕ

'ವಿದೇಶಿ ಪ್ರವಾಸಿಗರಿಗೆ ನೆರವು'

ಬೆಂಗಳೂರು: 'ಇಸ್ರೇಲ್-ಅಮೆರಿಕ ಹಾಗೂ ಇರಾನ್ ನಡುವೆ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಪ್ರಯಾಣದ ಅಡಚಣೆ ಎದುರಿಸುತ್ತಿರುವ ಮತ್ತು ಸದ್ಯ ಕರ್ನಾಟಕದಲ್ಲಿರುವ ವಿದೇಶಿ ಪ್ರವಾಸಿಗರು ಯಾವುದೇ ನೆರವಿಗಾಗಿ ಅಥವಾ ವೀಸಾ ಸಂಬಂಧಿತ ಸಮಸ್ಯೆಗಳಿಗೆ ಪ್ರವಾಸೋದ್ಯಮ ಇಲಾಖೆಯನ್ನು ಸಂಪರ್ಕಿಸಬಹುದು' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ.

'ಸಂಕಷ್ಟದಲ್ಲಿರುವ ವಿದೇಶಿ ಅತಿಥಿಗಳಿಗೆ ವೀಸಾಗಳ ನಿರ್ವಹಣೆ ಮತ್ತು ಅಗತ್ಯ ಸಹಾಯ ನೀಡಲು ಇಲಾಖೆ ತಯಾರಾಗಿದೆ' ಎಂದಿದ್ದಾರೆ.

'ಯಾವುದೇ ಸಹಾಯ ಅಥವಾ ಮಾಹಿತಿ ಬೇಕಿದ್ದವರು ಬೆಳಿಗ್ಗೆ 5.30ರಿಂದ ರಾತ್ರಿ 10ರ ನಡುವೆ ದೂರವಾಣಿ ಸಂಖ್ಯೆ- 89706 50021 ಅನ್ನು ಸಂಪರ್ಕಿಸಬಹುದು' ಎಂದೂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಖಿಲ ಕರ್ನಾಟಕ ವಿಶ್ವಕರ್ಮ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನಂ.67/1, 1ನೇ ಮಹಡಿ, 18ನೇ ಕ್ರಾಸ್, 21ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು – 560 040

ಪ್ರಕಟಣೆ

ಮಾನ್ಯ ಸದಸ್ಯರೇ,
ಸಂಘದ ಕಛೇರಿಯನ್ನು ಮೇಲ್ಕಂಡ ವಿಳಾಸದಿಂದ ಈ ಕೆಳಕಂಡ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ. ದಯವಿಟ್ಟು ಮಾನ್ಯ ಸದಸ್ಯರು ಸಹಕರಿಸಬೇಕೆಂದು ಕೋರಲಾಗಿದೆ.

ಬದಲಾದ ಹೊಸ ವಿಳಾಸ
ನಂ.540, 9ನೇ ಮುಖ್ಯ ರಸ್ತೆ, ಎಂ.ಸಿ.ಲೇಔಟ್, ವಿಜಯನಗರ, ಬೆಂಗಳೂರು–40.

ತಮ್ಮ ವಿಶ್ವಾಸಿ,
ಸಹಿ/– [ಜಿ. ಧ್ರುವಕುಮಾರ್]
ಕಾರ್ಯದರ್ಶಿ

ಕರ್ನಾಟಕ ಸರ್ಕಾರದ ಬಾಂಡ್‌ಗಳು (ಸೆಕ್ಯುರಿಟೀಸ್)
ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

ಪ್ರಕಟಣೆ

1. ಒಟ್ಟು ಮೊತ್ತ: 10,000 ಕೋಟಿ ರೂ.ಗಳು 1. 2,000 ಕೋಟಿ ರೂ.ಗಳು 7.44% SGS 2033 ಮರು ಹಂಚಿಕೆ. 2. 2,000 ಕೋಟಿ ರೂ.ಗಳು 7.36% SGS 2034 ಮರು ಹಂಚಿಕೆ. 3. 2,000 ಕೋಟಿ ರೂ.ಗಳು–7.42% SGS 2035 ಮರು ಹಂಚಿಕೆ. 4. 2,000 ಕೋಟಿ ರೂ.ಗಳು 7.44% SGS 2036 ಮರು ಹಂಚಿಕೆ. 5. 2,000 ಕೋಟಿ ರೂ.ಗಳು 7.54% SGS 2039 ಮರು ಹಂಚಿಕೆ.
2. ಹಂಚಿಕೆ ವಿಧಾನ: ಹರಾಜು ಮೂಲಕ, (ರಿಸರ್ವ್ ಬ್ಯಾಂಕ್ (ಪಿಡಿಒ), ಮುಂಬೈ ಮುಖಾಂತರ).
3. ಹರಾಜಿನ ದಿನಾಂಕ : ಮಾರ್ಚ್ 17, 2026.

ಕರ್ನಾಟಕ ಸರ್ಕಾರವು ಮೇಲಿನ ಭದ್ರತಾ ಪತ್ರಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ರಿಸರ್ವ್ ಬ್ಯಾಂಕ್, ಪಿಡಿಒ, ಬೆಂಗಳೂರು ಕಛೇರಿಯಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ರಿಸರ್ವ್ ಬ್ಯಾಂಕ್ ನಿಂದ ಸ್ಪರ್ಧಾತ್ಮಕವಲ್ಲದ ಹರಾಜು ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟಕ್ಕೆ ಅಧಿಸೂಚಿಸಲಾದ ಮೊತ್ತದ ಗರಿಷ್ಠ ಶೇ.10ರವರೆಗಿನ ಸರ್ಕಾರಿ ಭದ್ರತಾ ಪತ್ರಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಹರಾಜು ಸೌಲಭ್ಯದ ಪರಿಷ್ಕೃತ ಯೋಜನೆಯ ವಿವರಗಳು www.rbi.org.in. ಜಾಲತಾಣದಲ್ಲಿ ಲಭ್ಯವಿದೆ.

ಸಹಿ/– (ಇಕ್ರಂ ಶರೀಫ್)
ಸರ್ಕಾರದ ಜಂಟಿ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ
DIPR/CP/6244/Zen/2025-26

ಜಾತ್ರೆ ವೈಭವ...

ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿಯ ಶರಣಬಸವೇಶ್ವರ ಜಾತ್ರೆ ಅಂಗವಾಗಿ ಶನಿವಾರ ಜಾತ್ರಾ ಮೈದಾನದಲ್ಲಿನ ಬೃಹತ್ ಆಟಿಕೆ ಯಂತ್ರಗಳು ವಿದ್ಯುತ್ ದೀಪಗಳಿಂದ ಕಂಗೊಳಿಸಿದ್ದು ಹೀಗೆ

ನಾಗಮೋಹನದಾಸ್ ವರದಿ ತಿರಸ್ಕರಿಸಲು ಆಗ್ರಹ

25ರಂದು 'ಬಲಗೈ' ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಳೆ ಮೀಸಲಾತಿ ಪ್ರಮಾಣ ಶೇ 50ರಲ್ಲಿ ಪರಿಶಿಷ್ಟ ಜಾತಿಗೆ ಲಭ್ಯ ಶೇ 15ರ ಮೀಸಲಾತಿಯಲ್ಲಿ ಒಳ ಮೀಸಲಾತಿ ಅಳವಡಿಸಬಾರದು ಮತ್ತು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ವರದಿಯನ್ನು ತಿರಸ್ಕರಿಸಬೇಕು' ಎಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಇದೇ 25ರಂದು ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲು ರಾಜ್ಯ ಬಲಗೈ ಜಾತಿಗಳ ಒಕ್ಕೂಟ ನಿರ್ಧರಿಸಿದೆ.

'ಅಂದು ಬೆಳಿಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಈ ಪ್ರತಿಭಟನೆ ನಡೆಯಲಿದ್ದು, ರಾಜ್ಯದ ಎಲ್ಲ ಜಿಲ್ಲೆಗಳಿಂದ ಬಲಗೈ ಸಮುದಾಯದ ಸುಮಾರು 25 ಸಾವಿರ ಜನರು ಭಾಗವಹಿಸಲಿದ್ದಾರೆ' ಎಂದು ಒಕ್ಕೂಟದ ಅಧ್ಯಕ್ಷ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದ್ದಾರೆ.

'ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ಅನ್ವಯ, ಒಳ ಮೀಸಲಾತಿ ಜಾರಿಗೆ ರಾಜ್ಯ ಸರ್ಕಾರವು ನಾಗಮೋಹನ್‌ದಾಸ್ ಆಯೋಗದಿಂದ ಪರಿಶಿಷ್ಟ ಜಾತಿಯ ಸಮೀಕ್ಷೆ ನಡೆಸಿ ವರದಿ ಪಡೆದಿತ್ತು. ವರದಿಯ ಶಿಫಾರಸನ್ನು ಮಾರ್ಪಡಿಸಿ ಸರ್ಕಾರವು ಒಳಮೀಸಲಾತಿ ಜಾರಿಗೊಳಿಸಿತ್ತು. ಆದರೆ, ಒಳ ಮೀಸಲಾತಿ ನಿಗದಿಪಡಿಸಿದ್ದ ರೋಸ್ಟರ್ ಬಿಂದುಗಳಲ್ಲಿನ ಗೊಂದಲದ ಕಾರಣಕ್ಕೆ ಒಳಮೀಸಲಾತಿ ರಹಿತವಾಗಿ ಶೇ 15 ಮೀಸಲಾತಿ ಜಾರಿಗೊಳಿಸುವಂತೆ ಇದೇ ಫೆ. 27ರಂದು ಆದೇಶ ಹೊರಡಿಸಿತ್ತು. ಇದೀಗ ಈ ಆದೇಶವನ್ನು ಹಿಂಪಡೆದು ಶೇ 15 ಮೀಸಲಾತಿಗೆ ಒಳ ಮೀಸಲಾತಿ ಅಳವಡಿಸುವ ಕುರಿತು ನಿರ್ಣಯ ತೆಗೆದುಕೊಳ್ಳಲು ಇದೇ 27ರಂದು ರಾಜ್ಯ ಸಚಿವ ಸಂಪುಟದ ವಿಶೇಷ ಸಭೆ ಕರೆಯಲಾಗಿದೆ. ಆದರೆ, ಸರ್ಕಾರದ ಈ ನಡೆಯನ್ನು ನಾವು ವಿರೋಧಿಸುತ್ತೇವೆ' ಎಂದೂ ಅವರು ಹೇಳಿದ್ದಾರೆ.

ತಲಾ ಶೇ 5ರಷ್ಟು ಒಳ ಮೀಸಲಾತಿ ಕಲ್ಪಿಸಿ: ಜೈ ಭೀಮ್ ಸೇವಾ ಸಂಘ

'ಪರಿಶಿಷ್ಟ ಜಾತಿಯ ಶೇ 15 ಮೀಸಲಾತಿಯಲ್ಲಿ ಬಲಗೈ ಸಂಬಂಧಿತ ಜಾತಿಗಳ ಗುಂಪು ಮತ್ತು ಎಡಗೈ ಸಂಬಂಧಿತ ಜಾತಿಗಳ ಗುಂಪಿಗೆ ತಲಾ ಶೇ 5, ಅಲೆಮಾರಿ ಹಾಗೂ ಅರೆ ಅಲೆಮಾರಿ ಜಾತಿಗಳಿಗೆ ಶೇ 1ರಂತೆ ಒಳ ಮೀಸಲಾತಿ ಕಲ್ಪಿಸಿ ನೇಮಕಾತಿ ಪ್ರಕ್ರಿಯೆಗಳನ್ನು ಆರಂಭಿಸಬೇಕು' ಎಂದು ಜೈ ಭೀಮ್ ಸೇವಾ ಸಂಘ (ಬಲಗೈ ಜಾತಿಗಳು) ಆಗ್ರಹಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಿರುವ ಸಂಘದ ಗೌರವಾಧ್ಯಕ್ಷ ದಾಸಯ್ಯ ಮತ್ತು ಅಧ್ಯಕ್ಷ ಎಚ್.ಎಸ್. ಲಿಂಗೇಶ್, 'ಶೇ 15 ಮೀಸಲಾತಿಯಲ್ಲಿ ಒಳ ಮೀಸಲಾತಿ ಜಾರಿಗೊಳಿಸಿದ ನಂತರ ನೇಮಕಾತಿ ಪ್ರಕ್ರಿಯೆಗಳನ್ನು ಆರಂಭಿಸಬೇಕೆಂದು ಕೆಲವು ಪರಿಶಿಷ್ಟ ಜಾತಿಗಳು ಬೇಡಿಕೆ ಸಲ್ಲಿಸಿವೆ. ಹೀಗಾಗಿ, ಒಳ ಮೀಸಲಾತಿ ಜಾರಿಗೊಳಿಸುವುದು ಅವಶ್ಯವಾಗಿದೆ' ಎಂದಿದ್ದಾರೆ.

'ನಾಗಮೋಹನದಾಸ್ ವರದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಭಾಗಶಃ ಮಾರ್ಪಾಡು ಮಾಡುವ ಮೂಲಕ ಒಳ ಮೀಸಲಾತಿಯ ಅನುಪಾತ ನಿಗದಿಪಡಿಸಬೇಕು. ವಿಶ್ವವಿದ್ಯಾಲಯಗಳ ಬೋಧನಾ ಸಿಬ್ಬಂದಿ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ವಿಶ್ವವಿದ್ಯಾಲಯವನ್ನೇ ಒಂದು ಘಟಕವಾಗಿ ಪರಿಗಣಿಸಿ ರೋಸ್ಟರ್ ಬಿಂದುಗಳನ್ನು ಗುರುತಿಸಬೇಕು' ಎಂದೂ ಸಂಘ ಮನವಿ ಮಾಡಿದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹುಣಸೂರು ವಿಭಾಗ, ಹುಣಸೂರು
ಸಂಖ್ಯೆ: ಸಅಸಂ/ಟೆಂಡರ್/ಸಿಆರ್–01/2026–27 ದಿನಾಂಕ: 02.03.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ–2000 ರಂತೆ, ಈ ಮೂಲಕ ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸುವುದೇನೆಂದರೆ, 2026–27ನೇ ಸಾಲಿಗೆ ಹುಣಸೂರು ವಿಭಾಗ, ವಲಯಗಳಿಗೆ ಹಾಗೂ ಹುಣಸೂರು ಆನೆ ಕಾರ್ಯಪಡೆ ಘಟಕಕ್ಕೆ ಅಗತ್ಯವಿರುವ ನೌಕರರನ್ನು (ಗಣಕಯಂತ್ರ ನಿರ್ವಾಹಕರು, ವಾಹನ ಚಾಲಕರು, ಡಿ ಗ್ರೂಪ್ ನೌಕರರು, ಕಾವಲುಗಾರರು) ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ, ಅರ್ಹ ಸಂಸ್ಥೆಗಳಿಂದ ಷರತ್ತಿಗೊಳಪಟ್ಟು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. **1)** ಟೆಂಡರ್ ಸ್ವೀಕರಿಸುವ ದಿ: 18.03.2026 ರಂದು 16.00 ಗಂಟೆಯವರೆಗೆ. **2)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 20.03.2026 ರಂದು 16.00 ಗಂಟೆಗೆ. **3)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿ: 20.03.2026 ರಂದು 17.00 ಗಂಟೆಗೆ. ಹೆಚ್ಚಿನ ಮಾಹಿತಿಗಳನ್ನು ಈ ಕೆಳ ಸಹಿದಾರರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಅಥವಾ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಹುಣಸೂರು ವಿಭಾಗ, ಹುಣಸೂರು
DIPR/DDMYS/1822/KSMCA/1230/2025-26

ದುಬಾರಿ ವಾಚ್ ಕಟ್ಟಿದರೆ ತಪ್ಪೇನಿದೆ : ಹಿಟ್ನಾಳ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ನನ್ನ ಸಹೋದರರೊಬ್ಬರು ನೀಡಿದ್ದ ಹ್ಯೂಬ್ಲೋ ಕಂಪನಿಯ ಕೈಗಡಿಯಾರವನ್ನು ಒಂದು ದಿನ ಕಟ್ಟಿಕೊಂಡಿದ್ದೆ. ಅದರಲ್ಲಿ ತಪ್ಪೇನಿದೆ' ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಶನಿವಾರ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ವಾಚ್ ನೀವು (ಮಾಧ್ಯಮದವರು) ಉಡುಗೊರೆ ಕೊಟ್ಟಿದ್ದಾ' ಎಂದು ಕೇಳಿದರು. ಶನಿವಾರ ಅವರು ಬೇರೆ ವಾಚ್ ಧರಿಸಿದ್ದರು. ತಾಲ್ಲೂಕಿನ ಹಿರೇಬಗನಾಳದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದವೇಳೆ ಹಿಟ್ನಾಳ ಅವರು ಹ್ಯೂಬ್ಲೋ ಕಂಪನಿಯ ವಾಚ್ ಧರಿಸಿದ್ದರು.ವಾಚ್‌ನ ಮಾರುಕಟ್ಟೆಯ ಮೌಲ್ಯ ಅಂದಾಜು ₹18 ಲಕ್ಷವಿದೆ.

'ಸಚಿವ ಸ್ಥಾನ ಕೇಳುವ ಅರ್ಹತೆ ಎಲ್ಲ ಶಾಸಕರಿಗೂ ಇದೆ. ಕೇಳುವುದು ತಪ್ಪಲ್ಲ. ರೊಟೇಷನ್ ಪ್ರಕಾರ ಅವಕಾಶ ಕೊಟ್ಟರೆ ಎಲ್ಲರಿಗೂ ನ್ಯಾಯ ಸಿಕ್ಕಂತಾಗುತ್ತದೆ' ಎಂದೂ ಹಿಟ್ನಾಳ ಪ್ರತಿಪಾದಿಸಿದರು.

₹1ಕ್ಕೆ 'ಫ್ಲಿಪ್‌ಕಾರ್ಟ್' ಹಾಲು ಡಿ.ಕೆ. ಸುರೇಶ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ರೂಪಾಯಿಗೆ ಒಂದು ಲೀಟರ್ ಹಾಲು ಮಾರುತ್ತಿರುವ ಫ್ಲಿಪ್‌ಕಾರ್ಟ್ ಸಂಸ್ಥೆ ವಿರುದ್ಧ ನವದೆಹಲಿಯ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾದ ಅಧ್ಯಕ್ಷ ರವನೀತ್ ಕೌರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಪತ್ರ ಬರೆದಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಸುರೇಶ್, 'ಹಣ ಮಾಡುವ ಭರದಲ್ಲಿ ಫ್ಲಿಪ್‌ಕಾರ್ಟ್ ಸಂಸ್ಥೆ ಹೀಗೆ ಹಾಲು ನೀಡಲು ಮುಂದಾಗುವ ಮೂಲಕ ರೈತ ಸಮುದಾಯವನ್ನು ಧ್ವಂಸ ಮಾಡಲು ಹೊರಟಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

'ಮಾರುಕಟ್ಟೆಯನ್ನು ಆವರಿಸಿಕೊಳ್ಳಬೇಕು ಎಂದು ಮಾಡುತ್ತಿರುವ ಸ್ಪರ್ಧೆಯಿಂದ ರೈತರಿಗೆ ಹೊಡೆತ ಬೀಳುತ್ತದೆ. ಇದಕ್ಕಾಗಿಯೇ ಸುಮಾರು ₹ 2 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ' ಎಂದರು.

14.5 ಲಕ್ಷ ಲೀ ಹಾಲು ಮಾರಾಟ: 'ಈಗಾಗಲೇ 14.5 ಲಕ್ಷ ಲೀಟರ್ ಹಾಲು ಮಾರಾಟ ಆಗಿದೆ ಎಂದು ಫ್ಲಿಪ್‌ಕಾರ್ಟ್ ಜಾಹೀರಾತು ನೀಡಿದೆ. ಆ ಕಂಪನಿಯವರು ಎಷ್ಟು ದಿನ ಈ ರೀತಿ ಹಾಲು ಕೊಡುತ್ತಾರೆ ಎಂಬುದನ್ನು ಬಹಿರಂಗಗೊಳಿಸಬೇಕು' ಎಂದರು.

'ನಂದಿನಿ ಹಾಲಿನ ಮಾರಾಟ ಪ್ರಮಾಣ ಕಡಿಮೆಯಾಗಿದೆಯೇ' ಎಂಬ ಪ್ರಶ್ನೆಗೆ, 'ಮಾರುಕಟ್ಟೆಯಲ್ಲಿ ನಂದಿನಿ ಹಾಲು ಮಾತ್ರ ಇಲ್ಲ. ಅನೇಕ ಕಂಪನಿಗಳಿವೆ. ಬಮೂಲ್ ಒಕ್ಕೂಟಕ್ಕೆ 40 ಸಾವಿರದಿಂದ 50 ಸಾವಿರ ಲೀಟರ್ ಹಾಲು ಮಾರಾಟ ಕಡಿಮೆಯಾಗಿದೆ. ಎಷ್ಟು ದಿನದಿಂದ ಇದು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕಿದೆ' ಎಂದರು.

'ಈ ವಿಚಾರವಾಗಿ ಮಾಧ್ಯಮಗಳು ರಾಷ್ಟ್ರದ ಗಮನ ಸೆಳೆಯಬೇಕು. ರೈತರ ಪರವಾಗಿ ನಿಲ್ಲಬೇಕು. ರೈತರು ಹೋರಾಟಕ್ಕೆ ಇಳಿಯಬೇಕು' ಎಂದೂ ಅವರು ಹೇಳಿದರು.

'ಎಸ್‌ಐಆರ್: ಪಾಕ್, ಬಾಂಗ್ಲಾ ಪ್ರಜೆಗಳತ್ತ ನಿಗಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನ, ಬಾಂಗ್ಲಾ ಪ್ರಜೆಗಳು ಮತದಾರರ ಪಟ್ಟಿಗೆ ಸೇರಿದರೆ ದೇಶದ ಭದ್ರತೆಗೆ ಅಪಾಯ. ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಅಂತಹ ಕಳ್ಳ ವೋಟುಗಳನ್ನು ಸೇರಿಸಲು ಅವಕಾಶ ನೀಡಬಾರದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯ (ಎಸ್‌ಐಆರ್) ಮಾಹಿತಿ ಕಚೇರಿ ಉದ್ಘಾಟನೆ ಕಾರ್ಯಕ್ರಮದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ, ಕರ್ನಾಟಕ-ತೆಲಂಗಾಣದ ಎಸ್‌ಐಆರ್ ಪ್ರಭಾರಿ ಅಲ್ಕಾ ಗುರ್ಜರ್ ಅವರು ಮಾಹಿತಿ ಕಚೇರಿ ಉದ್ಘಾಟಿಸಿದರು.

ಪಾಕಿಸ್ತಾನ, ಬಾಂಗ್ಲಾದ ಬಹಳಷ್ಟು ಜನರು ಕರ್ನಾಟಕಕ್ಕೆ ಬಂದಿದ್ದಾರೆ. ಅವರು ಈ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡರೆ ಕಾಯಂ ನಾಗರಿಕರಾಗುತ್ತಾರೆ. ಇದು ದೇಶದ ಭದ್ರತೆಗೆ ಅಪಾಯಕಾರಿ. ಈ ಕುರಿತು ಹೆಚ್ಚಿನ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು, ನಿಗಾವಹಿಸಲು ಬಿಜೆಪಿ ಕಾರ್ಯಾಗಾರದಲ್ಲಿ ಚರ್ಚೆ ಆಗಿದೆ ಎಂದು ಅಶೋಕ ಹೇಳಿದರು.

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಯೋಗೇಂದ್ರ ಯಾದವ್

'ಹೆಸರು ತೆಗೆಯಲು ಎಸ್‌ಐಆರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಐಆರ್ ಅಂದರೆ ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲ. ಮತದಾರರನ್ನು ತೆಗೆದು ಹಾಕುವ ಉದ್ದೇಶದೊಂದಿಗೆ ತಯಾರು ಮಾಡುವ ಹೊಸ ಪಟ್ಟಿ ಎಂದು ಭಾರತ್ ಜೋಡೊ ಅಭಿಯಾನದ ರಾಷ್ಟ್ರೀಯ ಸಂಚಾಲಕ ಯೋಗೇಂದ್ರ ಯಾದವ್ ಹೇಳಿದರು.

ಜಾಗೃತ ಕರ್ನಾಟಕ ಮತ್ತು ಭಾರತ್ ಜೋಡೊ ಅಭಿಯಾನವು ಶನಿವಾರ ಹಮ್ಮಿಕೊಂಡಿದ್ದ 'ಎಸ್‌ಐಆರ್: 13 ರಾಜ್ಯಗಳಲ್ಲಿ ಏನಾಗಿದೆ? ಕರ್ನಾಟಕದಲ್ಲಿ ಏನು ಮಾಡಬೇಕಿದೆ?' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

'ದೇಶ', 'ಕಾಲ', 'ಪಾತ್ರ' ಈ ಮೂರು ಅಂಶಗಳನ್ನು ಮುಂದಿಟ್ಟುಕೊಂಡು ನಿಭಾಯಿಸಲಾಗುತ್ತಿದೆ. ಅದರಲ್ಲಿ ಮೊದಲನೆಯದು ಚುನಾವಣಾ ಕ್ಷೇತ್ರಗಳ ಮರುವಿಂಗಡಣೆ. ಅದರ ಆಧಾರದಲ್ಲಿ ಲೋಕಸಭೆಯ ಸ್ಥಾನಗಳನ್ನು ಬದಲಿಸುವುದು. ಬಿಜೆಪಿಗೆ ಸವಾಲು ಇರುವ ರಾಜ್ಯಗಳಲ್ಲಿ ಸ್ಥಾನಗಳು ಕಡಿಮೆಯಾಗುತ್ತವೆ. ಉತ್ತರ ಭಾರತದ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ವಿಪರೀತ ಹೆಚ್ಚಳವಾಗಲಿದೆ' ಎಂದರು.

ಎರಡನೆಯದು 'ಕಾಲ'. ಇದು ಚುನಾವಣೆಗೆ ಸಂಬಂಧಿಸಿದ್ದು. ದೇಶದಲ್ಲಿ ಒಂದಲ್ಲ ಒಂದು ರಾಜ್ಯದಲ್ಲಿ ಪ್ರತಿವರ್ಷ ಚುನಾವಣೆಗಳು ನಡೆಯುತ್ತಲೇ ಇರುತ್ತವೆ. ಪ್ರತಿಬಾರಿ ಚುನಾವಣೆ ಗೆಲ್ಲಲು ಏನಾದರೂ ಗಿಮಿಕ್ ಮಾಡುತ್ತಿರಬೇಕಾಗುತ್ತದೆ. ಅದು ಮೋದಿಗೆ ಬೇಡ. ಅವರು ಐದು ವರ್ಷಕ್ಕೆ ಒಂದೇ ಬಾರಿ ಚುನಾವಣೆ ಬಯಸುತ್ತಾರೆ. ಒಂದು ದೇಶ–ಒಂದು ಚುನಾವಣೆ ಅಂದರೆ ಇದು. ಬಾಲಾಕೋಟ್, ಪುಲ್ವಾಮಾ ಇಂಥದ್ದು ಐದು ವರ್ಷಕ್ಕೆ ಒಂದು ಸಾಕು. ಕಾಲದ ಸಮಸ್ಯೆ ಪರಿಹಾರವಾಗುತ್ತದೆ ಎಂದು ವಿಶ್ಲೇಷಿಸಿದರು.

ಎಸ್‌ಐಆರ್ ಕುರಿತ ವಿಚಾರಸಂಕಿರಣದಲ್ಲಿ ಯೋಗೇಂದ್ರ ಯಾದವ್ ಮತ್ತು ರಾಹುಲ್ ಶಾಸ್ತ್ರಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮೂರನೆಯದು 'ಪಾತ್ರ'. ಮತದಾರ ಬಿಜೆಪಿಗೆ ಮತ ಹಾಕಿದ್ದರೂ ಬಿಜೆಪಿಯನ್ನು ನಂಬುತ್ತಿಲ್ಲ. ಮೇಲ್ವರ್ಗದ ಸಮುದಾಯಗಳು ಬಿಜೆಪಿಯ ಜೇಬಿನಲ್ಲಿದ್ದರೂ ಕೆಳಹಂತದ ಸಮುದಾಯಗಳು ಪೂರ್ತಿಯಾಗಿ ಇಲ್ಲ. ಇದನ್ನು ನಿಭಾಯಿಸಲು ತಂದಿರುವುದೇ ಎಸ್‌ಐಆರ್ ಎಂದು ಹೇಳಿದರು.

ಹಿಂದಿನ 15 ಚುನಾವಣೆಗಳಲ್ಲಿ ಮತ ಹಾಕಿದ್ದರೂ ಹಿಂದೆ ಇದ್ದ ಸ್ಥಳದಲ್ಲೇ ವಾಸವಾಗಿದ್ದರೂ ಮತ್ತೆ ಮತದಾರರ ಪಟ್ಟಿಗೆ ಸೇರಲು ಅರ್ಜಿ ಹಾಕಬೇಕಿದೆ. ಇಲ್ಲದೇ ಇದ್ದರೆ ಹೆಸರನ್ನು ಕಿತ್ತು ಹಾಕುತ್ತಾರೆ. ಪರಿಷ್ಕರಣೆಗಳು ಹಿಂದೆಯೂ ನಡೆದಿದ್ದವು. ಮತದಾರರು ಮೃತಪಟ್ಟಿದ್ದರೆ, ಬೇರೆಡೆ ಮತದಾರರ ಪಟ್ಟಿಗೆ ಸೇರ್ಪಡೆಯಾಗಿದ್ದರೆ ಪಟ್ಟಿಯಿಂದ ತೆಗೆದು ಹಾಕಲಾಗುತ್ತಿತ್ತು. ಹೊಸ ಮತದಾರರನ್ನು ಸೇರ್ಪಡೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಆ ರೀತಿಯಲ್ಲ. ಹೊಸಪಟ್ಟಿಯನ್ನೇ ತಯಾರಿಸಲಾಗುತ್ತಿದೆ ಎಂದರು.

'ಬಿಹಾರದಲ್ಲಿ 65 ಲಕ್ಷ ಹೆಸರುಗಳನ್ನು ತೆಗೆಯಲಾಯಿತು. ಗುಜರಾತ್‌ನಲ್ಲಿ 2.90 ಕೋಟಿ ಮತದಾರರನ್ನು ಅಳಿಸಿ, 80 ಲಕ್ಷ ಸೇರಿಸಲಾಗಿದೆ. ಅಲ್ಲಿ 2 ಕೋಟಿ ಮತದಾರರು ಮತದಾನದ ಹಕ್ಕು ಕಳೆದುಕೊಂಡರು. ಗುಜರಾತ್, ತಮಿಳುನಾಡಿನಲ್ಲಿಯೂ ಇದೇ ರೀತಿ ಮಾಡಲಾಗಿದೆ' ಎಂದರು.

'ಕರ್ನಾಟಕ ಸ್ಪಷ್ಟ ನಿಲುವು ತೆಗೆದುಕೊಳ್ಳಲಿ'

'ಇನ್ನು ಕೆಲವೇ ದಿನಗಳಲ್ಲಿ ಕರ್ನಾಟಕದಲ್ಲಿ ಎಸ್‌ಐಆರ್ ಆರಂಭವಾಗಲಿದೆ. ಹಲವು ವಿಷಯಗಳಿಗೆ ದೇಶಕ್ಕೆ ಮಾದರಿಯಾಗಿರುವ ಕರ್ನಾಟಕವು ಈ ವಿಚಾರದಲ್ಲಿಯೂ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು' ಎಂದು ಯೋಗೇಂದ್ರ ಯಾದವ್ ಸಲಹೆ ನೀಡಿದರು.

ಬೇರೆ ರಾಜ್ಯಗಳಲ್ಲಿ ಮತದಾರರ ಪಟ್ಟಿಯಿಂದ ತೆಗೆದು ಹಾಕಿದವರಲ್ಲಿ ವಿದೇಶಿ ನುಸುಳುಕೋರರು ಇಲ್ಲ. ಮುಸ್ಲಿಮರು ಮಾತ್ರವಲ್ಲ. ಬಡವರು ಮತ್ತು ವಲಸೆ ಸಮುದಾಯದವರೇ ಹೆಚ್ಚಿದ್ದಾರೆ. ಅದರಲ್ಲಿಯೂ ಮಹಿಳೆಯರ ಸಂಖ್ಯೆ ಹೆಚ್ಚಿದೆ ಎಂದು ಹೇಳಿದರು.

ಸಾರ್ವಜನಿಕ ಪ್ರಕಟಣೆ
(ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಟ್ಸಿ ಕೋಡ್, 2016ರ ಸೆಕ್ಷನ್ 102 (1) & (2)ರ ಅಡಿಯಲ್ಲಿ)

ಮೆ. ಎಹೆಚ್‌ಎಲ್ ಮೈನಿಂಗ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಸಾಲಗಾರ/ವೈಯಕ್ತಿಕ ಜಾಮೀನುದಾರರಾದ ಶ್ರೀ ಅನಿಲ್ ಹೀರೊಜಿ ಲಾಡ್ ಮತ್ತು ಶ್ರೀಮತಿ ಆರ್ತಿ ಎ ಲಾಡ್ ಅವರ ಸಾಲದಾತರ ಗಮನಕ್ಕೆ

ಪ್ರಸ್ತುತ ವಿವರಗಳು		
1.	ಸಾಲಗಾರ/ವೈಯಕ್ತಿಕ ಜಾಮೀನುದಾರರ ಹೆಸರು ಮತ್ತು ವಿಳಾಸ	**1) ಶ್ರೀ ಅನಿಲ್ ಹೀರೊಜಿ ಲಾಡ್** **2) ಶ್ರೀಮತಿ ಆರ್ತಿ ಎ ಲಾಡ್** ನಂ. 12, 1ನೇ ಮೈನ್, 1ನೇ ಕ್ರಾಸ್, ಎನ್‌ಟಿಐ ಲೇಔಟ್, ಡಾಲರ್ ಕಾಲೋನಿ, ರಾಜಮಹಲ್‌ವಿಲಾಸ್ ಎಕ್ಸ್‌ಟೆನ್ಷನ್ 2ನೇ ಹಂತ, ಬೆಂಗಳೂರು 560094 ಹಾಗೂ ಇಲ್ಲಿ ಹೌಸ್ ಆಫ್ ಲಾಡ್ಸ್, ಪ್ಯಾಲೇಸ್ ರಸ್ತೆ, ಅಶೋಕ ಕಾಲೋನಿ, ಸಂಡೂರ್, ಬಳ್ಳಾರಿ – 583119 ಹಾಗೂ ಇಲ್ಲಿ ನಂ. 140, 8ನೇ ಕ್ರಾಸ್, 3ನೇ ಮೈನ್, ಹೆಚ್‌ಐಜಿ ಡಾಲರ್ ಕಾಲೋನಿ, ಆರ್‌ಎಮ್‌ವಿ 2ನೇ ಹಂತ ಎಕ್ಸ್‌ಟೆನ್ಷನ್, ಬೆಂಗಳೂರು – 560094
2.	ಸಾಲಗಾರ/ವೈಯಕ್ತಿಕ ಜಾಮೀನುದಾರರ ವಿಷಯದಲ್ಲಿ ಆದೇಶ ಮತ್ತು ದಿವಾಳಿತನ ಆರಂಭದ ದಿನಾಂಕದ ವಿವರಗಳು	1) ಶ್ರೀ ಅನಿಲ್ ಹೀರೊಜಿ ಲಾಡ್: CP (IB) No.28/BB/2024 11ನೇ ಮಾರ್ಚ್, 2026ರಂದು 2) ಶ್ರೀಮತಿ ಆರ್ತಿ ಎ ಲಾಡ್: CP (IB) No.29/BB/2024 11ನೇ ಮಾರ್ಚ್, 2026ರಂದು
3.	ಪರಿಹಾರದ ವೃತ್ತಿಪರರಾಗಿ (RP) ನಿಯೋಜಿಸಲ್ಪಟ್ಟಿರುವ ದಿವಾಳಿತನ ಪರಿಹಾರಕಾರರ ಹೆಸರು, ನೋಂದಣಿ ಸಂಖ್ಯೆ, ಈಮೇಲ್ ಐಡಿ ಹಾಗೂ ವಿಳಾಸ – ವ್ಯವಹಾರದ ಸಲುವಾಗಿ	ರವೀಂದ್ರ ಬೆಳೆಯೂರ್ IBBI/IPA-001/IP-P00189/2017-18/10368 ನಂ. 428, 19ನೇ ಬಿ ಕ್ರಾಸ್, 3ನೇಬ್ಲಾಕ್, ಜಯನಗರ, ಬೆಂಗಳೂರು – 560 011, ದೂರವಾಣಿ: +91 80 2654 0193 ಇಮೇಲ್: ravi@beleyur.com
4.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	4ನೇ ಏಪ್ರಿಲ್, 2026
5.	ಕ್ಲೇಮುಗಳನ್ನು ಸಲ್ಲಿಸಲು ಪ್ರಸ್ತುತ ಅರ್ಜಿಗಳು ಇಲ್ಲಿ ಲಭ್ಯ:	Weblink: www.ibbi.gov.in/home/downloads

ಈ ಮೂಲಕ ನೋಟೀಸು ನೀಡಲಾಗುತ್ತಿದೆ: ಏನೆಂದರೆ ಮೆ. ಎಹೆಚ್‌ಎಲ್ ಮೈನಿಂಗ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಸಾಲಗಾರ/ವೈಯಕ್ತಿಕ ಜಾಮೀನುದಾರರಾದ ಶ್ರೀ ಅನಿಲ್ ಹೀರೊಜಿ ಲಾಡ್ ಮತ್ತು ಶ್ರೀಮತಿ ಆರ್ತಿ ಎ ಲಾಡ್ ಇವರ ವಿರುದ್ಧ ದಿವಾಳಿತನದ ಪರಿಹಾರದ ಪ್ರಕ್ರಿಯೆಯನ್ನು ಆರಂಭಿಸುವಂತೆ 11ನೇ ಮಾರ್ಚ್, 2026ರಂದು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಧಿಕರಣ (NCLT) ಬೆಂಗಳೂರು, ಆದೇಶಿಸಿದೆ.

ಮೆ. ಎಹೆಚ್‌ಎಲ್ ಮೈನಿಂಗ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ವಿಷಯದಲ್ಲಿ ವೈಯಕ್ತಿಕ ಜಾಮೀನುದಾರರಾದ ಈ ಮೇಲಿನವರ ಸಾಲದಾತರುಗಳನ್ನು, 4ನೇ ಏಪ್ರಿಲ್, 2026ರಂದು ಇಲ್ಲವೇ ಮುಂಚಿತವಾಗಿ ತಮ್ಮ ಕ್ಲೇಮುಗಳನ್ನು ಆಧಾರಗಳ ಸಮೇತ ನಿಗದಿತ ನಮೂನೆಯಲ್ಲಿ, ಪರಿಹಾರ ವೃತ್ತಿಪರರಿಗೆ ಮೇಲೆ ಕಲಂ 3ರಲ್ಲಿ ತಿಳಿಸಿದ ವಿಳಾಸಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗುತ್ತಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸತಕ್ಕದ್ದು. ಉಳಿದೆಲ್ಲ ಸಾಲದಾತರೂ ತಮ್ಮ ಕ್ಲೇಮುಗಳನ್ನು ಆಧಾರಗಳ ಜೊತೆಯಲ್ಲಿ ವೈಯಕ್ತಿಕವಾಗಿ, ಅಂಚೆ ಮೂಲಕ ಇಲ್ಲವೆ ಎಲೆಕ್ಟ್ರಾನಿಕ್ ವಿಧಾನದಲ್ಲಿ ಸಲ್ಲಿಸಬಹುದು.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಸಹಿ/–
(ರವೀಂದ್ರ ಬೆಳೆಯೂರ್)
ಪರಿಹಾರ ವೃತ್ತಿಪರರು
Reg. No. IBBI/IPA-001/IP-P00189/2017-18/10368

ದಿನಾಂಕ: 14ನೇ ಮಾರ್ಚ್2026
ಸ್ಥಳ: ಫ್ರಾಂಕ್‌ಫೋರ್ಟ್

ಫಾರಂ–ಎ
ಸಾರ್ವಜನಿಕ ಪ್ರಕಟಣೆ
[ಭಾರತೀಯ ಪಾಪರುಗಿರಿ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]

ಏಸ್ ಎಂಬೆಡೆಡ್ ಇಂಟೆನ್ಸಿವ್ ಕೇರ್ ಯೂನಿಟ್ಸ್ ಪ್ರೈವೇಟ್ ಲಿಮಿಟೆಡ್‌ನ ಎಲ್ಲಾ ಕ್ರೆಡಿಟಾರುಗಳ (ಸಾಲನೀಡಿದವರ) ಗಮನಕ್ಕೆ

ಸಂಬಂಧಪಟ್ಟ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು	**ಏಸ್ ಎಂಬೆಡೆಡ್ ಇಂಟೆನ್ಸಿವ್ ಕೇರ್ ಯೂನಿಟ್ಸ್ ಪ್ರೈವೇಟ್ ಲಿಮಿಟೆಡ್**
2.	ಸಾಲಗಾರ ಸಂಸ್ಥೆಯು ರಚನೆಯಾದ ದಿನಾಂಕ	23ನೇ ಜುಲೈ 2018
3.	ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಯು ರಚನೆಯಾಗಿದೆ/ನೋಂದಾವಣಿಯಾಗಿದೆ	ROC- ಕರ್ನಾಟಕ–ಕಂಪನಿ ಕಾಯ್ದೆ 2013ರ ಅಡಿಯಲ್ಲಿ ಸಂಯೋಜಿಸಲಾಗಿದೆ
4.	ಕಾರ್ಪೊರೇಟ್ ಗುರುತಿನ ಸಂಖ್ಯೆ	U74999KA2018PTC114976
5.	ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ	ನೋಂದಾಯಿತ ವಿಳಾಸ: ನಂ. 9 ಟಿಕೆಎನ್ ಟವರ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076
6.	ಸಾಲಗಾರ ಸಂಸ್ಥೆಯ ದಿವಾಳಿತನ ನಿರ್ಣಯ	10ನೇ ಮಾರ್ಚ್ 2026
7.	ದಿವಾಳಿತನ ನಿರ್ಣಯ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ	06ನೇ ಸೆಪ್ಟೆಂಬರ್ 2026
8.	ಮಧ್ಯಂತರ ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋಂದಣಿ ಸಂಖ್ಯೆ	ಬೆಳೆಯೂರ್ ರೆಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಅದರ ನಿರ್ದೇಶಕರು ಮತ್ತು ದಿವಾಳಿತನ ವೃತ್ತಿಪರರು ರವೀಂದ್ರ ಬೆಳೆಯೂರ್ ಪ್ರತಿನಿಧಿಸುತ್ತಾರೆ. ನೋಂದಣಿ ಸಂಖ್ಯೆ IBBI/IPE-0163/IPA-1/2023-24/50073
9.	ಮಂಡಳಿಯಲ್ಲಿ ನೋಂದಣಿಯಾದಂತೆ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್	'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560 011. ದೂರವಾಣಿ: +91 80 2654 0193 ಇಮೇಲ್: ip@beleyur.com
10.	ಮಧ್ಯಂತರ ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್	ಬೆಳೆಯೂರ್ ರೆಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇಬ್ಲಾಕ್, ಜಯನಗರ, ಬೆಂಗಳೂರು – 560 011, ದೂರವಾಣಿ: +91 80 2654 0193 ಇಮೇಲ್: cirp-aceembedded@beleyur.in
11.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	29ನೇ ಮಾರ್ಚ್ 2026
12.	ಮಧ್ಯಂತರ ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21ರ ಸಬ್–ಸೆಕ್ಷನ್ (6ಎ)ಯ ಕ್ಲಾಸ್ (ಬಿ) ಅಡಿ ಏನಾದರೂ ಇದ್ದಲ್ಲಿ ಸಾಲನೀಡಿದವರ ವರ್ಗಗಳು	ಅನ್ವಯವಾಗುವುದಿಲ್ಲ
13.	ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ವೃತ್ತಿಪರರೆಂದು ಗುರುತಿಸಲಾದ ಹೆಸರುಗಳು	ಅನ್ವಯವಾಗುವುದಿಲ್ಲ
14.	(ಎ) ಸಂಬಂಧಪಟ್ಟ ಫಾರಂಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ:	(ಎ) ವೆಬ್ ಲಿಂಕ್: https://www.ibbi.gov.in/home/downloads (ಬಿ) ಅನ್ವಯವಾಗುವುದಿಲ್ಲ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ (NCLT) ಬೆಂಗಳೂರು 10ನೇ ಮಾರ್ಚ್ 2026 ದಿನಾಂಕದ ತನ್ನ ಆದೇಶದ ಮೂಲಕ ಏಸ್ ಎಂಬೆಡೆಡ್ ಇಂಟೆನ್ಸಿವ್ ಕೇರ್ ಯೂನಿಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಆರಂಭಿಸಲು ಆದೇಶಿಸಿದೆ ಮತ್ತು ಈ ಕೆಳಗೆ ಸಹಿ ಮಾಡಿರುವವರನ್ನು ಮಧ್ಯಂತರ ಪರಿಹಾರ ವೃತ್ತಿಪರರನ್ನಾಗಿ ನೇಮಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ. (ಆದೇಶ ಸ್ವೀಕರಿಸಿದ ದಿನಾಂಕ 12ನೇ ಮಾರ್ಚ್ 2026).

ಏಸ್ ಎಂಬೆಡೆಡ್ ಇಂಟೆನ್ಸಿವ್ ಕೇರ್ ಯೂನಿಟ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಸಾಲನೀಡಿದವರು 29ನೇ ಮಾರ್ಚ್ 2026ರಂದು ಅಥವಾ ಮುಂಚಿತವಾಗಿ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಪರವಾಗಿ–ಬೆಳೆಯೂರ್ ರೆಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ (IPE)
ಏಸ್ ಎಂಬೆಡೆಡ್ ಇಂಟೆನ್ಸಿವ್ ಕೇರ್ ಯೂನಿಟ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಮಧ್ಯಂತರ ಪರಿಹಾರ ವೃತ್ತಿಪರರು
ಸಹಿ/–
(ರವಿಂದ್ರ ಬೆಳೆಯೂರ್)
ನಿರ್ದೇಶಕರು ಮತ್ತು ಪರಿಹಾರ ವೃತ್ತಿಪರರು

ದಿನಾಂಕ: 14ನೇ ಮಾರ್ಚ್ 2026
ಸ್ಥಳ: ಬೆಂಗಳೂರು

47,736 ರಾಜ್ಯದಲ್ಲಿ ಒಟ್ಟು ಸಹಕಾರ ಸಂಘಗಳು

14,798 ನಷ್ಟದಲ್ಲಿರುವ ಸಹಕಾರ ಸಂಘಗಳು.

6,291 ರಾಜ್ಯದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

125 ದಿವಾಳಿಯಾಗಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

2,675 ಕಳೆದ ಮೂರು ವರ್ಷಗಳಲ್ಲಿ ನೋಂದಣಿಯಾದ ಸಹಕಾರ ಸಂಘಗಳು

64 ಕಾರ್ಯನಿರ್ವಹಿಸದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

5,373 ರಾಜ್ಯದಲ್ಲಿರುವ ಸೌಹಾರ್ದ ಸಹಕಾರ ಸಂಸ್ಥೆಗಳು

1,017 ನಷ್ಟದಲ್ಲಿರುವ ಸೌಹಾರ್ದ ಸಹಕಾರ ಸಂಸ್ಥೆಗಳು

18 ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಅವ್ಯವಹಾರ ಪತ್ತೆ

ಹಿತಾಸಕ್ತಿ ಸಂಘರ್ಷದಲ್ಲಿ 'ಸಹಕಾರ'

ಲಾಭಕ್ಕೂ ತೆರಿಗೆ

ಆದಾಯ ತೆರಿಗೆ ಸೆಕ್ಷನ್ 80(ಪಿ) ಅಡಿಯಲ್ಲಿ ಸಹಕಾರ ವಲಯದ ಸಂಸ್ಥೆಗಳಿಗೆ ನೀಡಿರುವ ತೆರಿಗೆ ವಿನಾಯಿತಿಯನ್ನು 2007–08ನೇ ಸಾಲಿನಿಂದ ಹಿಂತೆಗೆದುಕೊಳ್ಳಲಾಗಿದೆ.

ಸಹಕಾರ ಬ್ಯಾಂಕ್‌ಗಳಿಗೆ ನೀಡಿರುವ ವಿನಾಯಿತಿಯನ್ನು ಹಿಂತೆಗೆದುಕೊಂಡಿರುವುದರಿಂದ ಸಹಕಾರ ಬ್ಯಾಂಕ್‌ಗಳು ಪ್ರತಿ ವರ್ಷ ಗಳಿಸಿದ ನಿವ್ವಳ ಲಾಭದಲ್ಲಿ ಆದಾಯ ತೆರಿಗೆ ಪಾವತಿಸಬೇಕಾಗಿದೆ. ಇದರಿಂದ, ಸಹಕಾರ ಸಂಸ್ಥೆಗಳಿಗೆ ಆರ್ಥಿಕ ಹೊರೆಯಾಗುತ್ತಿದ್ದು, ವ್ಯವಹಾರದ ಮೇಲೆಯೂ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಸಹಕಾರಿ ವಲಯದ ಮುಖಂಡರು ಹೇಳುತ್ತಾರೆ.

ಒಂದನೇ ಪುಟದಿಂದ..

ಕೆಲವರು ಊಟ, ತಿಂಡಿ, ಔಷಧಕ್ಕಾಗಿ ಬೀದಿ ಬೀದಿಗಳಲ್ಲಿ ಭಿಕ್ಷೆ ಬೇಡಿದ ಉದಾಹರಣೆಗಳಿವೆ. ಹಣಕ್ಕಾಗಿ ಕಾದು, ಕಾದು ಕೆಲವರು ಅಸುನೀಗಿದ್ದಾರೆ. ಆದರೆ ವ್ಯವಸ್ಥೆ ಮೇಲೆ ನಿಗಾ ವಹಿಸಬೇಕಾದ ಸರ್ಕಾರದಿಂದ ನೆರವು ದೊರತಿದ್ದು ಕಡಿಮೆ.

ಸಹಕಾರಿ ಸಂಸ್ಥೆಗಳಲ್ಲಿ ಹೆಚ್ಚು ಬಡ್ಡಿ ದೊರೆಯುತ್ತದೆ ಎನ್ನುವ ಕಾರಣಕ್ಕೆ ಗ್ರಾಹಕರು ಸಹಜವಾಗಿಯೇ ಆಕರ್ಷಣೆಗೆ ಒಳಗಾಗುತ್ತಾರೆ. ಬಡ್ಡಿ ಹಣ ತಮ್ಮ ಬದುಕಿಗೆ ಒಂದಿಷ್ಟು ನೆರವಾಗುತ್ತದೆ ಎನ್ನುವ ಮನೋಭಾವ ಸಹಜ. ಆದರೆ, ಇದೇ ಜೀವಕ್ಕೂ ಕುತ್ತು ತರುತ್ತಿದೆ.

ಸಹಕಾರ ಇಲಾಖೆಯು ಇಂತಹ ಸಂಸ್ಥೆಗಳ ಮೇಲೆ ನಿಗಾವಹಿಸದೇ ನಿರ್ಲಕ್ಷಿಸುತ್ತಿರುವುದದಿಂದಲೇ ಅಕ್ರಮಗಳು ನಡೆಯುತ್ತಿವೆ ಎನ್ನುವುದು ಸಹಕಾರಿಗಳ ಅಭಿಪ್ರಾಯ. ಯಾವುದೇ ಸಂಸ್ಥೆಯಲ್ಲಿ ಅಕ್ರಮಗಳು ಒಂದೇ ದಿನಕ್ಕೆ ನಡೆಯುವುದಿಲ್ಲ. ಸಹಕಾರ ಇಲಾಖೆಯ ಅಧಿಕಾರಿಗಳು ಅಕ್ರಮಗಳು ನಡೆಯುವವರೆಗೆ ಕಣ್ಮುಚ್ಚಿ ಏಕೆ ಕುಳಿತುಕೊಳ್ಳುತ್ತಾರೆ? ನಿಯಮಿತವಾಗಿ ಆಡಿಟ್ ಮಾಡಿದ್ದರೆ ಅಕ್ರಮಗಳನ್ನು ತಡೆಯಬಹುದು ಎಂದು ಅವರು ಹೇಳುತ್ತಾರೆ.

ಜತೆಗೆ, ಸಹಕಾರ ತತ್ವಕ್ಕಿಂತ ಅಧಿಕಾರ ದುರುಪಯೋಗ ಮತ್ತು ಹಿತಾಸಕ್ತಿ ಸಂಘರ್ಷವೇ ಮೇಲುಗೈ ಸಾಧಿಸುತ್ತಿರುವ ಪರಿಣಾಮ ಸಹಕಾರಿ ಸಂಸ್ಥೆಗಳು ನಷ್ಟ ಮತ್ತು ಅಕ್ರಮಗಳ ಕೂಪವಾಗಿ ಮಾರ್ಪಾಡಾಗುತ್ತಿವೆ. ಮೂಲ ಆಶಯವನ್ನು ಮರೆತು 'ರಾಜಕೀಯ' ಹಿಡಿತದ ಕುಣಿಕೆಯಲ್ಲಿ ಸಿಲುಕಿ ನರಳುತ್ತಿವೆ ಎಂದು ಸಹಕಾರಿಗಳು ಆತಂಕ ವ್ಯಕ್ತಪಡಿಸುತ್ತಾರೆ.

ಸಹಕಾರಿ ಸಂಸ್ಥೆಗಳ ಚುಕ್ಕಾಣಿ ಹಿಡಿಯುವುದೇ ರಾಜಕಾರಣಿಗಳಿಗೆ ಮುಖ್ಯವಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಐದಾರು ತಿಂಗಳಲ್ಲಿ ನಡೆದ ಡಿಸಿಸಿ ಬ್ಯಾಂಕ್, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ಮತ್ತು ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಚುನಾವಣೆಗಳು ರಾಜ್ಯದ ಗಮನವನ್ನೇ ಸೆಳೆದಿದ್ದವು. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆ ಮೀರಿಸುವಂತೆ ಜಿದ್ದಾಜಿದ್ದಿಯಿಂದ ಕೂಡಿದ ಚುನಾವಣೆ ಇದಾಗಿತ್ತು. ಸಚಿವರು, ಶಾಸಕರು, ಮಾಜಿ ಸಂಸದರೇ ಮುಂಚೂಣಿಯಲ್ಲಿದ್ದರು. ಎರಡನೇ ಹಂತದ ನಾಯಕರು ನೆಪ ಮಾತ್ರಕ್ಕೆ ಕಣದಲ್ಲಿದ್ದರು.

ಸಹಕಾರಿ ಸಂಸ್ಥೆಗಳ ಆಡಳಿತದಲ್ಲಿ ಬಿಗಿ ಹಿಡಿತ ಸಾಧಿಸದಿರುವುದು, ನಿಯಮಗಳ ಉಲ್ಲಂಘನೆ, ಸ್ವಜನಪಕ್ಷಪಾತ ಮತ್ತು ಪಾರದರ್ಶಕ ವ್ಯವಸ್ಥೆ ಇಲ್ಲದಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಸಾಲ ವಸೂಲಾತಿಗೆ ಹಿನ್ನಡೆಯಾದರೂ ನಿರ್ಲಕ್ಷ್ಯ ಧೋರಣೆ ಅನುಸರಿಸಲಾಗುತ್ತಿದೆ.

ಇದರಿಂದಾಗಿ, ಕರ್ನಾಟಕದಲ್ಲಿರುವ 47,736 ಸಹಕಾರ ಸಂಘಗಳಲ್ಲಿ 14,798 ಸಂಘಗಳು ನಷ್ಟದಲ್ಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ವಿಧಾನಸಭೆ ಅಧಿವೇಶನದಲ್ಲಿ ಈ ಕುರಿತು ಲಿಖಿತ ಮಾಹಿತಿ ನೀಡಿದ್ದರು.

ಸಾಲ ವಸೂಲಾತಿ ಕೋಟ್ಯಂತರ ರೂಪಾಯಿ ಮೊತ್ತದ ಸಾಲ ಬಾಕಿ ಉಳಿದಿದ್ದರೂ ಅದನ್ನು ಮರೆಮಾಚುವುದು ಅಥವಾ ಲೆಕ್ಕಪತ್ರಕ್ಕೆ ಪರಿಗಣಿಸದೆ ಲಾಭವನ್ನು ಮಾತ್ರ ತೋರಿಸುವ ಜಾಣ ನಡೆ ಸಹಕಾರಿ ಸಂಸ್ಥೆಗಳಲ್ಲಿ ನಡೆಯುತ್ತಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಹಕಾರ ಇಲಾಖೆಯ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸುತ್ತಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ. ರಾಜ್ಯದಲ್ಲಿ ಈಗಾಗಲೇ 125 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ದಿವಾಳಿಯಾಗಿವೆ. ಈ ಪೈಕಿ 28 ಸಂಘಗಳು ಚಿಕ್ಕಬಳ್ಳಾಪುರದಲ್ಲಿ, 13 ಸಂಘಗಳು ಹಾಸನದಲ್ಲಿ, 12 ಸಂಘಗಳು ಬೆಳಗಾವಿಯಲ್ಲಿವೆ ಎಂದು ವಿಧಾನಸಭೆ ಅಧಿವೇಶನದಲ್ಲಿ ಮಾಹಿತಿ ನೀಡಲಾಗಿದೆ.

ಧಾರವಾಡ ಜಿಲ್ಲೆಯೊಂದರಲ್ಲೇ ಒಟ್ಟು 170 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿವೆ. ಇವುಗಳಲ್ಲಿ 102 ಲಾಭದಲ್ಲಿದ್ದರೆ 68 ನಷ್ಟದಲ್ಲಿದ್ದು, 7 ಸ್ಥಗಿತಗೊಂಡಿವೆ. ಎರಡು ಸಮಾಪನಗೊಂಡಿವೆ.

ಸ್ವಾಯತ್ತ ಸಂಸ್ಥೆಗಳಾಗಿ ರೂಪುಗೊಂಡಿರುವ ಸೌಹಾರ್ದ ಸಹಕಾರ ಸಂಘಗಳಿಗೂ ಕಳಂಕ ತಟ್ಟಿದೆ. ರಾಜ್ಯದಲ್ಲಿರುವ 5373 ಸೌಹಾರ್ದ ಸಹಕಾರ ಸಂಸ್ಥೆಗಳಲ್ಲಿ 1017 ನಷ್ಟದಲ್ಲಿವೆ. 18 ಸೌಹಾರ್ದ ಸಹಕಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಬಯಲಿಗೆ ಬಂದಿದೆ.

ಸಹಕಾರ ಸಂಸ್ಥೆಗಳ ಸಿಬ್ಬಂದಿ ನೇಮಕಾತಿಯಲ್ಲಿ ಪಾರದರ್ಶಕ ವ್ಯವಸ್ಥೆ ಅನುಸರಿಸುತ್ತಿಲ್ಲ. ಇಲ್ಲಿಂದಲೇ ವ್ಯವಸ್ಥೆ ದಾರಿ ತಪ್ಪುತ್ತಿದೆ ಎನ್ನುವುದು ಸಹಕಾರಿ ವಲಯದಲ್ಲಿ ಯಾವಾಗಲೂ ಕೇಳಿಬರುತ್ತಿರುವ ಮಾತು. ಸಹಕಾರ ಸಂಘಗಳ ನೇಮಕಾತಿಯಲ್ಲಿನ ಸ್ವಜನಪಕ್ಷಪಾತ ಹಾಗೂ ಭ್ರಷ್ಟಾಚಾರ ತಡೆಗಟ್ಟಲು ಸರ್ಕಾರ ಕಾಯ್ದೆ ರೂಪಿಸಿದ್ದರೂ, ಅದರ ಪಾಲನೆ ಕಟ್ಟುನಿಟ್ಟಾಗಿ ಆಗುತ್ತಿಲ್ಲ. ಇದರಿಂದಾಗಿ ನೇಮಕಾತಿ ವ್ಯವಸ್ಥೆಯು ದಾರಿ ತಪ್ಪಿದ್ದು, ದಿನದಿಂದ ದಿನಕ್ಕೆ ಭ್ರಷ್ಟಾಚಾರ ಹೆಚ್ಚುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ– 1959ರ ಕಾಯ್ದೆಯ ಸೆಕ್ಷನ್ 17ರ ಪ್ರಕಾರವೇ ನೇಮಕಾತಿ ನಡೆಸುವ ಮೂಲಕ ಸಹಕಾರ ಸಂಘಗಳಿಗೆ ಸಿಬ್ಬಂದಿಯನ್ನು ನೇಮಿಸಬೇಕು. ನೇಮಕಾತಿ ಅಧಿಕಾರ ಆಡಳಿತ ಮಂಡಳಿಗೆ ಇರುವುದರಿಂದ ಸೆಕ್ಷನ್ 17ರ ಕಾಯ್ದೆ ಉಲ್ಲಂಘನೆಯಾಗದಂತೆ ನೋಡಿಕೊಂಡರೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ತಡೆಯುವುದು ಸಾಧ್ಯವಾಗಲಿದೆ' ಎನ್ನುತ್ತಾರೆ ದಾವಣಗೆರೆ ಜಿಲ್ಲಾ ಸಹಕಾರ ಸಂಘ– ಸಂಸ್ಥೆಗಳ ನೋಂದಣಾಧಿಕಾರಿ ಮಧು ಶ್ರೀನಿವಾಸ್. 'ಹೆಚ್ಚಿನ ಸಹಕಾರ ಸಂಘಗಳ ಪೈಕಿ ವೇತನ ಶ್ರೇಣಿ ಆಧರಿಸಿ ಲಾಭದಾಯಕ ಹುದ್ದೆಗಳಿಗೆ ಸೆಕ್ಷನ್ 17ರ ಪ್ರಕಾರವೇ ನೇಮಕಾತಿ ನಡೆದಿರುತ್ತದೆ. ಆದರೆ, ಕೆಳಹಂತದ ಸಿಬ್ಬಂದಿ ನೇಮಕಾತಿಯಲ್ಲಿ ಕೆಲವೆಡೆ ಕಾಯ್ದೆ ಉಲ್ಲಂಘನೆ ಕಂಡುಬರುತ್ತದೆ. ಎಲ್ಲಾ ಸಹಕಾರ ಸಂಘಗಳೂ ಕಾಯ್ದೆ ಪ್ರಕಾರವೇ ನೇಮಕ ಮಾಡಿಕೊಳ್ಳಬೇಕು. ಇದರಿಂದ ಸಹಕಾರ ಸಂಘಗಳನ್ನು ಸದೃಢವಾಗಿ ಕಟ್ಟಲು ಸಹಕಾರಿಯಾಗುತ್ತದೆ' ಎನ್ನುತ್ತಾರೆ ಅವರು.

'ಕಾಮನ್ ಕ್ಯಾಡ್ ಕಮಿಟಿ ರಚಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ. ಆದರೆ, ಇದಕ್ಕೆ ಹೈಕೋರ್ಟ್ ತಡೆ ನೀಡಿದೆ. ಇದು ಜಾರಿಯಾದರೆ, ಜಿಲ್ಲಾ ಮಟ್ಟದಲ್ಲಿ ಸಮಿತಿಗಳು ರಚನೆಯಾಗುತ್ತವೆ. ಇದರಿಂದ ಜಿಲ್ಲೆಯ ಒಂದು ಸಂಘದಿಂದ ಮತ್ತೊಂದು ಸಂಘಕ್ಕೆ ಸಿಬ್ಬಂದಿಯನ್ನು ವರ್ಗಾವಣೆ ನೀಡಲು ಅವಕಾಶ ಸಿಗುತ್ತದೆ. ಇದರಿಂದ ಭ್ರಷ್ಟಾಚಾರ ತಡೆಗಟ್ಟಲು ಅನುಕೂಲವಾಗಲಿದೆ' ಎಂದು ಅವರು ಹೇಳುತ್ತಾರೆ.

'ಸಹಕಾರ ಸಂಘದ ಶ್ರೇಯೋಭಿವೃದ್ಧಿಗೆ ಉತ್ತಮ ಸಿಬ್ಬಂದಿ ಅವಶ್ಯ ಎಂಬ ಮನಃಸ್ಥಿತಿ ಆಡಳಿತ ಮಂಡಳಿಗೆ ಬರಬೇಕು. ಲಂಚ ನೀಡದೇ ನಿಯಮಾನುಸಾರ ನೇಮಕವಾಗಬೇಕು ಎಂಬ ಆಶಯ ಅಭ್ಯರ್ಥಿಗಳಿಗೆ ಇರಬೇಕು. ಆದರೆ, ಇಬ್ಬರಲ್ಲೂ ಈ ಬಗ್ಗೆ ಗಟ್ಟಿತನ, ಸ್ಪಷ್ಟತೆ ಇಲ್ಲದಿರುವುದರಿಂದ ಹೆಚ್ಚು ಲಂಚ ನೀಡುವವರು, ತಮಗೆ ಬೇಕಾದವರು ಸಿಬ್ಬಂದಿಯಾಗಿ ನೇಮಕಗೊಳ್ಳುತ್ತಿದ್ದಾರೆ' ಎಂದು ದಾವಣಗೆರೆಯ ಶಿವ ಕೋಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷ ಐಗೂರು ಚಂದ್ರಶೇಖರ್ ದೂರುತ್ತಾರೆ.

'ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿ, ಶಾಖೆ ವ್ಯವಸ್ಥಾಪಕ ಹಾಗೂ ನಿರ್ದೇಶಕರು ಶಾಮೀಲಾಗಿ ಬೇರೆಯವರ ಹೆಸರುಗಳಲ್ಲಿ (ಬೋಗಸ್) ಸಾಲ ಪಡೆದು ವಂಚಿಸುತ್ತಿರುವ ಹಲವು ನಿದರ್ಶನಗಳು ಕಂಡುಬಂದಿವೆ. ಆಡಳಿತ ಮಂಡಳಿಯವರಲ್ಲಿ ಜನಪರ ಕಾಳಜಿಯೇ ದೂರವಾಗಿದೆ. ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಲು ₹40 ಲಕ್ಷದಿಂದ ₹50 ಲಕ್ಷದವರೆಗೆ ಖರ್ಚು ಮಾಡುವ ಸ್ಥಿತಿ ಈಚೆಗೆ ನಿರ್ಮಾಣವಾಗಿದೆ. ಪ್ರಜ್ಞಾವಂತ ಮತದಾರರೇ ಹಣಕ್ಕೆ ಕೈಚಾಚುತ್ತಿದ್ದಾರೆ. ವ್ಯವಸ್ಥೆ ಹದಗೆಡಲು ಇದೇ ಮೂಲ ಕಾರಣ' ಎಂದು ಅವರು ಲೋಪದತ್ತ ಬೆರಳು ತೋರಿಸುತ್ತಾರೆ.

ಗ್ರಾಮೀಣ ಪ್ರದೇಶಗಳಿಗೆ ಬ್ಯಾಂಕಿಂಗ್ ಸೇವೆಗಳನ್ನು ವಿಸ್ತರಿಸುವ ಮೂಲಕ ಕೃಷಿ ಕ್ಷೇತ್ರಕ್ಕೆ ಆರ್ಥಿಕ ಬೆಂಬಲ ನೀಡುವುದು ಮತ್ತು ಎಲ್ಲ ವರ್ಗದವರನ್ನು ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಸಾಧಿಸುವ ಉದ್ದೇಶದಿಂದ ಸ್ಥಾಪಿಸಲಾದ ಡಿಸಿಸಿ ಬ್ಯಾಂಕ್‌ಗಳು ಸಹ ಮೂಲ ಆಶಯದಿಂದ ದೂರಸರಿಯುತ್ತಿವೆ. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಥವಾ ನಿರ್ದೇಶಕರಾಗುವುದು ರಾಜಕೀಯ ವಲಯದಲ್ಲಿ ಪ್ರಮುಖ ಮೆಟ್ಟಿಲೇರುವ ರಹದಾರಿ ಎಂದೇ ಪರಿಗಣಿಸಲಾಗಿದೆ. ಈ ಬ್ಯಾಂಕ್‌ಗಳ ಮೂಲಕ ವೋಟ್ ಬ್ಯಾಂಕ್ ಸೃಷ್ಟಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ ಎಂದು ಸಹಕಾರ ಕ್ಷೇತ್ರದ ಮುಖಂಡರು ವಿಶ್ಲೇಷಿಸುತ್ತಾರೆ.

ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್(ಡಿಸಿಸಿ) ಬ್ಯಾಂಕ್ ಅಧ್ಯಕ್ಷರಾಗಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚಿತ್ರದುರ್ಗದಲ್ಲಿ ಸಚಿವರಾಗಿರುವ ಡಿ. ಸುಧಾಕರ್ ಅವರೇ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದಾರೆ. ಇದು ಡಿಸಿಸಿ ಬ್ಯಾಂಕ್‌ಗಳ ಮೇಲೆ ರಾಜಕಾರಣಿಗಳ ಮೋಹಕ್ಕೆ ಇವು ಕೆಲವು ಉದಾಹರಣೆಗಳಷ್ಟೇ ಎಂದು ಮುಖಂಡರು ಹೇಳುತ್ತಾರೆ.

ರಾಜ್ಯದಲ್ಲಿ ಪ್ರಮುಖವಾಗಿರುವ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ (ಬಿಡಿಸಿಸಿ) ಬ್ಯಾಂಕ್ ಶತಮಾನ ಕಂಡಿದೆ. ಆರಂಭವಾದ 50 ವರ್ಷಗಳವರೆಗೆ ಈ ಬ್ಯಾಂಕ್ ಸಹಕಾರಿ ಧುರೀಣರ ಕೈಯಲ್ಲಿತ್ತು. ಕಳೆದ ಅರ್ಧ ಶತಮಾನದಿಂದ ರಾಜಕಾರಣಿಗಳೇ ಅಧಿಪತ್ಯ ಸಾಧಿಸಿದ್ದಾರೆ. 1970ರಿಂದ ಈವರೆಗೆ ರಾಜಕಾರಣಿಗಳೇ ನೇರವಾಗಿ ಬ್ಯಾಂಕ್ ನಿರ್ದೇಶಕ, ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗುತ್ತ ಬಂದಿದ್ದಾರೆ. ಅವರಲ್ಲಿ ಮಾಜಿ ಸಂಸದ ರಮೇಶ ಕತ್ತಿ ಅತಿ ಹೆಚ್ಚು ಅವಧಿ ಅಂದರೆ; 20 ವರ್ಷಗಳ ಕಾಲ ಇದರ ಅಧ್ಯಕ್ಷರಾಗಿದ್ದರು. ಬಹುಪಾಲು ನಿರ್ದೇಶಕ ಸ್ಥಾನಗಳನ್ನೂ ಶಾಸಕರು, ಸಂಸದರು, ರಾಜಕಾರಣಿಗಳೇ ಪಡೆದುಕೊಂಡಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ ನಡೆದ ಈ ಬ್ಯಾಂಕ್ ಚುನಾವಣೆಗೆ ಎಲ್ಲ 16 ಸ್ಥಾನಗಳಿಗೆ ರಾಜಕಾರಣಿಗಳೇ ಆಯ್ಕೆಯಾಗಿದ್ದಾರೆ. ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ (ಅಧ್ಯಕ್ಷ), ಶಾಸಕ ಭರಮಗೌಡ ಕಾಗೆ (ಉಪಾಧ್ಯಕ್ಷ) ಸೇರಿದಂತೆ ಶಾಸಕರು– ಮಾಜಿ ಶಾಸಕರೇ ಚುನಾಯಿತರಾಗಿದ್ದಾರೆ.

ಸಚಿವ ಸತೀಶ ಜಾರಕಿಹೊಳಿ, ಶಾಸಕರಾದ ಬಾಲಚಂದ್ರ ಜಾರಕಿಹೊಳಿ, ರಮೇಶ ಜಾರಕಿಹೊಳಿ ಅವರೂ ಇದೇ ಮೊದಲ ಬಾರಿಗೆ ಸಹಕಾರ ಕ್ಷೇತ್ರಕ್ಕೆ ಕಾಲಿಟ್ಟಿದ್ದಾರೆ. ಇವರ ಕುಟುಂಬದ ಇಬ್ಬರು ಸದಸ್ಯರೂ ಸೇರಿದಂತೆ 8 ಬೆಂಬಲಿಗರು ಆಯ್ಕೆಯಾಗಿದ್ದಾರೆ. ಗಮನಾರ್ಹವೆಂದರೆ ಬ್ಯಾಂಕ್ ನಿರ್ದೇಶಕರಾದವರಲ್ಲಿ ಬಹುಪಾಲು ಮಂದಿ ಸ್ವಂತ ಸಕ್ಕರೆ ಕಾರ್ಖಾನೆ, ಉದ್ಯಮ ಹೊಂದಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ 29 ಸಕ್ಕರೆ ಕಾರ್ಖಾನೆಗಳ ಪೈಕಿ 21 ಕಾರ್ಖಾನೆಗಳಿಗೆ ಕಳೆದ ವರ್ಷ ₹1,400 ಕೋಟಿಗೂ ಅಧಿಕ ಸಾಲ ನೀಡಲಾಗಿದೆ. ಇದರಲ್ಲಿ ಶೇ 20ರಷ್ಟು ಮಾತ್ರ ಮರುಪಾವತಿಯಾಗಿದೆ. ಕನಿಷ್ಠ ₹50 ಕೋಟಿಯಿಂದ ಹಿಡಿದು ಗರಿಷ್ಠ ₹250 ಕೋಟಿಯವರೆಗೂ ಸಕ್ಕರೆ ಕಾರ್ಖಾನೆಗಳು ಸಾಲ ಪಡೆದಿವೆ.

ಹೊಸಪೇಟೆಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಬಿಡಿಸಿಸಿ) ಕಳೆದ ಹಣಕಾಸು ವರ್ಷದಲ್ಲಿ ₹12.72 ಕೋಟಿ ಲಾಭ ಗಳಿಸಿದ್ದು, ಸತತ ನಾಲ್ಕು ದಶಕಗಳಿಂದಲೂ ಲಾಭದಲ್ಲಿಯೇ ಇದೆ. ಕೃಷಿ ಸಾಲ ವಸೂಲಾತಿ ಪ್ರಮಾಣ ಶೇ 94ರಷ್ಟಿದೆ ಹಾಗೂ ಕೃಷಿಯೇತರ ಸಾಲ ವಸೂಲಾತಿ ಪ್ರಮಾಣ ಶೇ 96ರಷ್ಟಿದೆ. ಹೀಗಿದ್ದರೂ ಬ್ಯಾಂಕ್‌ನ ಒಟ್ಟು ಸಾಲದ ಹೊರಬಾಕಿ ಮೊತ್ತ ₹1,902 ಕೋಟಿಯಷ್ಟಿದೆ. ಇದರಲ್ಲಿ ಸರ್ಕಾರದಿಂದ ಬರಬೇಕಾದ ಕೃಷಿ ಸಾಲ ಸಬ್ಸಿಡಿಯೂ ಸೇರಿದೆ.

ಸರ್ಕಾರದ ಷೇರು ಇಲ್ಲದೆ ಇರುವುದು ಈ ಬ್ಯಾಂಕ್ ವಿಶೇಷ. ಹೀಗಾಗಿ 104 ವರ್ಷ ಇತಿಹಾಸ ಇರುವ ಈ ಬ್ಯಾಂಕ್‌ನಲ್ಲಿ ಇತ್ತೀಚಿನವರೆಗೂ ರಾಜಕಾರಣಿಗಳ ಪ್ರಭಾವವೇ ಇರಲಿಲ್ಲ. ಈಗಲೂ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಒಂದಿಬ್ಬರು ಶಾಸಕರು, ಮಾಜಿ ಶಾಸಕರು ಮಾತ್ರ ಬ್ಯಾಂಕ್ ಜತೆಗೆ ಗುರುತಿಸಿಕೊಂಡಿದ್ದಾರೆ. ಬ್ಯಾಂಕ್‌ನಲ್ಲಿ ಸರ್ಕಾರಿ ಶಿಕ್ಷಕರ 10 ಸಾವಿರಕ್ಕೂ ಅಧಿಕ ಸಂಬಳ ಖಾತೆ ಇದೆ. ಹೀಗಾಗಿ ಕೃಷಿಯೇತರ ಸಾಲ ನೀಡಿಕೆ, ವಸೂಲಾತಿಯಲ್ಲಿ ಬ್ಯಾಂಕ್ ಗಮನಾರ್ಹ ಸಾಧನೆ ಮಾಡಿದೆ.

'ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ' ಎಂಬ ತತ್ವದಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಕ್ಷೇತ್ರಕ್ಕೆ ಜನಸಾಮಾನ್ಯರ ಬದುಕು ಹಸನುಗೊಳಿಸುವ ಕಾರ್ಯಸೂಚಿ ಮಾತ್ರ ಇರಬೇಕು. ಈ ನಿಟ್ಟಿನಲ್ಲಿ ಪೂರಕವಾಗುವ ನೀತಿಗಳನ್ನು ರೂಪಿಸಬೇಕು ಎನ್ನುವುದು ಸಹಕಾರಿ ಧುರೀಣರ ಆಗ್ರಹ.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಸಂತೋಷ ಈ. ಚಿನಗುಡಿ, ರಾಮಮೂರ್ತಿ ಪಿ.
ಪರಿಕಲ್ಪನೆ: ಯತೀಶ್‌ಕುಮಾರ್ ಜಿ.ಡಿ



ಎಐ ಚಿತ್ರ: ಕಣಕಾಲಮಠ

'ವರ್ಷಕ್ಕೆ ನಾಲ್ಕು ಆಂತರಿಕ ಆಡಿಟ್ ನಡೆಯುತ್ತಿಲ್ಲ'

ಒಂದನೇ ಪುಟದಿಂದ..



ಶಂಕರ ಸಿದ್ಧಾಂತಿ

'ಸಹಕಾರಿ ಸಂಸ್ಥೆಗಳಲ್ಲಿ ಕನಿಷ್ಠ ಮಟ್ಟದ ಆಂತರಿಕ ಪರಿಶೀಲನಾ ವ್ಯವಸ್ಥೆಯೇ ಇಲ್ಲ. ಈಗ ವರ್ಷಕ್ಕೊಮ್ಮೆ ಆಡಿಟ್ ಮಾಡುವುದು ಸಾಮಾನ್ಯವಾಗಿದೆ. ಏನೇನೊ ತೊಂದರೆಗಳಾಗಿರುವುದನ್ನು ಸಮಗ್ರವಾಗಿ ಪರಿಶೀಲಿಸಿ ವರದಿ ಪಡೆದ ನಂತರ ಹಿಂದಿನ ತಪ್ಪುಗಳನ್ನು ಸರಿಪಡಿಸುವ ಬದಲು ಅದನ್ನು ಮತ್ತೆ ಮುಂದೆ ಎಳೆದುಕೊಂಡು ಹೋಗುತ್ತಾರೆ. ಇದು ದೊಡ್ಡ ಸಮಸ್ಯೆ' ಎಂದು ಶಂಕರ ಸಿದ್ಧಾಂತಿ ಹೇಳುತ್ತಾರೆ.

'ಜತೆಗೆ, ಠೇವಣಿಗಳಿಗೆ ಆಕರ್ಷಕ ಬಡ್ಡಿ ನೀಡಲಾಗುತ್ತಿದೆ. ಆಕರ್ಷಕ ಬಡ್ಡಿ ನೀಡುವುದರಿಂದ ಭವಿಷ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಮೇಲೆ ಪರಿಣಾಮ ಬೀರುತ್ತದೆ. ಠೇವಣಿಗಳಿಗೆ ಹೆಚ್ಚು ಬಡ್ಡಿ ನೀಡಿದ ಸಹಕಾರ ಸಂಸ್ಥೆಗಳು ನಷ್ಟಕ್ಕೆ ಸಿಲುಕುವ ಸಾಧ್ಯತೆಗಳೇ ಹೆಚ್ಚು. ಠೇವಣಿಗಳಿಗೆ ಹೆಚ್ಚು ಬಡ್ಡಿ ನೀಡುವುದರಿಂದ ಸಹಜವಾಗಿಯೇ ಸಾಲದ ಮೇಲಿನ ಬಡ್ಡಿ ಹೆಚ್ಚುತ್ತದೆ. ಇದರಿಂದ, ಸಾಲ ವಸೂಲಾತಿ ಕಷ್ಟವಾಗುತ್ತದೆ. ಕ್ರಮೇಣ ಸಂಸ್ಥೆಗಳು ನಷ್ಟದ ಹಾದಿ ಹಿಡಿಯುತ್ತವೆ' ಎಂದು ಅಭಿಪ್ರಾಯಪಡುತ್ತಾರೆ.

'ಸಹಕಾರಿ ಸಂಸ್ಥೆಗಳು ಸರ್ಕಾರದ ಅಂಗ ಸಂಸ್ಥೆಗಳಲ್ಲ'

ಸಹಕಾರಿ ಸಂಸ್ಥೆಗಳು ಸ್ವತಂತ್ರ, ಸ್ವಾಯತ್ತವಾದ, ಸಾಮಾಜಿಕ ವ್ಯಾಪಾರ ಸಂಸ್ಥೆಗಳಾಗಿವೆ. ಕೆಎಂಎಫ್ ಸಹ ಸರ್ಕಾರದ ಅಂಗ ಸಂಸ್ಥೆ ಅಲ್ಲ. ಅದೊಂದು ಸಾಮಾಜಿಕ ವ್ಯಾಪಾರ ಸಂಸ್ಥೆ. ಈ ವಿಷಯವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದೇವೆ. ಲಾಭ–ನಷ್ಟಗಳು ಸಹಜ. ಆದರೆ, ವ್ಯಾವಹಾರ ಮಾಡುವ ಕ್ರಮ ಸರಿ ಇರಬೇಕು. ಬದ್ಧತೆಯಿಂದ ಕಾರ್ಯನಿರ್ವಹಣೆ ಮಾಡಬೇಕು. ವ್ಯವಸ್ಥೆ, ರೀತಿ– ನೀತಿಗಳು ಸರಿ ಇರಬೇಕು. ಮುಖ್ಯವಾಗಿ ಆಡಳಿತಾತ್ಮಕ ವ್ಯವಸ್ಥೆ ಸರಿ ಇರಬೇಕು. ಸಹಕಾರಿ ಸಂಸ್ಥೆಗಳು ಸರ್ಕಾರದ ಅಂಗ ಸಂಸ್ಥೆಗಳಲ್ಲ. ಹೀಗಾಗಿ, ಯಾವುದೇ ನಾಮನಿರ್ದೇಶನಗಳನ್ನು ಮಾಡಬಾರದು. ಸಹಕಾರಿ ಸಂಸ್ಥೆಗಳಿಗೆ ಸರ್ಕಾರ ಅನುದಾನ ಕೊಡುತ್ತದೆ ಎಂದು ಪ್ರತಿಪಾದಿಸಲಾಗುತ್ತದೆ. ಇನ್ಫೊಸಿಸ್, ಟಿಸಿಎಸ್, ವೊಲ್ವೊ ಸೇರಿದಂತೆ ಹಲವಾರು ಕಂಪನಿಗಳಿಗೆ ಸರ್ಕಾರ ಭೂಮಿ, ನೀರು, ವಿದ್ಯುತ್ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡುತ್ತದೆ. ಹಾಗಿದ್ದರೆ ಆ ಕಂಪನಿಗಳಿಗೆ ನಾಮನಿರ್ದೇಶನಗಳನ್ನು ಮಾಡುತ್ತದೆಯೇ? ಈ ಕಿರು ಆರ್ಥಿಕ ಸಂಸ್ಥೆಗಳು ಉತ್ತಮ ಸ್ಥಿತಿಯಲ್ಲಿದ್ದರೆ ಮಾತ್ರ ನಮ್ಮ ರಾಜ್ಯದ ಜಿಡಿಪಿ ಉತ್ತಮ ಸ್ಥಿತಿಯಲ್ಲಿರುತ್ತದೆ. ಈ ಗುರಿ ಸಾಧಿಸಲು ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವ ನೀತಿಗಳನ್ನು ರೂಪಿಸಬೇಕು.

ಮನೋಹರ ಮಸ್ಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಸಂಸ್ಥಾಪಕ ಅಧ್ಯಕ್ಷ ಮತ್ತು ಮಾಜಿ ಶಾಸಕ

ನಷ್ಟದ ಸಹಕಾರಿ ಸಕ್ಕರೆ ಕಾರ್ಖಾನೆ ಖಾಸಗಿ ವಲಯಕ್ಕೆ

ರೈತರ ಬದುಕಿಗೆ ಸಕ್ಕರೆ ಕಾರ್ಖಾನೆಗಳು ಜೀವಸೆಲೆಯಾಗಿದ್ದವು. ರೈತರೇ ಕೈಜೋಡಿಸಿ ಷೇರು ಬಂಡವಾಳ ಹಾಕಿ ಸ್ಥಾಪಿಸಿದ ಕಾರ್ಖಾನೆ ಲಾಭದ ದಾರಿಯಲ್ಲೇ ಸಾಗಿತ್ತು. ವರ್ಷಗಳು ಕಳೆದಂತೆ ರಾಜಕೀಯ ಮೇಲಾಟ, ಆಡಳಿತ ಮಂಡಳಿಗಳ ನಿಷ್ಕ್ರಿಯತೆ, ಹೊಸ ಹೊಸ ತಂತ್ರಜ್ಞಾನ ಅಳವಡಿಕೆಗೆ ಹಿಂದೇಟು ಹಾಕಿದ್ದರಿಂದ ಕ್ರಮೇಣ ನಷ್ಟದತ್ತ ಸಾಗಿತು. ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಎಂ.ಕೆ. ಹುಬ್ಬಳ್ಳಿಯ ಮಲಪ್ರಭಾ ಸಹಕಾರಿ ಕಾರ್ಖಾನೆಯ ಸ್ಥಿತಿಯ ಕಥೆ ಇದು. ರಾಜ್ಯದಲ್ಲಿ ಸಹಕಾರಿ ವಲಯದಲ್ಲಿರುವ ಹಲವು ಸಕ್ಕರೆ ಕಾರ್ಖಾನೆಗಳು ಇದೇ ರೀತಿಯ ಪರಿಸ್ಥಿತಿ ಎದುರಿಸುತ್ತಿವೆ.

ಒಂದೆಡೆ ಖಾಸಗಿ ವಲಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಮಾಲೀಕರು ತಮ್ಮ ಘಟಕಗಳನ್ನು ವಿಸ್ತರಿಸುತ್ತಿದ್ದಾರೆ. ಕೆಲವರು ಎರಡು– ಮೂರು ಕಾರ್ಖಾನೆಗಳನ್ನು ಹೊಂದುತ್ತಿದ್ದಾರೆ. ಇನ್ನೊಂದೆಡೆ ಸಹಕಾರ ವಲಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿವೆ.

ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 12 ಸಹಕಾರಿ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ ಎಂದು ವಿಧಾನಸಭೆ ಅಧಿವೇಶನದಲ್ಲಿ ಸಹಕಾರ ಇಲಾಖೆ ಸಚಿವರು ಮಾಹಿತಿ ನೀಡಿದ್ದರು.

ರೈತರು ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ದೀರ್ಘಾವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡುವ ಮೂಲಕ ಪುನಶ್ಚೇತನಗೊಳಿಸುವ ನೀತಿಯನ್ನು ಸರ್ಕಾರ ರೂಪಿಸಿದೆ. ಈ ನೀತಿ ಅನ್ವಯ ರಾಜ್ಯದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಸಹಕಾರಿ ಕ್ಷೇತ್ರದ 10 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲಾಗಿದೆ.

ಗುತ್ತಿಗೆಗೆ ನೀಡಿರುವ ಕಾರ್ಖಾನೆಗಳು

- ಹಾವೇರಿ ಜಿಲ್ಲೆಯ ಸಂಗೂರಿನ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ.
- ಬೆಳಗಾವಿ ಜಿಲ್ಲೆಯ ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆ.
- ಬೆಳಗಾವಿ ಜಿಲ್ಲೆಯ ಖಾನಾಪುರದ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ.
- ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಭೂಸನೂರು ಸಹಕಾರಿ ಕಾರ್ಖಾನೆ.
- ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀನಿವಾಸಪುರದ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ.
- ಬೆಳಗಾವಿ ಜಿಲ್ಲೆಯ ರಾಮದುರ್ಗದ ಧನಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ.
- ಗದಗ ಜಿಲ್ಲೆಯ ಮುಂಡರಗಿಯ ಮೃಡಗಿರಿಯ ಸಹಕಾರಿ ಸಕ್ಕರೆ ಕಾರ್ಖಾನೆ.
- ಮಂಡ್ಯದ ಪಾಂಡವಪುರದ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ.
- ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಚುಂಚನಕಟ್ಟೆಯ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ.
- ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ರನ್ನ ನಗರದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 15-3-2001

- **ಸೋಮಶೇಖರ್‌ಗೆ ಪುಟ್ಟಣ್ಣ, ಲೀಲಾವತಿಗೆ ರಾಜ್ ಪ್ರಶಸ್ತಿ**

ಬೆಂಗಳೂರು, ಮಾರ್ಚ್ 15– ಚಲನಚಿತ್ರ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಗಾಗಿ (1999–2000ನೇ ಸಾಲಿಗೆ) ನೀಡುವ ಪ್ರತಿಷ್ಠಿತ ಪ್ರಶಸ್ತಿಗಳಾದ ಪುಟ್ಟಣ್ಣ ಕಣಗಾಲ್, ಡಾ. ರಾಜ್‌ಕುಮಾರ್ ಪ್ರಶಸ್ತಿಗೆ ಕ್ರಮವಾಗಿ ಖ್ಯಾತ ನಿರ್ದೇಶಕ ವಿ. ಸೋಮಶೇಖರ್ ಹಾಗೂ ಹಿರಿಯ ನಟಿ ಎಂ. ಲೀಲಾವತಿ ಅವರನ್ನು ಆಯ್ಕೆ ಮಾಡಲಾಗಿದೆ. ಈ ಸಾಲಿನ ಅತ್ಯುತ್ತಮ ಪ್ರಥಮ ಚಿತ್ರವಾಗಿ ಕವಿತಾ ಲಂಕೇಶ್ ನಿರ್ದೇಶನದ 'ದೇವೀರಿ', ದ್ವಿತೀಯ ಚಿತ್ರ ಗಿರೀಶ್ ಕಾರ್ನಾಡ್ ನಿರ್ದೇಶನದ 'ಕಾನೂರು ಹೆಗ್ಗಡತಿ' ಹಾಗೂ ಮೂರನೇ ಚಿತ್ರ ಸೀತಾರಾಮ ಕಾರಂತ್ ನಿರ್ದೇಶನದ 'ಚಂದ್ರಮುಖಿ ಪ್ರಾಣಸಖಿ' ಚಿತ್ರಗಳನ್ನು ಆಯ್ಕೆ ಮಾಡಲಾಗಿದೆ.

75 ವರ್ಷಗಳ ಹಿಂದೆ

ಗುರುವಾರ, 15-3-1951

- **'ಆಯವ್ಯಯಕ್ಕೆ ಸರ್ಕಾರ ಬದ್ಧ'ವೆಂದ ನೆಹರೂ**

ನವದೆಹಲಿ, ಮಾರ್ಚ್ 15– 1951–52ರ ಆಯವ್ಯಯ ಪಟ್ಟಿಯು ಭಾರತದ ಭವಿಷ್ಯದ ಆರ್ಥಿಕ ಭದ್ರತೆಗೆ ಸುಭದ್ರ ತಳಹದಿಯೆಂದು ಶ್ರೀ ದೇಶಮುಖ್‌ರ ವಾದಕ್ಕೆ ಈ ದಿನ ನೆಹರೂ ಅವರು ಪೂರ್ಣ ಬೆಂಬಲವಿತ್ತರು.

ಪಾರ್ಲಿಮೆಂಟಿನಲ್ಲಿ ಇಂದಿನ ಬಜೆಟ್ ಚರ್ಚೆಯಲ್ಲಿ ಮಧ್ಯಪ್ರವೇಶಿಸಿದ ಪಂಡಿತ ನೆಹರೂರವರು, ತೆರಿಗೆಯ ಸಲಹೆಗಳನ್ನು ಸಮರ್ಥಿಸುತ್ತಾ, 'ನಾಳೆಗೆ ನಾವು ಸುಭದ್ರ ಅಸ್ತಿವಾರ ಹಾಕಬೇಕು. ಇಂದು ಕೊಂಚ ಕಷ್ಟವಾದರೂ ಚಿಂತೆಯಿಲ್ಲ' ಎಂದು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

15 ಮಾರ್ಚ್ 2026 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಏಕಾದಶಿ ಗಂ 9-17, **ನಕ್ಷತ್ರ:** ಶ್ರವಣ ಗಂ. 29-56, **ಯೋಗ:** ಪರಿಘ ಗಂ. 10-26, **ಕರಣ:** ಬಾಲವ ಗಂ 9-17 ಮೀನ ಮಾಸದ 01 ನೇ ದಿನ. **ಮಳೆ ನಕ್ಷತ್ರ:** ಪೂರ್ವಾಭಾದ್ರ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ:** 06-42 **ಸೂರ್ಯಾಸ್ತ:** 06-37, **ಮುಸ್ಲಿಂ ದಿನಾಂಕ:** 25 ರಂಜಾನ್, **ದಿನ ವಿಶೇಷ:** ಪಾಪಮೋಚಿನಿ ಏಕಾದಶಿ, **ಅದೃಷ್ಟ ಸಂಖ್ಯೆ:** 4, 11

ಮೇಷ: ಸಣ್ಣ ಸಣ್ಣ ಕಾರಣಗಳಿಗೆ ಅಥವಾ ಕಾರಣಗಳೇ ಇಲ್ಲದೇ ಅಕ್ಕ-ತಂಗಿಯರಲ್ಲಿ ಕಲಹ ಉಂಟಾಗಬಹುದು. ಹೂಡಿಕೆ ಅಥವಾ ಆಸ್ತಿ ಕೊಳ್ಳುವ ವಿಚಾರವನ್ನು ಮಡದಿಯೊಂದಿಗೆ ಪ್ರಸ್ತಾಪಿಸುವುದು ಫಲಕಾರಿ.

ವೃಷಭ: ವೈದ್ಯಕೀಯ ವೆಚ್ಚವನ್ನು ಸಂಸ್ಥೆಯಿಂದ ಪಡೆದುಕೊಳ್ಳುವಂತಾಗುವುದು. ಕೃಷಿಕರು, ವ್ಯಾಪಾರಸ್ಥರು ದಲ್ಲಾಳಿಗಳಿಂದ ಮೋಸ ಹೋಗುವ ಸ್ಥಿತಿ ಬರುವುದು ಎಚ್ಚರ. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಲಾಭವಿರುವುದು.

ಮಿಥುನ: ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವ ಮನಃಸ್ಥಿತಿಯನ್ನು ಬೆಳಸಿಕೊಳ್ಳಿ. ಹೃದಯಕ್ಕೆ ಸಂಬಂಧಪಟ್ಟಂತಹ ಸಮಸ್ಯೆಗಳು ಬಾಧಿಸಬಹುದು ಆದ್ದರಿಂದ ಎಚ್ಚರಿಕೆ ವಹಿಸಿ.

ಕರ್ಕಾಟಕ: ಕುಟುಂಬದಲ್ಲಿನ ವೈಮನಸ್ಸು, ಭಿನ್ನಾಭಿಪ್ರಾಯಗಳು ದೂರಾಗಲಿವೆ. ಪತ್ರಿಕೆಯವರ ಸಹಕಾರದಿಂದ ಬಟ್ಟೆ ವ್ಯಾಪಾರಿಗಳು ರಿಯಾಯಿತಿ ದರದ ವ್ಯಾಪಾರದ ಕುರಿತು ಹೆಚ್ಚಿನ ಪ್ರಚಾರ ಪಡೆಯಬಹುದು.

ಸಿಂಹ: ಇಲೆಕ್ಟ್ರಿಕಲ್ ಕಂಟ್ರಾಕ್ಟರುಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಅದೇ ರೀತಿ ಅಪಾಯದ ಸೂಚನೆಯೂ ಇದೆ. ಇಂದು ಯಾವುದೇ ಕೆಲಸವನ್ನು ಮಾಡಿದರೂ ಆಲೋಚಿಸಿ ಮಾಡುವುದು ಒಳ್ಳೆಯದು.

ಕನ್ಯಾ: ಮಿತ್ರರಲ್ಲಿ ನಿಷ್ಠೆಯ ಸ್ನೇಹವೂ, ಬಂಧುಗಳಲ್ಲಿ ಸಹಕರಿಸುವ ಸಂಬಂಧವನ್ನು ಉಳಿಸಿಕೊಂಡು ಹೋಗುವುದು ಇಹಕ್ಕೂ ಹಾಗೂ ಪರಕ್ಕೂ ಒಳಿತು. ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಬಗ್ಗೆ ಯೋಚಿಸಿ.

ತುಲಾ: ನೀವು ತೋರಿದ ಸಾಮಾಜಿಕ ಕಳಕಳಿಗಾಗಿ ಸಂಘ– ಸಂಸ್ಥೆಗಳವರು ನಿಮ್ಮನ್ನು ಸಮಾಜದ ಆಸ್ತಿ ಎಂದು ಪರಿಗಣಿಸಲಿದ್ದಾರೆ. ನಿಮ್ಮ ಉಸ್ತುವಾರಿಯಲ್ಲಿ ಶುಭ ಕಾರ್ಯವು ನಿರ್ವಿಘ್ನವಾಗಿ ನಡೆಯುವುದು.

ವೃಶ್ಚಿಕ: ಬೆಳ್ಳಿ-ಬಂಗಾರದ ಮಾರಾಟಗಾರರಿಗೆ ಬಿಡುವಿಲ್ಲದಂತಹ ವ್ಯಾಪಾರ. ನೀವು ನಿಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಬದಲಾವಣೆ ಉಂಟು ಮಾಡಲಿದ್ದೀರಿ. ಚಿತ್ರಕಲೆ ಮತ್ತು ಸಾಹಿತ್ಯಕಾರರಿಗೆ ಶುಭವಾರ್ತೆ ಬರಲಿದೆ.

ಧನು: ವ್ಯವಹಾರದ ಪ್ರಯುಕ್ತ ಇರುವ ಪ್ರವಾಸವು ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿಯನ್ನೂ, ಅನಿರೀಕ್ಷಿತ ಲಾಭವನ್ನೂ ತಂದು ಕೊಡುವುದು. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಇರುವುದು.

ಮಕರ: ತುಂಬಾ ದಿನಗಳಿಂದ ಬರಬೇಕಿದ್ದ ಹಣ ಇಂದು ನಿಮ್ಮ ಕೈ ಸೇರಲಿದೆ. ಉಳಿತಾಯದ ಹಣವನ್ನು ಸುವ್ಯವಸ್ಥಿತವಾಗಿ ಇರಿಸಲು ಬೇಕಾದ ಮಾರ್ಗವನ್ನು ತಿಳಿದುಕೊಳ್ಳಿ. ಅವಿವಾಹಿತರಿಗೆ ಕಂಕಣ ಭಾಗ್ಯ ಪ್ರಾಪ್ತಿಯಾಗಲಿದೆ.

ಕುಂಭ: ಇನ್ನೊಬ್ಬರಿಗೆ ಮೋಸ ಮಾಡುವ ಮನಃಸ್ಥಿತಿಯನ್ನು ಬಿಟ್ಟು, ಜೀವನ ನಡೆಸಿ. ನಿಮ್ಮ ದುರಾಲೋಚನೆಗಳನ್ನು ಬದಲಿಸಿಕೊಳ್ಳುವ ಸಮಯ ಈ ದಿನವಾಗಿದೆ. ನಿರೀಕ್ಷಿತ ಕಡೆಗಳಿಂದ ಹಣ ಒದಗಿ ಬರುವುದು.

ಮೀನ: ದಿನಸಿ ವರ್ತಕರಿಗೆ ಹೋಟೆಲ್ ಉದ್ಯಮದವರಿಗೆ ವ್ಯಾಪಾರ ಹೆಚ್ಚಿರಲಿದೆ. ಚಾಣಾಕ್ಷತನದ ನಿರ್ಧಾರಗಳು ನಿಮ್ಮನ್ನು ಊರಿನ ಪ್ರಮುಖ ವ್ಯಕ್ತಿಯನ್ನಾಗಿ ಮಾಡಲಿದೆ. ಕಾರ್ಯ ಒಪ್ಪಂದದ ಬಗ್ಗೆ ದೃಢ ನಿರ್ಧಾರ ಮಾಡಿ.

ಪದಬಂಧ 6344

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಪ್ಪದೊಡನಿರುವ ಚರ್ಚೆಯೇ ತರ್ಜುಮೆ (4)
3.ಇದಿನ್ನೂ ಎಳೆ ಮಗು (4)
5.ಹೀಗೆ ಸಂತೈಸು (3)
7.ಅತ್ತೆಯ ಗಂಡ ಇಲ್ಲಿದ್ದಾನೆ (2)
8.ನೆನೆಪಲ್ಲೇ ಇರುವ ಕಾರಣ (2)
10.ಮಗಳು ತೋರಿಸಿರುವ ಬಿದಿರಿನ ಕೋಲು (2)
12.ನಾಯಕನಿಗಾದ ಪೆಟ್ಟು (2)
14.ಕಟ್ಟುವಾಗಿನ ಘೋಷ (3)
16.ಮೃತರಾದವರಿಗೆ ಮಾಡತಕ್ಕ ಅಪರ ಕ್ರಿಯೆ (4)
17.ಓಟನ್ನು ನೀಡುವಿಕೆ (4)

ಮೇಲಿಂದ ಕೆಳಕ್ಕೆ

1.ರಾಜನ ಗೃಹವಿದು (4)
2.ದರಬಾರಿನಲ್ಲಿ ತಿಳಿದ ರೇಟು (2)
3.ಹರಸುವಾಗ ಕಾಣಿಸಿದ ಆಕಳು (2)
4. ಒಳ್ಳೆಯ ಅದೃಷ್ಟವಿದು (3)
6.ಮಿಡಿತದಲ್ಲಿರುವ ಹೀಚು (2)
7. ಆನೆ ನಡೆಸುವಾತ (4)
9.ಈತ ಗುರುತುಳ್ಳವನು (4)
11.ಹೊಸಜೀವನ ಉಲ್ಲಾಪಲ್ಲ ಕಾಣುತ್ತಿದೆ (4)
12.ಹಾಡುಗಾರ ಇಲ್ಲಿದ್ದಾನೆ (3)
13.ನಾಡಾಡಿಯ ಧಮನಿ (2)
14.ಕರ್ತಾರನ ಕೈ (2)
15.ಕತ್ತಲೆ ಇಲ್ಲಿ ಆವರಿಸಿದೆ (2)



6343ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಪ್ರತಿಫಲ 6.ಅಡಾವುಡಿ
7.ಸೆರಗು 9.ನೆಗಡಿ
10.ಜವಾಬುದಾರಿ 11.ಕಮರಿ
12.ಗೆಣಸು 14.ವಾಕ್ಕಲಹ
16.ಪರಾಭವ

ಮೇಲಿಂದ ಕೆಳಕ್ಕೆ:
1.ಸ್ವಪ್ರಶಂಸೆ 2.ಕುಲ 3.ತೈಲ
4.ಗಡಿಬಿಡಿ 8.ಗುಜರಿ 9.ನೆರಿಗೆ
11.ಕಡಿವಾಣ 13.ಸುಪ್ತಾವಸ್ಥೆ
15.ಹತ್ತಿ 16.ಪದ

ಸುಡೊಕು 6728

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4				7		8	
8	9		1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

6727 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಮಮತಾ ಆಡಳಿತ ಅಂತ್ಯಕ್ಕೆ ಕ್ಷಣಗಣನೆ’

ನುಸುಳುಕೋರರ ರಕ್ಷಣೆಗೆ ಎಸ್‌ಐಆರ್‌ಗೆ ವಿರೋಧ • ಪ್ರಧಾನಿ ವಾಗ್ದಾಳಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿನ ಆಡಳಿತಾರೂಢ ಟಿಎಂಸಿ ಪಕ್ಷವು ನುಸುಳುಕೋರರ ತಮ್ಮ ‘ಮತಬ್ಯಾಂಕ್’ ರಕ್ಷಿಸಲು ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆಯನ್ನು (ಎಸ್‌ಐಆರ್) ವಿರೋಧಿಸುತ್ತಿದೆ ಎಂದು ಆರೋಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ಮಮತಾ ಬ್ಯಾನರ್ಜಿ ಸರ್ಕಾರದ ಅಂತ್ಯಕ್ಕೆ ದಿನಗಣನೆ ಆರಂಭವಾಗಿದೆ’ ಎಂದರು.

ಅಕ್ರಮ ವಲಸಿಗರಿಂದ ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಜನಸಂಖ್ಯಾ ಚಿತ್ರಣವೇ ಬದಲಾಗಿದೆ ಎಂದು ಅವರು ದೂರಿದರು.

ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಶನಿವಾರ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿನ ಟಿಎಂಸಿ ನೇತೃತ್ವದ ಸರ್ಕಾರದ ಆಡಳಿತದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

‘ಟಿಎಂಸಿ ಸರ್ಕಾರವು ಬಂಗಾಳದಲ್ಲಿ ಹಿಂದೂಗಳನ್ನು ಉದ್ದೇಶಪೂರ್ವಕವಾಗಿ ಅಲ್ಪಸಂಖ್ಯಾತರನ್ನಾಗಿ ಮಾಡುತ್ತಿದೆ. ಕಿರುಕುಳಕ್ಕೆ ಒಳಗಾದ ಹಿಂದೂ ನಿರಾಶ್ರಿತರಿಗೆ ಪೌರತ್ವ ನೀಡಲು ನಿರಾಕರಿಸುತ್ತಿದೆ’ ಎಂದು ಮೋದಿ ಆರೋಪಿಸಿದರು.

ಎಸ್‌ಐಆರ್ ಪ್ರಕ್ರಿಯೆಯು ಅಕ್ರಮ ಮತದಾರರ ಹೆಸರುಗಳನ್ನು ಅಳಿಸುತ್ತದೆ ಮತ್ತು ಮತದಾರರ ಪಟ್ಟಿಯನ್ನು ಶುದ್ಧೀಕರಿಸುತ್ತದೆ. ಆದರೆ, ಅದು ಆಗುವುದು ಟಿಎಂಸಿಗೆ ಬೇಕಿಲ್ಲ. ಅಲ್ಲದೆ ಅವರಿಗೆ, ಮೃತರ ಹೆಸರುಗಳನ್ನು ಅಳಿಸುವುದೂ ಬೇಕಿಲ್ಲ ಎಂದು ದೂರಿದರು.

ಎಸ್‌ಐಆರ್ ವಿಚಾರದಲ್ಲಿ ಟಿಎಂಸಿ ಚುನಾವಣಾ ಆಯೋಗ ಸೇರಿದಂತೆ ಸಾಂವಿಧಾನಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡಿರುವುದು ನಾಚಿಕೆಗೇಡಿನ ಸಂಗತಿ ಎಂದ ಅವರು, ಆಡಳಿತ ಪಕ್ಷವು ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದೆ ಎಂದರು.

ಟಿಎಂಸಿ ಸರ್ಕಾರಕ್ಕೆ ಅಪರಾಧಿಗಳ ಬೆಂಬಲ: ‘ಟಿಎಂಸಿ ಆಡಳಿತವು ಗೂಂಡಾಗಳು ಮತ್ತು ಅಪರಾಧಿಗಳ ಬೆಂಬಲದ ಮೇಲೆ ನಡೆಯುತ್ತಿದೆ. ಸುಲಿಗೆ, ಕಮೀಷನ್ ವಸೂಲಿ ಮಾಡುವುದು ಈ ಸರ್ಕಾರದ ಆದಾಯದ ಮೂಲಗಳಾಗಿವೆ. ಇಂತಹ ಗ್ಯಾಂಗ್‌ಗಳನ್ನು ಬಲಪಡಿಸುವುದಕ್ಕೆ ನುಸುಳುಕೋರರನ್ನು ಕರೆತರಲಾಗುತ್ತಿದೆ. ಇವರಿಂದ ಬಂಗಾಳದ ಜನರ ಅನ್ನ, ಹೆಣ್ಣು ಮಕ್ಕಳು ಮತ್ತು ಜಮೀನಿಗೆ ಬೆದರಿಕೆಯಿದೆ’ ಎಂದು ಪ್ರಧಾನಿ ಆರೋಪ ಮಾಡಿದರು.

‘ಟಿಎಂಸಿಯ ಈ ಗೂಂಡಾಗಿರಿ ದಿನಗಳು ಕೊನೆಗೊಳ್ಳಲು ದಿನಗಣನೆ ಆರಂಭವಾಗಿದೆ ಎಂಬುದನ್ನು ಟಿಎಂಸಿಗೆ ಹೇಳಲು ಬಯಸುತ್ತೇನೆ’ ಎಂದು ಮೋದಿ ಹೇಳಿದರು.

ರಾಜಕೀಯ ಬದಲಾವಣೆಗೆ ಒತ್ತಾಯ: ‘ಟಿಎಂಸಿಗೆ ಮತ ಹಾಕದವರು ಬಂಗಾಳಿಗಳಲ್ಲ, ಅವರಿಗೆ ಸರ್ಕಾರಿ ಸವಲತ್ತು ಸಿಗುವುದಿಲ್ಲ ಎಂದು ಟಿಎಂಸಿ ನಾಯಕರು ರಾಜ್ಯದ ಜನರನ್ನು ಬೆದರಿಸುತ್ತಿದ್ದಾರೆ’ ಎಂದ ಪ್ರಧಾನಿ, ‘ರಾಜ್ಯದ ಭವಿಷ್ಯಕ್ಕಾಗಿ ನಡೆಯುವ ನಿರ್ಣಾಯಕ ಯುದ್ಧದಲ್ಲಿ (ವಿಧಾನಸಭಾ ಚುನಾವಣೆ) ರಾಜಕೀಯ ಬದಲಾವಣೆ ತನ್ನಿ’ ಎಂದು ಜನರನ್ನು ಒತ್ತಾಯಿಸಿದರು.

ಬಂಗಾಳದ ಆತ್ಮ ರಕ್ಷಿಸುವ ಚುನಾವಣೆ: ಮುಂಬರುವ ಚುನಾವಣೆಯು ಕೇವಲ ಸರ್ಕಾರವನ್ನು ಬದಲಿಸುವುದಷ್ಟೇ ಅಲ್ಲ, ಬಂಗಾಳದ ಆತ್ಮವನ್ನು ರಕ್ಷಿಸುವ ಚುನಾವಣೆ ಆಗಿದೆ. ಅಲ್ಲದೆ, ಭಯದಿಂದ ಸ್ವಾತಂತ್ರ್ಯದೆಡೆಗೆ ಸಾಗುವ ಚುನಾವಣೆಯಾಗಿದೆ ಎಂದು ಬಣ್ಣಿಸಿದರು.

ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಕೋಲ್ಕತ್ತದಲ್ಲಿ ಶನಿವಾರ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಶ್ಚಿಮ ಬಂಗಾಳ ವಿಧಾನಸಭೆಯ ವಿಪಕ್ಷದ ನಾಯಕ ಸುವೆಂದು ಅಧಿಕಾರಿ ಅವರು ಸ್ಮರಣಿಕೆ ನೀಡಿ ಗೌರವಿಸಿದರು —ಪಿಟಿಐ ಚಿತ್ರ

ರಾಷ್ಟ್ರಪತಿಗೆ ಅವಮಾನ: ಮೋದಿ ಖಂಡನೆ

ರಾಷ್ಟ್ರಪತಿ ಅವರು ಪಶ್ಚಿಮ ಬಂಗಾಳಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ವೇಳೆ ಉಂಟಾಗಿದ್ದ ಶಿಷ್ಟಾಚಾರ ಉಲ್ಲಂಘನೆ ಕುರಿತು ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ಆಡಳಿತಾರೂಢ ಟಿಎಂಸಿಯು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಅವಮಾನಿಸುವ ಮೂಲಕ ಎಲ್ಲಾ ಮಿತಿಗಳನ್ನು ದಾಟಿದೆ’ ಎಂದು ಆರೋಪಿಸಿದರು.

‘ಆದಿವಾಸಿ ಸಮುದಾಯದ ಮಗಳು ಅತ್ಯುನ್ನತ ಸ್ಥಾನ ಅಲಂಕರಿಸಿರುವುದು ಟಿಎಂಸಿಗೆ ಸಹಿಸಲು ಆಗುತ್ತಿಲ್ಲ’ ಎಂದ ಅವರು, ‘ಸಂವಿಧಾನ ಮತ್ತು ಬಿ.ಆರ್. ಅಂಬೇಡ್ಕರ್ ಅವರಿಗೆ ಟಿಎಂಸಿ ಮಾಡಿದ ಅಪಮಾನವನ್ನು ಪಶ್ಚಿಮ ಬಂಗಾಳದ ಜನರು ಸಹಿಸುವುದಿಲ್ಲ. ಅದಕ್ಕೆ ತಕ್ಕ ಪಾಠ ಕಲಿಸುತ್ತಾರೆ’ ಎಂದರು.

ಸಂತಾಲ್ ಬುಡಕಟ್ಟು ಉತ್ಸವದಲ್ಲಿ ಭಾಗವಹಿಸಲು ರಾಷ್ಟ್ರಪತಿಯವರು ರಾಜ್ಯಕ್ಕೆ ಬಂದಿದ್ದ ವೇಳೆ ರಾಜ್ಯ ಸರ್ಕಾರ ಈ ಕಾರ್ಯಕ್ರಮವನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದು ಪ್ರಧಾನಿ ದೂರಿದರು.

ಬಿಜೆಪಿ–ಟಿಎಂಸಿ ಕಾರ್ಯಕರ್ತರ ಘರ್ಷಣೆ

ಪ್ರಧಾನಿ ಅವರ ಸಭೆ ಆರಂಭಕ್ಕೂ ಅರ್ಧ ಗಂಟೆ ಮುನ್ನ ಕೋಲ್ಕತ್ತದ ಮಧ್ಯ ಭಾಗದಲ್ಲಿ ಬಿಜೆಪಿ ಮತ್ತು ಟಿಎಂಸಿ ಬೆಂಬಲಿಗರ ನಡುವೆ ಘರ್ಷಣೆ ನಡೆದಿದ್ದು, ಪೊಲೀಸ್ ಅಧಿಕಾರಿ ಮತ್ತು ಬಿಜೆಪಿ ನಾಯಕರೊಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರ ನಡುವೆಯೇ ಪಶ್ಚಿಮ ಬಂಗಾಳದ ಸಚಿವ ಶಶಿ ಪಂಜಾ ಅವರ ನಿವಾಸದ ಮೇಲೆ ಕಲ್ಲು ತೂರಾಟ ನಡೆದಿದೆ ಎಂಬ ಆರೋಪ ಕೇಳಿಬಂದಿದೆ.

ಬಿಜೆಪಿ ಬೆಂಬಲಿಗರು ಬ್ರಿಗೇಡ್ ಪರೇಡ್ ಮೈದಾನದತ್ತ ಮೆರವಣಿಗೆಯಲ್ಲಿ ಸಾಗುವಾಗ ಈ ಹಿಂಸಾಚಾರ ನಡೆದಿದೆ. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ.

‘ಎರಡೂ ಪಕ್ಷಗಳ ಬೆಂಬಲಿಗರು ಪರಸ್ಪರ ಕಲ್ಲು ತೂರಾಟ ನಡೆಸಿ, ಘೋಷಣೆಗಳನ್ನು ಕೂಗಿದ್ದಾರೆ. ಇದರಿಂದ ಪ್ರದೇಶದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಪ್ರಧಾನಿಯಿಂದ ತಪ್ಪು ಸಂಕಥನ ಟಿಎಂಸಿ ಆರೋಪ

ಕೋಲ್ಕತ್ತ (ಪಿಟಿಐ): ‘ಪಶ್ಚಿಮ ಬಂಗಾಳದ ಬಗ್ಗೆ ತಪ್ಪು ಸಂಕಥನ ಸೃಷ್ಟಿಸುವ ಕಾರ್ಯದಲ್ಲಿ ನಿರತರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಪ್ರಧಾನಿ ಎಂಬುದಕ್ಕಿಂತ ಮಿಗಿಲಾಗಿ ಸುಳ್ಳು ಹೇಳುವ ಬಿಜೆಪಿಯ ನಾಯಕನಂತೆ ವರ್ತಿಸುತ್ತಿದ್ದಾರೆ’ ಎಂದು ಟಿಎಂಸಿ ಶನಿವಾರ ದೂರಿದೆ.

ನುಸುಳುಕೋರರು, ಬಾಂಗ್ಲಾದೇಶಿಗಳು ಮತ್ತು ರೋಹಿಂಗ್ಯಾಗಳ ಬಗ್ಗೆ ಪದೇ ಪದೇ ಆಧಾರರಹಿತ ಹೇಳಿಕೆಗಳನ್ನು ಪ್ರಧಾನಿ ಉಲ್ಲೇಖಿಸುತ್ತಿದ್ದಾರೆ ಎಂದು ಸಚಿವ ಬ್ರಾತ್ಯಾ ಬಸು ಆರೋಪಿಸಿದರು.

‘ಬಿಜೆಪಿಯು ಮತದಾರರ ಧ್ರುವೀಕರಣಕ್ಕೆ ಯತ್ನಿಸುತ್ತಿದೆ. ಚುನಾವಣಾ ಲಾಭಕ್ಕಾಗಿ ಸಮುದಾಯಗಳನ್ನು ಎತ್ತಿಕಟ್ಟುವ ವಿಭಜಕ ಕಾರ್ಯಸೂಚಿಯು ಪ್ರಧಾನಿ ಅವರ ಭಾಷಣದಲ್ಲಿ ಪ್ರತಿಬಿಂಬಿತವಾಗಿದೆ’ ಎಂದು ಅವರು ದೂರಿದರು.

ಬಂಗಾಳದ ಹಲವು ಯೋಜನೆಗಳಿಗೆ ನೀಡಬೇಕಾದ ಸುಮಾರು ₹ 2 ಲಕ್ಷ ಕೋಟಿ ತಡೆಹಿಡಿದಿರುವ ಕೇಂದ್ರ ಸರ್ಕಾರವು ರಾಜ್ಯದ ಅಭಿವೃದ್ಧಿ ಬಗ್ಗೆ ಮಾತನಾಡುತ್ತಿದೆ ಎಂದು ಟಿಎಂಸಿ ಸಂಸದೆ ಸಾಯೋನಿ ಘೋಷ್ ವ್ಯಂಗ್ಯವಾಡಿದರು.

ಜನರಲ್ಲಿ ಕಾಂಗ್ರೆಸ್ ಭೀತಿ ಹುಟ್ಟಿಸುತ್ತಿದೆ: ಪ್ರಧಾನಿ

ಸಿಲ್ಚಾರ್ (ಅಸ್ಸಾಂ) (ಪಿಟಿಐ): ಜಾಗತಿಕ ಸಂಘರ್ಷಗಳಿಂದ ದೇಶದ ಜನರು ಹೆಚ್ಚು ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಳ್ಳಲು ಕೇಂದ್ರ ಸರ್ಕಾರ ನಿರಂತರ ಶ್ರಮಿಸುತ್ತಿದ್ದರೆ, ವಿರೋಧ ಪಕ್ಷವಾದ ಕಾಂಗ್ರೆಸ್ ದೇಶದ ಜನರಲ್ಲಿ ಭೀತಿ ಹುಟ್ಟಿಸುವ ಮೂಲಕ ಮೂಲಕ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಆರೋಪಿಸಿದರು.

ಅಸ್ಸಾಂನ ಸಿಲ್ಚಾರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ₹23,550 ಕೋಟಿ ಮೌಲ್ಯದ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷವು ಈಶಾನ್ಯ ರಾಜ್ಯಗಳ ಅಭಿವೃದ್ಧಿಯನ್ನು ದಶಕಗಳಿಂದ ನಿರ್ಲಕ್ಷಿಸಿದೆ’ ಎಂದು ದೂರಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ:

ಕಾಂಗ್ರೆಸ್ ವಿರುದ್ಧ ವಾಗ್ದಾಳಿ ಮುಂದುವರಿಸಿದ ಅವರು, ‘ಅಸ್ಸಾಂ ಅಥವಾ ದೇಶದ ಅಭಿವೃದ್ಧಿ ಕುರಿತು ಕಾಂಗ್ರೆಸ್ ಬಳಿ ಯಾವುದೇ ದೃಷ್ಟಿಕೋನವಿಲ್ಲ. ಮೋದಿಯನ್ನು ನಿಂದಿಸುವುದು, ಸುಳ್ಳು ಮತ್ತು ವದಂತಿಗಳನ್ನು ಹರಡುವುದು ಮತ್ತು ಜನರನ್ನು ದಾರಿ ತಪ್ಪಿಸುವುದು ಮಾತ್ರ ಅವರಿಗೆ ಗೊತ್ತಿದೆ’ ಎಂದು ಟೀಕಿಸಿದರು.

ಕಳೆದ ತಿಂಗಳು ದೆಹಲಿಯಲ್ಲಿ ನಡೆದ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲೂ ಕಾಂಗ್ರೆಸ್‌ನವರು ಶರ್ಟ್ ಬಿಚ್ಚಿ ಪ್ರತಿಭಟಿಸಿ ದೇಶಕ್ಕೆ ಅಪಖ್ಯಾತಿ ತರಲು ಯತ್ನಿಸಿದರು ಎಂದು ಪ್ರಧಾನಿ ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್‌ನ ಈ ಅಸಭ್ಯ ಪ್ರತಿಭಟನೆಯನ್ನು ಇಡೀ ದೇಶ ಖಂಡಿಸಿದೆ. ಆದರೆ ಕಾಂಗ್ರೆಸ್‌ನ ‘ರಾಜ ಮನೆತನ’ ತನ್ನ ಬೆನ್ನು ತಟ್ಟಿಕೊಳ್ಳುತ್ತಿದೆ. ಕಾಂಗ್ರೆಸ್‌ನವರಿಗೆ ಬಟ್ಟೆ ಹರಿದುಕೊಳ್ಳುವುದನ್ನು ಬಿಟ್ಟು ಬೇರೇನೂ ಬರುವುದಿಲ್ಲ ಎಂದು ಅವರು ದೂರಿದರು.

‘ಹತಾಶರಾಗಿರುವ ಕಾಂಗ್ರೆಸ್ ನಾಯಕರು’: ಒಂದರ ನಂತರ ಒಂದರಂತೆ ಚುನಾವಣೆಗಳನ್ನು ಸೋತಿರುವ ಕಾಂಗ್ರೆಸ್, ಮುಂದಿನ ದಿನಗಳಲ್ಲಿ ಶತಮಾನದ ಹಿನ್ನಡೆ ಕಾಣಲಿದೆ. ಇಷ್ಟೆಲ್ಲ ಸೋಲುಗಳ ಹತಾಶೆಯಿಂದ ಅದರ ನಾಯಕರು ದೇಶವನ್ನೇ ದೂಷಿಸುವಲ್ಲಿ ನಿರತರಾಗಿದ್ದಾರೆ ಎಂದು ಟೀಕಿಸಿದರು.

ಈಶಾನ್ಯ ಭಾಗವನ್ನು ದೇಶದ ಹೃದಯ ಮತ್ತು ದೆಹಲಿ ಎರಡರಿಂದಲೂ ಕಾಂಗ್ರೆಸ್ ದೂರವಿಟ್ಟಿತ್ತು. ಆ ಮೂಲಕ ಅಭಿವೃದ್ಧಿಯು ಈ ಪ್ರದೇಶದ ಜನರನ್ನು ತಲುಪದಂತೆ ನೋಡಿಕೊಂಡಿತ್ತು ಎಂದು ಅವರು ಹೇಳಿದರು.

ಈಶಾನ್ಯದ ಬರಾಕ್ ಕಣಿವೆಯನ್ನೂ ಕಾಂಗ್ರೆಸ್ ದುರ್ಬಲಗೊಳಿಸುವಲ್ಲಿ ಮಹತ್ವದ ಪಾತ್ರವಹಿಸಿತು. ದಶಕಗಳ ಕಾಲ ಈ ಭಾಗದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಈ ಪ್ರದೇಶ ಅಭಿವೃದ್ಧಿ ಹೊಂದಿಲ್ಲ ಏಕೆ ಎಂದು ಅವರು ಪ್ರಶ್ನಿಸಿದರು.

ಬರಾಕ್ ಕಣಿವೆಯನ್ನು ಈಶಾನ್ಯ ಮತ್ತು ಪಶ್ಚಿಮ ಬಂಗಾಳದ ಇತರ ಭಾಗಗಳಿಗೆ ಸಂಪರ್ಕಿಸಲು ಬಿಜೆಪಿ ನೇತೃತ್ವದ ಸರ್ಕಾರ ಶ್ರಮಿಸುತ್ತಿದೆ. ಅಲ್ಲದೆ ಇಲ್ಲಿ ದೊಡ್ಡ ಲಾಜಿಸ್ಟಿಕ್ಸ್ ಮತ್ತು ವ್ಯಾಪಾರ ಕೇಂದ್ರ ಅಭಿವೃದ್ಧಿಪಡಿಸಲಾಗುವುದು ಎಂದರು.

ಮಾಜಿ ಪ್ರಧಾನಿ ದಿವಂಗತ ಮನಮೋಹನ್ ಸಿಂಗ್ ಅವರು 10 ವರ್ಷಗಳಿಗೂ ಹೆಚ್ಚು ಕಾಲ ಅಸ್ಸಾಂ ಅನ್ನು ಪ್ರತಿನಿಧಿಸಿದ್ದರು. ಆದರೆ, ರಾಜ್ಯದ ರೈತರಿಗೆ ಅವರು ಒಂದು ಪೈಸೆಯನ್ನೂ ನೀಡಲಿಲ್ಲ. ಬಿಜೆಪಿ ಅವರಿಗೆ ₹ 20,000 ಕೋಟಿಗಿಂತ ಹೆಚ್ಚು ನೀಡಿದೆ ಎಂದು ಮೋದಿ ಹೇಳಿದರು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಉಪಸ್ಥಿತರಿದ್ದರು.

ಚಿಟಿಕೆ ಸುದ್ದಿ

₹36,000 ಕೋಟಿ ಮೌಲ್ಯದ ಮಾದಕ ವಸ್ತು ನಾಶ

ಶ್ರೀ ವಿಜಯ ಪುರಂ (ಪಿಟಿಐ): ಅಂಡಮಾನ್ ಮತ್ತು ನಿಕೋಬಾರ್ ಪೊಲೀಸರು, 2024ರ ನವೆಂಬರ್ 23ರಂದು ಹಡಗೊಂದರಿಂದ ವಶಪಡಿಸಿಕೊಂಡಿದ್ದ ₹36,000 ಕೋಟಿ ಮೌಲ್ಯದ 6,000 ಕೆ.ಜಿಯಷ್ಟು ಮೆಥಂಫೆಟಮೈನ್ ಮಾದಕವಸ್ತುವನ್ನು, ಒಟ್ಟು 9 ತಿಂಗಳ ಅವಧಿಯಲ್ಲಿ ಹಂತಹಂತವಾಗಿ ನಾಶಪಡಿಸಿದ್ದಾರೆ.

2025ರ ಜೂನ್ 26ರಂದು ಮೆಥಂಫೆಟಮೈನ್ ಅನ್ನು ನಾಶಗೊಳಿಸುವ ಕಾರ್ಯಾಚರಣೆ ಆರಂಭಿಸಲಾಯಿತು. ಅದು 2026ರ ಮಾರ್ಚ್ 12ರಂದು ಮುಕ್ತಾಯಗೊಂಡಿದೆ.

16ಕ್ಕೆ ‘ಸಂಸದರ ಘೇರಾವ್’

ನವದೆಹಲಿ (ಪಿಟಿಐ): ‘ಕೇಂದ್ರ ಸರ್ಕಾರವು ಅಮೆರಿಕದೊಂದಿಗೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದದಿಂದ ಭಾರತಕ್ಕೆ ಕೇಡಾಗಲಿದೆ’ ಎಂದು ಆರೋಪಿಸಿರುವ ಯುವ ಕಾಂಗ್ರೆಸ್, ಮಾರ್ಚ್ 16ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ‘ಸಂಸದರ ಘೇರಾವ್’ ಪ್ರತಿಭಟನೆ ನಡೆಸಲಿದೆ ಎಂದು ಶನಿವಾರ ಘೋಷಿಸಿದೆ.

‘ದೇಶದಾದ್ಯಂತ ಇರುವ ಕಾಂಗ್ರೆಸ್‌ನ ಯುವ ಘಟಕದ ಎಲ್ಲ ಕಾರ್ಯಕರ್ತರು ಬರಲಿದ್ದಾರೆ. ನಮ್ಮ ರಾಷ್ಟ್ರೀಯ ಅಧ್ಯಕ್ಷ ಉದಯ್ ಬಾನು ಚಿಬ್ ಕೂಡ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ಯುವ ಕಾಂಗ್ರೆಸ್ ದೆಹಲಿ ಘಟಕದ ಅಧ್ಯಕ್ಷ ಅಕ್ಷಯ್ ಲಾಖ್ರ ಮಾಧ್ಯಮ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಭಾರತದ ಯುವಕ ರಷ್ಯಾದಲ್ಲಿ ಸಾವು

ಲುಧಿಯಾನ (ಪಿಟಿಐ): ರಷ್ಯಾ ಸೇನೆ ಸೇರಿದ್ದ ಲುಧಿಯಾನದ 21ವರ್ಷದ ಯುವಕ ಸಮರ್‌ಜೀತ್ ಸಿಂಗ್ ಪ್ರಸ್ತುತ ನಡೆಯುತ್ತಿರುವ ರಷ್ಯಾ–ಉಕ್ರೇನ್ ಯುದ್ಧದಲ್ಲಿ ಮೃತಪಟ್ಟಿದ್ದಾರೆ.

‘ಏಜೆನ್ಸಿಯೊಂದು ಉದ್ಯೋಗದ ಆಮಿಷದೊಂದಿಗೆ 2025ರ ಜುಲೈನಲ್ಲಿ ಸಮರ್‌ಜೀತ್ ಅವರನ್ನು ರಷ್ಯಾಕ್ಕೆ ಕರೆಸಿಕೊಂಡಿತ್ತು. ಯಾವುದೇ ಪೂರ್ವ ತರಬೇತಿ ಇಲ್ಲದೇ ಮೋಸದಿಂದ ರಷ್ಯಾ ಸೇನೆಗೆ ಸೇರಿಸಿ, ಬಲವಂತವಾಗಿ ರಷ್ಯಾ–ಉಕ್ರೇನ್ ಯುದ್ಧಕ್ಕೆ ಕಳುಹಿಸಲಾಗಿದೆ’ ಎಂದು ಕುಟುಂಬದವರು ಆರೋಪಿಸಿದ್ದಾರೆ.

ಯುವತಿಗೆ ಎಚ್‌ಐವಿ ಸೋಂಕಿತ ರಕ್ತ ಚುಚ್ಚಿದ ಯುವಕ

ಹೈದರಾಬಾದ್ (ಪಿಟಿಐ): ಮದುವೆ ಮುರಿದು ಬಿದ್ದ ಕಾರಣದಿಂದ ಕೋಪಗೊಂಡ 24 ವರ್ಷದ ಯುವಕನೊಬ್ಬ ತನ್ನೊಂದಿಗೆ ವಿವಾಹ ನಿಶ್ಚಯವಾಗಿದ್ದ 22 ವರ್ಷದ ಯುವತಿಗೆ ಎಚ್‌ಐವಿ ಸೋಂಕಿತ ರಕ್ತ ಚುಚ್ಚಿರುವ ಘಟನೆ ಮಾರ್ಚ್ 11ರಂದು ಇಲ್ಲಿ ನಡೆದಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

‘ಯುವಕನಿಗೆ ಎಚ್‌ಐವಿ ಸೋಂಕು ದೃಢಪಟ್ಟಿದ್ದ ಕಾರಣ, ವಧುವಿನ ಪೋಷಕರು ಮದುವೆಯನ್ನು ರದ್ದು ಮಾಡಿದ್ದರು. ಈ ದ್ವೇಷದಿಂದ ಆರೋಪಿ ಕೃತ್ಯ ಎಸಗಿದ್ದಾನೆ ಎಂದು ಯುವತಿ ಪೋಷಕರು ದೂರು ನೀಡಿದ್ದಾರೆ.

‘ರಾಜಕೀಯ: ಒಬಿಸಿಗಳಿಗೆ ಸಿಗದ ಪ್ರಾತಿನಿಧ್ಯ’

ತಿರುವನಂತಪುರಂ, ಕೇರಳ (ಪಿಟಿಐ): ‘ರಾಜಕೀಯ ಪಕ್ಷಗಳು ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೂಕ್ತ ಪ್ರಾತಿನಿಧ್ಯ ನೀಡಲು ನಿರಾಕರಿಸುತ್ತಿವೆ’ ಎಂದು ಸಮಾಜ ಸುಧಾರಕ ಶ್ರೀ ನಾರಾಯಣ ಗುರು ಅವರು ಸ್ಥಾಪಿಸಿದ ಶಿವಗಿರಿ ಮಠದ ಮುಖ್ಯಸ್ಥ ಸ್ವಾಮಿ ಸಚ್ಚಿದಾನಂದ ಹೇಳಿದ್ದಾರೆ.



ಸ್ವಾಮಿ ಸಚ್ಚಿದಾನಂದ

ಕಂಪನಿ ಕಾಯ್ದೆ ಅಡಿಯಲ್ಲಿ ಶಾಸನಬದ್ಧ ಅವಶ್ಯಕತೆಗಳನ್ನು ಪಾಲಿಸದ ಕಾರಣಕ್ಕಾಗಿ ಎಸ್‌ಎನ್‌ಡಿಪಿ ಪ್ರಧಾನ ಕಾರ್ಯದರ್ಶಿ ವೆಳ್ಳಾಪ್ಪಳ್ಳಿ ನಟೇಶನ್ ಸೇರಿದಂತೆ, ಎಲ್ಲ ಪದಾಧಿಕಾರಿಗಳು ಹಾಗೂ ನಿರ್ದೇಶಕರನ್ನು ಅನರ್ಹಗೊಳಿಸಿದ ಕೇರಳ ಹೈಕೋರ್ಟ್ ತೀರ್ಪನ್ನು ಈ ವೇಳೆ ಸ್ವಾಗತಿಸಿದ್ದಾರೆ.

ಕೇರಳದ ವರ್ಕಳದಲ್ಲಿರುವ ಶಿವಗಿರಿ ಮಠವು ಈಳವ ಸಮುದಾಯದ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದು, ಹಿಂದುಳಿದ ವರ್ಗದ ಸಮುದಾಯಗಳಲ್ಲಿ ಪ್ರಾಬಲ್ಯ ಹೊಂದಿದೆ.

ಮುಂದಿನ ತಿಂಗಳು ಕೇರಳ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಈ ಸಂದರ್ಭದಲ್ಲಿಯೇ ಸ್ವಾಮೀಜಿಯವರ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಶ್ರೀ ನಾರಾಯಣ ಧರ್ಮ ಸಂಘ ಟ್ರಸ್ಟ್‌ನ ಅಧ್ಯಕ್ಷರೂ ಆಗಿರುವ ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ವಿಷಯ ತಿಳಿಸಿದ್ದಾರೆ.

‘ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ದೊರಕುತ್ತಿಲ್ಲ ಎಂದು ಹಲವರು ನನ್ನ ಬಳಿ ದೂರು ಹೇಳಿದ್ದಾರೆ. ಹೀಗಾಗಿ, ಈ ವಿಚಾರದಲ್ಲಿ ಮಧ್ಯಪ್ರವೇಶಿಸಲು ಮಠವು ನಿರ್ಧರಿಸಿದೆ’ ಎಂದರು.

‘ಶ್ರೀ ನಾರಾಯಣ ಸಮುದಾಯದಿಂದ ಕೇರಳದಲ್ಲಿ ಒಬ್ಬರೇ ಶಾಸಕರಿದ್ದಾರೆ. ಕೇರಳದಲ್ಲಿ ಮೊದಲ ಕಾಂಗ್ರೆಸ್ ಸರ್ಕಾರವು ಆಡಳಿತಕ್ಕೆ ಬಂದ ಸಂದರ್ಭದಲ್ಲಿ ಈಳವ ಸಮುದಾಯದ ಆರ್.ಶಂಕರ್ ಅವರು ಮುಖ್ಯಮಂತ್ರಿಯಾಗಿದ್ದರು’ ಎಂದು ವಿವರಿಸಿದ್ದಾರೆ.

‘ಕಾಂಗ್ರೆಸ್ ಪಕ್ಷ ಮಾತ್ರವಲ್ಲದೇ, ಎಲ್ಲಾ ರಾಜಕೀಯ ಪಕ್ಷಗಳು ಸಮುದಾಯಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಲು ವಿಫಲವಾಗಿವೆ’ ಎಂದು ಹೇಳಿದ್ದಾರೆ.

‘ಕೆ.ಕರುಣಾಕರನ್ ಅವರಿಂದ ಆರಂಭವಾಗಿ ಎ.ಕೆ. ಆ್ಯಂಟನಿ ಅವರು ಇರುವವರೆಗೂ ಎಲ್ಲ ಸಮುದಾಯಗಳಿಗೂ ಸೂಕ್ತ ಪ್ರಾತಿನಿಧ್ಯ ನೀಡಲಾಗುತ್ತಿತ್ತು. ಆದಾದ ಬಳಿಕ ಗೆಲ್ಲಬಹುದಾದ ಕ್ಷೇತ್ರಗಳಲ್ಲಿ ಕೂಡ ಹಿಂದುಳಿದ ಸಮುದಾಯಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಲಿಲ್ಲ’ ಎಂದು ದೂರಿದ್ದಾರೆ.

‘ಕೇರಳದಲ್ಲಿ ಈಳವ, ಧೀವರ, ವಿಶ್ವಕರ್ಮ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳವರೇ ಬಹುಸಂಖ್ಯಾತರಿದ್ದಾರೆ. ಈ ಸಮುದಾಯಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಸಿಪಿಎಂ ನಾಯಕರಿಗೆ ಮನವಿ ಮಾಡಲಾಗಿದೆ’ ಎಂದು ಅವರು ಹೇಳಿದ್ದಾರೆ.

ಸ್ವಾಮೀಜಿ ಹೇಳಿದ್ದೇನು?

- ಸೂಕ್ತ ಪ್ರಾತಿನಿಧ್ಯ ಸಿಗುವವರೆಗೂ ಧ್ವನಿ ಎತ್ತಲಿದ್ದೇವೆ
- ಹಿಂದುಳಿದ ವರ್ಗಗಳ ಜನರಿಗೆ ಆರ್ಥಿಕ ಮೀಸಲಾತಿ ಅಗತ್ಯ
- ಎಸ್‌ಎನ್‌ಡಿಪಿ ತನ್ನ ಹಿಂದಿನ ಸಾಧನೆಗಳಿಂದ ಹಿಂದೆ ಸರಿದಿದೆ
- ಸುಧಾರಣಾ ಚಳವಳಿಗೆ ಉತ್ತಮ ಆಡಳಿತ ಮಂಡಳಿ ಅಗತ್ಯವಾಗಿದೆ

ಎಲ್‌ಪಿಜಿ ಬಿಕ್ಕಟ್ಟು...

ಪಿಟಿಐ ಚಿತ್ರ

ಎಲ್‌ಪಿಜಿ ಬಿಕ್ಕಟ್ಟು ಖಂಡಿಸಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಕೇರಳದ ತಿರುವನಂತಪುರದಲ್ಲಿ ರಸ್ತೆಯಲ್ಲಿ ಅಡುಗೆ ಮಾಡಿ ಪ್ರತಿಭಟನೆ ನಡೆಸಿದರು

ಇಂಡಕ್ಷನ್ ಸ್ಟವ್ : ವಿದ್ಯುತ್ ವಿನಾಯಿತಿ

ಚೆನ್ನೈ: ಎಲ್‌ಪಿಜಿ ಸಿಲಿಂಡರ್ ಬದಲು ಇಂಡಕ್ಷನ್ ಸ್ಟವ್‌ಗೆ ಬದಲಾಗುವ ರೆಸ್ಟೋರೆಂಟ್‌ಗಳು, ಚಹಾ ಅಂಗಡಿಗಳು, ಆಹಾರ ಪೂರೈಕೆದಾರರು ಮತ್ತು ಆಹಾರ ತಯಾರಿಕಾ ಘಟಕಗಳಿಗೆ ತಮಿಳುನಾಡು ಸರ್ಕಾರ ವಿದ್ಯುತ್ ಬಿಲ್‌ನಲ್ಲಿ ರಿಯಾಯಿತಿ ಘೋಷಿಸಿದೆ.

ಇಂಡಕ್ಷನ್ ಸ್ಟವ್ ಬಳಕೆಗೆ ತಗಲುವ ಹೆಚ್ಚುವರಿ ವಿದ್ಯುತ್‌ನ ಪ್ರತಿ ಯುನಿಟ್‌ಗೆ ₹ 2 ರಿಯಾಯಿತಿ ನೀಡಲು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ವಿನಾಯಿತಿ ತಕ್ಷಣದಿಂದ ಜಾರಿಗೆ ಬರಲಿದೆ.

ವಾಣಿಜ್ಯ ಸಿಲಿಂಡರ್ ಬಳಕೆ ಮೇಲೆ ಕೇಂದ್ರ ಸರ್ಕಾರ ವಿಧಿಸಿರುವ ನಿರ್ಬಂಧ ತೆರವಾಗುವವರೆಗೂ ಈ ಸೌಲಭ್ಯ ಸಿಗಲಿದೆ ಎಂದು ಶನಿವಾರ ನಡೆದ ಸಭೆಯ ನಂತರ ಸ್ಟಾಲಿನ್ ಅವರು ತಿಳಿಸಿದ್ದಾರೆ.

ಕಾಶಿ ದೇವಸ್ಥಾನದ ಅಡುಗೆ ಮನೆಗೆ ಬೀಗ

ಲಖನೌ/ವಾರಾಣಸಿ (ಪಿಟಿಐ): ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದ ಕಾಶಿಯ ಮಾತೆ ಅನ್ನಪೂರ್ಣಾದೇವಿ ದೇವಸ್ಥಾನದ ಅಡುಗೆ ಮನೆಯ ಬಾಗಿಲು ಹಾಕಲಾಗಿದೆ.

‘ಮೋದೀಜಿ, ಕಾಶಿಯ ಶತಮಾನಗಳಷ್ಟು ಹಳೆಯದಾದ ಅನ್ನದಾನ ಸಂಪ್ರದಾಯದ ಮೇಲೆ ಯಾವ ರೀತಿಯ ಹೊಡೆತ ಇದು’ ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ಮುಖಂಡ ಅಜಯ್ ರಾಯ್ ಪ್ರಶ್ನಿಸಿದ್ದಾರೆ.

‘ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದ ಶನಿವಾರದಿಂದ ಅನ್ನಪೂರ್ಣಾದೇವಿಯ ದೇವಸ್ಥಾನದ ಅಡುಗೆ ಮನೆಯ ಬಾಗಿಲು ಮುಚ್ಚಲಾಗಿದೆ. ಸದಾ ತೆರೆದಿರುತ್ತಿದ್ದ, ಅಪಾರ ಸಂಖ್ಯೆಯ ಜನರ ಹಸಿವು ನೀಗಿಸುತ್ತಿದ್ದ ಈ ತಾಣಕ್ಕೆ ಬಂದವರು ಈಗ ಆಹಾರವಿಲ್ಲದೆ ಮರಳುತ್ತಿದ್ದಾರೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಇದು ಆಡಳಿತಾತ್ಮಕ ವೈಫಲ್ಯವಲ್ಲ, ಇದು ಮಹಾದೇವನ ಪವಿತ್ರ ನಗರದ ನಂಬಿಕೆಯ ಮೇಲಿನ ದಾಳಿಯಾಗಿದೆ. ನಿಮ್ಮ ಸ್ವಂತ ಸಂಸದೀಯ ಕ್ಷೇತ್ರದ ಪರಿಸ್ಥಿತಿ ಹೀಗಿದೆ. ಕೂಡಲೇ ದೇಶವ್ಯಾಪಿ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿನ ಸಮಸ್ಯೆಯನ್ನು ಸರಿಪಡಿಸಬೇಕು’ ಎಂದು ಅವರು ಪ್ರಧಾನಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಸ್ವಹಿತಕ್ಕಾಗಿ ಕೃಷಿ ಕ್ಷೇತ್ರದ ಬಲಿ: ರಾಹುಲ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ರೈತರಿಗೆ ನೀಡಿದ ಭರವಸೆಗಳನ್ನು ಈಡೇರಿಸದೇ, ತನ್ನ ಸ್ವಾರ್ಥಕ್ಕಾಗಿ ದೇಶದ ಕೃಷಿ ಕ್ಷೇತ್ರವನ್ನು ಬಲಿಕೊಡಲು ಸಿದ್ಧವಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ಆರೋಪಿಸಿದ್ದಾರೆ.

ರಾಹುಲ್ ಗಾಂಧಿ

ರಾಹುಲ್ ಗಾಂಧಿ ಅವರು ಇತ್ತೀಚೆಗೆ ಲೋಕಸಭೆಯ ಅಧಿವೇಶನದಲ್ಲಿ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡುವ ಕುರಿತು ಪ್ರಸ್ತಾಪಿಸಿ, ‘ಅಮೆರಿಕದ ಜೊತೆಗೆ ಮಾಡಿಕೊಂಡಿರುವ ಒಪ್ಪಂದಿಂದ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಎಂಎಸ್‌ಪಿ ನೀತಿಯಲ್ಲಿ ಬದಲಾವಣೆ ಆಗಲಿದೆಯೆ’ ಎಂದು ಪ್ರಶ್ನಿಸಿದ್ದರು. ಅದನ್ನು ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

‘ಸರ್ಕಾರ, 2021ರಲ್ಲಿ ರೈತರಿಗೆ ಶಾಸನಬದ್ಧ ಎಂಎಸ್‌ಪಿ ನೀಡುವುದಾಗಿ ಹೇಳಿತ್ತು. ಆ ಭರವಸೆಯನ್ನು ಇನ್ನೂ ಏಕೆ ಜಾರಿಗೆ ತರಲಾಗಿಲ್ಲ?’ ಎಂದು ಲೋಕಸಭೆ ಯಲ್ಲಿ ಸರ್ಕಾರಕ್ಕೆ ನೇರ ಪ್ರಶ್ನೆಯನ್ನು ಕೇಳಿದ್ದೆ’ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

‘ನನ್ನ ಪ್ರಶ್ನೆಗೆ ನೇರವಾಗಿ ಪ್ರತಿಕ್ರಿಯಿಸುವುದರಿಂದ ತಪ್ಪಿಸಿಕೊಂಡ ಸರ್ಕಾರ, ಈಗ ಅಸ್ತಿತ್ವದಲ್ಲಿರುವ ಎಂಎಸ್‌ಪಿ ನೀತಿಯನ್ನು ಪುನರುಚ್ಚರಿಸಿತು. ರಾಷ್ಟ್ರೀಯ ಆದ್ಯತೆಗಳ ಹೆಸರಿನಲ್ಲಿ ಯಾವುದೇ ತಾರ್ಕಿಕ ಆಧಾರವಿಲ್ಲದೆ ಎಂಎಸ್‌ಪಿ ಬೋನಸ್‌ಗಳನ್ನು ನಿಲ್ಲಿಸುವಂತೆ ರಾಜ್ಯಗಳ ಮೇಲೆ ಒತ್ತಡ ಹೇರಿರುವುದನ್ನೂ ಒಪ್ಪಿಕೊಂಡಿದೆ’ ಎಂದು ಅವರು ವಿವರಿಸಿದ್ದಾರೆ.

ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದವು ‘ವ್ಯಾಪಾರೇತರ ಅಡೆತಡೆಗಳನ್ನು ಕಡಿಮೆ ಮಾಡುವ ಬಗ್ಗೆ ಮಾತನಾಡುತ್ತದೆಯೇ’ ಎಂಬ ಮತ್ತೊಂದು ನಿರ್ಣಾಯಕ ಪ್ರಶ್ನೆಯನ್ನು ಕೇಳಿದ್ದಾಗಿ ರಾಹುಲ್ ಹೇಳಿಕೊಂಡಿದ್ದಾರೆ. ‘ಇದು ಎಂಎಸ್‌ಪಿಯನ್ನು ದುರ್ಬಲಗೊಳಿಸಿ, ಕೃಷಿ ಉತ್ಪನ್ನಗಳ ಸಾರ್ವಜನಿಕ ಸಂಗ್ರಹಣೆಯನ್ನು ವಿಫಲಗೊಳಿಸುವ ಉದ್ದೇಶ ಹೊಂದಿದೆಯೆ’ ಎಂದು ಅವರು ಪ್ರಶ್ನಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

2ನೇ ದಿನವೂ ಜಯ್ ಅನ್ಮೋಲ್ ಅಂಬಾನಿ ವಿಚಾರಣೆ

ನವದೆಹಲಿ (ಪಿಟಿಐ): ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ನಡೆದ ₹228 ಕೋಟಿ ವಂಚನೆ ಪ್ರಕರಣ ಸಂಬಂಧ ಉದ್ಯಮಿ ಅನಿಲ್ ಅಂಬಾನಿ ಅವರ ಪುತ್ರ ಜಯ್ ಅನ್ಮೋಲ್ ಅಂಬಾನಿ ಅವರನ್ನು ಸಿಬಿಐ ಅಧಿಕಾರಿಗಳು ಸತತ ಎರಡನೇ ದಿನವಾದ ಶನಿವಾರ ಐದು ಗಂಟೆ ವಿಚಾರಣೆ ನಡೆಸಿದ್ದಾರೆ.

ಜಯ್ ಅನ್ಮೋಲ್

‘ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್‌ನ (ಆರ್‌ಎಚ್‌ಎಫ್‌ಎಲ್) ಮಾಜಿ ನಿರ್ದೇಶಕ ಜಯ್ ಅನ್ಮೋಲ್ ಅಂಬಾನಿ ಅವರನ್ನು ಇಲ್ಲಿನ ಸಿಬಿಐ ಪ್ರಧಾನ ಕಚೇರಿಯಲ್ಲಿ ವಿಚಾರಣೆ ನಡೆಸಲಾಯಿತು. ಈ ಪ್ರಕರಣದಲ್ಲಿ ಆರ್‌ಎಚ್‌ಎಫ್‌ಎಲ್‌ನ ಮಾಜಿ ಸಿಇಒ ಮತ್ತು ಪೂರ್ಣಾವಧಿ ನಿರ್ದೇಶಕ ರವೀಂದ್ರ ಸುಧಾಕರ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ಕಂಪನಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಜಯ್ ಅನ್ಮೋಲ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿದ ನಂತರ, 2025ರ ಡಿಸೆಂಬರ್ 9ರಂದು ಸಿಬಿಐ ಅಧಿಕಾರಿಗಳು ಅನ್ಮೋಲ್ ಅವರ ನಿವಾಸದ ಮೇಲೆ ದಾಳಿ ಮಾಡಿ ಶೋಧ ನಡೆಸಿದ್ದರು.

ಗುಜರಾತಿಗಳ ನಿಯಂತ್ರಣದಲ್ಲಿ ಬಿಹಾರ’

ಜಹಾನಾಬಾದ್ (ಪಿಟಿಐ): ‘ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜೀನಾಮೆ ನೀಡಿದ ಬಳಿಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾಗಲಿದ್ದು, ದೆಹಲಿಯಲ್ಲಿರುವ ಗುಜರಾತಿನ ಜನ ಅದನ್ನು ನಿಯಂತ್ರಿಸುತ್ತಾರೆ’ ಎಂದು ಜನ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಶನಿವಾರ ತಿಳಿಸಿದರು.

ವಿಧಾನಸಭಾ ಚುನಾವಣೆಯಲ್ಲಿ ಸೋತ ಬಳಿಕ ಪಕ್ಷದ ಪರವಾಗಿ ‘ನವನಿರ್ಮಾಣ ಯಾತ್ರೆ’ ಕೈಗೊಂಡಿರುವ ಅವರು ಜಹನಾಬಾದ್‌ನಲ್ಲಿ ಸುದ್ದಿಗಾರರ ಜತೆ ಮಾತನಾಡಿದರು.

ರಾಜ್ಯ ರಾಜಕೀಯ ಸ್ಥಿತಿಗತಿಗಳ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಗೆದ್ದರೆ ನಿತೀಶ್ ಮುಖ್ಯಮಂತ್ರಿ ಆಗುವುದಿಲ್ಲ ಎಂದು ನಾನು ಚುನಾವಣೆ ವೇಳೆ ಹೇಳಿದ್ದೆ. ಆಗ ನನ್ನ ಲೆಕ್ಕಾಚಾರ ತಪ್ಪಾಗಿತ್ತು. ಆದರೆ ನಾಲ್ಕು ತಿಂಗಳಲ್ಲಿಯೇ ನಿತೀಶ್ ಅವರು ಅಧಿಕಾರದಿಂದ ಹೊರಹೋಗುತ್ತಿದ್ದಾರೆ’ ಎಂದರು.

‘ಮೋದಿಯಿಂದ ಮಾತ್ರ ಪಂಜಾಬ್ ರಕ್ಷಣೆ’

ಮೊಗಾ (ಪಿಟಿಐ): ‘ಸಾಲ, ಮಾದಕವಸ್ತು, ಮತಾಂತರ, ಭ್ರಷ್ಟಾಚಾರ ಮತ್ತು ಗ್ಯಾಂಗ್‌ಸ್ಟರ್‌ಗಳ ಭಯದಿಂದ ಪಂಜಾಬ್ ಅನ್ನು ನಾಶ ಮಾಡಲಾಗಿದೆ. ಈ ಸಮಸ್ಯೆಗಳಿಂದ ರಾಜ್ಯವನ್ನು ಯಾರಾದರೂ ಕಾಪಾಡಬಲ್ಲರು ಎಂದರೆ ಅದು ನರೇಂದ್ರ ಮೋದಿ ಮತ್ತು ಬಿಜೆಪಿಯಿಂದ ಮಾತ್ರ ಸಾಧ್ಯ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಎಎಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

‘ಪಂಜಾಬ್ ಬದಲಾವಣೆ ಬಯಸುತ್ತಿದೆ’ ಎನ್ನುವ ಘೋಷಣೆಯೊಂದಿಗೆ ಪಂಜಾಬ್‌ನ ಮೊಗ ಪ್ರದೇಶದಲ್ಲಿ ಶಾ ಅವರು ಶನಿವಾರ ರ‍್ಯಾಲಿ ನಡೆಸಿದರು. 2027ರಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಬಿಜೆಪಿಯು ತನ್ನ ಪ್ರಚಾರ ಆರಂಭಿಸಿದೆ ಎಂದೂ ಶಾ ಹೇಳಿದರು.

‘ಪಕ್ಷ’ದ ಮಾನ್ಯತೆ ಕೊಡಿ: ದೇವುಜಿ

ಹೈದರಾಬಾದ್ (ಪಿಟಿಐ): ‘ಸಿಪಿಐ (ಮಾವೋವಾದಿ) ಸಂಘಟನೆ ಮೇಲಿನ ನಿಷೇಧವನ್ನು ರದ್ದುಗೊಳಿಸಿ, ರಾಜಕೀಯ ಪಕ್ಷದ ಮಾನ್ಯತೆ ನೀಡಬೇಕು’ ಎಂದು ಇತ್ತೀಚೆಗಷ್ಟೇ ಶರಣಾಗಿರುವ ನಕ್ಸಲ್ ನಾಯಕ ತಿಪ್ಪಿರಿ ತಿರುಪತಿ ಅಲಿಯಾಸ್ ದೇವುಜಿ ಆಗ್ರಹಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆ ಶನಿವಾರ ಮಾತನಾಡಿದ ಅವರು, ಮಾವೊವಾದಿ ಸಂಘಟನೆ ಮೇಲಿನ ನಿಷೇಧವನ್ನು ತೆರವುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಸಂಘಟನೆಗೆ ರಾಜಕೀಯ ಪಕ್ಷದ ಮಾನ್ಯತೆ ದೊರಕಿದರೆ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶವಿಲ್ಲ ಎಂದೂ ಸ್ಪಷ್ಟಪಡಿಸಿದರು.

ಶಬರಿಮಲೆಗೆ ಮಹಿಳೆಯರ ಪ್ರವೇಶಾತಿ ವಿವಾದ- ಬಿಜೆಪಿ ವಿರುದ್ಧ ಎಲ್‌ಡಿಎಫ್ ಅಸಮಾಧಾನ

‘2007ರ ಪ್ರಮಾಣಪತ್ರಕ್ಕೆ ಈಗಲೂ ಬದ್ಧ’

ಕೊಟ್ಟಾಯಂ, ಕೇರಳ (ಪಿಟಿಐ): ‘ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶಕ್ಕೆ ಅವಕಾಶ ನೀಡಿ 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಲು ಬಿಜೆಪಿಯೇ ಕಾರಣ. ಎಲ್‌ಡಿಎಫ್ ಸರ್ಕಾರದ ಪ್ರಸ್ತುತ ನಿಲುವು 2007ರಲ್ಲಿ ಸಲ್ಲಿಸಿದ ಪ್ರಮಾಣಪತ್ರದ ವಿಚಾರಕ್ಕೆ ಬದ್ಧವಾಗಿರಲಿದೆ’ ಎಂದು ಕೇರಳದ ದೇವಸ್ವಂ ಸಚಿವ ವಿ.ಎನ್.ವಾಸವನ್ ತಿಳಿಸಿದ್ದಾರೆ.

‘ಈ ವಿಷಯವನ್ನು ಧಾರ್ಮಿಕ ವಿಚಾರಗಳ ಪರಿಣತರೇ ನಿರ್ಧರಿಸಬೇಕು ಎಂದು 2007ರಲ್ಲಿಯೇ ನಾವು ಪ್ರಮಾಣಪತ್ರವನ್ನು ಸಲ್ಲಿಸಿದ್ದೆವು. ಈ ವಿಚಾರಕ್ಕೆ ಈಗಲೂ ನಾವು ಬದ್ಧರಾಗಿದ್ದೇವೆ’ ಎಂದು ಅವರು ತಿಳಿಸಿದ್ದಾರೆ.

‘ಋತುಸ್ರಾವ ಆಗುವ ವಯಸ್ಸಿನ ಮಹಿಳೆಯರಿಗೆ ಕೂಡ ಶಬರಿಮಲೆ ದೇವಸ್ಥಾನ ಪ್ರವೇಶಿಸುವ ಹಕ್ಕಿದೆ ಎಂದು ಸುಪ್ರೀಂ ಕೋರ್ಟ್‌ನ 9 ಸದಸ್ಯರ ಪೀಠವು 2018ರ ಸೆಪ್ಟೆಂಬರ್‌ನಲ್ಲಿ ತೀರ್ಪು ನೀಡಿತ್ತು. ಬಿಜೆಪಿಯೊಂದಿಗೆ ಸಂಬಂಧ ಹೊಂದಿರುವ ವಕೀಲರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ಬಳಿಕವೇ ನ್ಯಾಯಾಲಯದಿಂದ ಈ ತೀರ್ಪು ಬಂದಿದೆ’ ಎಂದು ವಾಸವನ್ ಹೇಳಿದ್ದಾರೆ.

‘ಮಹಿಳೆಯರ ಪ್ರವೇಶಾತಿ ಕುರಿತಂತೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಸುಪ್ರೀಂ ಕೋರ್ಟ್ ಕೇಳಿಲ್ಲ, ಸಾಂವಿಧಾನಿಕ ವಿಚಾರಗಳಿಗೆ ಸಂಬಂಧಿಸಿದಂತೆ ಕೆಲವೊಂದು ಸ್ಪಷ್ಟನೆಗಳನ್ನು ಮಾತ್ರ ಕೋರಿದೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ನ್ಯಾಯಾಲಯವು ಕೋರಿದ ವಿವರಣೆಗೆ ಸಂಬಂಧಿಸಿದಂತೆ ಅಡ್ವೊಕೇಟ್ ಜನರಲ್ ಹಾಗೂ ಸಂವಿಧಾನ ತಜ್ಞರೇ ಉತ್ತರ ನೀಡಲಿದ್ದಾರೆ. ಅದರಂತೆ ಅವರು ನೋಡಿಕೊಳ್ಳಲಿದ್ದಾರೆ’ ಎಂದು ಸಚಿವರು ವಿವರಿಸಿದ್ದಾರೆ.

‘ಒಂದೊಮ್ಮೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೋರಿದರೆ, ಈ ವಿಷಯದ ಕುರಿತು ಸರ್ಕಾರದ ಅಭಿಪ್ರಾಯವನ್ನು ಮಂಡಿಸಲಾಗುವುದು. 2007ರಲ್ಲಿ ಸಲ್ಲಿಸಿದ ಪ್ರಮಾಣಪತ್ರಕ್ಕೆ ಸರ್ಕಾರ ಬದ್ಧವಾಗಿರಲಿದೆ. ಸರ್ಕಾರದ ನಿಲುವಿಗೆ ಸಿಪಿಎಂ ಕೂಡ ಬದ್ಧವಾಗಿದೆ. ನಾವು ಯಾವತ್ತಿಗೂ ಭಕ್ತರ ಜೊತೆಗೆ ನಿಲ್ಲಲಿದ್ದೇವೆ’ ಎಂದು ಸಚಿವ ವಿ.ಎನ್. ವಾಸವನ್ ತಿಳಿಸಿದ್ದಾರೆ.

ವಿರೋಧ ಪಕ್ಷಗಳೇ ಕಾರಣ: ‘ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದವು. ವಿವಿಧ ಸಮಸ್ಯೆಗಳಿಗೆ ಪ್ರತಿಕೂಲವಾದ ತೀರ್ಪುಗಳು ಬಂದಿವೆ. ಹಲವು ವಿಷಯಗಳಲ್ಲಿ ವಿರೋಧ ಪಕ್ಷಗಳಿಗೆ ನ್ಯಾಯಾಲಯದಲ್ಲಿ ಹಿನ್ನಡೆ ಉಂಟಾಗಿದೆ’ ಎಂದು ಹೇಳಿದ್ದಾರೆ.

ದೇವಸ್ವಂ ವಿರೋಧ: ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ 10ರಿಂದ 50 ವರ್ಷದ ಒಳಗಿನ ಮಹಿಳೆಯರಿಗೆ ಪ್ರವೇಶ ಕಲ್ಪಿಸುವುದನ್ನು ವಿರೋಧಿಸಿ ದೇವಸ್ಥಾನದ ಆಡಳಿತ ಮಂಡಳಿ ನಿರ್ಧಾರ ಕೈಗೊಂಡಿತ್ತು.

‘ದೇವಾಲಯಗಳು, ಅದರ ನಂಬಿಕೆ ಹಾಗೂ ಪದ್ಧತಿಗಳನ್ನು ರಕ್ಷಿಸಲು ಮಂಡಳಿಯು ಬದ್ಧವಾಗಿದೆ’ ಎಂದು ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಅಧ್ಯಕ್ಷ ಕೆ. ಜಯಕುಮಾರ್ ಈ ಹಿಂದೆ ಸ್ಪಷ್ಟಪಡಿಸಿದ್ದರು.

‘ಟಾರ್ಗೆಟ್ ಕರೂರ್’: ಟಿವಿಕೆ ಪ್ರಚಾರ ಆರಂಭ

ಕರೂರ್, ತಮಿಳುನಾಡು (ಪಿಟಿಐ): ಇಲ್ಲಿ ನಡೆದ ಕಾಲ್ತುಳಿತದ ಪ್ರಕರಣದಿಂದ ಚೇತರಿಸಿಕೊಂಡಿರುವ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು ಜಿಲ್ಲೆಯಲ್ಲಿ ತನ್ನ ಅಧಿಪತ್ಯವನ್ನು ಸ್ಥಾಪಿಸಲು ‘ಟಾರ್ಗೆಟ್ ಕರೂರ್’ ಹೆಸರಿನಲ್ಲಿ ಜನರನ್ನು ತಲುಪಲು ಮುಂದಾಗಿದೆ.



ವಿಜಯ್

2025ರ ಸೆಪ್ಟೆಂಬರ್ 27ರಂದು ಕರೂರ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಕಾಲ್ತುಳಿತ ಉಂಟಾಗಿ 41 ಮಂದಿ ಮೃತಪಟ್ಟಿದ್ದರು. ಇದಾದ ಬಳಿಕ ರಾಜ್ಯದ ವಿವಿಧೆಡೆ ಹಾಗೂ ಪುದುಚೇರಿಯಲ್ಲಿ ರ‍್ಯಾಲಿಗಳನ್ನು ನಡೆಸಿದ್ದರು.

ಪಕ್ಷದ ಸಂಸ್ಥಾಪಕ ವಿಜಯ್ ಅವರು ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಸಿಬಿಐ ತನಿಖೆಯನ್ನು ಎದುರಿಸುತ್ತಿದ್ದಾರೆ. ತನಿಖಾ ಸಂಸ್ಥೆಯು ವಿಚಾರಣೆಗೆ ಹಾಜರಾಗುವಂತೆ ಮೂರನೇ ಸಲ ಅವರಿಗೆ ಸಮನ್ಸ್ ನೀಡಿದೆ.

ಇದರ ಮಧ್ಯದಲ್ಲೇ, ಮಾರ್ಚ್ 13ರಂದು ಟಿವಿಕೆ ಕರೂರ್ ಜಿಲ್ಲಾ ಘಟಕದ ಕಾರ್ಯದರ್ಶಿ ವಿ.ಪಿ. ಮಥಿಯಾಳಗನ್ ಅವರು ಡಿಎಂಕೆ ಮುಖಂಡ ಹಾಗೂ ಮಾಜಿ ಸಚಿವ ವಿ.ಸೆಂಥಿಲ್ ಬಾಲಾಜಿ ಅವರು ಪ್ರತಿನಿಧಿಸುವ ಕರೂರ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಡಂಗಿಪಟ್ಟಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ಆರಂಭಿಸಿದರು.

ಕಾರ್ಯಕರ್ತರು ಸೀಟಿ ಊದುತ್ತಾ ಮನೆ ಮನೆಗೆ ಭೇಟಿ ನೀಡಿ ಪಕ್ಷದ ಚಿಹ್ನೆಯನ್ನು ಜನರಿಗೆ ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ. ‘ಟಾರ್ಗೆಟ್ ಕರೂರ್’ ಹೆಸರಿನಲ್ಲಿ ಪ್ರಚಾರ ನಡೆಸಿ, ಮುಂಬರುವ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಲು ಕಾರ್ಯತಂತ್ರ ರೂಪಿಸಿದ್ದಾರೆ.

ಎನ್‌ಡಿಎ ಜೊತೆಗೆ ಮೈತ್ರಿ ಇಲ್ಲ : ಟಿವಿಕೆ

ಚೆನ್ನೈ (ಪಿಟಿಐ): ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಜೊತೆಗೆ ಟಿವಿಕೆ ಪಕ್ಷವು ಮೈತ್ರಿ ಮಾಡಿಕೊಳ್ಳಲಿದೆ ಎಂಬ ಮಾಧ್ಯಮಗಳ ವರದಿಗಳನ್ನು ಟಿವಿಕೆ ನಾಯಕರು ತಳ್ಳಿ ಹಾಕಿದ್ದಾರೆ. ಟಿವಿಕೆ ಜೊತೆಗಿನ ಮೈತ್ರಿ ಕುರಿತು ನೇರವಾಗಿ ಉತ್ತರಿಸಲು ತಮಿಳುನಾಡು ಬಿಜೆಪಿ ಅಧ್ಯಕ್ಷ ನೈನಾರ್ ನಾಗೇಂದ್ರನ್ ನಿರಾಕರಿಸಿದರು.

‘ನೀವು ಮೈತ್ರಿ ಕುರಿತಂತೆ ಚಿಂತೆ ನಡೆಸುತ್ತಿದ್ದೀರಿ. ನಾನು ಜನರ ಸಮಸ್ಯೆಗಳ ಕುರಿತು ಚಿಂತನೆ ನಡೆಸುತ್ತಿದ್ದೇನೆ. ಅದರಲ್ಲೂ ರಾಜ್ಯದಲ್ಲಿ ತಲೆದೋರಿರುವ ಕಾನೂನು–ಸುವ್ಯವಸ್ಥೆ ಹಾಗೂ ಮಹಿಳೆಯರ ಸುರಕ್ಷತೆ ಕುರಿತು ಚಿಂತಿತನಾಗಿದ್ದೇನೆ’ ಎಂದು ತಿಳಿಸಿದರು.

ಚಿಟಿಕೆ ಸುದ್ದಿ

ಅಮೆರಿಕದ ಜೊತೆಗೆ ಮಾತುಕತೆ ಒಪ್ಪಿಕೊಂಡ ಕ್ಯೂಬಾ

ಹವಾನಾ (ಎಪಿ): ಇಂಧನ ಬಿಕ್ಕಟ್ಟಿನಿಂದ ಮುಕ್ತಿ ಪಡೆಯುವ ಸಲುವಾಗಿ ಕ್ಯೂಬಾವು ಅಮೆರಿಕದ ಸರ್ಕಾರದೊಂದಿಗೆ ಮಾತುಕತೆ ಆರಂಭಿಸಿದೆ.

ಈ ಕುರಿತು ವದಂತಿಗಳು ಹಬ್ಬುತ್ತಿದ್ದ ಬೆನ್ನಲ್ಲೇ, ಮಾತುಕತೆ ನಡೆದಿರುವುದನ್ನು ಕ್ಯೂಬಾ ಅಧ್ಯಕ್ಷ ಮಿಗೇಲ್ ಡಿಯಾಸ್ ಖಾನೀಲ್ ಖಚಿತಪಡಿಸಿದ್ದಾರೆ.

ಇಲ್ಲಿಯವರೆಗೆ ವೆನೆಜುವೆಲಾವು ಕ್ಯೂಬಾಕ್ಕೆ ಇಂಧನ ಪೂರೈಸುತ್ತಿತ್ತು. ಆದರೆ, ಇದರ ಅಧ್ಯಕ್ಷ ನಿಕೊಲಸ್ ಮಡುರೊ ಅವರನ್ನು ಸೆರೆಹಿಡಿದ ಬಳಿಕ, ಇಂಧನ ಪೂರೈಕೆಯನ್ನು ಅಮೆರಿಕ ತಡೆದಿತ್ತು. ಇದರಿಂದಾಗಿ ಕ್ಯೂಬಾದಲ್ಲಿ ಭಾರಿ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿದೆ.

‘ಎರಡೂ ದೇಶಗಳ ಮಧ್ಯೆ ದ್ವಿಪಕ್ಷೀಯವಾದ ಹಲವು ಭಿನ್ನಾಭಿಪ್ರಾಯಗಳಿವೆ. ಆದರೆ, ಮಾತುಕತೆಗಳ ಮೂಲಕ ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಳ್ಳಬೇಕು ಎನ್ನುವುದು ನಮ್ಮ ಉದ್ದೇಶ. ಅಂತರರಾಷ್ಟ್ರೀಯ ಬೆಳವಣಿಗೆಗಳು ಮಾತುಕತೆ ನಡೆಯುವಂತೆ ಮಾಡಿವೆ’ ಎಂದು ಮಿಗೇಲ್ ಡಿಯಾಸ್ ಖಾನೀಲ್ ಹೇಳಿದ್ದಾರೆ.

ಖಾನೀಲ್ ಅವರ ಹೇಳಿಕೆ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದ ಶ್ವೇತ ಭವನವು, ‘ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಮಾತುಕತೆಯ ನೇತೃತ್ವ ವಹಿಸಿದ್ದಾರೆ. ಕ್ಯೂಬಾದ ನೀತಿಗಳು ಹಾಗೂ ಆಡಳಿತವನ್ನು ಬದಲಾಯಿಸಬೇಕು ಎಂಬ ಉದ್ದೇಶವಿದೆ’ ಎಂದಿತ್ತು.

‘₹4,824 ಕೋಟಿ ಹೂಡಿಕೆಗೆ ಒಪ್ಪಿಗೆ’

ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಯಿಂದ ಅನುಮೋದನೆ

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ರಾಮನಗರ, ಕೋಲಾರ ಸೇರಿದಂತೆ 13 ಜಿಲ್ಲೆಗಳಲ್ಲಿ 37 ಹೊಸ ಕೈಗಾರಿಕೆಗಳಿಗೆ ಮತ್ತು ಹೆಚ್ಚುವರಿ ಹೂಡಿಕೆಯ ಎರಡು ಯೋಜನೆಗಳೂ ಸೇರಿ ಒಟ್ಟು ₹4,824.31 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಒಪ್ಪಿಗೆ ನೀಡಿದೆ.

‘ಐ.ಟಿ ಮೂಲಸೌಲಭ್ಯ, ಸಕ್ಕರೆ ಕಾರ್ಖಾನೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಕಂಪ್ರೆಸ್ಡ್ ಗ್ಯಾಸ್, ವೈಮಾಂತರಿಕ್ಷ, ಚಿನ್ನಾಭರಣ ತಯಾರಿಕೆ, ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಹಾಗೂ ಪಂಚತಾರಾ ಹೋಟೆಲ್ ನಿರ್ಮಾಣ ಯೋಜನೆಗಳಿಗೆ ಸಮಿತಿಯು ಅನುಮೋದನೆ ನೀಡಿದೆ. ಇದರಿಂದ ರಾಜ್ಯದಲ್ಲಿ ಹೊಸದಾಗಿ 14,525 ಉದ್ಯೋಗ ಅವಕಾಶಗಳು ಸೃಷ್ಟಿ ಆಗಲಿವೆ ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

‘₹50 ಕೋಟಿಗೂ ಹೆಚ್ಚು ಹೂಡಿಕೆಯ 22 ಪ್ರಮುಖ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ ಒಟ್ಟು ₹3,908.68 ಕೋಟಿ ಹೂಡಿಕೆ ಆಗಲಿದೆ. ಅದರಿಂದ 12,475 ಜನರಿಗೆ ಉದ್ಯೋಗಾವಕಾಶ ದೊರೆಯಲಿವೆ. ₹15 ಕೋಟಿಯಿಂದ ₹50 ಕೋಟಿವರೆಗಿನ ಹೂಡಿಕೆಯ 15 ಹೊಸ ಯೋಜನೆಗಳಿಗೆ ಅನುಮೋದನೆ ನೀಡಿದ್ದರಿಂದ ₹350.60 ಕೋಟಿ ಹೂಡಿಕೆ ಆಗಲಿದ್ದು, 1,750 ಜನರಿಗೆ ಉದ್ಯೋಗ ಸಿಗಲಿವೆ. ಹೆಚ್ಚುವರಿ ಹೂಡಿಕೆಯ 2 ಯೋಜನೆಗಳಿಂದ ₹565.03 ಕೋಟಿ ಹೂಡಿಕೆಯಾಗಲಿದ್ದು, 300 ಜನರಿಗೆ ಉದ್ಯೋಗಾವಕಾಶ ಸಿಗಲಿವೆ’ ಎಂದರು.

ಸಭೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಸೆಲ್ವಕುಮಾರ್, ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, ಕರ್ನಾಟಕ ‘ಉದ್ಯೋಗ ಮಿತ್ರ’ದ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಇದ್ದರು.

ಸಮಿತಿ ಒಪ್ಪಿಗೆ ನೀಡಿದ ಪ್ರಮುಖ ಯೋಜನೆಗಳು

ಕಂಪನಿ	ಯೋಜನೆ	ಹೂಡಿಕೆ ಮೊತ್ತ (₹ಕೋಟಿಗಳಲ್ಲಿ)
ಬಾಗ್ಮನೆ ಕನ್‌ಸ್ಟ್ರಕ್ಷನ್ ಪ್ರೈವೆಟ್ ಲಿಮಿಟೆಡ್	ಐಟಿ ಮೂಲಸೌಲಭ್ಯ ಅಭಿವೃದ್ಧಿ	₹494.65
ಕರ್ನಾಟಕ ಬಂಗಾರು ಷುಗರ್ಸ್	ಸಕ್ಕರೆ ಕಾರ್ಖಾನೆ	₹443.50
ಕ್ಲೆನೆ ಪ್ಯಾಕ್ಸ್	ಟೆಕ್ನಿಕಲ್ ಟೆಕ್ಸ್‌ಟೈಲ್ ಘಟಕ	₹376
ತ್ರಿಶೂಲ್ ಬಿಲ್ಡ್‌ಟೆಕ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್	ಪಂಚತಾರಾ ಹೋಟೆಲ್	₹300
ಮುಧೋಳದಲ್ಲಿ ಟ್ರೌಲ್ಟ್ ಗ್ರಾಸ್	ಕಂಪ್ರೆಸ್ಡ್ ಗ್ಯಾಸ್ ಘಟಕ	₹257.77
ತ್ರುಯೊ ಮ್ಯಾನುಫ್ಯಾಕ್ಚರಿಂಗ್	ವಿದ್ಯುತ್‌ಚಾಲಿತ ವಾಹನಗಳ ಮೋಟರ್, ಕಂಟ್ರೋಲರ್ ತಯಾರಿಕೆ ಘಟಕ	₹250

ಟಿಕೆಟ್ ಬೆಲೆ ಹೆಚ್ಚಿಸಿದ ಆಕಾಸಾ ಏರ್

ನವದೆಹಲಿ (ಪಿಟಿಐ): ವಿಮಾನಯಾನ ಕಂಪನಿ ಆಕಾಸಾ ಏರ್, ದೇಶದ ಮತ್ತು ಅಂತರ ರಾಷ್ಟ್ರೀಯ ವಾಯು ಮಾರ್ಗಗಳಲ್ಲಿ ಸಂಚರಿಸುವ ತನ್ನ ವಿಮಾನದ ಟಿಕೆಟ್ ಬೆಲೆಯನ್ನು ಹೆಚ್ಚಿಸಿದೆ. ಪರಿಷ್ಕೃತ ದರವು ಭಾನುವಾರದಿಂದಲೇ ಜಾರಿಗೆ ಬರಲಿದೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ವಿಮಾನ ಇಂಧನ ದರ ಹೆಚ್ಚಳವಾಗಿದೆ. ಹೀಗಾಗಿ ವಿಮಾನದ ಟಿಕೆಟ್ ಬೆಲೆಯನ್ನು ಏರಿಕೆ ಮಾಡಲಾಗಿದೆ ಎಂದು ಕಂಪನಿ ತಿಳಿಸಿದೆ.

ಇಂಧನ ಶುಲ್ಕದ ರೂಪದಲ್ಲಿ ಪ್ರತಿ ಟಿಕೆಟ್‌ಗೆ ₹199ರಿಂದ ₹1,300ರವರೆಗೆ ಹೆಚ್ಚಳ ಮಾಡಿದೆ. ಈ ಶುಲ್ಕವು ಪ್ರಯಾಣದ ಅವಧಿಯನ್ನು ಆಧರಿಸಿ ಇರಲಿದೆ.

ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮತ್ತು ಇಂಡಿಗೊ ಈಗಾಗಲೇ ವಿಮಾನ ಟಿಕೆಟ್ ಬೆಲೆಯನ್ನು ಹೆಚ್ಚಿಸಿವೆ.

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹22750
ಎಸಿ	₹13100
ಆರ್‌ಪಿ	₹18250
ಆರ್‌ಸಿ	₹9725

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹480
	12 ಕ್ಕೆ	₹72
ಮೈಸೂರು:	100 ಕ್ಕೆ	₹485

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹533-782
ದ್ವಿತಳಿ (ಬಿ.ವಿ)	₹389-856

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹211.50
ಆರ್‌ಎಸ್‌ಎಸ್-5	₹205.50
ಗುಡ್ ಲಾಟ್	₹188

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1720 (1710)
ಸೋಯಾ (ರಿಫೈನ್ಡ್)	₹1445 (1440)
ಸೂರ್ಯಕಾಂತಿ (ರಿಫೈನ್ಡ್)	₹1710 (1710)
ಪಾಮೋಲಿನ್	₹1435 (1430)

ವೀಸಾಕ್ಕಾಗಿ ವಂಚನೆ ಆರೋಪ 11 ಭಾರತೀಯರ ವಿರುದ್ಧ ಪ್ರಕರಣ

ನ್ಯೂಯಾರ್ಕ್ (ಪಿಟಿಐ): ‘ನಕಲಿ ದರೋಡೆ’ ಪ್ರಕರಣಗಳ ಸಂತ್ರಸ್ತರೆಂದು ಬಿಂಬಿಸಿಕೊಂಡು ಅಕ್ರಮವಾಗಿ ವೀಸಾ ಪಡೆಯಲು ಸಂಚು ರೂಪಿಸಿದ್ದ ಆರೋಪದ ಮೇಲೆ 11 ಭಾರತೀಯರ ವಿರುದ್ಧ ಅಮೆರಿಕದ ನ್ಯಾಯಾಂಗ ಇಲಾಖೆ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.

ಅಮೆರಿಕದ ವಿವಿಧ ರಾಜ್ಯಗಳಲ್ಲಿ ಕಾನೂನುಬಾಹಿರವಾಗಿ ವಾಸಿಸುತ್ತಿದ್ದ ಈ ಆರೋಪಿಗಳು, ಅಮೆರಿಕದ ‘ಯು’ ವೀಸಾ (ಅಪರಾಧಕ್ಕೆ ಒಳಗಾದ ಸಂತ್ರಸ್ತರಿಗೆ ನೀಡುವ ವೀಸಾ) ಪಡೆಯುವ ಉದ್ದೇಶದಿಂದ ನಕಲಿ ದರೋಡೆಯ ಕಥೆ ಕಟ್ಟಿ, ತಾವು ಸಂತ್ರಸ್ತರು ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆ ಮೂಲಕ ಕಾನೂನುಬದ್ಧವಾಗಿ ಅಮೆರಿಕದಲ್ಲಿ ನೆಲಸಲು ಯೋಜಿಸಿದ್ದರು ಎಂದು ಫೆಡರಲ್ ಪ್ರಾಸಿಕ್ಯೂಟರ್ ತಿಳಿಸಿದ್ದಾರೆ.

ಜಿತೇಂದ್ರಕುಮಾರ್ ಪಟೇಲ್ (39), ಮಹೇಶ್‌ಕುಮಾರ್ ಪಟೇಲ್ (36), ಸಂಜಯ್‌ಕುಮಾರ್ ಪಟೇಲ್ (45), ದೀಪಿಕಾಬೆನ್ ಪಟೇಲ್ (40), ರಮೇಶ್‌ಭಾಯ್ ಪಟೇಲ್ (52), ಅಮಿತಾಬೆನ್ ಪಟೇಲ್ (43), ರೋನಕ್‌ಕುಮಾರ್ ಪಟೇಲ್ (28), ಸಂಗೀತಾಬೆನ್ ಪಟೇಲ್ (36), ಮಿಂಕೇಶ್ ಪಟೇಲ್ (42), ಸೋನಲ್ ಪಟೇಲ್ (42) ಮತ್ತು ಮಿತುಲ್ ಪಟೇಲ್ (40) ವಿರುದ್ಧ ವೀಸಾ ಪಡೆಯುವ ಉದ್ದೇಶದಿಂದ ವಂಚನೆ ಮಾಡಿರುವ ಆರೋಪ ಹೊರಿಸಲಾಗಿದೆ.

ತಂಬಾಕಿಗೆ ಪ್ರೋತ್ಸಾಹಧನ: ಜೆಡಿಎಸ್ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಖ್ಯಮಂತ್ರಿ ತವರು ಜಿಲ್ಲೆಯಲ್ಲಿ ತಂಬಾಕು ಬೆಳೆಗಾರರು ದರ ಕುಸಿತದಿಂದ ಕಂಗೆಟ್ಟಿದ್ದು, ರಾಜ್ಯ ಸರ್ಕಾರವು ಪ್ರತಿ ಕೆ.ಜಿ.ಗೆ ₹30ರಿಂದ ₹50 ಪ್ರೋತ್ಸಾಹಧನ ಘೋಷಿಸಬೇಕು’ ಎಂದು ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್ ಒತ್ತಾಯಿಸಿದರು.

‘ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಕೆ.ಆರ್. ನಗರ, ಎಚ್.ಡಿ. ಕೋಟೆ, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ ತಂಬಾಕು ಉತ್ಪಾದಿಸಲಾಗುತ್ತಿದೆ. ಇಲ್ಲಿ ಹರಾಜಿನಲ್ಲಿ ಐಟಿಸಿ ಕಂಪನಿಯ ಲಾಬಿಯಿಂದ ರೈತರಿಗೆ ಅನ್ಯಾಯವಾಗುತ್ತಿದೆ’ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಸ್ಯೆಯನ್ನು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಗಮನಕ್ಕೆ ತರಲಾಗಿದೆ. ಬೇಡಿಕೆಯುಳ್ಳ ಕಡೆ ರಫ್ತು ಮಾಡಲು ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಹೇಳಿದರು.

ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ, ‘ಕರ್ನಾಟಕದಲ್ಲಿ ಐಟಿಸಿ ಕಂಪನಿಯೊಂದೇ ಶೇ 45ರಷ್ಟು ತಂಬಾಕು ಖರೀದಿಸುತ್ತಿದೆ. ಶುಕ್ರವಾರ ಹರಾಜಿನಲ್ಲಿ ಕೆ.ಜಿ.ಗೆ ₹10-20 ಏರಿಕೆ ಆಗಿದೆ. ಸೋಮವಾರದಿಂದ ಉತ್ತಮ ಬೆಲೆ ಸಿಗುವ ನಿರೀಕ್ಷೆ ಇದೆ’ ಎಂದರು.

‘ಪ್ರತಿ ಕೆ.ಜಿ. ತಂಬಾಕು ಉತ್ಪಾದನೆಗೆ ಸರಾಸರಿ ₹180 ಖರ್ಚಾಗುತ್ತಿದೆ. ಕನಿಷ್ಠ ₹300 ಬೆಲೆ ದೊರೆತರೆ ಲಾಭ ಕಾಣಬಹುದು. ಸದ್ಯ ₹230–240ಕ್ಕೆ ದರ ಕುಸಿದಿದೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಹೂಡಿಕೆದಾರರಿಗೆ ಸೆಬಿ ಅಧ್ಯಕ್ಷ ತಾಳ್ಮೆಯ ಪಾಠ

ಮುಂಬೈ (ಪಿಟಿಐ): ‘ಅನಿಶ್ಚಿತತೆಯ ಅವಧಿಯಲ್ಲಿ ಹೂಡಿಕೆದಾರರು ತಾಳ್ಮೆಯಿಂದ ಇರಬೇಕು. ಇದು ಅತ್ಯುತ್ತಮವಾದ ತಂತ್ರ’ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕಾರಣದಿಂದಾಗಿ ಷೇರುಪೇಟೆ ಸೂಚ್ಯಂಕಗಳು ಕುಸಿದಿವೆ. ಈ ಸಂದರ್ಭದಲ್ಲಿ ಪಾಂಡೆ ಅವರು ಈ ಕಿವಿಮಾತು ಹೇಳಿದ್ದಾರೆ. ಕೋವಿಡ್ ಅಥವಾ ರಷ್ಯಾ–ಉಕ್ರೇನ್ ಯುದ್ಧದ ಅವಧಿಯಲ್ಲಿ ಮಾರುಕಟ್ಟೆ ಇಳಿಕೆ ಕಂಡಿದ್ದರೂ, ನಂತರದಲ್ಲಿ ಮಾರುಕಟ್ಟೆಗಳಲ್ಲಿ ಸ್ಥಿರತೆ ಕಂಡುಬಂತು ಎಂದು ಶನಿವಾರ ಹೇಳಿದ್ದಾರೆ.

ಹೂಡಿಕೆದಾರರು, ಅದರಲ್ಲೂ ಮುಖ್ಯವಾಗಿ ಸಣ್ಣ ಹೂಡಿಕೆದಾರರು ಇಂತಹ ಅನಿಶ್ಚಿತ ಅವಧಿಯಲ್ಲಿ ತಾಳ್ಮೆಯ ನಡೆ ಅನುಸರಿಸುವುದು ಅತ್ಯುತ್ತಮವಾದ ತಂತ್ರ ಎಂದು ಹೇಳಿದ್ದಾರೆ. ಸ್ಥಿರತೆ ಮೂಡಿಸಲು ಜಾಗತಿಕ ಮಟ್ಟದಲ್ಲಿ ಪ್ರಯತ್ನಗಳು ನಡೆಯುತ್ತಿವೆ ಎಂದಿದ್ದಾರೆ.

ಜಾಗತಿಕ ಆರ್ಥಿಕತೆಯ ಮೇಲೆ ಅನಿಶ್ಚಿತತೆಯು ಪ್ರಾಬಲ್ಯ ಬೀರಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಅಳವಡಿಕೆ ಮತ್ತು ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟು ಷೇರುಪೇಟೆಗಳ ಮೇಲೆ ಪರಿಣಾಮ ಬೀರಿವೆ. ಆದರೆ, ಹಿಂದಿನ ಘಟನೆಗಳನ್ನು ಅವಲೋಕಿಸಿದರೆ, ಮಾರುಕಟ್ಟೆ ಒಮ್ಮೆ ಇಳಿಕೆ ದಾಖಲಿಸಿದರೂ, ಕಾಲಕ್ರಮೇಣ ಸ್ಥಿರತೆ ಕಾಣುತ್ತದೆ ಎಂಬುದು ಅರಿವಿಗೆ ಬರುತ್ತದೆ ಎಂದು ತಿಳಿಸಿದ್ದಾರೆ.

ಬಂಡವಾಳ ಮಾರುಕಟ್ಟೆಗಳಲ್ಲಿ ಅನಿಶ್ಚಿತತೆಗಳು ಯಾವಾಗಲೂ ಒಮ್ಮೆ ಬಂದುಹೋಗುವುದಿಲ್ಲ. ಅವು ಮತ್ತೆ ಮತ್ತೆ ಎದುರಾಗುತ್ತಲೇ ಇರುತ್ತವೆ. ವ್ಯವಸ್ಥೆಯಲ್ಲಿ ಸವಾಲುಗಳು ಎದುರಾದಾಗಲೂ ಅದು ಸರಾಗವಾಗಿ, ನ್ಯಾಯಯುತವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆಯೇ ಎಂಬುದನ್ನು ಪರಿಶೀಲಿಸುವುದು ವ್ಯವಸ್ಥೆಯ ನಿಜವಾದ ಪರೀಕ್ಷೆ ಎಂದು ಕೂಡ ಪಾಂಡೆ ಹೇಳಿದ್ದಾರೆ.

ಹಣಕಾಸು ವ್ಯವಸ್ಥೆಯಲ್ಲಿ ದಕ್ಷತೆಯೇ ನಂಬಿಕೆಯ ಅಡಿಪಾಯ. ನಂಬಿಕೆ ಇಲ್ಲದಿದ್ದರೆ, ಬಂಡವಾಳ ಇಳಿಕೆಯಾಗುತ್ತದೆ. ಹೂಡಿಕೆಯು ನಿಧಾನವಾಗುತ್ತದೆ. ಅಲ್ಲದೆ ಬೆಳವಣಿಗೆಯು ಕಷ್ಟಕರವಾಗುತ್ತದೆ ಎಂದು ಹೇಳಿದ್ದಾರೆ.

‘ಕಾರ್ಖಾನೆ’ ವ್ಯಾಖ್ಯಾನ: 17ರಿಂದ ‘ಸುಪ್ರೀಂ’ ವಿಚಾರಣೆ ಆರಂಭ

ನವದೆಹಲಿ (ಪಿಟಿಐ): ಕಾರ್ಖಾನೆ ವ್ಯಾಜ್ಯಗಳ ಕಾಯ್ದೆ 1947ರಲ್ಲಿ ಅಡಿಯಲ್ಲಿ ‘ಕಾರ್ಖಾನೆ’ ಎಂದರೇನು ಎಂಬ ವ್ಯಾಖ್ಯಾನವನ್ನು ನಿಗದಿ ಮಾಡುವ ಸಂಬಂಧ ಸುಪ್ರೀಂ ಕೋರ್ಟ್ ರಚಿಸಿರುವ ಒಂಬತ್ತು ನ್ಯಾಯಮೂರ್ತಿಗಳ ಪೀಠವು ಮಾರ್ಚ್ 17ರಿಂದ ವಿಚಾರಣೆ ಆರಂಭಿಸಲಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಪಿ.ಎಸ್. ನರಸಿಂಹ, ದೀಪಂಕರ್ ದತ್ತಾ, ಉಜ್ಜಲ್ ಭುಯಾನ್, ಸತೀಶ್ ಚಂದ್ರ ಶರ್ಮಾ, ಜಾಯ್ ಮಾಲ್ಯಾ ಬಾಗ್ಚಿ, ಅಲೋಕ್ ಅರಾಧೆ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸಲಿದೆ.

1978ರ ಬೆಂಗಳೂರು ಜಲ ಪೂರೈಕೆ ಮತ್ತು ಒಳಚರಂಡಿ ಮಂಡಳಿ ಪ್ರಕರಣದ ಸಂಬಂಧ ಕಾಯ್ದೆಯಲ್ಲಿ ವಿವರಿಸಲಾದ ‘ಕಾರ್ಖಾನೆ’ಯ ವ್ಯಾಖ್ಯಾನ ಕುರಿತು ವಿವಾದ ಸೃಷ್ಟಿಯಾಗಿತ್ತು. ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿ ಸರ್ಕಾರಿ ಇಲಾಖೆಗಳು ಕೈಗೊಳ್ಳುವ ಚಟುವಟಿಕೆಗಳನ್ನು ‘ಕಾರ್ಖಾನೆ ಚಟುವಟಿಕೆಗಳು’ ಎನ್ನಬಹುದೇ ಎಂಬುದನ್ನೂ ಸೇರಿ ಹಲವು ಆಯಾಮಗಳಿಗೆ ಸಂಬಂಧಿಸಿ ವಿಚಾರಣೆ ನಡೆಸಲಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

9ನೇ ವರ್ಷದ ಪುಣ್ಯಸ್ಮರಣೆ

ಎಂ.ಜಿ. ನೀಲಾಂಬಿಕೆ

ಜನನ: 29–12–1942

ಮರಣ: 15–03–2017

ನಿಮ್ಮ ಚಿರಸ್ಮರಣೆಯೊಂದಿಗೆ ಕುಟುಂಬ ಸದಸ್ಯರು ಮಲ್ಲೇಶ್ವರಂ, ಬೆಂಗಳೂರು–3

ನಿಧನ

ಶ್ರೀಮತಿ ಲಕ್ಷ್ಮಮ್ಮ

(ದಿ. ಕೆ.ವಿ. ನಾರಾಯಣಪ್ಪ, ವಕೀಲರುರವರ ಧರ್ಮಪತ್ನಿ) ದಿನಾಂಕ 14.03.2026ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅಂತಿಮ ದರ್ಶನ: ದಿನಾಂಕ 15.03.2026ರ ಬೆಳಗ್ಗೆ 10 ಗಂಟೆವರೆಗೆ ವಿಳಾಸ: ನಂ. 65, 40 ಅಡಿ ರಸ್ತೆ, ಎನ್‌ಎಸ್ ಫಾರಂ ಲೇಔಟ್, ಸಂಜಯನಗರ ಬೆಂಗಳೂರು–94.

ಅಂತ್ಯ ಸಂಸ್ಕಾರ ದಿನಾಂಕ 15.03.2026ರ ಮಧ್ಯಾಹ್ನ 2 ಗಂಟೆಗೆ ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಮೇಲೂರು, ಕಂಬದಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು
ಕೆ.ಎನ್. ವೆಂಕಟೇಶ್ ಮೂರ್ತಿ,
ಕೆ.ಎನ್. ಪ್ರಸನ್ನ ಕುಮಾರ್,
ಕೆ.ಎನ್. ಹೇಮಲತ ಮತ್ತು ಕುಟುಂಬ ಸದಸ್ಯರು.

ಪಿಎಂ ಕಿಸಾನ್: ಫಲಾನುಭವಿಗಳ ಸಂಖ್ಯೆ 10 ಲಕ್ಷ ಕುಸಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ಕರ್ನಾಟಕದಲ್ಲಿ ಫಲಾನುಭವಿಗಳ ಸಂಖ್ಯೆ ಕಳೆದ 5 ವರ್ಷದಲ್ಲಿ 10 ಲಕ್ಷದಷ್ಟು ಕುಸಿತ ಕಂಡಿದೆ.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಸದಸ್ಯ ರಣದೀಪ್ ಸಿಂಗ್ ಸುರ್ಜೆವಾಲಾ ಕೇಳಿದ ಪ್ರಶ್ನೆಗೆ ಕೃಷಿ ಖಾತೆ ರಾಜ್ಯ ಸಚಿವ ಭಗೀರಥ್ ಚೌಧರಿ ಈ ಬಗ್ಗೆ ಉತ್ತರ ನೀಡಿದ್ದಾರೆ.

ಆಯಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪಿಎಂ–ಕಿಸಾನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ಅರ್ಹ ಫಲಾನುಭವಿಗಳ ಪಟ್ಟಿ ಆಧರಿಸಿ ಹಣ ಬಿಡುಗಡೆ ಮಾಡಲಾಗುತ್ತದೆ. ಜಮೀನಿನಲ್ಲಿ ಬಿತ್ತನೆ, ಇ–ಕೆವೈಸಿ, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ ಮಾಡದಿರುವುದು, ಮೃತ ಫಲಾನುಭವಿಗಳು ಮತ್ತಿತರ ಕಾರಣಗಳಿಂದಾಗಿ ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಣೆ ಮಾಡಲಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಯೋಜನೆಯಡಿ ಫಲಾನುಭವಿಯ ಖಾತೆಗೆ ವರ್ಷಕ್ಕೆ ₹6 ಸಾವಿರ ವರ್ಗಾವಣೆ ಮಾಡಲಾಗುತ್ತದೆ. ಈ ಮೊತ್ತವನ್ನು ಹೆಚ್ಚಳ ಮಾಡುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ ಎಂದೂ ಅವರು ತಿಳಿಸಿದ್ದಾರೆ.



316 ಸಿಲಿಂಡರ್‌ಗಳ ವಶ

ಹೋಟೆಲ್‌ಗಳಲ್ಲಿ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದವರ ವಿರುದ್ಧ ಪ್ರಕರಣ ದಾಖಲಿಸಿರುವ ಕಾನೂನು ಮತ್ತು ಮಾಪನ ಇಲಾಖೆ ಅಧಿಕಾರಿಗಳು, 316 ಸಿಲಿಂಡರ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ರಾಜ್ಯದ ವಿವಿಧ ಕಡೆಗಳಲ್ಲಿನ ಹೋಟೆಲ್‌ಗಳಿಗೆ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಪೂರೈಸಲಾಗುತ್ತಿದೆ ಎಂಬ ದೂರುಗಳು ಬಂದಿದ್ದವು. ಅದರ ಆಧಾರದಲ್ಲಿ ಇಲಾಖೆಯ ಅಧಿಕಾರಿಗಳು ಶನಿವಾರ ಕಾರ್ಯಾಚರಣೆ ನಡೆಸಿದರು.

ಬೆಂಗಳೂರಿನ ಪೀಣ್ಯ ಮತ್ತು ಚಿಕ್ಕಜಾಲದ ಹಲವು ಹೋಟೆಲ್‌ಗಳ ಮೇಲೆ ನಡೆಸಿದ ದಾಳಿಯ ವೇಳೆ 254 ಗೃಹಬಳಕೆ ಸಿಲಿಂಡರ್‌ಗಳು ಪತ್ತೆಯಾಗಿವೆ. ಶಿವಮೊಗ್ಗದಲ್ಲಿ 3, ಯಾದಗಿರಿಯಲ್ಲಿ 46 ಮತ್ತು ದಾವಣಗೆರೆಯಲ್ಲಿ 13 ಸಿಲಿಂಡರ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಹೋಟೆಲ್ ಮಾಲೀಕರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಕೋಲಾರ ಜಿಲ್ಲೆಯ ಕೆಜಿಎಫ್‌ನ ಎಲ್‌ಪಿಜಿ ವಿತರಣಾ ಏಜೆನ್ಸಿ ಒಂದರ ಮೇಲೆ ದಾಳಿ ನಡೆಸಲಾಗಿತ್ತು. ಗೃಹಬಳಕೆ ಸಿಲಿಂಡರ್‌ನಿಂದ ವಾಣಿಜ್ಯ ಬಳಕೆ ಸಿಲಿಂಡರ್‌ಗೆ ಅಕ್ರಮವಾಗಿ ರಿಫಿಲ್ಲಿಂಗ್ ಮಾಡುತ್ತಿರುವುದು ಪತ್ತೆಯಾಗಿದ್ದು, ಪ್ರಕರಣ ದಾಖಲಿಸಲಾಗಿದೆ ಇಲಾಖೆ ಮಾಹಿತಿ ನೀಡಿದೆ.

ದೂರು: ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಬುಕ್ ಮಾಡಿ ಹಲವು ದಿನಗಳು ಕಳೆದರೂ, ಪೂರೈಕೆ ಆಗಿಲ್ಲ ಎಂದು ಆಹಾರ ಇಲಾಖೆಗೆ ರಾಜ್ಯದಾದ್ಯಂತ ನೂರಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ.

ಬುಕ್ಕಿಂಗ್ ಮಾಡಿ ಐದು–ಆರು ದಿನಗಳಾಗಿವೆ. ಆದರೆ ನಮ್ಮ ಬುಕ್ಕಿಂಗ್‌ಗೆ ಇನ್‌ವಾಯ್ಸ್ ಸೃಜನೆ ಆಗಿಲ್ಲ. ವಿತರಕರಿಗೆ ಕರೆ ಮಾಡಿದರೆ, ಬಿಲ್ಲಿಂಗ್ ಆಗಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಹಲವರು ದೂರಿನಲ್ಲಿ ವಿವರಿಸಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಲಭ್ಯತೆಯಲ್ಲಿ ಯಾವುದೇ ಸಮಸ್ಯೆ ಇಲ್ಲ. ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ನಿಗಾ ವಹಿಸಲಾಗಿದೆ ಎಂದು ಆಹಾರ ಇಲಾಖೆ ಪ್ರಕಟಣೆ ಹೇಳಿದೆ.

ಅಂಕಿ ಅಂಶಗಳು

3.86 ಲಕ್ಷ
ರಾಜ್ಯದಾದ್ಯಂತ ಶನಿವಾರ ವಿತರಿಸಲಾದ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು

6,371
ಶನಿವಾರ ವಿತರಿಸಲಾದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು

ರಸಗೊಬ್ಬರ ಆಮದು ಚುರುಕು

ನವದೆಹಲಿ (ಪಿಟಿಐ): ಮುಂಗಾರು ಬಿತ್ತನೆ ಹಂಗಾಮಿಗೆ ಅಗತ್ಯವಿರುವ ರಸಗೊಬ್ಬರಗಳನ್ನು ಆಮದು ಮಾಡಿಕೊಳ್ಳುವ ಕೆಲಸಕ್ಕೆ ಕೇಂದ್ರ ಸರ್ಕಾರ ಚುರುಕು ನೀಡಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಅನಿಲ ಆಮದು ಹಾಗೂ ಇತರ ಸರಕು ಸಾಗಣೆ ಚಟುವಟಿಕೆಗಳ ಮೇಲೆ ಅಡ್ಡ ಪರಿಣಾಮ ಬೀರಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಯೂರಿಯಾ ಆಮದಿಗಾಗಿ ಕೇಂದ್ರವು ಜಾಗತಿಕ ಟೆಂಡರ್ ಕರೆಯುವ ಕೆಲಸ ಮಾಡಿದೆ. ಫೆಬ್ರುವರಿ ಮಧ್ಯಭಾಗದ ವೇಳೆಗಾಗಲೇ ಒಟ್ಟು 13.5 ಲಕ್ಷ ಟನ್‌ಗಳಷ್ಟು ರಸಗೊಬ್ಬರ ಖರೀದಿಗೆ ಆದೇಶ ನೀಡಿದೆ. ಇದರಲ್ಲಿ ಶೇ 90ರಷ್ಟು ಭಾಗವು ಮಾರ್ಚ್ ಅಂತ್ಯದ ವೇಳೆಗೆ ದೇಶಕ್ಕೆ ಬರಲಿದೆ ಎಂದು ಗೊತ್ತಾಗಿದೆ.

ಭಾರತದಲ್ಲಿ ಅತ್ಯಂತ ಹೆಚ್ಚು ಬಳಕೆಯಾಗುವ ರಸಗೊಬ್ಬರ ಯೂರಿಯಾ. ಅತಿಹೆಚ್ಚಿನ ಪ್ರಮಾಣದಲ್ಲಿ ಸಬ್ಸಿಡಿ ಇರುವುದು ಕೂಡ ಇದಕ್ಕೇ. ಇದನ್ನು ದೇಶದಲ್ಲಿ ವರ್ಷಕ್ಕೆ ಗರಿಷ್ಠ 3.1 ಕೋಟಿ ಟನ್‌ಗಳಷ್ಟು ಉತ್ಪಾದಿಸಲಾಗುತ್ತಿದೆ. ಗರಿಷ್ಠ 1 ಕೋಟಿ ಟನ್‌ನಷ್ಟು ಯೂರಿಯಾವನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಇದರ ಉತ್ಪಾದನೆಗೆ ನೈಸರ್ಗಿಕ ಅನಿಲದ ಅಗತ್ಯ ಬಹಳ ಇದೆ. ಭಾರತವು ಡಿಎಪಿ ಹಾಗೂ ಎನ್‌ಪಿಕೆ ರಸಗೊಬ್ಬರಗಳನ್ನೂ ಆಮದು ಮಾಡಿಕೊಳ್ಳುತ್ತದೆ

ಸುಧಾ, ಮಯೂರ ಓದಿರಿ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಮಾರುಕಟ್ಟೆಗೆ ಕವಿಕಾ ಟ್ರಾನ್ಸ್‌ಫಾರ್ಮರ್

ಅಪಾರ್ಟ್‌ಮೆಂಟ್‌ಗಳು, ಕಾರ್ಖಾನೆಗಳಿಗೆ ಹೆಚ್ಚಿನ ಅನುಕೂಲ

• ಎ.ಎಂ.ಸುರೇಶ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ಕಾರ್ಖಾನೆ (ಕವಿಕಾ) ಉತ್ಪಾದಿಸುವ ವಿದ್ಯುತ್ ಪರಿವರ್ತಕಗಳು ಮುಂದಿನ ತಿಂಗಳಿನಿಂದ ಖಾಸಗಿಯವರಿಗೂ ಲಭ್ಯವಾಗಲಿವೆ. ಇದರಿಂದಾಗಿ ಅಪಾರ್ಟ್‌ಮೆಂಟ್‌ಗಳಿಗೆ, ಕಾರ್ಖಾನೆಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.

ಕವಿಕಾ ಉತ್ಪಾದಿಸುವ ವಿದ್ಯುತ್ ಪರಿವರ್ತಕಗಳನ್ನು (ಟ್ರಾನ್ಸ್‌ಫಾರ್ಮರ್ಸ್) ಇದುವರೆಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂಗಳಿಗೆ) ಮಾತ್ರ ಪೂರೈಸಲಾಗುತ್ತಿತ್ತು. ಆದರೆ, ಬರುವ ಏಪ್ರಿಲ್‌ನಿಂದ ಖಾಸಗಿಯವರೂ ಖರೀದಿ ಮಾಡಬಹುದಾಗಿದೆ ಎಂದು ಕವಿಕಾದ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

250 ಕೆ.ವಿ ಸಾಮರ್ಥ್ಯದ ಡ್ರೈ ಟೈಪ್ ವಿದ್ಯುತ್ ಪರಿವರ್ತಕಗಳನ್ನು ಮೊದಲ ಬಾರಿಗೆ ಉತ್ಪಾದಿಸಲಾಗುತ್ತಿದೆ. ಇದಕ್ಕೆ ಅಗತ್ಯವಿರುವ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ. ಏಪ್ರಿಲ್‌ನಿಂದ ಉತ್ಪಾದನೆ ಶುರುವಾಗಲಿದ್ದು, ಗುಣಮಟ್ಟ ಮತ್ತು ಕಾರ್ಯಕ್ಷಮತೆಗೆ ಒತ್ತು ನೀಡಲಾಗಿದೆ ಎಂದು ವಿವರಿಸಿದರು.

ಮೊದಲ ಹಂತದಲ್ಲಿ 500 ವಿದ್ಯುತ್ ಪರಿವರ್ತಕಗಳನ್ನು ಉತ್ಪಾದಿಸಲಾಗುತ್ತದೆ. ಬೇಡಿಕೆ ಆಧರಿಸಿ ಮುಂದಿನ ದಿನಗಳಲ್ಲಿ ಉತ್ಪಾದನೆ ಪ್ರಮಾಣವನ್ನು ಹೆಚ್ಚಿಸಲಾಗುತ್ತದೆ. ನಗರ ಪ್ರದೇಶಗಳಲ್ಲಿ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಹೆಚ್ಚಾಗಿದ್ದು, ಅವರೆಲ್ಲ ಸ್ವತಂತ್ರವಾಗಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಿಕೊಳ್ಳುತ್ತಾರೆ. ಅಂತಹವರನ್ನು ಗಮನದಲ್ಲಿಟ್ಟುಕೊಂಡು ಉತ್ಪಾದನೆಗೆ ಒತ್ತು ನೀಡಲಾಗಿದೆ.

‘ಮುಕ್ತ ಮಾರುಕಟ್ಟೆಯಲ್ಲಿ ಆನ್‌ಲೈನ್ ಮೂಲಕವೇ ಖರೀದಿ ಮಾಡಬಹುದು. ಇವು ಡ್ರೈ ಟೈಪ್ ವಿದ್ಯುತ್ ಪರಿವರ್ತಕಗಳಾಗಿರುವುದರಿಂದ ಆಯಿಲ್ ಬಳಸುವುದಿಲ್ಲ. ಹೀಗಾಗಿ ಬೆಂಕಿ ಹೊತ್ತಿಕೊಂಡು, ಸ್ಫೋಟವಾಗುವುದು ತಪ್ಪಲಿದೆ. ಸುರಕ್ಷತೆ ದೃಷ್ಟಿಯಿಂದ ಅಪಾರ್ಟ್‌ಮೆಂಟ್ ಮಾಲೀಕರು ಈ ರೀತಿಯ ಪರಿವರ್ತಕಗಳೇ ಬೇಕು ಎಂದು ಬಯಸುತ್ತಾರೆ’ ಎಂದು ತಿಳಿಸಿದರು.

ಉತ್ಪಾದನೆ ದ್ವಿಗುಣ: ಕವಿಕಾ ಪ್ರಸಕ್ತ ಸಾಲಿನಲ್ಲಿ ಇದುವರೆಗೆ 14 ಸಾವಿರ ವಿದ್ಯುತ್ ಪರಿವರ್ತಕಗಳನ್ನು ಉತ್ಪಾದಿಸಿದ್ದು, ಈಗಾಗಲೇ 13 ಸಾವಿರ ಮಾರಾಟ ಆಗಿವೆ. ಒಂದು ಸಾವಿರ ಅಷ್ಟೇ ಇವೆ. ಮಾರ್ಚ್ ಅಂತ್ಯದ ವೇಳೆಗೆ ಇನ್ನೂ ಒಂದು ಸಾವಿರ ವಿದ್ಯುತ್ ಪರಿವರ್ತಕಗಳನ್ನು ಉತ್ಪಾದಿಸಲಾಗುತ್ತದೆ. ಹಿಂದೆಲ್ಲ ತಿಂಗಳಲ್ಲಿ ಗರಿಷ್ಠ 1,500 ವಿದ್ಯುತ್ ಪರಿವರ್ತಕಗಳ ಉತ್ಪಾದನೆ ಆಗುತ್ತಿತ್ತು. ಈಗ ಮೂರು ಸಾವಿರಕ್ಕೆ ಏರಿದೆ.

ಎಸ್ಕಾಂಗಳಿಂದ 25,850 ವಿದ್ಯುತ್ ಪರಿವರ್ತಕಗಳ ಖರೀದಿಗೆ ಆದೇಶ ಬಂದಿದ್ದು, ಈ ವರ್ಷದ ಸೆಪ್ಟೆಂಬರ್ ವೇಳೆಗೆ ಪೂರೈಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಇದರಿಂದ ಸುಮಾರು ₹400 ಕೋಟಿ ಆದಾಯ ಕವಿಕಾಗೆ ಬರಲಿದೆ. ಇದಲ್ಲದೆ 2026–27ನೇ ಸಾಲಿನಲ್ಲಿ ವಿವಿಧ ಸಾಮರ್ಥ್ಯದ ಸುಮಾರು 36,000 ವಿದ್ಯುತ್ ಪರಿವರ್ತಕಗಳ ಉತ್ಪಾದನೆಗೆ ಯೋಜನೆ ರೂಪಿಸಲಾಗಿದೆ. ಇವುಗಳ ಮಾರಾಟದಿಂದ ಸುಮಾರು ₹500 ಕೋಟಿ ಆದಾಯ ನಿರೀಕ್ಷಿಸಲಾಗಿದೆ.

25 ಕೆ.ವಿ, 53 ಕೆ.ವಿ, 100 ಕೆ.ವಿ ಹಾಗೂ 250 ಕೆ.ವಿ ಸಾಮರ್ಥ್ಯದ ವಿದ್ಯುತ್ ಪರಿವರ್ತಕಗಳನ್ನು ಉತ್ಪಾದಿಸಲಾಗುತ್ತದೆ. ಕೃಷಿಕರಿಂದ 25 ಕೆ.ವಿ ಸಾಮರ್ಥ್ಯದ ಪರಿವರ್ತಕಗಳಿಗೆ, ಅಪಾರ್ಟ್‌ಮೆಂಟ್‌ಗಳು ಹಾಗೂ ಕೈಗಾರಿಕೆಗಳಿಂದ 250 ಕೆ.ವಿ ಸಾಮರ್ಥ್ಯದ ಪರಿವರ್ತಕಗಳಿಗೆ ಬೇಡಿಕೆ ಇದೆ. 250 ಕೆ.ವಿ ಸಾಮರ್ಥ್ಯ ಇರುವ ಪರಿವರ್ತಕದ ಬೆಲೆ ₹13 ಲಕ್ಷದಿಂದ ₹14 ಲಕ್ಷ ಇದೆ.

ಕವಿಕಾ ಸಂಸ್ಥೆಯು 2025-26ರ ಸಾಲಿನಲ್ಲಿ ಫೆಬ್ರುವರಿ ಅಂತ್ಯದವರೆಗೆ ₹215 ಕೋಟಿ ವಹಿವಾಟು ನಡೆಸಿದ್ದು, ಇದು ಕವಿಕಾ ಇತಿಹಾಸದಲ್ಲಿಯೇ ಹೆಚ್ಚಿನ ವಹಿವಾಟು ಆಗಿದೆ. ಅಲ್ಲದೆ ಸತತ ಮೂರು ವರ್ಷಗಳ ನಷ್ಟದಿಂದ ಹೊರಬರುವ ಮೂಲಕ ಲಾಭದ ಹಳಿಗೆ ಮರಳಿದ್ದು, 2025–26ರಲ್ಲಿ ₹15 ಕೋಟಿ ಲಾಭ ಗಳಿಸಿದೆ.

ಕವಿಕಾದಲ್ಲಿ ಶಕ್ತಿ ವಿದ್ಯುತ್ ಪರಿವರ್ತಕದ (ಪವರ್ ಟ್ರಾನ್ಸ್‌ಫಾರ್ಮರ್) ದುರಸ್ತಿ ಘಟಕ ಆರಂಭಿಸುವ ಕಾರ್ಯ ಪ್ರಗತಿಯಲ್ಲಿದೆ. ಇದು ಆರಂಭವಾದ ಬಳಿಕ ಕೆಪಿಟಿಸಿಎಲ್ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿಫಲವಾಗುವ 31.5 ಎಂವಿಎ ಸಾಮರ್ಥ್ಯದವರೆಗಿನ ಶಕ್ತಿ ಪರಿವರ್ತಕಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಇದರಿಂದ ಕವಿಕಾಗೆ ಲಾಭವಾಗುವುದರ ಜೊತೆಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಲು ಅನುಕೂಲ ಆಗಲಿದೆ. ಈಗಿನ ಲೆಕ್ಕಾಚಾರದ ಪ್ರಕಾರ 2027–28ನೇ ಸಾಲಿನಿಂದ ದುರಸ್ತಿ ಘಟಕ ಆರಂಭವಾಗಲಿದೆ.

ಮುಖ್ಯಾಂಶಗಳು

- ಮುಕ್ತ ಮಾರುಕಟ್ಟೆಯಲ್ಲಿ ಕವಿಕಾದ ಪರಿವರ್ತಕಗಳು ಲಭ್ಯ
- ಆನ್‌ಲೈನ್ ಮೂಲಕವೂ ಮಾರಾಟ
- ಲಾಭದ ಹಳಿಗೆ ಮರಳಿದ ಕವಿಕಾ

ಹೊರ ರಾಜ್ಯದಲ್ಲಿ ಮಾರಾಟಕ್ಕೆ ಸಿದ್ಧತೆ

ಆಂಧ್ರಪ್ರದೇಶ, ತೆಲಂಗಾಣದಲ್ಲಿ 33 ಕೆ.ವಿ ಸಾಮರ್ಥ್ಯದ ವಿದ್ಯುತ್ ಪರಿವರ್ತಕಗಳಿಗೆ ಬೇಡಿಕೆ ಇದ್ದು, ಇವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಿ, ಆ ರಾಜ್ಯಗಳಲ್ಲಿ ಮಾರಾಟ ಮಾಡಲು ಕವಿಕಾ ಮುಂದಾಗಿದೆ.

‘ಆ ಎರಡೂ ರಾಜ್ಯಗಳ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧತೆ ನಡೆದಿದೆ. ನಮ್ಮ ಮಾರುಕಟ್ಟೆ ಜಾಲವನ್ನು ವಿಸ್ತರಿಸುವ ಜೊತೆಗೆ ಗುಣಮಟ್ಟಕ್ಕೂ ಒತ್ತು ನೀಡಿದ್ದೇವೆ. ಮುಂದಿನ ದಿನಗಳಲ್ಲಿ ಬೇರೆ ರಾಜ್ಯಗಳಿಂದಲೂ ಬೇಡಿಕೆ ಬರುವ ನಿರೀಕ್ಷೆ ಇದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ದಟ್ಟ ಹೊಗೆ....

ಎಎಫ್‌ಪಿ ಚಿತ್ರ

ಯುಎಇ ದೇಶದ ತೈಲ ಘಟಕವೊಂದರಿಂದ ದಟ್ಟ ಹೊಗೆ ಬರುತ್ತಿರುವ ದೃಶ್ಯ ಶನಿವಾರ ಕಂಡು ಬಂತು. ಇರಾನ್ ನಡೆಸಿದ ದಾಳಿಯ ಪರಿಣಾಮ ಇದು ಎನ್ನಲಾಗಿದೆ

ಮಾತುಕತೆಗೆ ಮಧ್ಯಸ್ಥಿಕೆ: ಫ್ರಾನ್ಸ್

ಪ್ಯಾರಿಸ್ (ಎಪಿ): ಇಸ್ರೇಲ್–ಲೆಬನಾನ್ ನಡುವೆ ನೇರ ಮಾತುಕತೆಗೆ ಮಧ್ಯಸ್ಥಿಕೆ ವಹಿಸುವುದಾಗಿ ಫ್ರಾನ್ಸ್ ಹೇಳಿದೆ.

‘ಲೆಬನಾನ್ ಅಧ್ಯಕ್ಷರು, ಪ್ರಧಾನಿ, ಸಂಸತ್ತಿನ ಸ್ಪೀಕರ್ ಅವರೊಂದಿಗೆ ಮಾತನಾಡಿದ್ದೇನೆ. ಅಲ್ಲಿನ ಮುಖಂಡರು ಇಸ್ರೇಲ್ ಜತೆಗೆ ನೇರ ಮಾತುಕತೆಗೆ ಸಿದ್ಧರಿದ್ದಾರೆ. ಆ, ದೇಶವು ಅರಾಜಕತೆಯಲ್ಲಿ ಮುಳುಗದಂತೆ ತಡೆಯಲು ಬೇಕಿರುವ ಎಲ್ಲ ಪ್ರಯತ್ನಗಳನ್ನು ಮಾಡಬೇಕು’ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಹೇಳಿದ್ದಾರೆ.

‘ಲೆಬನಾನ್ ವಿರುದ್ಧದ ಯುದ್ಧ ನಿಲ್ಲಿಸಿ ಕದನ ವಿರಾಮ ಘೋಷಿಸಲು ಮತ್ತು ಶಾಶ್ವತ ಪರಿಹಾರ ಕಂಡುಕೊಳ್ಳಲು ಇಸ್ರೇಲ್ ಈ ಅವಕಾಶವನ್ನು ಬಳಸಿಕೊಳ್ಳಬೇಕು’ ಎಂದು ಮ್ಯಾಕ್ರನ್ ಮನವಿ ಮಾಡಿದ್ದಾರೆ.

‘ಇಸ್ರೇಲ್‌ನೊಂದಿಗೆ ಮಾತುಕತೆಗೆ ಪ್ರಯತ್ನಿಸುತ್ತಿದ್ದೇವೆ. ಆದರೆ, ಅಲ್ಲಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ’ ಎಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಶುಕ್ರವಾರ ಹೇಳಿದ್ದರು. ಇಸ್ರೇಲ್ ಮತ್ತು ಲೆಬನಾನ್ ನಡುವೆ 1948ರಿಂದ ಸಂಘರ್ಷ ಮುಂದುವರಿದಿದೆ.

800 ಸಾವು: ಪಶ್ಚಿಮ ಏಷ್ಯಾ ಸಂಘರ್ಷದಿಂದ ಲೆಬನಾನ್‌ನಲ್ಲಿ ಮಾನವೀಯ ಬಿಕ್ಕಟ್ಟು ತೀವ್ರಗೊಂಡಿದೆ. ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಇಸ್ರೇಲ್ ನಡೆಸಿದ ದಾಳಿಯಿಂದ ಇದುವರೆಗೆ 800 ಜನರು ಮೃತಪಟ್ಟಿದ್ದಾರೆ.

ತೈಲ ಬಿಕ್ಕಟ್ಟು ಹೆಚ್ಚುವ ಸಾಧ್ಯತೆ

ದುಬೈ (ಎಪಿ/ಎಎಫ್‌ಪಿ): ವಿಶ್ವದ ಐದನೆಯ ಒಂದು ಭಾಗದಷ್ಟು ತೈಲ ವ್ಯಾಪಾರ ಹೊರ್ಮುಜ್ ಜಲಸಂಧಿಯ ಮೂಲಕ ನಡೆಯುತ್ತಿದ್ದು, ಅಮೆರಿಕ–ಇರಾನ್ ನಡುವೆ ತೀವ್ರಗೊಂಡಿರುವ ಸಂಘರ್ಷದಿಂದ ತೈಲ ಬಿಕ್ಕಟ್ಟು ಇನ್ನಷ್ಟು ಹೆಚ್ಚುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ.

‘ಸೂಕ್ಷ್ಮ ಮಿಲಿಟರಿ ಯೋಜನೆಯ ಕಾರಣದಿಂದ ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ನೌಕಾಪಡೆಯ ವಿಶೇಷ ಘಟಕ ಮತ್ತು ವಿಶೇಷ ಯುದ್ಧನೌಕೆ ನಿಯೋಜಿಸಲಾಗಿದೆ’ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಒಟ್ಟು ಎಷ್ಟು ಮಂದಿ ಅಮೆರಿಕದ ಸೈನಿಕರು ನಿಯೋಜನೆಗೊಂಡಿದ್ದಾರೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಈ ಪ್ರದೇಶದ ಅತಿ ದೊಡ್ಡ ವಾಯುನೆಲೆಯಾದ ಅಲ್–ಉದೈದ್ ವಾಯುನೆಲೆಯಲ್ಲಿ 8 ಸಾವಿರದಷ್ಟು ಅಮೆರಿಕದ ಸೈನಿಕರು ಇದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ರೆಂಟಲ್ ಪ್ರಾಪರ್ಟೀಸ್

Accommodation Available

Flats

3 BHK Flat 1475 sqft Lease 3 yrs Sahakarnagar, Hebbal, 35 Lakhs, Negotiable with terrace garden. 8660867713.

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

General

ಬೆಂಗಳೂರಿನ ಸುತ್ತಮುತ್ತ ಲಾರಿ ಪ್ರವೇಶ ರಸ್ತೆ ಸೌಲಭ್ಯದೊಂದಿಗೆ Rs 750/- Sqft ಗೆ 7500/- Sqft DC ಪರಿವರ್ತಿತ ಭೂಮಿ ಖರೀದಿಸಲು ಬೇಕಾಗಿದೆ. 9003912275.

WANTED 1 Acre to 100 Acre Land . Ct : 8754809650

ರಿಯಲ್ ಎಸ್ಟೇಟ್ ಸೆಲ್ಲಿಂಗ್

Kengeri

LUXURY APARTMENT Booking Started Call Kirti Mehta 9341218992 By Landmark, Next to kingeri metro station 4 tower of 69-79-89-99 floor, 2016 unit Payment in 36 months 3 BHK, 2,250 to 2,601 sft 3.6cr to 4.16cr++

ಪ್ರವಾಸ

Travel Agencies

ಕಾಶ್ಮೀರ ವೈಷ್ಣೋದೇವಿ ಪ್ರವಾಸ 9 ದಿನಗಳು 28/4, ಚಾರ್ ಧಾಮ್ ಪ್ರವಾಸ 15/5 ಮತ್ತು 26/5. 13 ದಿನಗಳು ನೇಪಾಳ ಪ್ರವಾಸ 9 ದಿನಗಳು 20/4 ಸುವರ್ಣಯಾತ್ರ 9008381022 6360146483

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇಂಗ್ಲೆಂಡ್‌ಗೆ ಮಣಿದ ಭಾರತ

ಅರ್ಹತಾ ಟೂರ್ನಿಯ ಫೈನಲ್‌ನಲ್ಲಿ ಸೋಲು
• ಮೊದಲ 3 ತಂಡಗಳಿಗೆ ವಿಶ್ವಕಪ್ ಟಿಕೆಟ್

ಮುಖ್ಯಾಂಶಗಳು
- ವಿಶ್ವಕಪ್‌ನಲ್ಲಿ 16 ತಂಡಗಳು ಭಾಗಿ
- ಬೆಲ್ಜಿಯಂ, ನೆದರ್ಲೆಂಡ್ಸ್ ಜಂಟಿ ಆತಿಥ್ಯ
- ನವನೀತ್ ಕೌರ್‌ಗೆ ಟೂರ್ನಿಯ ಶ್ರೇಷ್ಠ ಆಟಗಾರ್ತಿ ಗೌರವ

ಹೈದರಾಬಾದ್ (ಪಿಟಿಐ): ಇಂಗ್ಲೆಂಡ್ ತಂಡ, ಎಫ್‌ಐಎಚ್ ಮಹಿಳಾ ಹಾಕಿ ವಿಶ್ವ ಕಪ್ ಅರ್ಹತಾ ಟೂರ್ನಿಯ ಫೈನಲ್‌ನಲ್ಲಿ ಶನಿವಾರ ಆತಿಥೇಯ ಭಾರತ ತಂಡವನ್ನು 2–0 ಗೋಲುಗಳಿಂದ ಸೋಲಿಸಿತು. ಈ ಪಂದ್ಯಕ್ಕೂ ಮೊದಲೇ ಭಾರತಕ್ಕೆ ವಿಶ್ವಕಪ್ ಟಿಕೆಟ್ ಖಾತರಿಯಾಗಿತ್ತು.

ಎಫ್‌ಐಎಚ್ ನಿಯಮದ ಪ್ರಕಾರ ಅರ್ಹತಾ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆದ ತಂಡಗಳು ಅರ್ಹತೆ ಸಂಪಾದಿಸುತ್ತವೆ. ಹೀಗಾಗಿ ಚಾಂಪಿಯನ್ ಇಂಗ್ಲೆಂಡ್, ರನ್ನರ್ ಅಪ್ ಭಾರತ ತಂಡದ ಜೊತೆ ಮೂರನೇ ಸ್ಥಾನ ಪಡೆದ ಸ್ಕಾಟ್ಲೆಂಡ್ ತಂಡಗಳು ವಿಶ್ವಕಪ್‌ಗೆ ಅರ್ಹತೆ ಪಡೆದವು.

ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆಶ್ರಯದಲ್ಲಿ ವಾವ್ರೆ ಮತ್ತು ಆಮ್‌ಸ್ಟಲ್ವೀನ್‌ನಲ್ಲಿ ಆಗಸ್ಟ್ 14 ರಿಂದ 30ರವರೆಗೆ ವಿಶ್ವಕಪ್ ಟೂರ್ನಿ ನಡೆಯಲಿದೆ. ಈ ಬಾರಿ ಪುರುಷರ ಟೂರ್ನಿಯ ವೇಳೆಯೇ ಮಹಿಳಾ ಟೂರ್ನಿಯನ್ನೂ ಹಮ್ಮಿಕೊಳ್ಳಲಾಗಿದೆ.

ಜಿಎಂಸಿ ಬಾಲಯೋಗಿ ಹಾಕಿ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡಕ್ಕೆ ಗ್ರೇಸ್ ಬಾಲ್ಸ್‌ಡನ್ 13ನೇ ನಿಮಿಷ ಪೆನಾಲ್ಟಿ ಕಾರ್ನರ್ ಮೂಲಕ ಮುನ್ನಡೆ ಒದಗಿಸಿದರು. ಎಲಿಝುಬೆತ್ ನೀಲ್ 43ನೇ ನಿಮಿಷ ಫೀಲ್ಡ್ ಗೋಲಿನ ಗಳಿಸಿ ಇಂಗ್ಲೆಂಡ್ ತಂಡದ ಮುನ್ನಡೆಯನ್ನು ಹೆಚ್ಚಿಸಿದರು.

ಒಂಬತ್ತನೇ ಕ್ರಮಾಂಕದಲ್ಲಿರುವ ಭಾರತ ತಂಡ ಎಲ್ಲ ರೀತಿಯಲ್ಲಿ ಪ್ರಯತ್ನಗಳನ್ನು ನಡೆಸಿದರೂ, ಆರನೇ ಸ್ಥಾನದಲ್ಲಿರುವ ಇಂಗ್ಲೆಂಡ್‌ನ ಪ್ರಬಲ ರಕ್ಷಣಾ ಕೋಟೆ ಭೇದಿಸಲು ಸಾಧ್ಯವಾಗಲಿಲ್ಲ.

ಸ್ಕಾಟ್ಲೆಂಡ್‌ಗೆ ಜಯ: ಇದಕ್ಕೆ ಮೊದಲು, ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಸ್ಕಾಟ್ಲೆಂಡ್ 1–0 ಯಿಂದ ಇಟಲಿ ತಂಡವನ್ನು ಸೋಲಿಸಿತ್ತು. ಆ್ಯಮಿ ಕೊಸ್ಟೆಲ್ಲೊ ಪಂದ್ಯದ ನಿರ್ಣಾಯಕ ಗೋಲು ಗಳಿಸಿದರು.

ಸ್ಯಾಂಟಿಯಾಗೊದಲ್ಲಿ ಈ ವಾರದ ಆರಂಭದಲ್ಲಿ ಮುಕ್ತಾಯಗೊಂಡ ಅರ್ಹತಾ ಟೂರ್ನಿಯ ಇನ್ನೊಂದು ಲೆಗ್‌ನಲ್ಲಿ ಆತಿಥೇಯ ಚಿಲಿ, ಆಸ್ಟ್ರೇಲಿಯಾ ಮತ್ತು ಐರ್ಲೆಂಡ್ ತಂಡಗಳು ವಿಶ್ವಕಪ್‌ಗೆ ಟಿಕೆಟ್ ಕಾದಿರಿಸಿದ್ದವು.

ಈ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಪಡೆದ ಜಪಾನ್ ಸಹ ಉನ್ನತ ಕ್ರಮಾಂಕದ ತಂಡಕ್ಕೆ ಇರುವ ಕೋಟಾದ ಮೂಲಕ ವಿಶ್ವಕಪ್‌ಗೆ ಅರ್ಹತೆ ಪಡೆಯಿತು.

ಭಾರತ ತಂಡದ ನಾಯಕಿ ಸಲೀಮಾ ಟೆಟೆ (ಬಲ) ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಲಾಯಿತು –'ಹಾಕಿ ಇಂಡಿಯಾ' ಚಿತ್ರ

ಸಲೀಮಾಗೆ ಹಾಕಿ ಇಂಡಿಯಾ ಅಭಿನಂದನೆ

ಭಾರತ ತಂಡದ ಪರ 150ನೇ ಅಂತರರಾಷ್ಟ್ರೀಯ ಪಂದ್ಯ ಆಡಿದ ನಾಯಕಿ ಸಲೀಮಾ ಟೆಟೆ ಅವರನ್ನು ಹಾಕಿ ಇಂಡಿಯಾ, ಇಂಗ್ಲೆಂಡ್ ವಿರುದ್ಧ ಫೈನಲ್ ಪಂದ್ಯಕ್ಕೆ ಮೊದಲು ಅಭಿನಂದಿಸಿತು.

2016ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಮೆಲ್ಬರ್ನ್‌ನಲ್ಲಿ ಪದಾರ್ಪಣೆ ಪಂದ್ಯ ಆಡಿದ್ದ ಜಾರ್ಖಂಡ್‌ನ 25 ವರ್ಷ ವಯಸ್ಸಿನ ಸಲೀಮಾ ಅಂದಿನಿಂದ ಮಿಡ್ ಫೀಲ್ಡ್‌ನಲ್ಲಿ ಪ್ರಬಲ ಆಟಗಾರ್ತಿಯಾಗಿ ವರ್ಚಸ್ಸು ಮೂಡಿಸಿದ್ದಾರೆ. ತಂಡದ ಸಹ ಆಟಗಾರ್ತಿಯರಿಗೆ ಗೋಲು ಗಳಿಸಲು ಅವಕಾಶಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಸ್ವತಃ 16 ಗೋಲುಗಳನ್ನು ಗಳಿಸಿದ್ದಾರೆ.

ವಿವಿಎಸ್ ಲಕ್ಷ್ಮಣ್– ದ್ರಾವಿಡ್ ಅವಿಸ್ಮರಣೀಯ ಜೊತೆಯಾಟಕ್ಕೆ 'ಬೆಳ್ಳಿ ಬೆಡಗು'

ಭಾರತ ಕ್ರಿಕೆಟ್‌ಗೆ ಸ್ಥಿರತೆ ಒದಗಿಸಿದ ಇನಿಂಗ್ಸ್

ರಾಹುಲ್ ದ್ರಾವಿಡ್ ಅವರು ತಮ್ಮ ವೃತ್ತಿ ಜೀವನದಲ್ಲಿ ಆಟಗಾರ ಮತ್ತು ಕೋಚ್ ಆಗಿ ಕ್ರಿಕೆಟ್‌ಗೆ ನೀಡಿರುವ ಮಹತ್ವದ ಕಾಣಿಕೆಗಳು ಹಲವಾರಿವೆ. ಅದರಲ್ಲಿ ಮುಖ್ಯವಾಗಿ ಜನಮಾನಸದಲ್ಲಿ ನೆನಪಿನಲ್ಲಿ ಉಳಿಯುವುದು 2001ರ ಮಾರ್ಚ್ 11 ರಿಂದ 15ರವರೆಗೆ ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಅವರು ವಿವಿಎಸ್ ಲಕ್ಷ್ಮಣ್ ಜೊತೆಗೆ ಕಟ್ಟಿದ್ದ ಜೊತೆಯಾಟ. ಭಾರತದ ಕ್ರಿಕೆಟ್ ಕ್ಷೇತ್ರಕ್ಕೆ ಹೊಸ ಚೈತನ್ಯ ತುಂಬಿದ ಇನಿಂಗ್ಸ್ ಅದಾಗಿತ್ತು. ಆಸ್ಟ್ರೇಲಿಯಾ ತಂಡದ ಅಹಂಕಾರವನ್ನು ಭಗ್ನಗೊಳಿಸಿದ ಇನಿಂಗ್ಸ್ ಕೂಡ ಅದಾಗಿತ್ತು. ಈಡನ್ ಗಾರ್ಡನ್ ಟೆಸ್ಟ್‌ನಲ್ಲಿ ಭಾರತದ ಮೇಲೆ ಆಸ್ಟ್ರೇಲಿಯಾ ಫಾಲೋ ಆನ್ ಹೇರಿತ್ತು. ಅಂತಹ ಕಠಿಣ ಸನ್ನಿವೇಶದಲ್ಲಿಯೂ ತಂಡಕ್ಕೆ ಪವಾಡ ಸದೃಶವಾದ ಗೆಲುವನ್ನು ತಂದುಕೊಟ್ಟಿದ್ದು ಲಕ್ಷ್ಮಣ್–ದ್ರಾವಿಡ್ ಜೊತೆಯಾಟ. ಇದೀಗ ಆ ಐತಿಹಾಸಿಕ ಜೊತೆಯಾಟಕ್ಕೆ 25 ವಸಂತಗಳು ತುಂಬಿವೆ. ಇದೇ ದಿನ ದ್ರಾವಿಡ್ ಅವರಿಗೆ ಬಿಸಿಸಿಐನ ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ಸಲ್ಲುತ್ತಿರುವುದು ಕೂಡ ಅರ್ಥಪೂರ್ಣವಾಗಿದೆ. ಈ ಸಂದರ್ಭದಲ್ಲಿ **ಮಧು ಜವಳಿ** ಅವರು ಮಾಡಿರುವ ಸಂದರ್ಶನ ಇಲ್ಲಿದೆ.

- **ಭಾರತವು ಟೆಸ್ಟ್ ಇತಿಹಾಸದಲ್ಲಿ ದಾಖಲಿಸಿದ ಅದ್ಭುತ ಗೆಲುವುಗಳಲ್ಲಿ ಕೋಲ್ಕತ್ತ ಪಂದ್ಯವೂ ಒಂದು. ಅದರ ರೂವಾರಿಗಳಲ್ಲಿ ತಾವೂ ಪ್ರಮುಖರಾಗಿದ್ದಿರಿ. 25 ವರ್ಷಗಳ ನಂತರ ಆ ಇನಿಂಗ್ಸ್ ಅನ್ನು ಯಾವ ರೀತಿ ನೋಡುತ್ತೀರಿ?**

ತುಂಬಾ ಸಮಯವಾಯಿತು. ವೃತ್ತಿಜೀವನದ ಒಂದೊಳ್ಳೆಯ ನೆನಪು ಅದು. ಬಹಳಷ್ಟು ಬಗೆಯಲ್ಲಿ ಖುಷಿ ಕೊಟ್ಟ ಇನಿಂಗ್ಸ್ ಅದು. ಆಸ್ಟ್ರೇಲಿಯಾ ಎದುರು ಆ ಪಂದ್ಯದಲ್ಲಿ ಹಿನ್ನಡೆ ಅನುಭವಿಸಿದ ನಂತರ ಮರುಹೋರಾಟ ಮಾಡಿದ್ದು ಅವಿಸ್ಮರಣೀಯವಾಗುತ್ತದೆ. ಅದೊಂದು ನಿಜಕ್ಕೂ ಬಹಳ ಮುಖ್ಯವಾದ ಗೆಲುವಾಗಿತ್ತು. ಅದು ಜನರ ಮನದಲ್ಲಿ ಅಚ್ಚೊತ್ತಿರುವುದು ತೃಪ್ತಿ ತಂದಿದೆ. ಈ 25 ವರ್ಷಗಳಲ್ಲಿ ದಾಖಲಾಗಿರುವ ಬಹಳಷ್ಟು ನೆನಪುಗಳಲ್ಲಿಯೂ ಆ ಇನಿಂಗ್ಸ್ ಸ್ಮರಣೀಯವಾಗಿರುವುದು ವಿಶೇಷ.

- **ಈಡನ್ ಗಾರ್ಡನ್ ಹಣಾಹಣಿಗೂ ಮುನ್ನ ಮುಂಬೈನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಭಾರತ ತಂಡ ಸೋತಿತ್ತು. ಕೋಲ್ಕತ್ತದಲ್ಲಿ ಮೊದಲ ಇನಿಂಗ್ಸ್ ಹಿನ್ನಡೆಯಾಗಿತ್ತು. ಫಾಲೋ ಆನ್ ಕೂಡ ಹೇರಲಾಗಿತ್ತು. ಎರಡನೇ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್‌ಗಳು ಬೇಗನೆ ಪತನವಾದವು. ಆ ಸಂದರ್ಭದಲ್ಲಿ ನಿಮ್ಮ ಮನಸ್ಥಿತಿ ಹೇಗಿತ್ತು?**

ಸಹಜವಾಗಿಯೇ ನಾವು ಬಹಳ ಒತ್ತಡದಲ್ಲಿದ್ದೆವು. ಸತತ 16 ಟೆಸ್ಟ್‌ಗಳನ್ನು ಜಯಿಸಿದ್ದ ಆಸ್ಟ್ರೇಲಿಯಾ ಎದುರು ಆಡುತ್ತಿದ್ದೆವು. ಮುಂಬೈ ಪಂದ್ಯದಲ್ಲಿಯೂ ನಾವು ಅವರಿಗೆ ಸೋತಿದ್ದೆವು. ಸರಣಿಯ ಕುರಿತು ಬಹಳಷ್ಟು ಚರ್ಚೆಗಳು ನಡೆಯುತ್ತಿದ್ದವು. ಕೋಲ್ಕತ್ತದಲ್ಲಿ ಮೊದಲ ಮೂರು ದಿನ ಅವರೇ ಮೇಲುಗೈ ಸಾಧಿಸಿದ್ದರು. ಆ ಕಠಿಣ ಪರಿಸ್ಥಿತಿಯಲ್ಲಿ ನಾವು ಎಷ್ಟು ಸಾಧ್ಯವೋ ಅಷ್ಟು ಆಟ ಮುಂದುವರಿಸುವ ಬಗ್ಗೆ ಮಾತ್ರ ಯೋಚಿಸಿದ್ದೆವು. ಬೇರೆ ಯಾವುದೇ ಆಲೋಚನೆಯೂ ಇರಲಿಲ್ಲ. ಜೊತೆಯಾಟ ಗಟ್ಟಿಯಾಗಿ ಮುಂದುವರೆಯತೊಡಗಿದಂತೆ ನಮ್ಮ ಮೇಲಿನ ಒತ್ತಡ ನಿಧಾನವಾಗಿ ಎದುರಾಳಿಗಳತ್ತ ವರ್ಗವಾಗತೊಡಗಿತು. ಬಿಸಿಲಿನ ಕಾವು ಕೂಡ ಹೆಚ್ಚಿತ್ತು. ನಾವಿಬ್ಬರೂ ಪರಸ್ಪರ ಜೊತೆಯಾಟವನ್ನು ಬೆಳೆಸುವತ್ತ ಮುಂದಡಿ ಇಟ್ಟೆವು. ಪಂದ್ಯದ ಕೊನೆಯ ದಿನದಾಟದಲ್ಲಿ ಉಳಿದ ಆಟಗಾರರ ಬೆಂಬಲವೂ ಲಭಿಸಿತ್ತು. ಪಂದ್ಯ ಗೆದ್ದೆವು.

- **ತಾವು ಯಾವಾಗಲೂ 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವುದು ವಾಡಿಕೆಯಾಗಿತ್ತು. ಆದರೆ ಆ ಇನಿಂಗ್ಸ್‌ನಲ್ಲಿ 6ನೇ ಕ್ರಮಾಂಕದಲ್ಲಿ ಆಡಿ ಯಶಸ್ವಿಯಾದ ಬಗ್ಗೆ.**

ಆ ಸರಣಿ ಮತ್ತು ದೇಶಿ ಕ್ರಿಕೆಟ್ ಪಂದ್ಯಗಳಲ್ಲಿ ನಾನು ರನ್‌ಗಳನ್ನು ಗಳಿಸಿದ್ದೆ. ಉತ್ತಮ ಲಯದಲ್ಲಿಯೇ ಇದ್ದೆ. ಆದರೆ ನನ್ನ ನಿರೀಕ್ಷೆಗೆ ತಕ್ಕ ಸ್ಕೋರ್‌ಗಳು ಆಗ ದಾಖಲಾಗದ ಕುರಿತ ಒತ್ತಡವೂ ಇತ್ತು. ಆರನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಲು ಸೂಚನೆ ಬಂದಾಗ ಒಪ್ಪಿದ್ದೆ. ಅದು ಎದುರಾಳಿ ತಂಡದ ಮೇಲೆ ಒತ್ತಡ ಹೇರುವ ತಂತ್ರವೂ ಆಗಿತ್ತು. ಆ ವೇಳೆ, ಕ್ರೀಸ್‌ನಲ್ಲಿದ್ದ ಲಕ್ಷ್ಮಣ್ ಉತ್ತಮವಾಗಿ ಆಡುತ್ತಿದ್ದರು. ಅವರ ಆಟಕ್ಕೆ ಬೆಂಬಲವಾಗಿ ನಿಲ್ಲುವ ಯೋಚನೆ ಮಾತ್ರ ನನಗಿತ್ತು. ಆ ಹಂತದಲ್ಲಿ ವಿಕೆಟ್ ಕಳೆದುಕೊಂಡರೆ ಪಂದ್ಯ ಮತ್ತು ಸರಣಿ ಸೋಲು ಖಚಿತ ಎಂಬುದರ ಅರಿವಿತ್ತು. ಹೆಚ್ಚು ಹೊತ್ತು ನಾನು ಕ್ರೀಸ್‌ನಲ್ಲಿದ್ದಷ್ಟೂ ಇನಿಂಗ್ಸ್ ಬಲ ಹೆಚ್ಚಲಿದೆ ಎಂಬ ಭಾವನೆ ಬಂದಿತ್ತು. ಅದರ ಪ್ರಕಾರ ಜೊತೆಯಾಟ ಬೆಳೆಸಿದೆವು.

- **ನೀವು ಮತ್ತು ಲಕ್ಷ್ಮಣ್ ಹಲವು ಪಂದ್ಯಗಳಲ್ಲಿ ಉಪಯುಕ್ತ ಜೊತೆಯಾಟಗಳನ್ನು ಆಡಿರುವ ದಾಖಲೆಗಳಿವೆ. ಆದರೆ ಈಡನ್ ಗಾರ್ಡನ್ ಜೊತೆಯಾಟದಲ್ಲಿ ಲಕ್ಷ್ಮಣ್ ಅವರ ಇನಿಂಗ್ಸ್ ಹೇಗಿತ್ತು?**

ನಾನು ಲಕ್ಷ್ಮಣ್ ಜೊತೆಗೆ ಜೂನಿಯರ್ ಕ್ರಿಕೆಟ್‌ನಲ್ಲಿ ದಕ್ಷಿಣ ವಲಯ ತಂಡದಲ್ಲಿ ಆಡಿದ್ದೆ. ದೇಶಿ ಟೂರ್ನಿಗಳಲ್ಲಿಯೂ ದೊಡ್ಡ ಜೊತೆಯಾಟಗಳನ್ನು ಆಡಿದ್ದೆವು. ಆದ್ದರಿಂದ ಪರಸ್ಪರ ಚೆನ್ನಾಗಿ ಅರಿತಿದ್ದೆವು. ಅವರೊಬ್ಬ ಅದ್ಭುತ ಬ್ಯಾಟರ್. ಎಲ್ಲ ರೀತಿಯ ಬೌಲಿಂಗ್ ಮುಂದೆಯೂ ಅಮೋಘವಾಗಿ ಆಡಬಲ್ಲ ಬ್ಯಾಟರ್. ಅವರ ಆಟವನ್ನು ನೋಡುತ್ತ ಆನಂದಿಸಿದೆ. ಅವರ ಶಾಂತಚಿತ್ತದ ಆಟ ಚೆಂದ. ಅವರ ಸ್ಟೈಲಿಷ್ ಬ್ಯಾಟಿಂಗ್ ನೋಡುವುದೇ ಕಣ್ಣಿಗೆ ಹಬ್ಬ. ಇನ್ನು ಅವರೊಂದಿಗೆ ಜೊತೆಯಾಟ ಕಟ್ಟುವುದು ಕೂಡ ಅದ್ಭುತ ಅನುಭವ.

ವಿವಿಎಸ್ ಲಕ್ಷ್ಮಣ್ ಮತ್ತು ರಾಹುಲ್ ದ್ರಾವಿಡ್

ಪಂದ್ಯದ ಅಂಕಿ ಅಂಶಗಳು

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 445 (131.5 ಓವರ್); ಭಾರತ: 171 (58.1 ಓವರ್)

ಎರಡನೇ ಇನಿಂಗ್ಸ್ (ಫಾಲೋ ಆನ್): ಭಾರತ 7ಕ್ಕೆ 657 ಡಿ. (178 ಓವರ್); ಆಸ್ಟ್ರೇಲಿಯಾ: 212 (68.3 ಓವರ್)

ಫಲಿತಾಂಶ: ಭಾರತಕ್ಕೆ 171 ರನ್ ಗೆಲುವು.

ವಿವಿಎಸ್ ಲಕ್ಷ್ಮಣ್: 281 ರನ್ | 452 ಎಸೆತ | 44 ಬೌಂಡರಿ | 631 ನಿಮಿಷ

ರಾಹುಲ್ ದ್ರಾವಿಡ್: 180 ರನ್ | 353 ಎಸೆತ | 20 ಬೌಂಡರಿ | 446 ನಿಮಿಷ

376 ಐದನೇ ವಿಕೆಟ್ ಜೊತೆಯಾಟದಲ್ಲಿ ಲಕ್ಷ್ಮಣ್ ಮತ್ತು ದ್ರಾವಿಡ್ ಸೇರಿಸಿದ ರನ್‌ಗಳು

13 ಭಾರತದ ಹರಭಜನ್ ಸಿಂಗ್ ಪಂದ್ಯದಲ್ಲಿ ಗಳಿಸಿದ್ದ ಒಟ್ಟು ವಿಕೆಟ್‌ಗಳು

110 ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ನಾಯಕ ಸ್ಟೀವ್ ವಾ ಶತಕ ಗಳಿಸಿದ್ದರು

ಟೆನಿಸ್: ರಾಜ್ಯದ ಸ್ನಿಗ್ಧಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸ್ನಿಗ್ಧಾ ಕಾಂತಾ ಅವರು ಹರಿಯಾಣದ ಗುರುಗ್ರಾಮದಲ್ಲಿ ಶನಿವಾರ ಮುಕ್ತಾಯಗೊಂಡ ಐಟಿಎಫ್ ವಿಶ್ವ ಟೆನಿಸ್ ಟೂರ್ ಜೂನಿಯರ್ ಜೆ60 ಟೂರ್ನಿಯ ಬಾಲಕಿಯರ ಸಿಂಗಲ್ಸ್ ವಿಭಾಗದ ಕಿರೀಟ ಗೆದ್ದುಕೊಂಡರು.

ಎರಡನೇ ಶ್ರೇಯಾಂಕ ಪಡೆದಿದ್ದ ಸ್ನಿಗ್ಧಾ, ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 6–4, 6–4ರಿಂದ ನೇರ ಸೆಟ್‌ಗಳಲ್ಲಿ ಕರ್ನಾಟಕದವರೇ ಆದ ಪದ್ಮಪ್ರಿಯ ರಮೇಶ್‌ಕುಮಾರ್ ವಿರುದ್ಧ ಗೆಲುವು ಸಾಧಿಸಿದರು.

ಸ್ನಿಗ್ಧಾ ಅವರು ಸೆಮಿಫೈನಲ್ ಪಂದ್ಯದಲ್ಲಿ 6–2, 3–6, 6–4ರಿಂದ ಐದನೇ ಶ್ರೇಯಾಂಕದ ದೀಪ್ತಿಕಾ ವಿಜ್ಞಾನಮೂರ್ತಿ (ಕರ್ನಾಟಕ) ಅವರನ್ನು ಮಣಿಸಿದ್ದರು. 16 ವರ್ಷ ವಯಸ್ಸಿನ ಆಟಗಾರ್ತಿ ರಾಯ್ಪುರದಲ್ಲಿ 2025ರ ಮಾರ್ಚ್‌ನಲ್ಲಿ ನಡೆದ ಐಟಿಎಫ್ ವಿಶ್ವ ಟೆನಿಸ್ ಟೂರ್ ಜೂನಿಯರ್ ಜೆ30 ಟೂರ್ನಿಯಲ್ಲೂ ಪ್ರಶಸ್ತಿ ಜಯಿಸಿದ್ದರು.

13 ವರ್ಷ ವಯಸ್ಸಿನ ಆಟಗಾರ್ತಿ, ಮೈಸೂರಿನ ಪದ್ಮಪ್ರಿಯ ಅವರು ಟೂರ್ನಿಯಲ್ಲಿ ಒಂದೂ ಸೆಟ್ ಕಳೆದುಕೊಳ್ಳದೆ ಫೈನಲ್ ಪ್ರವೇಶಿಸಿದ್ದರು. ನಾಲ್ಕರ ಘಟ್ಟದಲ್ಲಿ 6–4, 6–1ರಿಂದ ಅಗ್ರ ಶ್ರೇಯಾಂಕದ ಆಟಗಾರ್ತಿ ಪ್ರಿಶಾ ನಿಖಿಲ್ ಶಿಂದೆ ಅವರಿಗೆ ಆಘಾತ ನೀಡಿದ್ದರು.

ಟ್ರೋಫಿಯೊಂದಿಗೆ ಸ್ನಿಗ್ಧಾ ಕಾಂತಾ (ಬಲ) ಹಾಗೂ ಪದ್ಮಪ್ರಿಯ

ರಾಜ್ಯ ತಂಡಗಳ ಶುಭಾರಂಭ

ಇಂದೋರ್ (ಪಿಟಿಐ): ಕರ್ನಾಟಕ ತಂಡಗಳು ಶನಿವಾರ ಇಲ್ಲಿ ಆರಂಭಗೊಂಡ 87ನೇ ಯುಟಿಟಿ ಸೀನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನೊಡನೆ ಅಭಿಯಾನ ಆರಂಭಿಸಿದವು.

ರಾಜ್ಯ ಪುರುಷರ ತಂಡವು ಎಚ್ ಗುಂಪಿನ ಪಂದ್ಯದಲ್ಲಿ 3–0ಯಿಂದ ಅಸ್ಸಾಂ ತಂಡವನ್ನು ಸುಲಭವಾಗಿ ಮಣಿಸಿತು.

ಮಹಿಳೆಯರ ತಂಡವು ಸಿ ಗುಂಪಿನ ಪಂದ್ಯದಲ್ಲಿ 3–2ರಿಂದ ಅಸ್ಸಾಂ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ಸೂರ್ಯ ಪಡೆಗೆ ಇಂದು 'ನಮನ್' ಗೌರವ

ಮುಂಬೈ (ಪಿಟಿಐ): ಟಿ20 ವಿಶ್ವಕಪ್ ಜಯಿಸಿದ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವನ್ನು ಭಾನುವಾರ ನಡೆಯಲಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ 'ನಮನ್ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಗೌರವಿಸಲಾಗುವುದು. ಇದೇ ವೇಳೆ, ಬೇರೆ ಬೇರೆ ವಿಭಾಗಗಳಲ್ಲಿ ಐಸಿಸಿ ಟ್ರೋಫಿ ಜಯಿಸಿದ ದೇಶದ ಐದು ತಂಡಗಳನ್ನೂ ಸನ್ಮಾನಿಸಲಾಗುವುದು.

ಗೌತಮ್ ಗಂಭೀರ್ ಮುಖ್ಯ ಕೋಚ್ ಆಗಿರುವ ಭಾರತ ತಂಡವು ಈಚೆಗೆ ಅಹಮದಾಬಾದಿನಲ್ಲಿ ನ್ಯೂಜಿಲೆಂಡ್ ಎದುರಿನ ಫೈನಲ್‌ನಲ್ಲಿ ಗೆದ್ದು ಪ್ರಶಸ್ತಿ ಗಳಿಸಿತ್ತು. ಭಾರತ ತಂಡವು ಸತತ ಎರಡನೇ ಮತ್ತು ಒಟ್ಟಾರೆ ಮೂರನೇ ಬಾರಿ ಟಿ20 ವಿಶ್ವಕಪ್ ಗೆದ್ದು ದಾಖಲೆ ಬರೆಯಿತು.

ಹೋದ ವರ್ಷ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್, ಐಸಿಸಿ ಚಾಂಪಿಯನ್ಸ್ ಟ್ರೋಫಿ, 19 ವರ್ಷದೊಳಗಿನವರ ಏಕದಿನ ಮತ್ತು ಯೂತ್ ಟಿ20 ವಿಶ್ವಕಪ್ ಗೆದ್ದ ತಂಡಗಳನ್ನು ಗೌರವಿಸಲಾಗುವುದು.

ಭಾರತ ಏಕದಿನ ಮತ್ತು ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್ ಅವರಿಗೆ 'ವರ್ಷದ ಆಟಗಾರ'ನಿಗೆ ನೀಡಲಾಗುವ ಪಾಲಿ ಉಮ್ರಿಗರ್ ಪ್ರಶಸ್ತಿ ಪಡೆಯಲಿದ್ದಾರೆ.

ದಿಗ್ಗಜ ಕ್ರಿಕೆಟಿಗರಾದ ರೋಜರ್ ಬಿನ್ನಿ ಮತ್ತು ರಾಹುಲ್ ದ್ರಾವಿಡ್ ಅವರಿಗೆ ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು. ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ ಬಿಸಿಸಿಐ ಜೀವಮಾನ ಸಾಧನೆ ಗೌರವ ಲಭಿಸಿದೆ.

ಅಖಿಲ ಭಾರತ ಅಂತರ ಕಾಲೇಜು ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಗೆದ್ದು ಬೀಗಿದ ಕ್ರೈಸ್ಟ್ ಕಾಲೇಜು ತಂಡ

ಪ್ರಜಾವಾಣಿ ವಾರ್ತೆ

ಕೋಲಾರ: ಬೆಂಗಳೂರಿನ ಕ್ರೈಸ್ಟ್ ಕಾಲೇಜು ತಂಡದವರು ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ಕಾಲೇಜು ಆಹ್ವಾನಿತ ಬ್ಯಾಸ್ಕೆಟ್‌ಬಾಲ್ 'ಚಿನ್ನದ ನಾಡು ಕಪ್- 2026' ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿದರು.

ನಗರದ ಮಿನಿ ಕ್ರೀಡಾಂಗಣದಲ್ಲಿ ಚಿನ್ನದ ನಾಡು ಬ್ಯಾಸ್ಕೆಟ್‌ಬಾಲ್ ಕ್ಲಬ್ ಆಶ್ರಯದಲ್ಲಿ ನಡೆದ ಪಂದ್ಯದಲ್ಲಿ ಈ ತಂಡದವರು 65–60 ಪಾಯಿಂಟ್‌ಗಳಿಂದ ಕೇರಳದ ಸೇಂಟ್ ಅಲ್ಬರ್ಟ್ಸ್ ಕಾಲೇಜು ತಂಡವನ್ನು ಮಣಿಸಿದರು.

ವಿರಾಮದ ವೇಳೆ ತಲಾ 27 ಪಾಯಿಂಟ್‌ಗಳಿಂದ ಸಮಬಲ ಸಾಧಿಸಿದ್ದರು. ಆದರೆ, ವಿರಾಮದ ನಂತರ ಪಂದ್ಯ ಕ್ಷಣ ಕ್ಷಣಕ್ಕೆ ತಿರುವು ಪಡೆಯುತ್ತಾ ಸಾಗಿತು. ಉಭಯ ತಂಡಗಳ ಆಟಗಾರರು ವೇಗಕ್ಕೆ ಒತ್ತು ನೀಡಿದರು. ಅಂತಿಮವಾಗಿ ಉತ್ತಮ ಕೌಶಲ ಆಟವಾಡಿದ ಕ್ರೈಸ್ ಕಾಲೇಜು ತಂಡದವರು 5 ಪಾಯಿಂಟ್‌ಗಳಿಂದ ಜಯಭೇರಿ ಬಾರಿಸಿದರು.

ಮಹಿಳೆಯರ ವಿಭಾಗದ ಮತ್ತೊಂದು ರೋಚಕ ಪಂದ್ಯದಲ್ಲಿ ಜೈನ್ ಕಾಲೇಜು ತಂಡ ಕೇವಲ 1 ಪಾಯಿಂಟ್‌ನಿಂದ ಕೇರಳದ ಪ್ರಾವಿಡೆನ್ಸ್ ಕಾಲೇಜು ತಂಡವನ್ನು ಸೋಲಿಸಿದರು.

ವಿರಾಮದ ವೇಳೆಗೆ ಪಂದ್ಯ 31–31 ಪಾಯಿಂಟ್‌ಗಳಿಂದ ಸಮಬಲವಾಗಿತ್ತು. ನಂತರ ಉಭಯ ತಂಡದ ಆಟಗಾರರು ಅತ್ಯುತ್ತಮವಾಗಿ ಆಟವಾಡಿ ಪಂದ್ಯ ಗೆಲ್ಲಲು ಹರಸಾಹಸ ಪಟ್ಟರು. ಕೊನೆಯಲ್ಲಿ ಜೈನ್ ತಂಡ 61–60 ಪಾಯಿಂಟ್‌ಗಳಿಂದ ಪ್ರಾವಿಡೆನ್ಸ್ ಎದುರು ಗೆಲುವು ಸಾಧಿಸಿತು. ಜೈನ್ ಕಾಲೇಜು ತಂಡದ ಆಧ್ಯಾ (23 ಪಾಯಿಂಟ್) ಹಾಗೂ ಪ್ರಾವಿಡೆನ್ಸ್ ತಂಡದ ವರ್ಷಾ (25 ಪಾಯಿಂಟ್) ಮಿಂಚಿದರು.

ಕೋಲಾರದಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ಕಾಲೇಜು ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪಂದ್ಯ ನೋಟ. ಕ್ರೈಸ್ಟ್ ಕಾಲೇಜು ತಂಡ ಗೆಲುವು ಸಾಧಿಸಿತು

ಮುಖ್ಯಾಂಶಗಳು
- ಚಿನ್ನದ ನಾಡು ಬ್ಯಾಸ್ಕೆಟ್‌ಬಾಲ್ ಕ್ಲಬ್ ಆಯೋಜನೆ
- ವಿವಿಧ ರಾಜ್ಯಗಳ ಒಟ್ಟು 10 ಕಾಲೇಜು ಭಾಗಿ
- ಮಹಿಳೆಯರ ವಿಭಾಗದಲ್ಲಿ ಜೈನ್ ಕಾಲೇಜಿಗೆ ಗೆಲುವು

ಈ ಟೂರ್ನಿಗೆ ಬೆಂಗಳೂರಿನ ಪೊಲೀಸ್ ತರಬೇತಿ ಡಿಐಜಿಪಿ ಡಿ.ದೇವರಾಜ್ ಚಾಲನೆ ನೀಡಿದ್ದರು. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಭೇಟಿ ನೀಡಿ ಆಟಗಾರರನ್ನು ಪರಿಚಯಿಸಿಕೊಂಡರು.

ಸುಮಾರು ₹4 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಸಿಂಥೆಟಿಕ್ ಕೋರ್ಟ್ ನಿರ್ಮಾಣವಾದ ಬಳಿಕ ನಡೆಯುತ್ತಿರುವ ಪ್ರಥಮ ಟೂರ್ನಿ ಇದಾಗಿದೆ. ತಮಿಳುನಾಡು, ಕೇರಳ, ಆಂಧ್ರ ಪ್ರದೇಶ, ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದ ಒಟ್ಟು 10 ವಿಶ್ವವಿದ್ಯಾಲಯದ ಕಾಲೇಜು ತಂಡಗಳು ಭಾಗವಹಿಸಿವೆ. ಈ ಪೈಕಿ 6 ಪುರುಷರ ಹಾಗೂ 4 ಮಹಿಳಾ ತಂಡಗಳು ಇವೆ.

'ಯುಕೆಪಿಗೆ ₹5 ಸಾವಿರ ಕೋಟಿ'

ಒಂದನೇ ಫ್ಲಾಪ್ ಪುಟದಿಂದ...

ಅಲ್ಲದೇ 'ಗುಜರಾತ್‌ನಲ್ಲಿ ನದಿ ನೀರು ಹಂಚಿಕೆ ಕುರಿತು ವ್ಯಾಜ್ಯ ಇದ್ದರೂ, ಗೆಜೆಟ್ ನೋಟಿಫಿಕೇಷನ್ ಹೊರಡಿಸಲಾಯಿತು. ಪ್ರಧಾನಿ ಮೋದಿ, ಸಚಿವ ಅಮಿತ್ ಶಾ ಅವರು ತಮ್ಮ ಸ್ವಂತ ರಾಜ್ಯಕ್ಕೆ ಮಾಡಿದ ಅನುಕೂಲವನ್ನು ಯುಕೆಪಿ ವಿಷಯದಲ್ಲಿ ಕರ್ನಾಟಕಕ್ಕೆ ಏಕೆ ಮಾಡುತ್ತಿಲ್ಲ' ಎಂದು ಪ್ರಶ್ನಿಸಿದರು.

'ಯುಕೆಪಿ ಕುರಿತು ಪತ್ರ ಬರೆಯುವುದರ ಜೊತೆಗೆ ಪ್ರಧಾನಿಯನ್ನು ಭೇಟಿ ಮಾಡಿ, ಕೋರಲಾಗಿದೆ. ಆದರೂ, ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಮಹದಾಯಿ ವಿಷಯದಲ್ಲಿ ಕೋರ್ಟ್‌ನಲ್ಲಿ ಯಾವುದೇ ಪ್ರಕರಣಗಳಿಲ್ಲ. ಆದರೂ, ಅನುಮತಿ ನೀಡುತ್ತಿಲ್ಲ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಾತನಾಡಿ, 'ಯುಕೆಪಿ 3ನೇ ಹಂತದ ಯೋಜನೆಗೆ ಭೂಸ್ವಾಧೀನ ಮಾಡದಂತೆ ಆಂಧ್ರಪ್ರದೇಶ ಕೇಂದ್ರದ ಮೇಲೆ ಒತ್ತಡ ಹಾಕುತ್ತಿದೆ. ಈ ಕುರಿತು ವಾಸ್ತವ ಮನವರಿಕೆ ಮಾಡಲು ಮಂಗಳವಾರ ದೆಹಲಿಯಲ್ಲಿ ಸಂಸದರನ್ನೂ ಭೇಟಿ ಮಾಡಲಿದ್ದೇವೆ' ಎಂದು ಹೇಳಿದರು.

ಕುಡಿಯುವ ನೀರಿನಲ್ಲಿ ಮಾಲಿನ್ಯಕಾರಕಗಳ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಲ ಜೀವನ್ ಮಿಷನ್ ಯೋಜನೆಯಡಿ ಕರ್ನಾಟಕ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಪ್ರಯೋಗಾಲಯಗಳಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಕುಡಿಯುವ ನೀರಿನ ಮಾದರಿಗಳಲ್ಲಿ ಗಣನೀಯ ಮಾಲಿನ್ಯ ಕಾರಕಗಳು ಪತ್ತೆಯಾಗಿವೆ ಎಂದು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಹಲವು ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಚಿವರು ಲಿಖಿತ ಉತ್ತರ ನೀಡಿದ್ದಾರೆ. ಕುಡಿಯುವ ನೀರಿನ ಮಾದರಿಗಳಲ್ಲಿ ಫ್ಲೋರೈಡ್, ಆರ್ಸೆನಿಕ್, ಕಬ್ಬಿಣ, ನೈಟ್ರೇಟ್, ಲವಣಾಂಶ ಮತ್ತು ಸೂಕ್ಷ್ಮಜೀವಿಯಂತಹ ಮಾಲಿನ್ಯ ಕಾರಕಗಳು ಕಂಡು ಬಂದಿವೆ. ಉತ್ತರ ಕರ್ನಾಟಕ ಹಾಗೂ ಬಯಲುಸೀಮೆಯ ಜಿಲ್ಲೆಗಳಲ್ಲಿ ಮಾಲಿನ್ಯಕಾರಕಗಳ ಪ್ರಮಾಣ ಜಾಸ್ತಿ ಇದೆ ಎಂದು ಅವರು ಮಾಹಿತಿ ನೀಡಿದ್ದಾರೆ.

'ನೀರಿನ ಗುಣಮಟ್ಟದ ವರದಿಗಳ ಆಧಾರದಲ್ಲಿ ನಿಯಮಿತವಾಗಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ. ನೀರಿನ ಮಾದರಿಗಳನ್ನು ಪರೀಕ್ಷೆ ನಡೆಸಿ ಸೋಂಕು ನಿವಾರಕ ಹಾಕಲಾಗುತ್ತಿದೆ ಹಾಗೂ ಶುಚಿಗೊಳಿಸಲಾಗುತ್ತಿದೆ. ನೀರಿನ ಗುಣಮಟ್ಟ ಪರಿಶೀಲಿಸಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಾರ್ಯಪಡೆಗಳನ್ನು ರಚಿಸಲಾಗಿದೆ' ಎಂದರು.

ಅಮೃತ್ ಯೋಜನೆಯಡಿ ಜಿಯೋ ಸ್ಪೇಷಿಯಲ್ ದತ್ತಾಂಶಗಳನ್ನು ಬಳಸಿಕೊಂಡು ನೀರು ಹಾಗೂ ಒಳಚರಂಡಿ ಜಾಲಗಳ ಮ್ಯಾಪಿಂಗ್ ಮಾಡುವಂತೆ ರಾಜ್ಯ ಸರ್ಕಾರಗಳಿಗೆ ಇತ್ತೀಚೆಗೆ ನಿರ್ದೇಶನ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರಯೋಗಾಲಯದಲ್ಲಿ ಪರೀಕ್ಷಿಸಿದ ಮಾದರಿಗಳು

ವರ್ಷ	ರಾಸಾಯನಿಕಗಳ ಪತ್ತೆ	ಬ್ಯಾಕ್ಟೀರಿಯಾಗಳ ಪತ್ತೆ	ರಾಸಾಯನಿಕ ಮಾಲಿನ್ಯ	ಬ್ಯಾಕ್ಟೀರಿಯಾ ಮಾಲಿನ್ಯ
2023-24	251763	46309	24917	4670
2024-25	272166	118079	17261	2574
2025-26	196194	50134	10911	452

ಜಿಲ್ಲಾವಾರು ಚಿತ್ರಣ

ಜಿಲ್ಲೆ	ಗಡಸುತನ	ಫ್ಲೋರೈಡ್	ನೈಟ್ರೇಟ್
ಚಿಕ್ಕಬಳ್ಳಾಪುರ	0	73	212
ಚಿತ್ರದುರ್ಗ	76	241	214
ಕೋಲಾರ	57	107	70
ತುಮಕೂರು	269	100	67
ವಿಜಯಪುರ	277	171	264
ಕಲಬುರಗಿ	76	32	37
ರಾಯಚೂರು	67	125	119

ಕುಡಿಯುವ ನೀರಿನ ಮಾದರಿ ಕಲುಷಿತ (ರಾಜ್ಯದ ಚಿತ್ರಣ 2025–26)

ಕ್ಷಾರ	387
ಟಿಡಿಎಸ್	473
ಗಡಸುತನ	2,145
ಕಬ್ಬಿಣದ ಅಂಶ	114
ಫ್ಲೋರೈಡ್	1169
ನೈಟ್ರೇಟ್	2224
ಇ-ಕೋಲಿ	315

DH DECCAN HERALD | ಪ್ರಜಾವಾಣಿ

ಎಡ್ಯುವರ್ಸ್™
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ
ಪ್ರಾಯೋಜಕರು AD6 advertising A Unit of Sri Sairam Enterprises
*ಪ್ರವೇಶ ಉಚಿತ

ಬೆಂಗಳೂರು: 04-05 ಏಪ್ರಿಲ್ 2026 ಗಾಯತ್ರಿ ಗ್ರಾಂಡ್, ಅರಮನೆ ಮೈದಾನ (Gate 4)
ಹುಬ್ಬಳ್ಳಿ: 11-12 ಏಪ್ರಿಲ್, 2026 ನೆಹರು ಕ್ರೀಡಾಂಗಣ, ಜೆ.ಸಿ. ನಗರ

ಸಾಧ್ಯತೆಗಳ ಜಗತ್ತನ್ನೊಮ್ಮೆ ಅನ್ವೇಷಿಸಿ!
ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಕರೆ! ಇದೀಗ ನಿಮ್ಮ ಗುರಿ ರೂಪಿಸಿಕೊಳ್ಳುವ ಮತ್ತು ಉಜ್ವಲ ಭವಿಷ್ಯದ ಮಾರ್ಗ ನಿರ್ಮಿಸಿಕೊಳ್ಳುವ ಸಮಯ ಬಂದಿದೆ!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯ ಎಜುವರ್ಸ್ ವಿದ್ಯಾರ್ಥಿಗಳ ಉನ್ನತ ಭವಿಷ್ಯದ ಕನಸಿಗೊಂದು ಆಸರೆಯನ್ನು ನೀಡುತ್ತಿದೆ. ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಅಸಂಖ್ಯ ಕೋರ್ಸ್‌ಗಳ ಕುರಿತ ಮಾಹಿತಿಯನ್ನು ಒಂದೇ ಸೂರಿನಡಿ ಒಗ್ಗೂಡಿಸುತ್ತಿದೆ. ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್ ಮಾತ್ರವಲ್ಲದೇ ಪ್ರಸ್ತುತ ಜಗತ್ತಿನ ಎಲ್ಲಾ ವೈವಿಧ್ಯಮಯ ಶೈಕ್ಷಣಿಕ ಅಧ್ಯಯನದ ಅವಕಾಶಗಳ ಮಾಹಿತಿಯನ್ನು 'ಎಜುವರ್ಸ್' ಒದಗಿಸಲಿದೆ. ಜತೆಗೆ, ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ತಜ್ಞರು ನಿಮ್ಮೆಲ್ಲಾ ಭವಿಷ್ಯದ ಕನಸಿಗೆ ಅಗತ್ಯ ಮಾರ್ಗದರ್ಶನ ಮಾಡಲಿದ್ದಾರೆ.
ಬನ್ನಿ, 'ಎಡ್ಯೂವರ್ಸ್' ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಳ್ಳಿ!

REGISTER NOW
CET ಮತ್ತು NEET ಮಾಕ್ ಪರೀಕ್ಷೆಗಳಿಗೆ ಈಗಲೇ ನೋಂದಾಯಿಸಿ.
ಸ್ಮಾರ್ಟ್ ವಾಚ್, ಇಯರ್ ಪಾಡ್‌ಗಳು ಮತ್ತು ಇನ್ನೂ ಅನೇಕ ರೋಮಾಂಚಕಾರಿ ಬಹುಮಾನಗಳನ್ನು ಗೆಲ್ಲಿರಿ.
ಕೋಡ್ ಸ್ಕ್ಯಾನ್ ಮಾಡಿ

University Pavilion Sponsors
CMR UNIVERSITY | ICFAI Foundation for Higher Education | KLE ACADEMY OF HIGHER EDUCATION AND RESEARCH, BELAGAVI | Parul University NAAC GRADE A++
PRESIDENCY UNIVERSITY | RAMAIAH UNIVERSITY OF APPLIED SCIENCES | REVA UNIVERSITY Bengaluru, India | SAPTHAGIRI NPS UNIVERSITY

Platinum Sponsor
VIT Vellore Institute of Technology

Gold Sponsors
CAMBRIDGE INSTITUTE OF TECHNOLOGY | EAST POINT GROUP OF INSTITUTIONS | THE Oxford EDUCATIONAL INSTITUTIONS | SHRI DHARMASTHALA MANJUNATHESHWARA EDUCATIONAL SOCIETY / TRUST (R)

Silver Sponsors
AMITY UNIVERSITY BENGALURU | BGU BIRLA GLOBAL UNIVERSITY | EAST WEST GROUP OF INSTITUTIONS BENGALURU | RAJARAJESWARI COLLEGE OF ENGINEERING AUTONOMOUS INSTITUTION | SAMBHRAM INSTITUTIONS

Exhibitors
ABBS AUTONOMOUS | ACS COLLEGE OF ENGINEERING | AGI | AIMS INSTITUTES Peenya, Bangalore | AMRITA VISHWA VIDYAPEETHAM BENGALURU CAMPUS | Dr. S.R. Chandrasekhar Institute of Speech and Hearing
IAS BABA | ISB&M | MIT WORLD PEACE UNIVERSITY PUNE | MS ENGINEERING COLLEGE | PES UNIVERSITY
R R INSTITUTIONS BENGALURU | UNIVERSAL GROUP OF INSTITUTIONS | VVCE | VISION PU COLLEGE BENGALURU

ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ದಿನೇಶ್ - 9986006598 | ಬೆಂಗಳೂರು

ಸಂಗೀತ ತಿನ್ನೋಣ ಬರ್ರಿ...!

ತಟ್ಟೆಯಲ್ಲಿ ಸಂಗೀತ...

• ಚಿತ್ರ-ಬರಹ: ಪ್ರದೀಪ ಮೇಲಿನಮನಿ

ನೀವು ಸಂಗೀತ ಕೇಳಿರಬಹುದು; ಆದರೆ ತಿಂದಿದ್ದೀರಾ?

ಈ ಊರಿಗೆ ಬಂದರೆ ಬಾಯಿ ಚಪ್ಪರಿಸಿ ಸಂಗೀತ ತಿನ್ನಬಹುದು! ನಾಲಿಗೆ ಖಾರದಿಂದ ಚುರುಗುಟ್ಟುವಾಗಲೇ ಒಂದು ಖಡಕ್ ಚಹಾ ಕುಡಿದರೆ ಸಾಕು; ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ...

ಹೌದು. ಚನ್ನಮ್ಮನ ಕಿತ್ತೂರು ಪಟ್ಟಣಕ್ಕೆ ಬಂದು ಯಾವುದೇ ಹೋಟೆಲ್‌ನಲ್ಲಿ 'ತಿನ್ನಲು ಏನಿದೆ' ಎಂದು ಕೇಳಿದ ತಕ್ಷಣ 'ಸಂಗೀತ ಐತಿರಿ' ಎಂಬ ಧ್ವನಿಯೇ ಪ್ರತಿಫಲಿಸುತ್ತದೆ. ಇಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮನಷ್ಟೇ ಹೆಸರುವಾಸಿಯಾದುದು ಈ ಸಂಗೀತ ಖಾದ್ಯ.

ಕಿತ್ತೂರು ಮಾತ್ರವಲ್ಲ; ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಯಾವುದೇ ಹಳ್ಳಿಗೆ ಹೋದರೂ; ಹೋಟೆಲ್‌ಗಳಲ್ಲಿ ಅತ್ಯಂತ ಹೆಚ್ಚು ಬಿಕರಿಯಾಗುವುದೇ ಈ ತಿನ್ನುವ ಸಂಗೀತ.

ಮಿರ್ಚಿ ಭಜ್ಜಿ, ಮಿಸಳ್, ಚುರಮುರಿ ಖಾರಾ, ಗಿರ್ಮಿಟ್, ಪಾವ್ ಭಾಜಿ... ಮುಂತಾದ ಕುರುಕಲು ತಿನಿಸುಗಳಂತೆಯೇ ಇಲ್ಲಿ 'ಸಂಗೀತ'ವೂ ಪ್ರಮುಖ ತಿನಿಸಿನ ಹೆಸರು. ಹಾಡುವ ಸಂಗೀತದಲ್ಲಿ ಶ್ರುತಿ, ರಾಗ, ಲಯ, ತಾಳ, ನಾದ, ಸ್ವರಗಳು ಇರುವಂತೆಯೇ ತಿನ್ನುವ ಸಂಗೀತದಲ್ಲಿಯೂ ಚುರಮುರಿ, ಭಜ್ಜಿ, ಖಾರಾ, ಶೇಂಗಾ, ಒಣ ಅವಲಕ್ಕಿ, ಉಪ್ಪು, ಉಳ್ಳಾಗಡ್ಡಿ ಚೂರು, ಕರಿದ ಹಸಿ ಮೆಣಸಿನಕಾಯಿ, ಕೊಬ್ಬರಿಯ ಮಿಶ್ರಣ ಇರುತ್ತದೆ.

ಈ ಹೆಸರಿನ ವಿಶೇಷ ಏನು?

ಈ ತಿನಿಸಿಗೆ 'ಸಂಗೀತ' ಎಂಬ ಹೆಸರು ಬರಲು ಮತ್ತು ಅದು ಉತ್ತರ ಕರ್ನಾಟಕ ಭಾಗದಲ್ಲಿ ಜನಪ್ರಿಯ ತಿಂಡಿಯಾಗಲು ಕುತೂಹಲಕರವಾದ ಕಾರಣಗಳಿವೆ. ಈ ಹೆಸರು ಹುಟ್ಟಿದ್ದು ಚನ್ನಮ್ಮನ ಕಿತ್ತೂರು ಪಟ್ಟಣದಲ್ಲಿ, ಹಲವು ದಶಕಗಳ ಹಿಂದೆ.

ರಾಣಿ ಚನ್ನಮ್ಮನ ಹಾಗೂ ಅದಕ್ಕಿಂತಲೂ ಮುಂಚೆಯಿಂದ ಕಿತ್ತೂರು ದೇಸಗತಿಯ ಅರಸರಿಗೆ ರಾಜಗುರು ಸಂಸ್ಥಾನ ಕಲ್ಮಠದ ಗುರುಗಳೇ ಮಾರ್ಗದರ್ಶಿ ಆಗಿದ್ದರು. ಹೀಗಾಗಿ, ಕಿತ್ತೂರಿನ ಎಲ್ಲ ದೊರೆಗಳ ಸಮಾಧಿಗಳು ಈಗಲೂ ರಾಜಗುರು ಸಂಸ್ಥಾನ ಕಲ್ಮಠದ ಆವರಣದಲ್ಲಿವೆ. ಪ್ರತಿಯೊಬ್ಬ ದೊರೆಯನ್ನು ಸಮಾಧಿ ಮಾಡಿದ ನಂತರ ಮೇಲೊಂದು ಗುಡಿಯ ಆಕಾರದ ಕಟ್ಟಡ ನಿರ್ಮಿಸಲಾಗಿದೆ. ಹೀಗಾಗಿ, ಈ ಸಮಾಧಿಗಳಿಗೆ 'ಕಲ್ಗುಡಿ' ಎಂದೂ ಕರೆಯುತ್ತಾರೆ.

ಪಂಡಿತ್ ಬಾಬುರಾವ್ ಇನಾಮದಾರ ಅವರು ಸಂಗೀತ ತಾಲೀಮು ನಡೆಸುತ್ತಿದ್ದ ಕಟ್ಟಡ

ಇಂಥ ಕಲ್ಗುಡಿಯಲ್ಲಿ ನಾಲ್ಕೈದು ದಶಕಗಳ ಹಿಂದೆ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ ಹಾಗೂ ಗುರುಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಶಿಕ್ಷಕರೂ ಆಗಿದ್ದ ಪಂಡಿತ್ ಬಾಬುರಾವ್ ಇನಾಮದಾರ ಅವರ ನೇತೃತ್ವದಲ್ಲಿ ಪ್ರತಿ ಸಂಜೆ ಗಾಯನ, ಹಾಡು, ಹರಟೆ, ಬೋಧನೆ ನಡೆಯುತ್ತಿತ್ತು.

ಹೀಗೆ ಸಂಗೀತದ ತಾಲೀಮು ನಡೆದಾಗ ಬಾಯಿ ಚಪ್ಪರಿಸಲು ಸಮೀಪದ ಹೋಟೆಲ್‌ನಲ್ಲಿ ಖಾರಾ, ಶೇಂಗಾ, ಭಜ್ಜಿ ಚೂರು, ಶೇಂಗಾ ಹಾಕಿಸಿಕೊಂಡು ಚುರಮುರಿ, ಚಹಾ ತೆಗೆದುಕೊಂಡು ಬಾ ಎಂದು ಶಿಷ್ಯನಿಗೆ ಹೇಳಿ ಕಳುಹಿಸುತ್ತಿದ್ದರು. ಆ ಹುಡುಗ ಹೋಟೆಲ್‌ಗೆ ಬಂದವನೇ 'ಇನಾಮದಾರ ಸರ್ ಹೇಳ್ಯಾರ್, ಖಾರಾ, ಶೇಂಗಾ ಭಜಿ ಚೂರು, ಉಳ್ಳಾಗಡ್ಡಿ ಹಾಕಿ ಚುರಮುರಿ ಕೊಡಬೇಕು' ಎಂದು ಹೇಳುತ್ತಿದ್ದ. ಸಂಗೀತದ ಮಾಸ್ತರು ಹೇಳಿ ಕಳಿಸಿದ್ದರಿಂದ ಹೋಟೆಲ್‌ನವರು 'ಸಂಗೀತ ಸ್ಥಳಕ್ಕೆ ಒಂದು ಪಾರ್ಸಲ್ ಕೊಡ್ರಿ' ಎನ್ನುತ್ತಿದ್ದರು. ಬಾಯಿಯಿಂದ ಬಾಯಿಗೆ ಹಾದು ಬಂದ ಆ ಸಾಲು 'ಸಂಗೀತ ಕೊಡ್ರಿ' ಎಂದೇ ರೂಢಿಯಾಯಿತು ಎಂದು ನೆನೆಯುತ್ತಾರೆ ಇಲ್ಲಿನ ಹಿರಿಯ ಹಿಂದೂಸ್ತಾನಿ ಗಾಯಕ ಸಂದೀಪ ದೇಶಪಾಂಡೆ.

ಕೆಲಸದ ಬಿಡುವಿನ ವೇಳೆ 'ಸಂಗೀತ' ಸವಿಯುವ ರುಚಿಯೇ ಬೇರೆ...

ಕಾಲ ಕಳೆದಂತೆ ಈ ಮಿಶ್ರಣವು ಎಲ್ಲ ಊರುಗಳಲ್ಲೂ ರುಚಿಕರ ತಿಂಡಿಯಾಗಿ ರೂಢಿಯಾಯಿತು. ಅದಕ್ಕೆ 'ಸಂಗೀತ' ಎಂದೇ ಎಲ್ಲೆಡೆ ಹೆಸರು ಬಂತು ಎಂದು 90 ವರ್ಷ ದಾಟಿದ ಹಿರಿಯರು ಸ್ಮರಿಸುತ್ತಾರೆ.

ಕಿತ್ತೂರು ಸಂಸ್ಥಾನದ ದೊರೆಗಳು ಸಂಗೀತ ಕಲಾವಿದರಿಗೆ ಆಶ್ರಯ ನೀಡಿದ್ದರು. ಸಂಸ್ಥಾನ ಅಳಿದ ಬಳಿಕ ರಾಜಗುರು ಕಲ್ಮಠದ ಶ್ರೀಗಳು ಆಶ್ರಯ ನೀಡಿದರು. ತಲೆತಲಾಂತರಗಳಿಂದ ಈ ಪರಂಪರೆ ಸಾಮಾನ್ಯರವರೆಗೂ ಬೆಳೆದುಬಂದಿದೆ.

ಖ್ಯಾತ ಪಂಡಿತರಾಗಿದ್ದ ನರಸಿಂಹ ಶಿಗ್ಗಾಂವಿ, ಬಾಬುರಾವ್ ಇನಾಮದಾರ, ರಂಗಣ್ಣ ಮೊಸಳಿ, ಗೋವಿಂದರಾವ್ ಇನಾಮದಾರ, ವ್ಯಾಸರಾವ್ ಇನಾಮದಾರ, ಎಸ್.ಎಸ್. ಹಿರೇಮಠ, ಬಸವರಾಜ ಮುಗದ, ಯಲ್ಲಪ್ಪ ಭಜಂತ್ರಿ, ಗಂಗಪ್ಪ ದೇಮಟ್ಟಿ ಇವರಲ್ಲಿ ಪ್ರಮುಖವಾದ ಹೆಸರುಗಳು. ಇವರಲ್ಲಿ ಯಾರೊಬ್ಬರೂ ಈಗ ಇಲ್ಲ. ಆದರೆ, ಅವರು ಬಿಟ್ಟುಹೋದ ಕೇಳುವ ಸಂಗೀತ ಹಾಗೂ ತಿನ್ನುವ ಸಂಗೀತ ಎರಡೂ ಇವೆ.

ಅವರೆಲ್ಲರ ಸಂಗೀತ ಕ್ಷೇತ್ರದ ವಾರಸುದಾರರಾಗಿ ಪ್ರಲ್ಹಾದ ಶಿಗ್ಗಾಂವಿ, ಅನುರಾಧಾ ದೇಶಪಾಂಡೆ, ರುದ್ರಪ್ಪ ಅಸುಂಡಿ, ರವೀಂದ್ರ ಜಕಾತಿ, ಈಶ್ವರ ಗಡಿಬಿಡಿ, ಸಂದೀಪ ದೇಶಪಾಂಡೆ, ವಸಂತ ಭಜಂತ್ರಿ, ಬಾಬು ಭಜಂತ್ರಿ, ರಜತ ಕುಲಕರ್ಣಿ ಪರಂಪರೆ ಮುಂದುವರಿಸಿದ್ದಾರೆ. ಅದರೊಂದಿಗೆ 'ಸಂಗೀತ'ವೂ ಮುಂದುವರಿದಿದೆ.

ರಜೆಯ ಯಾನ, ಬದುಕಿನ ಪಾಠ

ಒಂದು ಕುತೂಹಲ... ಐದು ಯುವಕರು... ಒಂದು ದೀರ್ಘದಾರಿ. ಜನರ ಬದುಕನ್ನು ತಿಳಿಯಲು ಅವರು ಪ್ರಯಾಣಕ್ಕೆ ಹೊರಟರು. ಕಡಿಮೆ ಖರ್ಚಿನ ಈ ಯಾನ ಕೋಲಾರದಿಂದ ಆರಂಭವಾಯಿತು. ಅನೇಕ ಊರುಗಳ ಮೂಲಕ ಸಾಗಿ ಅದು ಬಾಗಲಕೋಟೆಗೆ ತಲುಪಿತು. ಆದರೆ ಅವರ ಮನಸ್ಸಿನಲ್ಲಿ ಉಳಿದದ್ದು ದಾರಿಯ ಅನೇಕ ಕಥೆಗಳು.

• ಸಂತೋಷ ಎಂ ಪೂಜಾರಿ

ರಜೆ ಎಂದರೆ ಸಾಮಾನ್ಯವಾಗಿ ಮನೆಗೆ ಹಿಂದಿರುಗುವ ಸಮಯ. ನಿದ್ರೆ, ವಿಶ್ರಾಂತಿ, ಸ್ನೇಹಿತರ ಜೊತೆ ಅಲೆದಾಟ. ಇವುಗಳಲ್ಲೇ ರಜೆ ಕರಗಿ ಹೋಗುತ್ತದೆ. ಆದರೆ ಆ ವರ್ಷ ನಮಗೆ ದೊರೆತ ಹದಿನೈದು ದಿನಗಳ ರಜೆ ಬೇರೆ ರೀತಿಯದ್ದಾಗಿತ್ತು. ಬೆಂಗಳೂರಿನ ಸಂವಾದ ಕಾಲೇಜಿನ ಪತ್ರಿಕೋದ್ಯಮ ವಿದ್ಯಾರ್ಥಿಗಳಾದ ನಾವು ಐದು ಮಂದಿ, ರಜೆಯನ್ನು ಬದುಕಿನ ಪಾಠವಾಗಿ ರೂಪಿಸಬೇಕೆಂದು ತೀರ್ಮಾನಿಸಿದೆವು.

ನಮ್ಮ ಬಳಿ ಹೆಚ್ಚು ಹಣವೂ ಇರಲಿಲ್ಲ, ವಸ್ತುಗಳೂ ಇರಲಿಲ್ಲ. ಪ್ರತಿಯೊಬ್ಬರ ಬ್ಯಾಗಿನಲ್ಲಿ ಕೆಲವು ಬಟ್ಟೆಗಳು, ನೋಟ್‌ಬುಕ್, ಪೆನ್, ಔಷಧಿಗಳು, ಮೊಬೈಲ್... ಇಷ್ಟೇ. ಆದರೆ ಮನಸ್ಸಿನಲ್ಲಿ ಅಪಾರ ಉತ್ಸಾಹ, ಕುತೂಹಲ, ಕಲಿಕೆಯ ಹಸಿವು ಮತ್ತು ಸಮಾಜವನ್ನು ನೇರವಾಗಿ ಅರಿಯಬೇಕೆಂಬ ಪ್ರೀತಿ ತುಂಬಿಕೊಂಡಿತ್ತು. 'ನಾವು ಪಠ್ಯದಲ್ಲಿ ಓದುತ್ತಿರುವ ಸಮಾಜವನ್ನು ಕಣ್ಣಾರೆ ನೋಡುವುದು, ಅರಿಯುವುದು' ನಮ್ಮ ಉದ್ದೇಶವಾಗಿತ್ತು.

ಕೋಲಾರದ ಮಣ್ಣಿನ ವಾಸನೆ

ನಮ್ಮ ಮೊದಲ ತಂಗುದಾಣ ಕೋಲಾರ ಜಿಲ್ಲೆಯ ಗುಲ್ಲಹಳ್ಳಿ. ಅದು ಸಹಪಾಠಿ ಭೂಮಿಕಾಳ ಊರು. ಬಸ್ ಇಳಿದ ಕ್ಷಣವೇ ಹಳ್ಳಿಯ ಮಣ್ಣಿನ ವಾಸನೆ, ದೂರದಲ್ಲಿ ಕಾಣಿಸುತ್ತಿದ್ದ ಹೊಲಗಳು, ಗಾಳಿಗೆ ತೂಗುತ್ತಿದ್ದ ಬೆಳೆ; ಇವೆಲ್ಲ ನಮಗೆ ಹೊಸ ಅನುಭವಕ್ಕೆ ಸ್ವಾಗತ ಕೋರಿದಂತೆ ತೋರುತ್ತಿತ್ತು.

ಗೆಳತಿಯ ಮನೆ ತಲುಪಿದಾಗ ಅಲ್ಲಿ ನಮ್ಮನ್ನು ಅತಿಥಿಗಳಂತೆ ಕಾಣಲಿಲ್ಲ, ಸ್ವತಃ ಮನೆಯವರಂತೆ ಬರ ಮಾಡಿಕೊಂಡರು. ಊರಿನವರು ನಮ್ಮನ್ನು ಕುತೂಹಲದಿಂದ ನೋಡುತ್ತಿದ್ದರು. 'ಎಲ್ಲಿಂದ ಬಂದಿದ್ದೀರಿ? ಪತ್ರಿಕೋದ್ಯಮ ಓದುತ್ತಿದ್ದೀರಾ?' ಮುಂತಾದ ಪ್ರಶ್ನೆಗಳು ಕೇಳಿ ಬರುತ್ತಿದ್ದವು. ನಾವು ಉತ್ತರಿಸುತ್ತಾ, ಕೇಳುತ್ತಾ, ಗಮನಿಸುತ್ತಾ ಇದ್ದೆವು.

ಹಳ್ಳಿಯ ಹೊಲಗಳಲ್ಲಿ ಸುತ್ತಾಡಿದೆವು. ರೈತರೊಂದಿಗೆ ಕುಳಿತು ಮಾತನಾಡಿದೆವು. ಬೆಳೆ, ಬೆಲೆ, ಮಳೆಯ ಅನಿಶ್ಚಿತತೆ, ನೀರಿನ ಕೊರತೆ, ಜೀವನದ ಕಷ್ಟಗಳು ಅವರ ಮಾತುಗಳಲ್ಲಿ ಸ್ಪಷ್ಟವಾಗಿದ್ದವು. ಆದರೆ ಅದೇ ಸಮಯದಲ್ಲಿ ಮುಖದಲ್ಲಿ ನಿರೀಕ್ಷೆಯ ಹೊಳಪೂ ಇತ್ತು. ಮಹಿಳೆಯರು ಮನೆ–ಹೊಲ ಎರಡನ್ನೂ ನಿಭಾಯಿಸುವ ಶ್ರಮ ಸಂಸ್ಕೃತಿಯ ಸಂಕೇತದಂತೆ ಕಂಡವು.

ರಾಗಿ ಕಟಾವಾದ ಹೊಲದ ಮಧ್ಯೆ ನಿಂತು ಕುಡಿದ ಎಳನೀರಿನ ರುಚಿ ಇನ್ನೂ ನೆನಪಿದೆ. ಆ ಕ್ಷಣದಲ್ಲಿ ನಮ್ಮ ನಗರ ಜೀವನ ಎಷ್ಟೊಂದು ಭಿನ್ನ ಎಂದು ಅರಿವಾಯಿತು. ಇಲ್ಲಿ ಜೀವನ ಸರಳ, ಆದರೆ ಆಳವಾದುದು. ಈ ಹಳ್ಳಿ ನಮಗೆ ಕಲಿಸಿದ ಮೊದಲ ಪಾಠ–'ಗ್ರಾಮೀಣ ಭಾರತ ಪಠ್ಯಪುಸ್ತಕದಲ್ಲಿರುವ ಅಂಕಿ-ಅಂಶಗಳಲ್ಲ, ಬದುಕುಳ್ಳ ಮನುಷ್ಯರ ಕಥೆಗಳು.'

ರೈಲಿನ ಜನರಲ್ ಬೋಗಿಯ ಪಾಠ

ಶಿವಮೊಗ್ಗದತ್ತ ಹೊರಟಾಗ ರೈಲು ಪ್ರಯಾಣವೇ ಒಂದು ಅಧ್ಯಾಯವಾಗಿತ್ತು. ಜನರಲ್ ಬೋಗಿಯ ಗದ್ದಲ, ನಿಂತೇ ಹಲವು ಗಂಟೆಗಳು ಪ್ರಯಾಣಿಸುವ ಜನ, ಚೀಲ–ಸರಂಜಾಮುಗಳ ನಡುವೆ ಸಿಲುಕಿಕೊಂಡ ದೇಹಗಳು. ಇವೆಲ್ಲ ಸಾಮಾನ್ಯ ಜನರ ಸಹನೆಯ ಜೀವಂತ ಚಿತ್ರಣ.

ಒಬ್ಬ ವೃದ್ಧ ತನ್ನ ಮಗನ ಮನೆಗೆ ಹೋಗುತ್ತಿದ್ದ. ಒಂದು ಕುಟುಂಬ ಯಾವುದೋ ಸಮಾರಂಭಕ್ಕೆ ಹೊರಟಿತ್ತು. ಕಾಲೇಜು ವಿದ್ಯಾರ್ಥಿಗಳು ನಗುತ್ತಾ ಮಾತಾಡುತ್ತಿದ್ದರು. ಈ ಎಲ್ಲ ಮುಖಗಳು ಸಮಾಜದ ವಿವಿಧ ಕಥೆಗಳ ಪುಟಗಳಂತೆ ಕಂಡವು. ನಾವು ಪತ್ರಿಕೋದ್ಯಮ ವಿದ್ಯಾರ್ಥಿಗಳಾಗಿ ಕೇವಲ ಪ್ರಯಾಣಿಕರಲ್ಲ; ಅವಲೋಕನಕಾರರೂ ಆಗಿದ್ದೆವು.

ಕಿಟಕಿಯಿಂದ ಕಾಣುತ್ತಿದ್ದ ಹಸಿರು ಹೊಲ–ಗದ್ದೆಗಳು, ತೋಟಗಳು, ದೂರದ ಬೆಟ್ಟಗಳು, ಹರಿಯುವ ನದಿಗಳ ದೃಶ್ಯಗಳು ಬೇರೆ ಕಥೆ ಹೇಳುತ್ತಿದ್ದವು. ರೈಲು ನಮ್ಮನ್ನು ಭೌಗೋಳಿಕವಾಗಿ ಮಾತ್ರವಲ್ಲ, ಮನಸ್ಸಿನಲ್ಲಿಯೂ ಮುಂದಕ್ಕೆ ಕೊಂಡೊಯ್ಯುತ್ತಿತ್ತು.

ಪ್ರಕೃತಿ ಮತ್ತು ಸಾಹಿತ್ಯದ ರುಚಿಯುಂಡ ಕುಪ್ಪಳಿಯಲ್ಲಿ...

ಮಲೆನಾಡಿನ ಮಂಜು

ನಾನು ವಿಜಯಪುರದವನು. ಬಿರುಬಿಸಿಲು, ದೂಳು, ಬಯಲು ಹೊಲಗಳಿಗೆ ಒಲಿದು ಬೆಳೆದವನು. ಮಲೆನಾಡಿಗೆ ಕಾಲಿಟ್ಟಾಗ ಅದು ಮತ್ತೊಂದು ಲೋಕದಂತೆ ಅನಿಸಿತು. ಎಲ್ಲೆಲ್ಲೂ ಹಸಿರು ಹೊದಿಕೆಯ ಬೆಟ್ಟಗಳು, ಮಂಜಿನಿಂದ ಮಸುಕಾದ ಬೆಳಿಗ್ಗೆಗಳು, ತುಂತುರು ಮಳೆಯ ಸಿಂಚನ...ಇವೆಲ್ಲ ನನ್ನೊಳಗೆ ಹೊಸ ಅನುಭವ ಮೂಡಿಸಿದವು.

ಜೋಗ ಜಲಪಾತದ ಭೋರ್ಗರೆತ ನಮ್ಮನ್ನು ನಿಶ್ಶಬ್ದಗೊಳಿಸಿತು. ಪ್ರಕೃತಿಯ ಆ ಮಹತ್ತನ್ನು ಎದುರಿಸಿದಾಗ ಮಾನವನ ಅಹಂಕಾರ ಎಷ್ಟು ಚಿಕ್ಕದು ಎಂದು ಅರಿವಾಯಿತು. ನೀರಿನ ಧಾರೆಗಳು ಕಲ್ಲಿನ ಮೇಲೆ ಬೀಳುವ ಶಬ್ದ ಮನಸ್ಸಿನೊಳಗೂ ಪ್ರತಿಧ್ವನಿಸಿದವು.

ಅಜ್ಜಾರೆ...ಹೇಗಿದೆ ಈ ವರ್ಷ ಮಳೆ?

ನಂತರ ಕುಪ್ಪಳಿಗೆ ತೆರಳಿದೆವು. ರಾಷ್ಟ್ರಕವಿ ಕುವೆಂಪು ಅವರ ಮನೆ ನೋಡಿದಾಗ ಓದಿದ ಕವನಗಳ ಸಾಲುಗಳು ಮನಸ್ಸಿನಲ್ಲಿ ಜೀವಂತವಾದವು. ಅಲ್ಲಿ ಸಮಾಧಿಯಾಗಿರುವ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರನ್ನು ನೆನೆದು, ಅವರ ಸಾಹಿತ್ಯ ಲೋಕದ ಪಾತ್ರಗಳು ಕಣ್ಣ ಮುಂದೆ ಮೆರೆಯುವಂತಾಯಿತು. ಪ್ರಕೃತಿ ಮತ್ತು ಸಾಹಿತ್ಯ ಒಂದೇ ಜಾಗದಲ್ಲಿ ಸೇರಿಕೊಂಡಿರುವ ಅಪರೂಪದ ಅನುಭವ ಅದು.

ಅಲ್ಲಿ ನಿಂತಾಗ ನನಗೆ ಒಂದು ಪ್ರಶ್ನೆ ಮೂಡಿತು: ನಾವು ಓದುತ್ತಿರುವ ಸಾಹಿತ್ಯ, ನಾವು ಬರೆಯಲಿರುವ ಲೇಖನಗಳು, ಈ ಮಣ್ಣಿನ ವಾಸನೆಯಿಂದ ದೂರವಾಗಬಾರದು. ಪತ್ರಿಕೋದ್ಯಮವೂ ಪ್ರಕೃತಿಯಂತೆ ನೈಜವಾಗಿರಬೇಕು.

ಆತಿಥ್ಯದ ಸವಿ

ಮಲೆನಾಡಿನ ಮನೆಯಲ್ಲಿದ್ದ ಆತಿಥ್ಯ ನಮ್ಮಗಳ ಎದೆಯಾಳಕ್ಕೆ ಇಳಿಯಿತು. ಊಟಕ್ಕೆ ಮಾಡಿದ ಪ್ರೀತಿಯ ಒತ್ತಾಯ, ಪ್ರತಿಯೊಂದು ವಿಚಾರದಲ್ಲಿ ತೋರಿದ ಕಾಳಜಿ ಅತಿಥಿ ದೇವೋಭವ ಎಂಬ ಮಾತಿನ ಅರ್ಥ ಅಲ್ಲಿ ತಿಳಿಯಿತು.

ಮೀನೂಟದ ರುಚಿ ಇನ್ನೂ ನಾಲಗೆಗೆ ಚೆನ್ನಾಗಿ ನೆನಪಿದೆ. ತೆಂಗಿನ ತುರಿ, ಹುರಿದ ಮಸಾಲೆಯ ಗಾಢತೆ, ಹುಳಿ–ಖಾರದ ಸಮತೋಲನ ಅದು ಮಲೆನಾಡಿನ ಮೃದುವಾದ ಸ್ವಾದ. ನನ್ನ ವಿಜಯಪುರದ ಕೊಲ್ಹಾರದಲ್ಲಿ ಮೀನೂಟ ಖಾರ–ಮಸಾಲೆಯ ಭರ್ಜರಿ ರುಚಿಯದು. ಕೃಷ್ಣಾನದಿಯ ತಾಜಾ ಮೀನು, ಜೋಳದ ರೊಟ್ಟಿ ಜೊತೆಯಾಗಿ ನೀಡುವ ಪದ್ಧತಿ ಇದೆ. ಇದು ಉತ್ತರ ಕರ್ನಾಟಕದ ಸ್ವಭಾವ. ಆಹಾರವೇ ಸಂಸ್ಕೃತಿಯ ಪ್ರತಿಬಿಂಬ ಎಂಬ ಅರಿವು ಈ ಪಯಣದಲ್ಲಿ ಸ್ಪಷ್ಟವಾಯಿತು.

ಹೊಸಪೇಟೆಯ ಚಟುವಟಿಕೆ

ಶಿವಮೊಗ್ಗದಿಂದ ಹೊಸಪೇಟೆ ಕಡೆಗೆ ಸಾಗಿದಾಗ ದೃಶ್ಯ ವೈವಿಧ್ಯ ಮನಸೆಳೆಯಿತು. ಹಸಿರು ಕಡಿಮೆಯಾಗುತ್ತ, ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿತ್ತು. ಹಂಪಿ ಕಡೆಗೆ ತೆರಳುವ ಪ್ರವಾಸಿಗರಿಂದ ಹೊಸಪೇಟೆ ಚಟುವಟಿಕೆಯ ಕೇಂದ್ರವಾಗಿತ್ತು. ತುಂಗಭದ್ರಾ ನದಿ ದಿಕ್ಕಿನಿಂದ ಬೀಸುವ ಗಾಳಿ ನಗರ ಗದ್ದಲದ ಮಧ್ಯೆ ಸ್ವಲ್ಪ ನೆಮ್ಮದಿ ನೀಡುತ್ತಿತ್ತು. ಸ್ನೇಹಿತ ಅರ್ಜುನ್ ಅವರ ಮನೆಯಲ್ಲಿ ಉಳಿದಾಗ ಮತ್ತೊಂದು ಆತಿಥ್ಯದ ಸವಿ ಅನುಭವಿಸಿದೆವು.

ಬರಗೂರಿನ ಸಹಬಾಳ್ವೆ

ಕೊಪ್ಪಳ ಜಿಲ್ಲೆಯ ಬರಗೂರು ಹಳ್ಳಿಯಲ್ಲಿ ಸ್ನೇಹಿತ ಖಾದರ್ ಅವರ ಮನೆಯಲ್ಲಿ ಉಳಿದ ಅನುಭವ ನಮ್ಮ ಪಯಣದ ಪ್ರಮುಖ ಅಧ್ಯಾಯ. ಅಲ್ಲಿ ಹಿಂದೂ–ಮುಸ್ಲಿಂ ಕುಟುಂಬಗಳು ಅನ್ಯೋನ್ಯವಾಗಿ ಬದುಕುತ್ತಿದ್ದವು. ಮಾತುಕತೆ ಸಹಜವಾಗಿತ್ತು; ಧರ್ಮದ ಗೆರೆ ಅಲ್ಲಿ ಕಾಣಿಸಲಿಲ್ಲ.

ನಾವು ಇದೇ ಮೊದಲ ಬಾರಿಗೆ ಮುಸ್ಲಿಮರ ಮನೆಯಲ್ಲಿದ್ದು ಹತ್ತಿರದಿಂದ ಒಡನಾಡುತ್ತಿದ್ದೆವು. ಕೆಲವು ಸಂದರ್ಭಗಳಲ್ಲಿ ನಮ್ಮ ಮನಸ್ಸಿನಲ್ಲಿ ಮೂಡುವ ಪೂರ್ವಗ್ರಹಗಳು ಕೇವಲ ಕಲ್ಪನೆಗಳೆಂದು ಅಲ್ಲಿ ಅರಿತುಕೊಂಡೆ. ಪತ್ರಿಕೋದ್ಯಮ ವಿದ್ಯಾರ್ಥಿಗಳಾಗಿ ಸಮಾಜವನ್ನು ಪೂರ್ವನಿರ್ಣಯಗಳಿಲ್ಲದೆ ನೋಡುವ ಅಗತ್ಯವನ್ನು ಈ ಹಳ್ಳಿ ನಮಗೆ ಕಲಿಸಿತು.

ವಿಜಯಪುರದ ಬಿಸಿಲು

ನಂತರ ಎಲ್ಲರೂ ನನ್ನೂರು ವಿಜಯಪುರ ಜಿಲ್ಲೆಯ ತಡಲಗಿ ತಲುಪಿದೆವು. ಗೆಳೆಯರಿಗೆ ಮೊದಲು ತಟ್ಟಿದ್ದು ಬಿಸಿಲಿನ ತೀವ್ರತೆ. 'ಇಷ್ಟು ಬಿಸಿಲು ಹೇಗೆ ಸಹಿಸುತ್ತೀರಾ?' ಎಂದು ಅವರು ಕೇಳಿದರು. ನಾನು ನಗುತ್ತಿದ್ದೆ. ಆದರೆ ಅದೇ ಬಿಸಿಲಿನ ನಡುವೆ ಅವರು ಐತಿಹಾಸಿಕ ವೈಭವ ನೋಡಿ ಮಂತ್ರಮುಗ್ಧರಾದರು. ಗೋಲ್ ಗುಂಬಜ್‌ನ ಪ್ರತಿಧ್ವನಿ, ಇಬ್ರಾಹಿಂ ರೋಜಾದ ಸಮತೋಲನ ಸೌಂದರ್ಯ, ಬಾರಾ ಕಮಾನನ ಅಪೂರ್ಣ ಮಹತ್ವ, ಇವೆಲ್ಲ ಇತಿಹಾಸದ ಜೀವಂತ ಪಾಠಗಳಾಗಿದ್ದವು.

ಮನೆಯ ಊಟದಲ್ಲಿ ಜೋಳದ ರೊಟ್ಟಿ, ಎಣ್ಣೆಗಾಯಿ, ಶೇಂಗಾ ಚಟ್ನಿ, ಬಸಾರು–ಗೆಳೆಯರಿಗೆ ಹೊಸ ಅನುಭವ. 'ಇದು ವಿಭಿನ್ನ, ಆದರೆ ರುಚಿಕರ,' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ನನ್ನ ಊರಿನ ಸರಳತೆ, ಆತಿಥ್ಯ ಅವರನ್ನು ಆಕರ್ಷಿಸಿತು.

11ನೇ ಪುಟಕ್ಕೆ...

ಗೆಳೆಯ ಖಾದರ್ ಕುಟುಂಬದೊಂದಿಗೆ ಮುಕ್ಕುಂದಾದ ಗಡ್ಡೆ ಖಾದರ್ ಬಾಷಾ ದರ್ಗಾದಲ್ಲಿ...

ದಿನಕ್ಕೊಂದು ವೇಷ ಅವರೇ ಉಮೇಶ

• ಸ್ವರೂಪ್ ಕೊಟ್ಟೂರು

ಚಿತ್ರದುರ್ಗದ ಹೃದಯ ಭಾಗದಲ್ಲಿರುವ ನೀಲಕಂಠೇಶ್ವರ ದೇಗುಲದ ಬಳಿ ನಿಂತಿದ್ದಾಗ ಜನಜಂಗುಳಿ ಇತ್ತು. ಬಸ್‌ಗಳ ಗದ್ದಲ, ವ್ಯಾಪಾರಿಗಳ ಕೂಗು, ಓಡಾಡುವ ಜನ–ಎಲ್ಲವೂ ಚಲನೆಯಲ್ಲಿದ್ದರೂ ಜೀವಂತಿಕೆ ಕಾಣಿಸುತ್ತಿರಲಿಲ್ಲ. ಅಷ್ಟರಲ್ಲಿ ದೂರದಿಂದ ಬಣ್ಣ ಬಣ್ಣದ ವೇಷಭೂಷಣದಲ್ಲಿ ಹಾಸ್ಯ ಕಲಾವಿದ ಇಟಗಿ ಉಮೇಶ್ ನಿಧಾನವಾಗಿ ನಡೆದುಬಂದರು. ತಲೆಯ ಮೇಲೆ ಕಿರೀಟದಂತಹ ಅಲಂಕಾರ, ಮುಖದಲ್ಲಿ ಹಿತಮಿತವಾದ ಮೇಕಪ್, ಕಣ್ಣಲ್ಲಿ ಹೊಳಪು, ತುಟಿಗಳಲ್ಲಿ ನಗು. ಅವರು ಎರಡು ಮಾತುಗಳನ್ನಾಡಿದ ಕ್ಷಣಕ್ಕೆ ಸುತ್ತಲಿನ ಜನ ನಕ್ಕರು. ಆ ವ್ಯಕ್ತಿ ಮತ್ತೆ ಲಘು ಬಗೆಯಲ್ಲಿ ಹೆಜ್ಜೆ ಹಾಕಿದರು. ಮಕ್ಕಳತ್ತ ಕೈಬೀಸಿದರು. ಕ್ಷಣಾರ್ಧದಲ್ಲಿ ಸಪ್ಪೆಯಾಗಿದ್ದ ವಾತಾವರಣ ಜೀವ ಪಡೆಯಿತು.

ಅನ್ನಕ್ಕಾಗಿ ಎಲೆಕ್ಟ್ರೀಷಿಯನ್ ವೃತ್ತಿ ಮಾಡುತ್ತಿರುವ ಉಮೇಶ್‌ಗೆ ಜನರನ್ನು ರಂಜಿಸುವುದೇ ಜೀವನದ ಧ್ಯೇಯ. 'ನೋವು ಯಾರಿಗಿಲ್ಲ? ದಿನಪೂರ್ತಿ ದುಡಿದವರ ಮುಖದಲ್ಲಿ ಸ್ವಲ್ಪ ಹೊತ್ತಾದರೂ ನಗು ಅರಳಬೇಕು. ನಗು ಮದ್ದು ಆಗಬೇಕು' ಎನ್ನುತ್ತಾರೆ ಅವರು.

ಬಹುತೇಕ ಹಾಸ್ಯ ಕಲಾವಿದರು ವೇದಿಕೆಯ ಮೇಲೆ ಮಾತ್ರ ವಿದೂಷಕರಾಗುತ್ತಾರೆ. ಸನ್ನಿವೇಶ ಮುಗಿದರೆ ಅವರು ಸಹಜ ಜೀವನಕ್ಕೆ ಮರಳುತ್ತಾರೆ. ಆದರೆ ಉಮೇಶ್‌ಗೆ ಜಗತ್ತೇ ರಂಗಮಂಚ. ಬೀದಿಗಳೇ ವೇದಿಕೆ. ಜನರೇ ಪ್ರೇಕ್ಷಕರು. ಆದರೆ, ಇವರ ಪ್ರದರ್ಶನಕ್ಕೆ ಯಾವುದೇ ಟಿಕೆಟ್ ಇರುವುದಿಲ್ಲ. ಎಲ್ಲವೂ ಉಚಿತ. ದಿನ ಬೆಳಗಾದರೆ ಒಂದೊಂದು ಹೊಸ ರೂಪದಲ್ಲಿ ದುರ್ಗದ ಬೀದಿಗಳಲ್ಲಿ ಕಾಣಿಸಿಕೊಳ್ಳುವುದು ಅವರಿಗೆ ಪ್ರಿಯವಾದ ಹವ್ಯಾಸ. ಆಹ್ವಾನ ಇರಲಿ ಇರದಿರಲಿ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರ ಹಾಜರಾತಿ ಕಾರ್ಯಕ್ರಮದ ಕಳೆ ಹೆಚ್ಚಿಸುತ್ತದೆ.

ಮಾಸಲು ಬಟ್ಟೆಗಳಲ್ಲೇ ಮಾಂತ್ರಿಕತೆ

ಉಮೇಶ್ ಅವರು ವೇಷಗಳಿಗಾಗಿ ದುಬಾರಿ ಖರ್ಚು ಮಾಡುವುದಿಲ್ಲ. ಮನೆಯವರ ಹಳೆಯ ಬಟ್ಟೆಗಳನ್ನು ಹೊಸ ವಿನ್ಯಾಸದಲ್ಲಿ ರೂಪಿಸುವುದು ಅವರ ಸೃಜನಶೀಲತೆ. ಹಳೆಯ ರೋಲ್ಡ್‌ಗೋಲ್ಡ್ ಆಭರಣಗಳು, ಉದುರಿದ ನವಿಲುಗರಿಗಳು, ಸೆಣಬಿನ ದಾರ, ಹಳೆಯ ಪೇಟ–ಇವೆಲ್ಲ ಅವರ ಕೈಯಲ್ಲಿ ಹೊಸ ರೂಪ, ಅರ್ಥ ಪಡೆಯುತ್ತವೆ. ಒಂದೇ ಉಡುಪನ್ನು ವಿಭಿನ್ನ ರೀತಿಯಲ್ಲಿ ವಿನ್ಯಾಸಗೊಳಿಸಿ ನಾಯಕ, ಖಳನಾಯಕ, ಅರಸ, ಸೈನಿಕ, ಭಿಕ್ಷುಕ, ಬುಡಕಟ್ಟು, ರಾಕ್ಷಸ–ಹೀಗೆ ಅನೇಕ ಅವತಾರಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ಬಗೆಬಗೆಯ ವೇಷ ಇದುವೇ ವಿಶೇಷ..

ಮೇಕಪ್‌ಗೂ ಅವರು ಅಗ್ಗದ ಬೆಲೆಯಲ್ಲಿ ಸಿಗುವ ವಸ್ತುಗಳನ್ನೇ ಬಳಸುತ್ತಾರೆ. ವಿಭೂತಿ, ಕುಂಕುಮ, ಸ್ವಲ್ಪ ಲಿಪ್‌ಸ್ಟಿಕ್ ಇಷ್ಟರಲ್ಲೇ ಅವರ ಮುಖಭಾವ ಜೀವಂತವಾಗುತ್ತದೆ. ಮೂರು ದಶಕಗಳಿಂದ ದುರ್ಗದ ಬೀದಿಗಳಲ್ಲಿ ಅವರು ತಾಳಿದ ಅಸಂಖ್ಯ ಅವತಾರಗಳು ಅವರ ಕಲ್ಪನಾಶಕ್ತಿಗೆ ಸಾಕ್ಷಿ.

ಈ ಆಸಕ್ತಿಯ ಬೀಜ ಬಾಲ್ಯದಲ್ಲೇ ಬಿತ್ತಲ್ಪಟ್ಟಿತು. ಮನೆಯಲ್ಲಿ ಹಿರಿಯರು ಮಣ್ಣು, ಸಗಣಿಯಿಂದ ಗೊಂಬೆಗಳನ್ನು ಮಾಡುತ್ತಿದ್ದರು. ಅವುಗಳಿಗೆ ಅಲಂಕಾರ ಮಾಡುತ್ತಿದ್ದ ದೃಶ್ಯ ಬಾಲಕ ಉಮೇಶ್ ಮನದಲ್ಲಿ ಆಳವಾಗಿ ಅಚ್ಚೊತ್ತಿತ್ತು. 'ನಿರ್ಜೀವ ಗೊಂಬೆಗಳಿಗೂ ಅಷ್ಟು ಸೌಂದರ್ಯ ಕೊಡಬಹುದು ಎಂದರೆ, ನಾನೇಕೆ ಮಾಡಿಕೊಳ್ಳಬಾರದು?' ಎಂಬ ಪ್ರಶ್ನೆ ಅವರೊಳಗಿನ ಕಲಾವಿದನನ್ನು ಎಬ್ಬಿಸಿತು.

ಹಳೆಯ ಸಿನಿಮಾಗಳು, ವಿಭಿನ್ನ ಉಡುಗೆ ಸಂಸ್ಕೃತಿಗಳ ಪ್ರಭಾವ, ಬಣ್ಣಬಣ್ಣದ ಪಾತ್ರಗಳು–ಇವುಗಳೆಲ್ಲ ಅವರ ಕಲ್ಪನೆಗೆ ರೆಕ್ಕೆಗಳಾದವು. ಆ ರೆಕ್ಕೆಗಳು ಇಂದಿಗೂ ದುರ್ಗದ ಗಾಳಿಯಲ್ಲಿ ಹಾರುತ್ತಿವೆ.

ನಗುವಿನ ಸಾಮಾಜಿಕ ಅರ್ಥ

ಉಮೇಶ್ ಕೇವಲ ಮನರಂಜನೆಗಾಗಿ ವೇಷ ತೊಡುವುದಿಲ್ಲ. ಅವರ ಮಾತುಗಳಲ್ಲಿ ಸಾಮಾಜಿಕ ಪ್ರಜ್ಞೆಯ ಛಾಯೆ ಇರುತ್ತದೆ. ಚುಟುಕು ಹಾಸ್ಯದಲ್ಲೇ ಜೀವನ ಮೌಲ್ಯಗಳನ್ನು ಬಿತ್ತುತ್ತಾರೆ. 'ನಗು ಎನ್ನುವುದು ಎಲ್ಲರಿಗೂ ಉಚಿತವಾಗಿರಬೇಕು' ಎಂಬುದು ಅವರ ನಂಬಿಕೆ.

ಮಕ್ಕಳು, ವಯೋವೃದ್ಧರು, ಅಂಗವಿಕಲರೊಂದಿಗೆ ಮಾತನಾಡಿ ನಗಿಸುವುದರಲ್ಲಿ ಅವರಿಗೆ ವಿಶೇಷ ಆಸಕ್ತಿ. ಕೆಲವೊಮ್ಮೆ ದುಗುಡದಿಂದ ಕೂತಿರುವ ಹಿರಿಯರ ಬಳಿಗೆ ಹೋಗಿ ಎರಡು ಮಾತುಗಳನ್ನಾಡಿ ನಗಿಸುತ್ತಾರೆ. ಶಾಲಾ ಮಕ್ಕಳಿಗಾಗಿ ಹಾಡಿಗೆ ಹೆಜ್ಜೆ ಹಾಕಿ ಉತ್ಸಾಹ ತುಂಬುತ್ತಾರೆ. ಹಿಂದಿ, ಕನ್ನಡ, ತೆಲುಗು ಹಾಗೂ ಪಾಶ್ಚಾತ್ಯ ಹಾಡುಗಳಿಗೂ ಹೆಜ್ಜೆ ಹಾಕುವ ಅವರ ನೃತ್ಯ ಜನರನ್ನು ಸೆಳೆಯುತ್ತದೆ.

ಐವತ್ತೆಂಟರ ಹರೆಯದ ಉಮೇಶ್ ಅವರಲ್ಲಿರುವ ಚಾಣಾಕ್ಷ ಮಾತು, ಅರ್ಥಗರ್ಭಿತ ಹಾಸ್ಯ, ನೃತ್ಯ ಪ್ರಾವೀಣ್ಯ–ಇವುಗಳ ಜೊತೆಗೆ ಎಲ್ಲರನ್ನೂ ಸಮಾನವಾಗಿ ಪ್ರೀತಿಸುವ ಮನಸ್ಸು ಅವರನ್ನು ವಿಭಿನ್ನರನ್ನಾಗಿಸಿದೆ. 'ನನ್ನನ್ನು ನೋಡಿ ನಾಲ್ವರು ನಕ್ಕರೆ ಸಾಕು, ನಾನು ನಿರುಮ್ಮಳ' ಎನ್ನುತ್ತಾರೆ ಅವರು.

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರು ಕಾಣಿಸಿಕೊಂಡರೆ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಅವರ ಸುತ್ತ ಗುಂಪು ಸೇರುತ್ತದೆ. ಫೋಟೊ ತೆಗೆಯುತ್ತಾರೆ. ಮಾತನಾಡುತ್ತಾರೆ. ಕೆಲವರು ಆಶ್ಚರ್ಯದಿಂದ ನೋಡುವರು; ಕೆಲವರು ಲಘುವಾಗಿ ಕಾಣುವರು. ಆದರೆ ಉಮೇಶ್ ಅದನ್ನೆಲ್ಲ ಮನಸ್ಸಿಗೆ ಹಾಕಿಕೊಳ್ಳುವುದಿಲ್ಲ.

ವಿದೂಷಕನಲ್ಲೂ ವಿಷಾದ..?

ಎಲ್ಲರನ್ನೂ ನಗೆಗಡಲಲ್ಲಿ ತೇಲಿಸುವ ಉಮೇಶ್ ಒಳಗೊಂದಿಷ್ಟು ವಿಷಾದಗಳೂ ಇವೆ. ಪ್ರತಿಭೆಯನ್ನು ಮೆಚ್ಚಿ ಪ್ರೋತ್ಸಾಹಿಸುವವರಿಗಿಂತ ಕೊಂಕು ಮಾತನಾಡುವವರೇ ಹೆಚ್ಚು ಎನ್ನುವ ನೋವು ಅವರ ಆಪ್ತರ ಮಾತಿನಲ್ಲಿ ಇಣುಕುತ್ತದೆ. ಅವಕಾಶಗಳು, ಮಾನ್ಯತೆ–ಇವುಗಳ ಕೊರತೆ ಇರುವುದೂ ಸತ್ಯ.

12ನೇ ಪುಟಕ್ಕೆ...

ಇದು ಯಕ್ಷಗೊಂಬೆಯಾಟವಯ್ಯಾ...

ಕೇರಳದ ಗಡಿಭಾಗದ ಕಾಸರಗೋಡಿನಲ್ಲಿ ನೆಲೆಸಿರುವ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ ತನ್ನ ಸುವರ್ಣ ಸಂಭ್ರಮದ ಮುನ್ನೋಟವಾಗಿ 'ಗಣ್ಯರೆಡೆಗೆ ಬೊಂಬೆ ನಡಿಗೆ' ಎಂಬ ವಿಶಿಷ್ಟ ಯಕ್ಷ ಅಭಿಯಾನಕ್ಕೆ ಚಾಲನೆ ನೀಡಿದೆ. ಯಾವುದೇ ಯಕ್ಷಗಾನ ಕಾರ್ಯಕ್ರಮಕ್ಕೆ ಬರುವ ಬಹುತೇಕ ಗಣ್ಯರು ಉದ್ಘಾಟನೆ, ಭಾಷಣ ಮುಗಿಸಿ, ಆಟ ನೋಡದೇ ಹೊರಟು ಬಿಡುತ್ತಾರೆ. ಆದರೆ ಯಕ್ಷಗೊಂಬೆಯಾಟ ಅವರಿದ್ದಲ್ಲಿಗೆ ತಲುಪಬೇಕು ಎಂಬ ಧ್ಯೇಯ ಇದರ ಹಿಂದಿದೆ...

• ನಾ. ಕಾರಂತ ಪೆರಾಜೆ

ಕಪ್ಪು ತೆರೆ ಹಿಂದೆ ಸೂತ್ರಧಾರನ ಬೆರಳುಗಳು ನಿಶ್ಯಬ್ದವಾಗಿ ಜಾರುತ್ತವೆ. ಮೇಲಿಂದ ಆರೇಳು ಸೂತ್ರಗಳು ಜೀವದ ನಾಡಿಗಳಂತೆ ಬೊಂಬೆಗಳ ಕೈಕಾಲುಗಳಿಗೆ ಸೇರಿಕೊಳ್ಳುತ್ತವೆ. ಕ್ಷಣದಲ್ಲೇ ಅವು ಮರದ ಮೂರ್ತಿಗಳಲ್ಲ; ಉಸಿರಾಡುವ ಪಾತ್ರಗಳು. ಭಾಗವತರ ಪದ್ಯಕ್ಕೆ ಸರಿಯಾಗಿ ತಲೆ ತಗ್ಗಿಸುವುದು, ರೌದ್ರದಲ್ಲಿ ಕಣ್ಣು ಚಿಮ್ಮುವುದು, ಶೃಂಗಾರದಲ್ಲಿ ಲಾಲಿತ್ಯ ತೋರುವುದು ಇವೆಲ್ಲವೂ ಸೂತ್ರಧಾರನ ಆಂತರಿಕ ಧ್ಯಾನದ ಫಲ. ಆ ಧ್ಯಾನವೇ ಇಂದಿಗೆ 'ಗಣ್ಯರೆಡೆಗೆ ಬೊಂಬೆ ನಡಿಗೆ' ಎಂಬ ಹೆಸರಿನಲ್ಲಿ ಸಮಾಜದ ಬಾಗಿಲು ತಟ್ಟುತ್ತಿದೆ.

ಕೇರಳದ ಗಡಿಭಾಗದ ಕಾಸರಗೋಡಿನಲ್ಲಿ ನೆಲೆಸಿರುವ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ ತನ್ನ ಸುವರ್ಣ ಸಂಭ್ರಮದ ಮುನ್ನೋಟವಾಗಿ ಹೊಸ ಪರಿಕಲ್ಪನೆಗೆ ಕೈಹಾಕಿದೆ. ಕಾರ್ಯಕ್ರಮದ ವೇದಿಕೆಗೆ ಮಾತ್ರ ಸೀಮಿತವಾಗದ ಸಂಭ್ರಮ, ಜನಮನಗಳಲ್ಲಿ ತಂಗಾಳಿಯಂತೆ ಹಬ್ಬಬೇಕು– ಇದು ಅವರ ಆಶಯ. ಆ ಪ್ರಯತ್ನಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಶುಭಚಾಲನೆ ನೀಡಿದರು.

'ಗಣ್ಯರು ಪ್ರದರ್ಶನಕ್ಕೆ ಸಮಯ ಕೊಡಲಾರರು; ಬಂದರೂ ಭಾಷಣ ಮಾಡಿ ಹೊರಟುಬಿಡುತ್ತಾರೆ. ಹಾಗಾದರೆ ನಾವು ಬೊಂಬೆಗಳನ್ನೇ ಅವರ ಬಳಿಗೆ ಕರೆದೊಯ್ಯೋಣ' ಎನ್ನುವುದು ಸಂಘದ ಮುಖ್ಯಸ್ಥ ಕೆ.ವಿ. ರಮೇಶ್ ಅವರ ಮಾತು. ಆದರೆ ಆ ಸರಳತೆಯೊಳಗೆ ನಾಲ್ಕೂವರೆ ದಶಕಗಳ ಕಾಯಕ, ಕುಟುಂಬದ ಸಮರ್ಪಣೆ, ಕಲೆಯೊಂದರ ಮೇಲಿನ ಅನನ್ಯ ನಿಷ್ಠೆ ಅಡಗಿದೆ.

ರಮೇಶ್ ಭೂಗರ್ಭಶಾಸ್ತ್ರ ಪದವೀಧರ. ನಗರ ಉದ್ಯೋಗದ ಆಕರ್ಷಣೆಗೆ ಒಳಗಾಗದೇ, ಬಾಲ್ಯದಿಂದ ಬೆಳೆದ ಯಕ್ಷಗಾನದ ನಂಟನ್ನು ಜೀವನದ ಕೇಂದ್ರವನ್ನೇ ಮಾಡಿಕೊಂಡವರು. ಅವರ ತಂದೆ ವೆಂಕಟಕೃಷ್ಣಯ್ಯ ಮುದ್ರಣಾಲಯದ ಮೂಲಕ ಕೇರಳದಲ್ಲಿ ಪ್ರಸಿದ್ಧಿ ಪಡೆದವರು. ಯಕ್ಷಗಾನ ಬೊಂಬೆಯಾಟದ ಸೇವೆಯನ್ನೂ ಕೈಗೊಂಡಿದ್ದರು. ಆ ಮನೆಯಲ್ಲೇ ಸಾಹಿತ್ಯ, ಕಲೆ, ಸಂವಾದಗಳ ವಾತಾವರಣವಿತ್ತು. ತಂದೆಯ ಹಾದಿಯನ್ನು ಮುಂದುವರಿಸಿಕೊಂಡ ರಮೇಶ್, ಬೊಂಬೆಗಳ ಅಂದಚಂದಗಳಿಗೆ ತಮ್ಮದೇ ಕಲ್ಪನೆಯ ಸ್ಪರ್ಶ ನೀಡಿದರು. ಸಹೋದರರು, ಸಹೋದರಿಯರು, ಕುಟುಂಬದವರ ಸಾಮೂಹಿಕ ಶ್ರಮವೇ ಈ ಸಂಘದ ಚಾಲನಾಶಕ್ತಿ.

ಒಮ್ಮೆ ಅವಿಭಜಿತ ದಕ್ಷಿಣ ಕನ್ನಡದಲ್ಲಿ ಮೂವತ್ತು ಬೊಂಬೆಯಾಟ ತಂಡಗಳಿದ್ದವು. 1981ರಲ್ಲಿ ಎಂಟು; 2010ರ ಹೊತ್ತಿಗೆ ಕೇವಲ ಎರಡು! ಪರಂಪರೆಯ ಮರವು ಹೇಗೆ ನಿಧಾನವಾಗಿ ಒಣಗಿತ್ತೆಂಬುದಕ್ಕೆ ಇದು ಸಾಕ್ಷಿ. ಬಡಗುತಿಟ್ಟಿನ ಉಪ್ಪಿನಕುದ್ರು ಮತ್ತು ತೆಂಕುತಿಟ್ಟಿನ ಕಾಸರಗೋಡು–ಎರಡು ತುದಿಗಳಲ್ಲಿ ಉಳಿದ ಕೊನೆಯ ಜ್ವಾಲೆ. ಆ ಜ್ವಾಲೆಯನ್ನು ಆರದಂತೆ ಕಾಯುವುದು ರಮೇಶ್ ಅವರ ಸಂಕಲ್ಪ.

ಸೂತ್ರದ ಬೊಂಬೆಗಳು ಅವರ ವಿಶೇಷತೆ. ಕೈಕಾಲುಗಳಿಗೆ ಬಿಗಿದ ದಾರಗಳು ತಲೆಯ ಮೇಲಿಂದ ಹಿಡಿಗೆಯೊಂದಕ್ಕೆ ಸೇರಿ, ಬೆರಳಿನ ಚಲನೆಯಿಂದ ರಂಗಚಲನೆಯನ್ನು ಸೃಷ್ಟಿಸುತ್ತವೆ. ಯಕ್ಷಗಾನ ಪ್ರಸಂಗಗಳನ್ನು ಮೊದಲು ಆಯ್ಕೆಮಾಡಿ, ಹಿಮ್ಮೇಳ-ಮುಮ್ಮೇಳದ ಪ್ರಸಿದ್ಧ ಕಲಾವಿದರಿಂದ ಧ್ವನಿಮುದ್ರಣ ಮಾಡಲಾಗುತ್ತದೆ. ನಂತರ ಸ್ವಲ್ಪ ಎತ್ತರದ ರಂಗಸ್ಥಳ, ಕಪ್ಪು ವಸ್ತ್ರಗಳಿಂದ ಆವರಿಸಿದ ಒಳರಂಗ, ಬೆಳಕಿನ ಸೌಮ್ಯ ಹೊಳಪು ಇವೆಲ್ಲ ಸೇರಿ ಬೊಂಬೆಗಳ ಲೋಕವನ್ನು ಜೀವಂತಗೊಳಿಸುತ್ತವೆ. ಸೂತ್ರಧಾರನ ಕೈಚಳಕ ಕಾಣದು; ಆದರೆ ಅವನ ಶ್ರದ್ಧೆ ಮಾತ್ರ ಪ್ರತಿಯೊಂದು ಚಲನೆಯಲ್ಲಿ ಎದ್ದು ಕಾಣಿಸುತ್ತದೆ.

ಈ ಸದ್ದುಗದ್ದಲವಿಲ್ಲದ ಕಾಯಕವು ದೇಶ-ವಿದೇಶಗಳಲ್ಲಿ ಎರಡೂವರೆ ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. ಪಾಕಿಸ್ತಾನದ ಲಾಹೋರಿನಲ್ಲಿ 'ವಿಶ್ವದ ಅತೀ ಸುಂದರ ಮತ್ತು ಅತಿ ಚಿಕ್ಕ ಬೊಂಬೆಗಳು' ಎಂಬ ಪ್ರಸಿದ್ಧಿಯನ್ನು ಗಳಿಸಿದೆ. ಅನೇಕ ಮ್ಯೂಸಿಯಂಗಳಲ್ಲಿ ಕಾಸರಗೋಡಿನ ಬೊಂಬೆಗಳು ಭಾರತೀಯ ಪರಂಪರೆಯ ಸಾಕ್ಷಿಯಾಗಿ ನಿಂತಿವೆ.

2001ರಲ್ಲಿ ಮೂವತ್ತನೇ ವರ್ಷದ ಸಂಭ್ರಮಕ್ಕೆ 'ಚಿಣ್ಣರ ಅಂಗಳಕ್ಕೆ ಪುತ್ಥಳಿ ಯಾತ್ರೆ' ಎಂಬ ವಿನೂತನ ಪ್ರಯತ್ನ. ಇನ್ಫೋಸಿಸ್‌ನ ಸುಧಾಮೂರ್ತಿಯವರ ಪ್ರೋತ್ಸಾಹದಿಂದ ಮೂವತ್ತಕ್ಕೂ ಹೆಚ್ಚು ಶಾಲೆಗಳಲ್ಲಿ ಬೊಂಬೆಗಳು ಕುಣಿದವು. ಮಕ್ಕಳು ಬೊಂಬೆಗಳ ಜೊತೆ ನಕ್ಕರು, ಕಲಿತರು, ಕುಣಿದರು. ಕಲೆ ವೇದಿಕೆಯಿಂದ ಇಳಿದು ಬಾಲಮನಗಳಿಗೆ ಸೇರಿತು.

ಇಂದು ಪಿಲಿಕುಂಜೆಯಲ್ಲಿ 'ಯಕ್ಷಪುತ್ಥಳಿ ಬೊಂಬೆಮನೆ' ರೂಪುಗೊಂಡಿದೆ. ಇದು ಒಂದು ಕನಸಿನ ಮ್ಯೂಸಿಯಂ. ಸಾವಿರ ಯಕ್ಷಗಾನ ವೇಷಗಳ ಗೊಂಬೆಗಳನ್ನು ಹೊಂದಬೇಕೆಂಬ ಆಶಯ. 'ಇಲ್ಲಿಗೆ ಬಂದವರು ಭಾರತೀಯ ಪರಂಪರೆಯೊಂದರ ದರ್ಶನ ಮಾಡಬೇಕು' ಎನ್ನುತ್ತಾರೆ ರಮೇಶ್. ತಮ್ಮ ಗಳಿಕೆ, ಸಹೋದರರ ಸಹಕಾರದಿಂದ ಕಟ್ಟಿದ ಈ ಮ್ಯೂಸಿಯಂಗೆ ಯಾವುದೇ ವಾಣಿಜ್ಯ ಉದ್ದೇಶವಿಲ್ಲ. ಎಲ್ಲರಿಗೂ ಮುಕ್ತ ಪ್ರವೇಶ; ವಿದ್ಯಾರ್ಥಿಗಳಿಗೆ ಉಚಿತ ತರಬೇತಿ.

ಆದರೆ ಕಲೆಗಾಗಿ ಧ್ಯಾನ ಮಾಡುವವರಿಗೆ ಆರ್ಥಿಕ ವಾಸ್ತವ ಸ್ಥಿತಿ ಕಠಿಣ. ಬೊಂಬೆ ನಿರ್ಮಾಣವನ್ನು 'ಲೇಬರ್' ಇಟ್ಟು ಮಾಡಲಾಗದು; ಸ್ವತಃ ಸಮಯ ಕೊಟ್ಟು, ಪ್ರಾಣ ತುಂಬಬೇಕು. ಸರ್ಕಾರ, ಕಲಾಸಂಸ್ಥೆಗಳ ಸಹಕಾರವಿಲ್ಲದೆ ಮ್ಯೂಸಿಯಂ ಸಂಪೂರ್ಣಗೊಳ್ಳುವುದು ಕಷ್ಟ. ಕೋಟಿಗಟ್ಟಲೆ ಮೊತ್ತಗಳು ಅನುದಾನಪಟ್ಟಿಗಳಲ್ಲಿ ಕಾಣುತ್ತವೆ; ಆದರೆ ಅವು ನಿಜವಾಗಿ ಪರಂಪರೆಯ ರಕ್ಷಣೆಗೆ ಸೇರುತ್ತಿವೆಯೇ? ಈ ಪ್ರಶ್ನೆಯನ್ನು ಬೊಂಬೆಗಳು ಮೌನವಾಗಿ ಕೇಳುತ್ತಿವೆ.

ಕರ್ನಾಟಕ, ಕೇರಳ ಸರ್ಕಾರಗಳ ಪ್ರಶಸ್ತಿಗಳು, ಜಕೋಸ್ಲಾವಿಯಾದ 'ಬೆಸ್ಟ್ ಟ್ರೆಡಿಶನಲ್ ಪರ್ಫಾರ್ಮರ್' ಬಿರುದು, ಅನೇಕ ಡಾಕ್ಯುಮೆಂಟರಿಗಳು, ಅಂತರರಾಷ್ಟ್ರೀಯ ಅಧ್ಯಯನಗಳು—ಇವೆಲ್ಲವೂ ರಮೇಶ್ ಅವರ ಸಾಧನೆಯ ಗುರುತುಗಳು. ದೂರದರ್ಶನದ 'ಇಂಡಿಯಾ ಗಾಟ್ ಟ್ಯಾಲೆಂಟ್' ವೇದಿಕೆಯಲ್ಲಿ ಶ್ರೇಷ್ಠ ತಂಡವಾಗಿ ಆಯ್ಕೆ; ಇವು ಗೌರವದ ಹೂವುಗಳು.

ಯಕ್ಷಬೊಂಬೆಗಳು ಐವತ್ತರ ಸಂಭ್ರಮವನ್ನು ನಮ್ಮೊಡನೆ ಹಂಚಿಕೊಳ್ಳಲು ಕಾಯುತ್ತಿವೆ. ಬೊಂಬೆಮನೆಯಲ್ಲಿ ಸಾವಿರ ಗೊಂಬೆಗಳ ಕನಸು ಸಾಕಾರಗೊಳ್ಳಬೇಕಿದೆ. ಪ್ರಶಸ್ತಿಗಳಾಚೆಗೆ, ಸನ್ಮಾನಗಳಾಚೆಗೆ, ಬದುಕಿನ ಉಸಿರಾಗುವ ಆರ್ಥಿಕ ಬೆಂಬಲ ಅಗತ್ಯ.

ಸೂತ್ರಗಳು ಬೆರಳಿಗೆ ಕಟ್ಟಿಕೊಂಡಿವೆ. ಆದರೆ ಅವು ಕೇವಲ ಮರದ ಗೊಂಬೆಗಳ ಚಲನೆಗಾಗಿ ಅಲ್ಲ; ಪಾರಂಪರಿಕ ಕಲೆಯ ಜೀವನಾಡಿ ಉಳಿಯಲೆಂದು. ಆ ಸೂತ್ರಗಳನ್ನು ಹಿಡಿದಿರುವ ಕೈಗೆ ನಾವು ಕೈಜೋಡಿಸಬೇಕಾದ ಸಮಯ ಇದು. ನಾವು ಕೈಹಾಕಿದರೆ ಬೊಂಬೆಗಳು ಮಾತ್ರವಲ್ಲ, ನಮ್ಮ ಸಂಸ್ಕೃತಿಯೂ ಕುಣಿಯುತ್ತದೆ. ❖

ಗಣ್ಯರ ಭೇಟಿಗೆ ಸಿದ್ಧವಾದ ಯಕ್ಷ ಬೊಂಬೆಗಳು



ಸೂತ್ರಧಾರ ಕೆ.ವಿ. ರಮೇಶ್ ಜತೆ ಪಾತ್ರಧಾರ

ಕಾಡಿನಲ್ಲೊಂದು ಕಾಡು ಆರ್ಕಿಡೇರಿಯಂ

• ಸರೋಜಾ ಪ್ರಕಾಶ

ಚಿಕ್ಕವರಿದ್ದಾಗ ಅಂಗಳದಲ್ಲಿ ನಿಂತೇ ಪಕ್ಕದ ಅರಳಿಮರದ ತುದಿಕೊಂಬೆಗಳಲ್ಲಿ ಅರಳಿದ ಸೀತಾಳಿ, ದ್ರೌಪದಿ ದಂಡೆಗಳನ್ನು ಲೆಕ್ಕ ಹಾಕುತ್ತಿದ್ದೆವು. ಆಗೀಗ ಪುಟಾಣಿ ಆರ್ಕಿಡ್‌ಗಳನ್ನು ಬುಡಸಹಿತ ಕಿತ್ತು ತಂದು ನಮ್ಮಂಗಳದ ಮಾವಿನಮರದ ಮೇಲೋ, ಕ್ರೋಟನ್ ಗಿಡಗಳ ಮೇಲೋ ಹಚ್ಚಿ ಬೆಳೆಸಲು ಯತ್ನಿಸುತ್ತಿದ್ದೆವು. ಆದರೆ ಅವು ಮಾಯವಾಗುತ್ತಿದ್ದವು. ಕಾಡಿನ ಸಸ್ಯಕ್ಕೆ ಕಾಡೇ ಬೇಕು ಎನ್ನುವ ಪಾಠ ನಮಗೆ ಆಗ ತಿಳಿದಿರಲಿಲ್ಲ.

ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಅಣಶಿ ಕಾಡಿನ ಆರ್ಕಿಡೇರಿಯಂಗೆ ಭೇಟಿ ನೀಡಿದಾಗ ಆ ಬಾಲ್ಯದ ನೆನಪುಗಳು ಮತ್ತೆ ಕಾಡಿದವು. ಒಂದೆರಡಲ್ಲ, ನೂರಾರು ಕಾಡು ಆರ್ಕಿಡ್‌ಗಳನ್ನು ಒಂದೇ ಕಡೆಯಲ್ಲಿ ನೋಡುವ ಅವಕಾಶ ಅಲ್ಲಿ ಸಿಕ್ಕಿತು. ಪಶ್ಚಿಮಘಟ್ಟದ ಮಡಿಲಲ್ಲಿರುವ ಜೋಯಿಡಾ ನಮ್ಮ ರಾಜ್ಯದಲ್ಲೇ ಅತಿ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ಉತ್ತರ ಕನ್ನಡ ಜಿಲ್ಲೆಯ ಅತಿ ದೊಡ್ಡ ತಾಲ್ಲೂಕು. ಇಲ್ಲಿ ಹರಿಯುವ ಕಾಳಿ ನದಿಗೆ ಅಡ್ಡಲಾಗಿ ಕಟ್ಟಲಾದ ಅಣೆಕಟ್ಟುಗಳ ಇತಿಹಾಸ, ಮುಳುಗಿದ ಸುಪಾ ಊರಿನ ಕಥೆ–ಎಲ್ಲ ಈ ನೆಲದ ಪರಿಸರಗಾಥೆಯ ಭಾಗ. ಇಡೀ ತಾಲ್ಲೂಕು ಕಾಳಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ; ಅಣಶಿ ರಾಷ್ಟ್ರೀಯ ಉದ್ಯಾನವನ ಹಾಗೂ ದಾಂಡೇಲಿ ವನ್ಯಜೀವಿ ಅಭಯಾರಣ್ಯಗಳು ಸೇರಿ ಸಮೃದ್ಧ ಕಾಡು ವ್ಯವಸ್ಥೆಯನ್ನು ರೂಪಿಸಿವೆ.

ಅಣಶಿ ರಾಷ್ಟ್ರೀಯ ಉದ್ಯಾನವನದಲ್ಲಿ ಅರಣ್ಯ ಇಲಾಖೆ ಸ್ಥಾಪಿಸಿದ ಸುಸಜ್ಜಿತ ಕಾಡು ಆರ್ಕಿಡೇರಿಯಂ ಪ್ರಕೃತಿ ಪ್ರಿಯರಿಗೆ ಆಕರ್ಷಕ ತಾಣವಾಗಿದೆ. ಒಳಗೆ ಪ್ರವೇಶಿಸಿದಾಗ ಹೂಬಿಟ್ಟ ವಿವಿಧ ಆರ್ಕಿಡ್‌ಗಳ ಛಾಯಾಚಿತ್ರಗಳು ಗೋಡೆಗಳನ್ನು ಅಲಂಕರಿಸಿದ್ದವು. ನಾವು ಹೋದಾಗ ನಾಲ್ಕೈದು ಗಿಡಗಳಲ್ಲಿ ಮಾತ್ರ ಹೂವಿತ್ತು; ಕೆಲವು ಬೀಜದ ಹಂತ ತಲುಪಿದ್ದವು. ಪ್ರತಿಯೊಂದು ಜಾತಿಗೂ ತನ್ನದೇ ಆದ ಹೂಬಿಡುವ ಕಾಲವಿರುವುದರಿಂದ ಎಲ್ಲವೂ ಒಂದೇ ಸಮಯದಲ್ಲಿ ಅರಳುವುದಿಲ್ಲ.

ಆರ್ಕಿಡ್‌ಗಳು ಮರಗಳ ಮೇಲಷ್ಟೇ ಬೆಳೆಯುತ್ತವೆ ಎನ್ನುವುದು ಸಾಮಾನ್ಯ ಭಾವನೆ. ಆದರೆ ನೆಲದಲ್ಲಿ ಹಾಗೂ ಕಲ್ಲಿನ ಮೇಲೂ ಬೆಳೆಯುವ ಜಾತಿಗಳನ್ನು ನೋಡಿ ಅಚ್ಚರಿಯಾಯಿತು. ಮೊದಲು ನೆಲದ ಆರ್ಕಿಡ್‌ಗಳು ಹೂ ಬಿಡುತ್ತವೆ; ಬಳಿಕ ಮರದ ಜಾತಿಗಳ ಸರದಿ. ಪ್ರತಿಯೊಂದು ಗಿಡದ ಎಲೆ, ದಂಟು, ಹೊರಚಾಚಿಕೊಂಡಿರುವ ಬೇರು–ಎಲ್ಲ ವಿಶಿಷ್ಟ ವಿನ್ಯಾಸ ಹೊಂದಿವೆ.

ಜಗತ್ತಿನಲ್ಲಿ ಅಂಟಾರ್ಕ್ಟಿಕಾ ಹೊರತುಪಡಿಸಿ ಎಲ್ಲ ಖಂಡಗಳಲ್ಲೂ ಆರ್ಕಿಡ್‌ಗಳು ಕಂಡುಬರುತ್ತವೆ. ಸುಮಾರು 28 ಸಾವಿರಕ್ಕೂ ಹೆಚ್ಚು ಜಾತಿಗಳಿರುವ ಈ ಸಸ್ಯಕುಟುಂಬ ಬಣ್ಣ, ಆಕಾರ, ಗಾತ್ರ ವೈವಿಧ್ಯಕ್ಕೆ ಪ್ರಸಿದ್ಧಿ. ಭಾರತದ ಅರುಣಾಚಲ ಪ್ರದೇಶ ಮತ್ತು ಪಶ್ಚಿಮಘಟ್ಟಗಳಲ್ಲಿ ಅವುಗಳ ಸಮೃದ್ಧಿ ಗಮನಾರ್ಹ. ಅತಿ ಚಿಕ್ಕ ಆರ್ಕಿಡ್ ಒಂದಿಂಚಿನಷ್ಟಿದ್ದರೆ, ಕೆಲವು ದೊಡ್ಡ ಜಾತಿಗಳು 30 ಅಡಿ ಎತ್ತರ ಬೆಳೆಯುತ್ತವೆ. ಹೂಬಿಟ್ಟ ನಂತರ ಲಕ್ಷಾಂತರ ಸೂಕ್ಷ್ಮ ಬೀಜಗಳನ್ನು ಹೊಂದಿದ ಚೀಲ ಒಡೆಯುತ್ತದೆ. ಬೀಜಗಳು ಗಾಳಿಯಲ್ಲಿ ಹರಡಿಕೊಂಡು ಶಿಲೀಂಧ್ರದ ನೆರವಿನಿಂದಲೇ ಮೊಳಕೆಯೊಡೆಯುತ್ತವೆ. ಈ ಅವಿನಾಭಾವ ಸಂಬಂಧವೇ ಆರ್ಕಿಡ್‌ಗಳ ಬದುಕಿನ ರಹಸ್ಯ.

ಕಾಡು ಆರ್ಕಿಡ್‌ಗಳು ಪರಾವಲಂಬಿಗಳು ಅಲ್ಲ; ಮರದಿಂದ ಆಹಾರ ಕಸಿದುಕೊಳ್ಳುವುದಿಲ್ಲ. ಆರಂಭಿಕ ಹಂತದಲ್ಲಿ ಶಿಲೀಂಧ್ರದ ಸಹಾಯ ಅವಶ್ಯಕ. ಕೆಲವು ಜಾತಿಗಳಿಗೆ ಎಲೆಗಳೇ ಇಲ್ಲ; ಅವು ಸಂಪೂರ್ಣವಾಗಿ ಶಿಲೀಂಧ್ರದ ಮೇಲೆ ಅವಲಂಬಿತವಾಗಿರುತ್ತವೆ. ಪರಾಗಸ್ಪರ್ಶದಲ್ಲಿಯೂ ಅವು ವಿಶಿಷ್ಟ–ನಿರ್ದಿಷ್ಟ ಕೀಟಗಳನ್ನು ಆಕರ್ಷಿಸುವ ವಾಸನೆ ಹೊರಹಾಕುವ ಜಾತಿಗಳಿವೆ; ಕೆಲವು ನಿರ್ದಿಷ್ಟ ಸಮಯದಲ್ಲಿ ಮಾತ್ರ ಪರಿಮಳ ಹರಡುತ್ತವೆ. ಹೀಗಾಗಿ ಆರ್ಕಿಡ್‌ಗಳಿವೆ ಎಂದರೆ ಆ ಕಾಡಿನ ಪರಿಸರ ವ್ಯವಸ್ಥೆ ಸಮತೋಲನದಲ್ಲಿದೆ ಎಂಬ ಸೂಚನೆ. ಮಾಲಿನ್ಯ ಮತ್ತು ಹವಾಮಾನ ವೈಪರೀತ್ಯಗಳಿಗೆ ಸೂಕ್ಷ್ಮವಾಗಿ ಸ್ಪಂದಿಸುವುದರಿಂದ ಅವುಗಳನ್ನು 'ಜೈವಿಕ ಸೂಚ್ಯಂಕಗಳು' ಎಂದು ಕರೆಯಲಾಗುತ್ತದೆ.

ಕಾಳಿ ಸಂರಕ್ಷಿತ ಪ್ರದೇಶದಲ್ಲಿ 93 ಬಗೆಯ ಕಾಡು ಆರ್ಕಿಡ್‌ಗಳನ್ನು ಗುರುತಿಸಲಾಗಿದೆ; ಅವುಗಳಲ್ಲಿ 63 ಜಾತಿಗಳನ್ನು ಆರ್ಕಿಡೇರಿಯಂನಲ್ಲಿ ಸಂರಕ್ಷಿಸಲಾಗಿದೆ. ಬೆಳವಣಿಗೆಯ ಪ್ರತಿಯೊಂದು ಹಂತ–ಎಲೆ, ಮೊಗ್ಗು, ಹೂ–ಕ್ರಮಬದ್ಧವಾಗಿ ದಾಖಲಿಸಲಾಗುತ್ತದೆ. ಪಶ್ಚಿಮಘಟ್ಟದ ಸಸ್ಯವೈವಿಧ್ಯವನ್ನು ಅಧ್ಯಯನ ಮಾಡಬಯಸುವವರಿಗೆ ಇದು ಜೀವಂತ ಪ್ರಯೋಗಾಲಯವೇ ಸರಿ.

ಭೂತಗನ್ನಡಿ ಹಿಡಿದು ಪುಟಾಣಿ ಹೂಗಳನ್ನು ಗಮನಿಸಿದಾಗ ಪ್ರಕೃತಿಯ ಸೂಕ್ಷ್ಮ ಕಲೆ ಮನಸ್ಸನ್ನು ಮಂತ್ರಮುಗ್ಧಗೊಳಿಸಿತು. ಒಣಕೊಂಬೆಯೊಂದರ ಮೇಲಿಂದ ಕೆಳವರೆಗೆ ಹಸಿರು ಎಲೆಗಳಿಂದ ತುಂಬಿದ್ದ ಗಿಡವೊಂದನ್ನು ನೋಡಿ ಯಾರೋ ಅದು ಪುನೀತ್ ರಾಜಕುಮಾರ್ ಚಿಕ್ಕವರಾಗಿದ್ದಾಗ ಅಭಿನಯಿಸಿದ 'ಬೆಟ್ಟದ ಹೂ' ಸಿನಿಮಾದಲ್ಲಿ ಬೆಟ್ಟದ ಹೂ ಅರಳಿಸಿದ್ದ ಆರ್ಕಿಡ್ ಅಂತೆ ಅಂದರು ಯಾರೋ. ಗುಂಪಿನಲ್ಲಿ ನಗು, ಹಾಡಿನ ಗುನುಗು. ಫೋಟೊಗಳಿಗೆ ಮುಗಿಬಿದ್ದ ಕ್ಷಣದಲ್ಲಿ ಮನದೊಳಗೆ ಒಂದು ಅರಿವು ಸ್ಪಷ್ಟವಾಯಿತು–ಒಮ್ಮೆ ಕಿತ್ತು ತಂದ ಗಿಡಗಳು ಉಳಿಯಲಿಲ್ಲ; ಆದರೆ ಕಾಡಿನಲ್ಲಿ ಅವುಗಳ ಲೋಕ ಅಸಾಧಾರಣವಾಗಿ ಅರಳುತ್ತಿದೆ. ಕಾಡಿನೊಳಗಿನ ಪ್ರತಿಯೊಂದು ಪುಟಾಣಿ ಆರ್ಕಿಡ್–ಪ್ರಕೃತಿಯ ಅಪಾರ ವೈವಿಧ್ಯಕ್ಕೆ ಸಾಕ್ಷಿ. ❖

ಅಣಶಿ ಕಾಡಿನ ಆರ್ಕಿಡೇರಿಯಂ

ಚಿತ್ರಗಳು: ಗಿರೀಶ್ ಐತಾಳ್

ರಜೆಯ ಯಾನ...

10ನೇ ಪುಟದಿಂದ...

ಚಾಲುಕ್ಯರ ಕಲ್ಲುಗಳಲ್ಲಿ...

ಪ್ರವಾಸ ಇಲ್ಲಿಯೇ ಮುಗಿಯಲಿಲ್ಲ. ಬಾಗಲಕೋಟೆ ಜಿಲ್ಲೆಯ ಬಾದಾಮಿ, ಐಹೊಳೆ, ಪಟ್ಟದಕಲ್ಲು ಕಡೆಗೆ ಹೆಜ್ಜೆ ಹಾಕಿದೆವು. ಚಾಲುಕ್ಯರ ವಾಸ್ತುಶಿಲ್ಪ ಕಲ್ಲಿನಲ್ಲಿ ಮೂಡಿದ ಕಲಾತ್ಮಕತೆ ನಮ್ಮನ್ನು ಬಹುವಾಗಿ ಸೆಳೆಯಿತು. ಐಹೊಳೆ ವಾಸ್ತುಶಿಲ್ಪದ ಪ್ರಯೋಗಶಾಲೆಯಂತೆ ಕಂಡರೆ, ಪಟ್ಟದಕಲ್ಲು ಅದರ ಪರಿಪೂರ್ಣ ರೂಪ. ಬಾದಾಮಿಯ ಗುಹೆಗಳು ಆ ಕಾಲದ ನಂಬಿಕೆ ಮತ್ತು ಕಲೆಯ ಸಾಕ್ಷಿ. ಕಲ್ಲಿನೊಳಗೆ ಕೆತ್ತಿದ ಮೂರ್ತಿಗಳು ಕಾಲವನ್ನು ಮೀರಿದಂತೆ ಕಂಡವು. ಇತಿಹಾಸ ಓದುವ ವಿಷಯ ಮಾತ್ರವಲ್ಲ; ಅದು ಅನುಭವಿಸುವ ವಿಷಯ ಎಂಬ ಅರಿವು ಅಲ್ಲಿ ಮೂಡಿತು.

ಪಯಣದ ಅಂತಿಮ ಅರಿವು

ಹದಿನೈದು ದಿನಗಳ ಈ ಪಯಣ ನಮಗೆ ಕೇವಲ ಪ್ರವಾಸವಾಗಿರಲಿಲ್ಲ; ಇದು ಮನಸ್ಸಿನ ವಿಸ್ತರಣೆ. ಕೋಲಾರದ ಹೊಲಗಳಿಂದ ಮಲೆನಾಡಿನ ಮಂಜು, ಬರಗೂರಿನ ಸಹಬಾಳ್ವೆ, ವಿಜಯಪುರದ ಬಿಸಿಲು, ಚಾಲುಕ್ಯರ ಶಿಲ್ಪ–ಇವೆಲ್ಲ ಸೇರಿ ಬದುಕಿನ ವಿಶಾಲ ಚಿತ್ರಣ ಮೂಡಿಸಿತು.

ಪತ್ರಿಕೋದ್ಯಮ ವಿದ್ಯಾರ್ಥಿಗಳಾದ ನಮಗೆ ಈ ಯಾತ್ರೆ ದೊಡ್ಡ ಪಾಠ ಕಲಿಸಿತು. ಸಮಾಜವನ್ನು ಅರ್ಥ-ಮಾಡಿಕೊಳ್ಳಲು ಕೇವಲ ಪುಸ್ತಕ ಸಾಕಾಗುವುದಿಲ್ಲ; ಜನರ ನಡುವೆ ಹೋಗಬೇಕು, ಕೇಳಬೇಕು, ಅನುಭವಿಸಬೇಕು.

ಕಾಲೇಜಿಗೆ ಹಿಂದಿರುಗಿದಾಗ ನಾವು ಅದೇ ವಿದ್ಯಾರ್ಥಿಗಳಾಗಿರಲಿಲ್ಲ. ನಮ್ಮೊಳಗೆ ಹೊಸ ದೃಷ್ಟಿ ಮೂಡಿತ್ತು. ಮುಂದಿನ ದಿನಗಳಲ್ಲಿ ನಾವು ಬರೆಯುವ ಪ್ರತಿಯೊಂದು ಸುದ್ದಿ, ಲೇಖನ, ವರದಿಯಲ್ಲಿ ಈ ಹದಿನೈದು ದಿನಗಳ ಅನುಭವದ ಛಾಪು ಇರುತ್ತದೆ.

ಆ ರಜೆ ಮುಗಿದರೂ, ಆ ಪಯಣ ಇನ್ನೂ ನಮ್ಮೊಳಗೆ ಮುಂದುವರಿಯುತ್ತಿದೆ. ❖

ಮುನ್ನೋಟ 15-03-2026 ರಿಂದ 21-03-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಈಗ ಬಹಳ ಆಶಾದಾಯಕರಾಗಿರುವಿರಿ. ಆದಾಯವು ಕಡಿಮೆ ಇರುತ್ತದೆ. ಹಿರಿಯರಿಂದ ಆರ್ಥಿಕ ಸಹಾಯ ದೊರೆಯುತ್ತದೆ. ಪಶುಸಂಗೋಪನೆ ಮಾಡುವವರಿಗೆ ಬಹಳಷ್ಟು ಅಭಿವೃದ್ಧಿ ಇದೆ. ಕೃಷಿ ಭೂಮಿಯನ್ನು ಮಾರಾಟ ಮಾಡುವವರ ಲಾಭ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವ್ಯವಹಾರದ ಬುದ್ಧಿ ಜಾಗೃತವಾಗಿ ಲಾಭ ಮಾಡುವ ಕಡೆಗೆ ಹೆಚ್ಚು ಗಮನ ಕೊಡುವಿರಿ. ಆದಾಯವು ನಿಮ್ಮ ನಿರೀಕ್ಷೆಗೆ ಮೀರಿ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲ ಇರುತ್ತದೆ. ನೇತ್ರದೋಷ ಇರುವವರು ಎಚ್ಚರಿಕೆ ವಹಿಸಿ. ಪರಿಚಿತರಿಂದ ವೃತ್ತಿಯಲ್ಲಿ ಅಭಿವೃದ್ಧಿ ಆಗುತ್ತದೆ. ಸಂಗಾತಿಯ ಜೊತೆ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಸರ್ಕಾರಿ ಕೆಲಸಗಳಿಂದ ಲಾಭವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನೀವು ಬಯಸದೇ ಸಾಮಾಜಿಕ ಗೌರವಗಳು ಒದಗಿ ಬರುತ್ತವೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಬಂಧುಗಳು ಧಾರ್ಮಿಕ ಕೆಲಸಗಳಿಗೆ ಮಾತ್ರ ಸಹಕಾರ ನೀಡುವರು. ಹಿರಿಯರ ಸಹಾಯದಿಂದ ಆಸ್ತಿ ಕೊಳ್ಳಬಹುದು. ವೃತ್ತಿ ಸಂಬಂಧಿತ ಪರೀಕ್ಷೆಗಳಲ್ಲಿ ಯಶಸ್ಸು ದೊರೆಯುತ್ತದೆ. ಸಂಗಾತಿಯಿಂದ ಆರ್ಥಿಕ ಸಹಕಾರ ನಿರೀಕ್ಷೆ ಮಾಡಬಹುದು. ತಾಯಿಯ ಜತೆ ಮುಸುಕಿನ ಗುದ್ದಾಟವಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭದಲ್ಲಿ ಬಹಳ ಸಂತೋಷವಿರುತ್ತದೆ. ಆದಾಯವು ಬಹಳ ಕಡಿಮೆ ಇರುತ್ತದೆ. ಕೃಷಿ ವಿಜ್ಞಾನವನ್ನು ಓದುತ್ತಿರುವವರಿಗೆ ಅಭಿವೃದ್ಧಿ ಇದೆ. ನಾಟಿ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ಪ್ರೀತಿ, ಪ್ರೇಮಗಳು ಸಫಲವಾಗುತ್ತವೆ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುವ ಸಂದರ್ಭವಿದೆ. ಕೆಲವರಿಗೆ ಹಿರಿಯರ ಆಭರಣಗಳು ದೊರೆಯಬಹುದು. ವೃತ್ತಿ ಸ್ಥಳದಲ್ಲಿ ಹಿತಶತ್ರುಗಳ ಕಾಟ ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆದಾಯವು ತಕ್ಕ ಮಟ್ಟಿಗೆ ಇದ್ದು, ಖರ್ಚುಗಳನ್ನು ಕಡಿಮೆಮಾಡಿಕೊಳ್ಳಬೇಕು. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅತ್ಯುತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಶೀತ ಸಂಬಂಧಿ ದೋಷಗಳು ಅಥವಾ ಮೂಳೆ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿ ಕಡೆಯವರಿಂದ ನಿಮಗೆ ಹೆಚ್ಚು ಅನುಕೂಲ-ಗಳಾಗುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾರದ ಆರಂಭದಲ್ಲೇ ಸಾಲದ ಚಿಂತೆ ಕಾಡುತ್ತದೆ. ಸಂಗಾತಿಯ ಕಡೆಯಿಂದ ಸ್ವಲ್ಪ ಆರ್ಥಿಕ ಸಹಕಾರವನ್ನು ನಿರೀಕ್ಷೆ ಮಾಡಬಹುದು. ಕಸೂತಿ ಮಾಡುವವರ ಆದಾಯ ಹೆಚ್ಚುತ್ತದೆ. ನಿಮ್ಮ ನಡವಳಿಕೆಯಿಂದ ಬಂಧುಗಳ ವಿರೋಧವನ್ನು ಕಟ್ಟಿಕೊಳ್ಳುವಿರಿ. ವಿದ್ಯಾರ್ಥಿಗ-ಳಿಗೆ ನಿರೀಕ್ಷಿತ ಫಲಿತಾಂಶವನ್ನು ಪಡೆಯುವ ಯೋಗವಿದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆದಾಯವು ಕಡಿಮೆ ಇರುತ್ತದೆ. ಹಿರಿಯರ ಸಹಕಾರ ಸ್ವಲ್ಪ ಮಟ್ಟಿಗೆ ದೊರೆಯುತ್ತದೆ. ಹೈನುಗಾರಿಕೆ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಯಶಸ್ಸು ಇರುತ್ತದೆ. ಲೇವಾದೇವಿ ಮಾಡುವವರ ವ್ಯವಹಾರದಲ್ಲಿ ನಷ್ಟ ಉಂಟಾಗುತ್ತದೆ. ಸಂಗಾತಿ ಮಾಡುವ ಕೃಷಿಯಲ್ಲಿ ಹೆಚ್ಚು ಲಾಭವಿರುತ್ತದೆ. ಸಂಗಾತಿಯ ಮಾತುಗಳು ಬೇಸರ ತರಿಸಬಹುದು. ಸ್ತ್ರೀಯರು ಮಾಡು ವವ್ಯಹಾರಗಳಲ್ಲಿ ನಿರೀಕ್ಷಿತ ಅಭಿವೃದ್ಧಿ ಇರುವುದಿಲ್ಲ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಧೈರ್ಯವಾಗಿ ಮುನ್ನುಗ್ಗುವಿರಿ. ಯಾವುದೇ ಕೆಲಸ ಮಾಡಲು ಉತ್ಸಾಹವಿರುತ್ತ-ದೆ. ವಿದ್ಯಾರ್ಥಿಗಳಿಗೆ ಮಧ್ಯಮ ಪ್ರಮಾಣದ ಯಶಸ್ಸು ಇರುತ್ತದೆ. ಮಹಿಳೆಯರಿಗೆ ಕೊಟ್ಟಿದ್ದ ಸಾಲ ವಾಪಸು ಬರಬಹುದು. ಸಂಗಾತಿಯು ಸರ್ಕಾರದ ಜೊತೆ ಮಾಡಿದ ವ್ಯವಹಾರಗ-ಳಲ್ಲಿ ಲಾಭವಿರುತ್ತದೆ. ಶಾಲಾ-ಕಾಲೇಜು ನಡೆಸುವವರಿಗೆ ಸ್ವಲ್ಪ ಅಡ್ಡಿ ಆತಂಕಗಳು ಬರಬಹುದು. ಹರಕೆಗಳನ್ನು ತೀರಿಸಲು ಮುಂದಾಗುವಿರಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮನಸ್ಸಿನಲ್ಲಿ ಹೊಸ ಉತ್ಸಾಹ ಮೂಡುತ್ತದೆ. ಆದಾಯವು ನಿರೀಕ್ಷೆಯ ಹಂತಕ್ಕೆ ತಲುಪುತ್ತದೆ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ಗಣಿತ ತಜ್ಞರಿಗೆ ಹೆಚ್ಚಿನ ಅವಕಾಶಗಳು ದೊರೆತು ಆದಾಯ ಹೆಚ್ಚುತ್ತದೆ. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಈಗ ನಿಮ್ಮ ಸಂಗಾತಿಯಿಂದ ಹೆಚ್ಚಿನ ಆರ್ಥಿಕ ಸಹಕಾರ ಸಿಗುತ್ತದೆ. ಪಶುಸಂಗೋಪನೆ ಮಾಡುವವರ ಆದಾಯ ಹೆಚ್ಚುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಮನಸಿನಲ್ಲಿ ಏನೋ ಸಾಧಿಸಿದ ಆನಂದವಿರುತ್ತದೆ. ಆದಾಯವು ಮಧ್ಯಮಗತಿಯ-ಲ್ಲಿರುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳ ಶ್ರದ್ಧೆಯಿಂದ ಉತ್ತಮ ಫಲಿತಾಂಶ ಲಭಿಸಬಹುದು. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡುತ್ತವೆ. ಸಂಗಾತಿಯ ನೈತಿಕ ಸಹಕಾರ ನಿಮಗೆ ಬಲ ಕೊಡುತ್ತದೆ. ಧರ್ಮ ಕಾರ್ಯ ಮಾಡುವವರಿಗೆ ಅನಿರೀಕ್ಷಿತವಾಗಿ ಆರ್ಥಿಕ ಸಹಕಾರ ಸಿಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರಲ್ಲಿ ದ್ವಂದ್ವ ನಿರ್ಧಾರಗಳು ಇರುತ್ತವೆ. ಆದಾಯವು ಮಧ್ಯಮ ಗತಿಯ-ಲ್ಲಿರುತ್ತದೆ. ಕುಟುಂಬದಲ್ಲಿ ಸಂತೋಷವಿರುತ್ತದೆ. ವಿದ್ಯಾರ್ಥಿಗಳಿಗೆ ಅತ್ಯುತ್ತಮ ಫಲಿತಾಂಶವನ್ನು ಪಡೆಯುವ ಯೋಗವಿದೆ. ಶೀತ ಬಾಧೆ ಕೆಲವರನ್ನು ಕಾಡುತ್ತದೆ. ಸಂಗಾತಿಯ ಧಾರ್ಮಿಕ ಕಾರ್ಯಗಳು ಬಲವನ್ನು ಕೊಡುತ್ತವೆ. ಗಣಿಗಾರಿಕೆ ಮಾಡುವವರ ವ್ಯವಹಾರದಲ್ಲಿ ಲಾಭ ಹೆಚ್ಚುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಲಾಭ ನಿರೀಕ್ಷೆಗೆ ಮೀರಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ನಿರ್ಧಾರಗಳು ಅತ್ಯಂತ ಜಟಿಲ ಮತ್ತು ದ್ವಂದ್ವದಿಂದ ಕೂಡಿರುತ್ತವೆ. ಆದಾಯವು ಕಡಿಮೆ ಇರುತ್ತದೆ. ನಿಮಗೆ ಹಿರಿಯ ಮಹಿಳೆಯರ ಸಹಕಾರ ದೊರೆಯುತ್ತದೆ. ಕುಟುಂಬದಲ್ಲಿ ಆಸ್ತಿ ವಿಚಾರವಾಗಿ ವಿವಾದಗಳಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ.

ಪದಬಂಧ 2935

ಮೇಲಿಂದ ಕೆಳಕ್ಕೆ
1. ಅರಿವಿನ ಮಜಲುಗಳನ್ನೇರಿದ ತೀರ್ಥಂಕರ 4
2. ನ್ಯಾಯಾಲಯದಲ್ಲಿ ಅಪರಾಧಿ ನಿಲ್ಲುವ ಚೌಕ 4
4. ಗಣಿತದಿಂದ ಆರಂಭವಾಗಿ ಇದೀಗ ವಿಶ್ವವನ್ನೇ ಅಂತರ್ಜಾಲದಲ್ಲಿ ಬಿಗಿದ ಕಂಪ್ಯೂಟರ್ 5
5. ಭಗವಂತನ ಸ್ಥಾನ ಪಡೆದ ದೇವಿ 4
6. ಊಟ ಆಹಾರಗಳನ್ನು ತ್ಯಜಿಸಿದವ 4
9. ದುಂಬಿಗಳ ಮಕರಂದದ ಒಟ್ಟಿಲು 5
11. ಗಾಳಿ ಪುತ್ರನ ನಾಮ 5
12. ಸಂಸ್ಕೃತದ ಹಲಸು 3
13. ಉತ್ತರ ಭಾರತದಲ್ಲಿನ ಮನೆ, ಇದೀಗ ಕಮಲದಿಂದ ಅರಳಿದ ಬೀಜ 3
17. ಸಮಯ ನಮಗಾಗಿ ಹಾಕುವ ಕಟ್ಟಳೆ 5
18. ಹಾರಿ ಹುಟ್ಟಿದ ಹೂವು 4
19. ಎಲ್ಲಾ ಕಾರಣಗಳನ್ನು ಒಳಗೊಂಡಿದ್ದು 4
20. ಸ್ವಾರ್ಥಕ್ಕಾಗಿ ಹೊಗಳಿ ಆಸನ ವ್ಯವಸ್ಥೆ ಮಾಡು 4
21. ಹೂವು ಅರಳಿದಂತೆ ವ್ಯಕ್ತಿತ್ವ ಅರಳಿದೆ 4

ಎಡದಿಂದ ಬಲಕ್ಕೆ
1. ಪತ್ರದ ಜೊತೆ ಸೇರಿಸಿದ ಇತರೆ ದಾಖಲೆಗಳು 3
3. ಮಕ್ಕಳಾಡುವ ಮನೆಯ ಪ್ರಾಂಗಣ 3
5. ಒಳ್ಳೆಯದನ್ನು ಉಂಟುಮಾಡುವ ದುರ್ಗಿ ಛತ್ರಪತಿ ಶಿವಾಜಿಯ ಆರಾಧ್ಯ ದೈವ 3
7. ನಮ್ಮ ನಾಡಿನ ಇತಿಹಾಸ, ಪರಂಪರೆಯ ಭವ್ಯತೆ 7
8. ಹಾಡಿಗ ಬಡಿಯುವ ಕೈವಾದ್ಯ 3
10. ಮೂರು ನದಿಗಳ ನೀರು ಕುಡಿದ ಉತ್ತರಭಾರತದ ಕುಲ 3
12. ಪುಣ್ಯಪ್ರದವಾದ ಪಾಪರಹಿತ ಪ್ರೀತಿ 5
14. ಜಗಳ ಬಿಡಿಸಲು ಮಾಡುವ ಮಧ್ಯಸ್ಥಿಕೆ 3
15. ಹಳೆಗನ್ನಡದ ಕಾಡು 3
16. ಪ್ರಜ್ಞೆ ಮತ್ತು ಸಮಾಜದಲ್ಲಿ ಇಂದಿನ ಸಮಯ 5
18. ವಿಶೇಷ ದಿನದ ಊಟದಲ್ಲಿ ಎಲೆಕೊನೆಯ ದ್ರವರೂಪಿ ಸಿಹಿ 3
20. ಮನದಾಳದ ಅಹವಾಲು 3
22. ಕೊಟ್ಟ ಕೆಲಸವನ್ನು ನಿಷ್ಠೆಯಿಂದ ಮಾಡುವುದು 7
23. ತರ್ಕ ಶಾಸ್ತ್ರ ಸಿದ್ಧಾಂತದ ಹುರುಳು 3
24. ಮನವನ್ನು ಸೆರೆಹಿಡಿದ ನಡಿಗೆ 3
25. ಆಧಾರವಿಲ್ಲದೆ ಕೆಳಗೆ ಬೀಳುವುದು 3



ಪದಬಂಧ ಉತ್ತರ -2934

ಮೇಲಿಂದ ಕೆಳಕ್ಕೆ
1. ಚಂದ್ರಗ್ರಹಣ 2.ಹರಶಂಕರ 3.ರುದ್ರತಾಂಡವ 4.ವಿದೇಶಯಾನ 8. ರಘೂಜ 9.ಕಲಹ 11.ರಕ್ತಾಕ್ಷಿ 12.ದಿವಾನ 14.ಗಜವದನ 15.ನಗೆಪಾಟಲು 16. ರತಿಮದನ 17.ವಧೂವರರು

ಎಡದಿಂದ ಬಲಕ್ಕೆ
1. ಇಂದ್ರಕುಮಾರ 6.ದ್ರವಿಡದೇಶ 7.ಕನ್ನಡ 8.ರಣಭೀಕರ 10.ವರದಾನದಿ 13.ಜಗನ್ಮೋಹನ 16.ರಕ್ಷಿತವನ 18.ಗೆಳತಿ 19.ಪದಪಲ್ಲಟ 20.ದನಗೊರಸು 21.ಉವಿನ

ರಂಗದ ಮೇಲೆ ಅಂಬೇಡ್ಕರ್ ಚಿಂತನೆಗಳ ಕೊಲಾಜ್

• ಕಿರಣ ಭಟ್, ಹೊನ್ನಾವರ

ನಾಟಕದ ದೃಶ್ಯ

ಅಂಬೇಡ್ಕರ್ ಬದುಕು, ಚಿಂತನೆಗಳು, ಬರಹಗಳನ್ನು ರಂಗಪ್ರಯೋಗಗಳ ಮೂಲಕ ಕನ್ನಡದ ಪ್ರೇಕ್ಷಕರಿಗೆ ಮುಟ್ಟಿಸುವ ಕೆಲಸ ಇತ್ತೀಚೆಗೆ ನಡೆದಿದೆ. ಇಂಥ ಪ್ರಯತ್ನಗಳ ನಡುವೆ, ಕೋಟಿಗಾನಹಳ್ಳಿ ರಾಮಯ್ಯ ರಚಿಸಿ, ಚಿದಂಬರರಾವ್ ಜಂಬೆ ನಿರ್ದೇಶಿಸಿರುವ 'ಅಂಬೇಡ್ಕರ್ ಕೊಲಾಜ್' ವಿಭಿನ್ನವಾಗಿ ರಂಗದ ಮೇಲೆ ಬಂದಿದೆ. ಮೈಸೂರಿನ ರಂಗಾಯಣ ರೆಪರ್ಟರಿ ಈ ನಾಟಕವನ್ನು ಅಭಿನಯಿಸುತ್ತಿದೆ. ಪ್ರಸ್ತುತ ಸಮಾಜ–ರಾಜಕೀಯ ಪರಿಸ್ಥಿತಿಯಲ್ಲಿ ಇದು ಖಂಡಿತವಾಗಿಯೂ ಮಹತ್ವದ ಪ್ರಯೋಗ.

ನಾಟಕ ಪ್ರಾರಂಭವಾಗುವುದೇ ವಿಶಿಷ್ಟವಾಗಿ. ಅಮ್ಮ ಪಾಲುಕ್ಕಮ್ಮ ಭಯಂಕರ ಸಿಟ್ಟಿನಲ್ಲಿದ್ದಾಳೆ. ಪೊರಕೆ ಕೈಯಲ್ಲಿ ಹಿಡಿದು ಬೀಸುತ್ತ ಬರುತ್ತಿದ್ದಾಳೆ. ತನ್ನ ಸುತ್ತಲಿನ ಆವರಣದಲ್ಲಿ ಕಸ ಎಸೆದವರ ಮೂಢ ನಡೆಗಳ ಮೇಲೆ ಆಕೆಗೆ ಅಸಾಧ್ಯ ಕೋಪ. ಸುತ್ತಲಿದ್ದ ಕಸವನ್ನೆಲ್ಲ ಝುರ ಝುರ ಝಾಡಿಸಿ ಒಗೆಯುತ್ತಿದ್ದಾಳೆ. ಆಕೆಯ ಈ ಕ್ರಿಯೆಯೇ ಮುಂದೆ ಸಮಾಜದ ಅನಿಷ್ಟಗಳನ್ನು ಝಾಡಿಸಿ ತೆಗೆಯಲು ಟೊಂಕ ಕಟ್ಟಿ ನಿಂತ ಅಂಬೇಡ್ಕರ್ ಬದುಕು, ಚಿಂತನೆಗಳ ಗ್ರಹಿಕೆಗೆ ಸಾಂಕೇತಿಕ ಪ್ರವೇಶವನ್ನು ಒದಗಿಸುತ್ತದೆ. ಮುಂದೆ ನಾಟಕದುದ್ದಕ್ಕೂ ಅಲ್ಲಲ್ಲಿ ರಂಗಪರಿಕರವಾಗಿ ಕಾಣಿಸಿಕೊಳ್ಳುವ ಈ 'ಪೊರಕೆ' ಇಂಥ ಆಶಯವನ್ನು ಮತ್ತೆ ಮತ್ತೆ ನೆನಪಿಸುತ್ತದೆ.

ಅಂಬೇಡ್ಕರ್ ಬಾಲ್ಯದಿಂದ ಪ್ರಾರಂಭವಾಗಿ ಸಂಸತ್ ಸ್ಥಾನದ ಅವರ ರಾಜೀನಾಮೆಯವರೆಗಿನ ಘಟನೆಗಳು, ಅವರ ಪ್ರಮುಖ ಕೊಡುಗೆಗಳನ್ನು ಆಧಾರವಾಗಿಟ್ಟುಕೊಂಡು ಕಟ್ಟಿದ ನಾಟಕವಿದು. ಶಾಲೆಯ ದಿನಗಳು, ಕುಡಿಯುವ ನೀರನ್ನು ನಿರಾಕರಿಸಿದ ಘಟನೆ, ಓದಿನ ಪ್ರೀತಿ, ಗ್ರಂಥಾಲಯದ ಒಲವು, ವಿದೇಶದಲ್ಲಿ ಅಭ್ಯಾಸ ಮಾಡಿ ಬಂದು ಉನ್ನತ ಉದ್ಯೋಗದಲ್ಲಿದ್ದರೂ ದೊರಕದ ಬಾಡಿಗೆ ಮನೆ, ಚೌಡರ್ ಕೆರೆಯ ಪ್ರಸಂಗ... ಹೀಗೆ ಹಲವು ಘಟನೆಗಳು ಇಲ್ಲಿ ಸೇರಿಕೊಂಡಿವೆ.

ಇಂಥ ಕೊಲಾಜ್ ರೂಪಿಸಲು ಜಂಬೆಯವರು ನೆಚ್ಚಿಕೊಂಡ 'ಅಂಟು' ಬಲಿಷ್ಠವಾದ 'ಮೇಳ'. ಇಲ್ಲಿ ಮೇಳ ಬರಿಯ ಹಾಡುವಿಕೆಗೆ ಸೀಮಿತವಾಗಿಲ್ಲ. ಅದು ಅಂಬೇಡ್ಕರ್ ಚಿಂತನೆಗಳ ಮುಖವಾಣಿಯಾಗಿದೆ. ಜೊತೆಗೆ, ಪ್ರಸಕ್ತ ವಿದ್ಯಮಾನಗಳ ಕುರಿತೂ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತದೆ. ಅವರ ಚಿಂತನೆಗಳ ಪ್ರಸ್ತುತತೆಯ ಕುರಿತೂ ಚರ್ಚಿಸುತ್ತ ಹೋಗುತ್ತದೆ. ಈ ಮೂಲಕ ಒಂದು ಪರಿಪೂರ್ಣ ಕೊಲಾಜ್ ಕಟ್ಟುವಲ್ಲಿ ನೆರವಾಗುತ್ತದೆ. ನಾಟಕಕಾರನೂ ಜೊತೆ ಜೊತೆಗೆ ಸೇರಿಕೊಳ್ಳುತ್ತ, ಘಟನೆಗಳಲ್ಲಿ ಭಾಗಿಯಾಗುತ್ತ ಎಲ್ಲದಕ್ಕೂ ಸಾಕ್ಷಿಯಾಗುತ್ತಾನೆ. ನಾಟಕದುದ್ದಕ್ಕೂ ಅಂಬೇಡ್ಕರ್ ಸ್ವಗತಗಳಿವೆ. ಒಂದೆಡೆ ಅವರು 'ನನ್ನ ಬರಹಗಳನ್ನು ನಿರಾಕರಿಸಿ ನನ್ನ ಭಾವಚಿತ್ರದ ಪೂಜೆ ನಡೆದಿದೆ' ಎಂದು ಬೇಸರಿಸುತ್ತಾರೆ.

ಈ ಮಧ್ಯೆ ಸ್ವಾರಸ್ಯಕರ ಮುಖಾಮುಖಿಗಳಿವೆ. ಸೈಕಲ್ ಪಂಕ್ಚರ್ ಅಂಗಡಿಯಲ್ಲಿ ಹಾಲು ಮಾರುವ 'ಬಸವ' ಅಂಬೇಡ್ಕರ್ ಜೊತೆ ಸೇರುವ ಪ್ರಸಂಗವನ್ನು ತುಂಬ ಜಾಣತನದಿಂದ ಕಟ್ಟಲಾಗಿದೆ. ಇದು ಎರಡು ಮಾನವೀಯ ವಿಚಾರಧಾರೆಗಳ ಸಂಗಮದಂತಿದೆ. 'ಬುದ್ಧ'ನೂ ಇಲ್ಲಿ ಹೊರತಾಗಿಲ್ಲ. ನಾಟಕದಲ್ಲಿ ಬರುವ ಕಬೀರರ 'ಕಬೀರಾ ಕಹೇ ಯೇ ಜಗ್ ಅಂಧಾ' ಹಾಡು ಬುದ್ಧನ ತರ್ಕ, ಅನುಭವ, ಸತ್ಯಶೋಧನೆ ಮತ್ತು ಪಾಖಂಡಿತನದ ಖಂಡನೆಯ ಪ್ರತೀಕವಾಗಿದೆ. 'ಮನುಷ್ಯರನ್ನು ಮನುಷ್ಯರನ್ನಾಗಿ ಕಾಣುವುದು ಬೌದ್ಧಧರ್ಮ' ಎನ್ನುತ್ತಾರೆ ಅಂಬೇಡ್ಕರ್.

'ಚೌಡರ್ ಕೆರೆ' ದೃಶ್ಯ ವಿನ್ಯಾಸ ಮತ್ತು ತೀಕ್ಷ್ಣತೆಯ ದೃಷ್ಟಿಯಿಂದ ಅಪರೂಪದಂತಿದೆ. ಮಹಾಡದ ನೀರಿನ ಶುದ್ಧೀಕರಣದ ಘಟನೆಯ ಕುರಿತು ಅಂಬೇಡ್ಕರ್ ಪ್ರತಿಕ್ರಿಯೆ ತುಂಬ ಖಾರವಾಗಿದೆ. 'ಶುದ್ಧೀಕರಣ ಇನ್ನು ಗಂಜಳದ ಬದಲು ಮನುಷ್ಯರ ರಕ್ತ ಬೇಡುತ್ತದೆ'.

ಒಟ್ಟಾರೆ ಈ ನಾಟಕ ಧೀಮಂತ ವ್ಯಕ್ತಿತ್ವವೊಂದನ್ನು ನಮ್ಮೆದುರು ಕಡೆದಿಡುವ ಪ್ರಯತ್ನ.

ನಾಟಕದ ಎಲ್ಲ ಪಾತ್ರಧಾರಿಗಳ ಅಭಿನಯವೂ ಶ್ರೇಷ್ಠ ಮಟ್ಟದ್ದೇ. ಅಂಬೇಡ್ಕರ್ ಬದುಕಿನ ಭಾಗ ಸಂಯಮದ ಪ್ರತಿರೂಪದಂತಿದ್ದರೆ, ಮೇಳ ಪಾದರಸದ ಚುರುಕಿನದ್ದು. ಹಾಗಾಗಿ ಒಮ್ಮೊಮ್ಮೆ ಮೇಳವೇ ಮುನ್ನೆಲೆಗೆ ಬಂದು ಮುಖ್ಯ ಭಾಗ ಹಿನ್ನೆಲೆಗೆ ಹೋಗಿಬಿಟ್ಟಿದೆಯೇನೋ ಎನಿಸುತ್ತದೆ. ಈ ಅಸಮತೋಲನವನ್ನು ಒಂದಿಷ್ಟು ಸರಿಪಡಿಸಬಹುದಿತ್ತೇನೋ. ಸಂಗೀತ (ಚೀನಿ, ಚಂದ್ರಶೇಖರ್ ಆಚಾರ್) ಹಿತವಾಗಿದೆ. ರಂಗ ವಿನ್ಯಾಸ ದ್ವಾರಕಾನಾಥ್ ಅವರದು. ವಸ್ತ್ರ ವಿನ್ಯಾಸ ಪ್ರಮೋದ ಶಿಗ್ಗಾಂವ್ ಅವರದು. ಮಹೇಶ್ ಕಲ್ಲತ್ತಿಯವರ ಬೆಳಕಿನ ವಿನ್ಯಾಸ ಪೂರಕವಾಗಿದೆ. ನಂದಿನಿ, ಪ್ರಶಾಂತ್ ಪರಿಕರಗಳನ್ನು ಸಿದ್ಧಪಡಿಸಿದ್ದಾರೆ.

ನಾಟಕದಲ್ಲಿ ಅಂಬೇಡ್ಕರ್ ಒಂದು ಮಾತು ಹೇಳುತ್ತಾರೆ: 'ತೇರನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿದ್ದೇನೆ. ಮುಂದೆ ಎಳೆಯದಿದ್ದರೂ ಪರವಾಗಿಲ್ಲ; ಹಿಂದೆ ಹೋಗದಿದ್ದರೆ ಸಾಕು'.

ಈ ನಾಟಕ ತೇರನ್ನು ಮುಂದಕ್ಕೆ ಎಳೆಯಲು ಪ್ರೇರೇಪಿಸುತ್ತದೆ. ಸಭಾಂಗಣದ ತುಂಬ 'ಜೈ ಭೀಮ್' ಘೋಷಣೆಗಳು ಮೊಳಗುತ್ತವೆ.

ದಿನಕ್ಕೊಂದು ವೇಷ ಅವರೇ ಉಮೇಶ

10ನೇ ಪುಟದಿಂದ...

ಆದರೂ ಉಮೇಶ್ ದುಗುಡವನ್ನು ಹೊರಗೆ ತೋರಿಸುವುದಿಲ್ಲ. 'ನಕ್ಕು ಸಾಯ್ರೋ ನಕ್ಕ ಸಾಯ್ರಿ...' ಎಂದು ದ.ರಾ. ಬೇಂದ್ರೆ ಅವರ ಸಾಲುಗಳನ್ನು ಉಲ್ಲೇಖಿಸುತ್ತಾರೆ. 'ಜನರನ್ನು ನಗಿಸುವುದೇ ಮುಖ್ಯ. ಉಳಿದದ್ದು ಗೌಣ. ನನ್ನೊಳಗಿನ ವಿಷಾದಗಳು ನನ್ನ ಅಭಿರುಚಿ ಮೇಲೆ ಸವಾರಿ ಮಾಡಿಲ್ಲ' ಎನ್ನುತ್ತಾರೆ ದೃಢವಾಗಿ. ಕೆಲವೊಮ್ಮೆ ಆ ವಿಷಾದಗಳೇ ಹಾಸ್ಯದ ವಿಷಯವಾಗುತ್ತವೆ ಎನ್ನುವುದೂ ಅವರ ಮಾತು.

ಅವತಾರಗಳ ಪಯಣ

ಮೂರು ದಶಕಗಳು ಒಂದೇ ನಗರದಲ್ಲಿ ವಿಭಿನ್ನ ರೂಪಗಳಲ್ಲಿ ಕಾಣಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ಆದರೆ ಉಮೇಶ್ ಅದನ್ನು ಸಾಧಿಸಿದ್ದಾರೆ. ಒಂದೇ ಉಡುಪನ್ನು ಹೊಸ ವಿನ್ಯಾಸದಲ್ಲಿ ತಾಳುವುದು, ಸಂದರ್ಭಕ್ಕೆ ತಕ್ಕಂತೆ ಪಾತ್ರ ರೂಪಿಸುವುದು–ಇವು ಅವರ ನೈಪುಣ್ಯ. ಅವರ ಅವತಾರಗಳು ಕೇವಲ ವೇಷವಲ್ಲ; ಬದುಕಿನ ಅಭಿವ್ಯಕ್ತಿ.

ಮಾತು ಮುಗಿಯುವಷ್ಟರಲ್ಲಿ ಅವರು 'ಲವ್ ಮೀ ಆರ್ ಹೇಟ್ ಮಿ...' ಎಂದು ಹಾಡುತ್ತಾ, ಅದಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಒನಕೆ ಓಬವ್ವ ಸ್ಟೇಡಿಯಂ ಕಡೆಗೆ ಸಾಗಿದರು.

ದುರ್ಗದ ಬೀದಿಗಳಲ್ಲಿ ಮತ್ತೊಂದು ದಿನ, ಮತ್ತೊಂದು ಅವತಾರ–ಮತ್ತೆ ನಗುವ ಹೊಳೆ ಹರಿಸಲು ಸಿದ್ಧ. ಜಗತ್ತೇ ರಂಗಮಂಚ ಎಂದು ನಂಬಿದ ಹಾಸ್ಯಗಾರನ ಪಯಣ ಹೀಗೇ ಮುಂದುವರಿಯುತ್ತದೆ.

ಯೂನಿವರ್ಸಿಟಿ ಆಫ್ ಕೋಪೆನ್‌ಹೇಗನ್‌ನ ಹಳೆ ಗ್ರಂಥಾಲಯ



ಕಾಫಿಯ ಘಮಲು, ಪುಸ್ತಕಗಳ ನೆರಳು

• ಚೇತನ್ ಈರಗಾರ

ಉತ್ತರ ಯುರೋಪಿನ ಮನಮೋಹಕ ನಗರಗಳ ಪೈಕಿ ಒಂದು ಹೆಸರು ಎಂದರೆ ಕೋಪೆನ್‌ಹೆಗನ್. ಡೆನ್ಮಾರ್ಕ್ ದೇಶದ ರಾಜಧಾನಿಯಾದ ಈ ನಗರ ಹಲವು ಬಾರಿ ಅಗ್ನಿ ಅವಘಡಗಳಿಂದ ಘಾಸಿಗೊಳಗಾದರೂ, ಇಂದಿಗೂ ಬಣ್ಣ ಬಣ್ಣದ ಕಟ್ಟಡಗಳಿಂದ ಕಂಗೊಳಿಸುತ್ತಿದೆ. ಸಂಸ್ಕೃತಿ, ಶಿಕ್ಷಣ ಮತ್ತು ಸಾಹಿತ್ಯ ಪರಂಪರೆಯಿಂದ ಸಮೃದ್ಧವಾದ ಈ ನಗರಕ್ಕೆ ಯೂನಿವರ್ಸಿಟಿ ಆಫ್ ಕೋಪೆನ್‌ಹೆಗನ್ ವಿಶೇಷ ಮೆರುಗು ನೀಡಿದೆ.

ಪ್ರವಾಸದ ಮಧ್ಯೆ ಅನಿರೀಕ್ಷಿತವಾಗಿ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುವ ಅಗತ್ಯ ಎದುರಾದಾಗ, ಪ್ರಶಾಂತ ಸ್ಥಳ ಹುಡುಕುತ್ತ ಸಾಗಿದ ಹೆಜ್ಜೆಗಳು ಒಂದು ವಿಶಿಷ್ಟ ಕೆಫೆಯ ಮುಂದೆ ನಿಂತವು–'ಪಾಲುಡನ್ ಬೊಗ್ ಮತ್ತು ಕೆಫೆ'. 'Not just another coffee place' ಎಂಬ ಫಲಕವೇ ಕುತೂಹಲ ಮೂಡಿಸಿತು. ಡ್ಯಾನಿಷ್ ಭಾಷೆಯಲ್ಲಿ 'ಬೊಗ್' ಎಂದರೆ ಪುಸ್ತಕ. ಒಳಗೆ ಕಾಲಿಟ್ಟ ಕ್ಷಣವೇ ಗೋಡೆಗಳಿಂದ ಮೇಲ್ಛಾವಣಿವರೆಗೆ ಸಾಲುಗಟ್ಟಿದ ಪುಸ್ತಕಗಳು, ಹಳೆಯ ಕಾಗದದ ವಾಸನೆಗೆ ಬೆರೆತ ಕಾಫಿಯ ಸುವಾಸನೆ–ಇವುಗಳ ನಡುವೆ ಕೆಲಸ ಮಾಡುವ ಅನುಭವ ಸಾಹಿತ್ಯಮಯವಾಗಿತ್ತು. 1895ರಲ್ಲಿ ಪುಸ್ತಕ ಅಂಗಡಿಯಾಗಿ ಆರಂಭಗೊಂಡ ಈ ಸ್ಥಳ, ಇಂದಿಗೂ ತನ್ನ ಪುಸ್ತಕ ಆತ್ಮವನ್ನು ಉಳಿಸಿಕೊಂಡಿದೆ.

ಇಲ್ಲಿಂದ ಕೆಲವೇ ಹೆಜ್ಜೆ ದೂರದಲ್ಲಿ ವಿಶ್ವವಿದ್ಯಾಲಯದ ಹಳೆಯ ಗ್ರಂಥಾಲಯವಿದೆ. 1479ರಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯವು 1482ರಲ್ಲೇ ಗ್ರಂಥಾಲಯವನ್ನು ಆರಂಭಿಸಿತು. ಸುಮಾರು ಆರು ಲಕ್ಷ ಪುಸ್ತಕಗಳನ್ನು ಸಂಗ್ರಹಿಸಿಕೊಂಡಿದ್ದ ಈ ಕಟ್ಟಡ ಇಂದು ಐತಿಹಾಸಿಕ ಸ್ಮಾರಕ. 1861ರಲ್ಲಿ ವಾಸ್ತುಶಿಲ್ಪಿ ಜೋಹಾನ್ ಡ್ಯಾನಿಯಲ್ ಹೆರ್ಹೋಲ್ಟ್ ವಿನ್ಯಾಸಗೊಳಿಸಿದ ಈ ಭವ್ಯ ನಿರ್ಮಾಣವು ಅಗ್ನಿ ಅವಘಡಗಳನ್ನೂ, ಬಾಂಬ್ ದಾಳಿಯನ್ನೂ ಎದುರಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ.

'ಇಲ್ಲಿನ ಅತಿ ಹಳೆಯ ಪುಸ್ತಕ ಯಾವುದು?' ಎಂಬ ನನ್ನ ಪ್ರಶ್ನೆಗೆ ಮಾರ್ಗದರ್ಶಕ ಹೇಳಿದ ಕಥೆ ಮನಸ್ಸಿಗೆ ಮುದ ನೀಡಿತು. ಕೆಲ ವರ್ಷಗಳ ಹಿಂದೆ ಇದೇ ಪ್ರಶ್ನೆಯನ್ನು ಪುಟ್ಟ ಬಾಲಕಿ ಕೇಳಿದಳಂತೆ. ಉತ್ತರ ಸಿಗದಿದ್ದರೂ ಅವಳು ಕೈಬಿಡದೆ ಸಂಶೋಧನೆ ನಡೆಸಿ ಕೊನೆಗೆ 1707ರ ಭೂಗೋಳಶಾಸ್ತ್ರ ಗ್ರಂಥವೊಂದನ್ನು ಗುರುತಿಸಿದ್ದಳು.

ಅದರ ವಿಶೇಷವೇನು ಗೊತ್ತೇ? ಯುರೋಪಿನ ಆ ಶೆಲ್ಫ್‌ನಲ್ಲಿ ಮಲಗಿದ್ದ ಆ ಹಳೆಯ ಗ್ರಂಥದಲ್ಲಿ ಭಾರತ, ಗಂಗಾ ನದಿ, ಮತ್ತು ಸಿಂಧು ನದಿಗಳ ಉಲ್ಲೇಖಗಳು ಸ್ಪಷ್ಟವಾಗಿ ಕಂಡುಬಂದವು. ಸಾವಿರಾರು ಕಿಲೋಮೀಟರ್ ದೂರದ ಡೆನ್ಮಾರ್ಕ್‌ನ ಗ್ರಂಥಾಲಯದಲ್ಲಿ, ನಮ್ಮ ದೇಶದ ನದಿಗಳ ಹೆಸರನ್ನು ಕಾಣುವುದು ಅಚ್ಚರಿಯ ಕ್ಷಣ. ಜ್ಞಾನಕ್ಕೆ ಗಡಿ ಇಲ್ಲ, ಇತಿಹಾಸದ ಪಯಣಕ್ಕೆ ರಾಷ್ಟ್ರಗಳ ಅಂತರ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಅದು ಸಾಕ್ಷಿಯಾಗಿತ್ತು.

'ಪಾಲುಡನ್ ಬೊಗ್ ಮತ್ತು ಕೆಫೆ' ಒಳಗಿನ ಗ್ರಂಥಾಲಯ

ಇತ್ತೀಚೆಗೆ ಮಹಿಳೆಯರಿಗೆ ವಿಶ್ವವಿದ್ಯಾಲಯ ಪ್ರವೇಶ ದೊರೆತ 150 ವರ್ಷಗಳ ಸಂಭ್ರಮದ ಅಂಗವಾಗಿ ಇದೇ ಹಳೆಯ ಗ್ರಂಥಾಲಯದಲ್ಲಿ ವಿಶೇಷ ಪ್ರದರ್ಶನವೂ ನಡೆದಿತ್ತು–ಇತಿಹಾಸದ ಪುಟಗಳಲ್ಲಿ ಸಮಾನತೆಯ ಹೆಜ್ಜೆ ಗುರುತುಗಳನ್ನು ಗುರುತಿಸುವ ಪ್ರಯತ್ನವಾಗಿ.

ಮಾರ್ಗದರ್ಶಕ ಸೂಚಿಸಿದ ಮತ್ತೊಂದು ತಾಣವೆಂದರೆ ಬ್ಲ್ಯಾಕ್ ಡೈಮಂಡ್–ಆಧುನಿಕ ವಾಸ್ತುಶೈಲಿಯ ಅದ್ಭುತ. ಹಳೆಯ ಇಟ್ಟಿಗೆ ಕಟ್ಟಡದ ಮೌನಗಾಥೆಗೆ ಎದುರಾಗಿ ನಿಂತಿರುವ ಈ ಕಪ್ಪು ಗಾಜಿನ ಕಟ್ಟಡ ಇಂದಿನ ಅಧ್ಯಯನದ ಚುರುಕು ಚೈತನ್ಯವನ್ನು ಪ್ರತಿಬಿಂಬಿಸುತ್ತದೆ.

ಹೀಗೆ, ಕಾಫಿಯ ಸುವಾಸನೆ ಮತ್ತು ಪುಸ್ತಕಗಳ ನೆರಳಿನಲ್ಲಿ ಕಳೆದ ಆ ದಿನ, ಕೋಪೆನ್‌ಹೆಗನ್ ನನಗೆ ಒಂದು ಮಹತ್ವದ ಅರಿವು ನೀಡಿತು–ಜ್ಞಾನವು ಗಡಿಗಳನ್ನು ದಾಟಿ ದೇಶಗಳನ್ನು, ನದಿಗಳನ್ನು, ಸಂಸ್ಕೃತಿಗಳನ್ನು ಒಂದೇ ಪುಟದಲ್ಲಿ ಸೇರಿಸುವ ಶಕ್ತಿ ಹೊಂದಿದೆ.

ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಸಮೀಪದ ಪುಸ್ತಕ ಅಂಗಡಿಗಳಲ್ಲಿ ಲಭ್ಯ
ಸಂಪುಟ 3
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ದೂರವಾಣಿ : 080 22161900/901/913/914
Shop Online www.navakarnataka.com

ಕಥೆ
ಡಾ. ಪ್ರೇಮಲತ ಬಿ. ಅವರ ಸಾವಿರ ಸರದಾರರು ಮತ್ತು ಒಬ್ಬ ಅನಾಥೆಯು
prajavani.net/short-story

ಕವನ
ಸನಾವುಲ್ಲಾ ನವಿಲಾಹಾಳು ಅವರ ಉಪವಾಸ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ಕುವೆಂಪು ಭಾಷಾಸಿರಿಗನ್ನಡಿ


ಕುವೆಂಪು ಪದಸೃಷ್ಟಿ
ಲೇ: ಜಿ. ಕೃಷ್ಣಪ್ಪ
ಪ್ರ: ಅಮೂಲ್ಯ ಪ್ರಕಾಶನ,
ಸಂ: 9448676770

ಕುವೆಂಪು ಅವರ ಕಾವ್ಯ ಹಾಗೂ ಭಾಷಾವೈಭವಕ್ಕೆ ಹಿಡಿದಿರುವ ಕನ್ನಡಿ 'ಕುವೆಂಪು ಪದಸೃಷ್ಟಿ'. ಈ ಕೃತಿ, ಜಿ. ಕೃಷ್ಣಪ್ಪನವರ ಕುವೆಂಪು ಸಾಹಿತ್ಯಪ್ರೀತಿಗೆ ಹಿಡಿದಿರುವ ಕನ್ನಡಿಯೂ ಆಗಿದೆ. 'ಕುವೆಂಪು ಕಾವ್ಯದ ವಿಶೇಷ ಪದಗಳ ಅರ್ಥ–ವಿವರಣೆ' ಎನ್ನುವ ಅಡಿಟಿಪ್ಪಣಿಯೇ ಕೃತಿಯ ಸ್ವರೂಪವನ್ನು ಹೇಳುವಂತಿದೆ. 'ಪ್ರಜಾವಾಣಿ'ಯ 'ಭಾನುವಾರದ ಪುರವಣಿ'ಯಲ್ಲಿ ಮಾಲಿಕೆಯಾಗಿ ಪ್ರಕಟಗೊಂಡಿದ್ದ ಈ ಪದ ಚಿಂತಾಮಣಿಯು ಇದೀಗ ಪುಸ್ತಕರೂಪದಲ್ಲಿ ಪ್ರಕಟಗೊಂಡಿದೆ.

ಸ್ವರೂಪದಲ್ಲಿ ಪದವಿವರಣಕೋಶದಂತೆಯೂ, ನಿಘಂಟಿನಂತೆಯೂ ಕಾಣಿಸುವ ಈ ಕೃತಿ, ಪರಿಣಾಮದಲ್ಲಿ ಕಾವ್ಯಾಸ್ವಾದದ ಟಿಪ್ಪಣಿಗಳಂತಿವೆ. ಸಾಹಿತ್ಯದ ವಿದ್ಯಾರ್ಥಿಗಳಿಗೆ ಕುವೆಂಪು ಕಾವ್ಯದ ರಸಘಟ್ಟಗಳ ತುಣುಕುಗಳನ್ನು ಪರಿಚಯಿಸುವಂತಿರುವ ಈ ಟಿಪ್ಪಣಿಗಳು, ಕಾವ್ಯದಲ್ಲಿನ ಭಾಷಿಕ ಸೌಂದರ್ಯವನ್ನು ಗುರ್ತಿಸುವುದು ಹೇಗೆ ಎನ್ನುವುದನ್ನು ಪರಿಚಯಿಸುವ ಪ್ರಯತ್ನವೂ ಆಗಿವೆ. ಈ ಕಿರುಟಿಪ್ಪಣಿಗಳು ಕುವೆಂಪು ಅವರ ಕೃತಿಗಳನ್ನು ಸಮಗ್ರವಾಗಿ ಓದಲು- ಗ್ರಹಿಸಲು ಪ್ರೇರಣೆ ನೀಡುವಂತಿವೆ.

ಮನಸ್ಸು ಮರ್ಕಟವೆಂದು ಬಲ್ಲೆವು; ಕುವೆಂಪು ಪ್ರತಿಭಾವಿಲಾಸದಲ್ಲದು ಹಾವಾಗಿದೆ, 'ಚಿತ್ತಫಣಿ' ಎನ್ನಿಸಿಕೊಂಡಿದೆ. ವರ್ಣಶಿಲ್ಪಿ ವೆಂಕಟಪ್ಪನವರು ರಸಋಷಿಯ ಕಣ್ಣಿಗೆ 'ಚಿತ್ರಯೋಗಿ'. ಸೀತೆಯ ಧ್ಯಾನಪೂರ್ಣ ಜಾಗರಣೆಯು 'ನಿದ್ದೆ ನೈವೇದ್ಯ'ವಾಗಿ, ಆನೆಯ ಖೆಡ್ಡಾದಂತೆ ನಾಡಿನ ಜನರ ನಯವಂಚನೆಯು 'ಬಾವಿಗಪ್ಪು' ಪದವಾಗಿ, ಮತವನ್ನು ಅಂಧಶ್ರದ್ಧೆ ಆವರಿಸಿಕೊಂಡಾಗದು 'ಮತರಾಹು'ವಾಗಿ ಕವಿಗೆ ಕಂಡಿದೆ. ಸ್ವಯಂ ಅರ್ಥಸ್ಫುರಿಸುವ 'ದಾನರುಚಿ', 'ಮತಿಗೌರವ', 'ಹೂವತಿಥಿ', 'ಹಗಲಿನಕ್ಷಿ'ಯಂಥ ಹಲವು ಪದಗಳನ್ನೂ ಕವಿ ಸೃಷ್ಟಿಸಿದ್ದಾರೆ.

ಇಲ್ಲಿನ ನೂರಾರು ಪದಗಳು, ಕುವೆಂಪು ಅವರ ಭಾಷಾಯಾನದ ಸೌಂದರ್ಯವನ್ನು ಸಹೃದಯರಿಗೆ ಕಾಣಿಸುತ್ತವೆ. ಒಬ್ಬ ಕವಿ ಸಹೃದಯರ ಪಾಲಿಗೆ ಹೇಗೆಲ್ಲಾ ಒದಗಿಬರಬಲ್ಲ ಎನ್ನುವುದಕ್ಕೂ ಈ ಕೃತಿ ನಿದರ್ಶನದಂತಿದೆ.

ಬೇಂದ್ರೆ ಮತ್ತು ಕುವೆಂಪು ಕಾವ್ಯವನ್ನು ಹೊಸ ತಲೆಮಾರಿಗೆ ಪರಿಚಯಿಸುವ ನಿಟ್ಟಿನಲ್ಲಿ ಕೃಷ್ಣಪ್ಪನವರು ನಡೆಸಿದ ಅನೇಕ ಪ್ರಯತ್ನ-ಪ್ರಯೋಗಗಳ ರೂಪದಲ್ಲಿ 'ಕುವೆಂಪು ಪದಸೃಷ್ಟಿ' ಕೃತಿಯನ್ನು ನೋಡಬಹುದಾಗಿದೆ. ನಮ್ಮ ಕಾಲದ ಬಹುದೊಡ್ಡ ಕಾವ್ಯಪ್ರೇಮಿಯ ಭೌತಿಕ ಅನುಪಸ್ಥಿತಿಯಲ್ಲಿ ಪ್ರಕಟಗೊಂಡಿರುವ ಈ ಪದವಿಲಾಸ ಕೃತಿ, ಕೃಷ್ಣಪ್ಪನವರಿಗೆ ಸಂದಿರುವ ಗೌರವವೂ ಆಗಿದೆ.

ಪುಟ: 136 ₹175

ಸರಳ ಸಂಗತಿಗಳ 'ಗರಿ ಮೂಡಿದ ಗಳಿಗೆ'


ಗರಿ ಮೂಡಿದ ಗಳಿಗೆ
ಲೇ: ಕಲಾ ಭಾಗ್ವತ್
ಪ್ರ: ಜಾಗೃತಿ ಪ್ರಿಂಟರ್ಸ್
ಸಂ: 9740066842

ಲೇಖಕಿ ಕಲಾ ಭಾಗ್ವತ್ ಅವರ 'ಗರಿ ಮೂಡಿದ ಗಳಿಗೆ' ಪ್ರಬಂಧ ಸಂಕಲನದಲ್ಲಿ ಒಟ್ಟು 24 ಪುಟ್ಟ ಪ್ರಬಂಧಗಳಿವೆ. ದಿನನಿತ್ಯದ ಬದುಕಿನ ಸರಳ ಅನುಭವಗಳನ್ನು ಆಧರಿಸಿಕೊಂಡು ಬರೆದಿರುವ ಈ ಪ್ರಬಂಧಗಳು ಸುಲಭವಾಗಿ ಓದಿಸಿಕೊಂಡು ಹೋಗುವಂತಿವೆ.

ಸಂಕಲನದಲ್ಲಿರುವ ಪ್ರಬಂಧಗಳು ವಿವಿಧ ವಿಷಯಗಳನ್ನು ಒಳಗೊಂಡಿವೆ. ಜೋಳಿಗೆ, ನಕಾಶೆ, ಸೈಕಲ್, ಬೇಸಿಗೆ, ಹಣ್ಣುಗಳು ಮುಂತಾದ ಸಾಮಾನ್ಯ ವಿಷಯಗಳಿಂದ ಹಿಡಿದು ಚುನಾವಣೆ, ಸಾಹಿತ್ಯ ಹಾಗೂ ಬದುಕಿನ ಚಿಂತನೆಗಳವರೆಗೆ ಲೇಖಕಿ ತನ್ನ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಕೆಲವು ಪ್ರಬಂಧಗಳು ಅವರ ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿದರೆ, ಇನ್ನೂ ಕೆಲವು ಮುಂಬೈ ಬದುಕು ಹಾಗೂ ಆಧುನಿಕ ಜೀವನಶೈಲಿಯ ಅನುಭವಗಳನ್ನು ತೆರೆದಿಡುತ್ತವೆ. ಈ ಬರಹಗಳಲ್ಲಿ ಬಾಲ್ಯದ ನೆನಪುಗಳು ಹಾಗೂ ದಿನನಿತ್ಯದ ಸಣ್ಣ ಸಣ್ಣ ಘಟನೆಗಳು ಮುಖ್ಯವಾಗಿವೆ.

ಕೆಲವು ಪ್ರಬಂಧಗಳು ಹಳೆಯ ಜೀವನಶೈಲಿ ಮತ್ತು ಇಂದಿನ ಆಧುನಿಕ ಜೀವನಶೈಲಿಯ ನಡುವಿನ ವ್ಯತ್ಯಾಸವನ್ನು ಸೂಚಿಸುವಂತಿವೆ. ಗತಕಾಲದ ನೆನಪುಗಳು ಈ ಸಂಕಲನದಲ್ಲಿ ಮತ್ತೆ ಮತ್ತೆ ಮೆಲುಕು ಹಾಕಿರುವುದು ಗಮನ ಸೆಳೆಯುತ್ತದೆ.

ಪುಸ್ತಕದ ಬೆನ್ನುಡಿಯಲ್ಲಿ ಲೇಖಕಿ ಸ್ಮಿತಾ ಅಮೃತರಾಜ್ ಅವರು ಹೇಳುವಂತೆ, 'ಊರಿನಿಂದ ಮುಂಬೈಗೆ ಹೊರಡುವಾಗ ಕಾರಿನ ಡಿಕ್ಕಿಯಲ್ಲಿ ಸಂಬಂಧಿಕರು ಕೊಟ್ಟ ವಸ್ತುಗಳನ್ನು ತುಂಬಿಸಿಕೊಳ್ಳುವುದು. ದುಡ್ಡು ಕೊಟ್ಟರೆ ಎಲ್ಲಿಯೂ ಸಿಗಬಹುದಾದ ಆ ವಸ್ತುಗಳಿಗೆ ಲೇಖಕಿಯ ಭಾವಪ್ರಪಂಚದಲ್ಲಿ ಬೆಲೆ ಕಟ್ಟಲಾಗದ ಸ್ಥಾನವಿದೆ.' ಈ ಮಾತು ಸಂಕಲನದ ಬಹುತೇಕ ಪ್ರಬಂಧಗಳ ಮನೋಭಾವವನ್ನು ಸೂಚಿಸುವಂತಿದೆ.

ಇಲ್ಲಿನ ಕೆಲವು ಪ್ರಬಂಧಗಳು ಶಾಲಾ ವಿದ್ಯಾರ್ಥಿಗಳ ಪಾಠದಂತಿರುವ ಸರಳ ಶೈಲಿಯನ್ನು ಹೊಂದಿವೆ. ವಿಷಯದ ಆಯ್ಕೆಯಲ್ಲಿ ದೊಡ್ಡ ವೈಶಿಷ್ಟ್ಯ ಕಾಣದಿದ್ದರೂ, ನೇರ ನಿರೂಪಣೆ ಮತ್ತು ಸರಳ ಭಾಷೆಯಿಂದ ಈ ಪ್ರಬಂಧಗಳು ಓದುಗರನ್ನು ಸೆಳೆಯುತ್ತವೆ.

ಈ ಸಂಕಲನದಲ್ಲಿನ ಕೆಲವು ಪ್ರಬಂಧಗಳು ಈಗಾಗಲೇ ವಿವಿಧ ಪತ್ರಿಕೆಗಳು ಹಾಗೂ ವಿಶೇಷಾಂಕಗಳಲ್ಲಿ ಪ್ರಕಟಗೊಂಡಿವೆ.

ಪುಟ: 124 ₹150

ರಾಸುಗಳ ಮರ ಮೇವಿನ ಪರಿಚಯ


ಮರ ಮೇವು–ಜಾನುವಾರುಗಳಿಗೆ ಕಡಿಮೆ ಖರ್ಚಿನಲ್ಲಿ ಪೂರಕ ಆಹಾರ
ಲೇ: ಡಾ.ಗಣೇಶ ಹೆಗಡೆ ನೀಲೇಸರ
ಪ್ರ: ನದಿ ಪ್ರಕಾಶನ
ಸಂ: 9008475899

ವೃತ್ತಿಯಲ್ಲಿ ಪಶುವೈದ್ಯರಾಗಿ ಸೇವೆ ಸಲ್ಲಿಸಿರುವ ಲೇಖಕರು ಸದ್ಯ ಶಿರಸಿಯ 'ಪಶುರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ'ದಲ್ಲಿ ಸಂಶೋಧನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪಶು ಸಂಗೋಪನೆ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಎರಡು ಕೃತಿಗಳನ್ನು ರಚಿಸಿರುವ ಇವರು ಈ ಕೃತಿಯಲ್ಲಿ ನೈಸರ್ಗಿಕ ಮತ್ತು ಪೂರಕ ಆಹಾರ ನೀಡುವ ಮೇವು ಮರಗಳ ಮಾಹಿತಿ ನೀಡಿದ್ದಾರೆ.

ಇದರಲ್ಲಿ ಒಟ್ಟು 58 ಮೇವಿನ ಮರಗಳ ವಿವರಗಳಿವೆ. ಕೃತಿಯನ್ನು ಪಠ್ಯಪುಸ್ತಕದ ಮಾದರಿಯಲ್ಲಿ ರಚಿಸದೆ ಅದಕ್ಕೊಂದು ಭಿನ್ನವಾದ ರೂಪ ನೀಡಿದ್ದಾರೆ ಲೇಖಕರು. ಗೋಪಾಲಪುರವೆಂಬ ಕಾಲ್ಪನಿಕ ಊರಿನಲ್ಲಿರುವ ಗೋಶಾಲೆಯ ಪ್ರಾರಂಭೋತ್ಸವದಿಂದ ಆರಂಭವಾಗಿ ನಾಲ್ಕೈದು ಪಾತ್ರಗಳನ್ನು ಅದರೊಳಗೆ ಸೃಜಿಸಿ ಅವರ ಮಾತಿನಲ್ಲೇ ನುಗ್ಗೆಮರ, ಹೆಬ್ಬೇವು, ಬೀಟೆಮರ, ಆಲದ ಮರ, ಹಲಸಿನ ಮರ, ಅಗಸೆ, ಶೇವರಿ, ಬಿದಿರು ಮುಂತಾದ ಮೇವಿನ ಮರಗಳನ್ನು ಪರಿಚಯಿಸಿದ್ದಾರೆ. ಅದಕ್ಕೆ ಪೂರಕವಾದ ರೇಖಾಚಿತ್ರಗಳು ಹಾಗೂ ಚಿತ್ರಗಳು ಅಡಕವಾಗಿವೆ.

ರಾಸುಗಳು ಇಷ್ಟಪಡುವ ಎಲೆಗಳು, ಯಾವ ಪ್ರದೇಶಗಳಲ್ಲಿ ಯಾವ ಮೇವಿನ ಮರಗಳನ್ನು ಕಾಣಬಹುದು, ಅವುಗಳಲ್ಲಿರುವ ಪೌಷ್ಟಿಕಾಂಶ, ವಿಷಕಾರಿಯಾಗಬಹುದಾದ ಹಣ್ಣುಗಳು ಮುಂತಾದುವುಗಳನ್ನೂ ಉಲ್ಲೇಖಿಸಲಾಗಿದೆ. ರಾಸುಗಳಿಗೆ ವಿಷಕಾರಿಯಾಗಬಹುದಾದ ಸೊಪ್ಪುಗಳು, ಅವುಗಳನ್ನು ತಿಂದ ಸಂದರ್ಭದಲ್ಲಿ ನೀಡಬೇಕಾದ ಪ್ರಥಮ ಚಿಕಿತ್ಸೆಯ ಮಾಹಿತಿಯೂ ಇಲ್ಲಿದೆ. ಒಟ್ಟಿನಲ್ಲಿ ಪಶು ಸಂಗೋಪನೆಯಲ್ಲಿ ತೊಡಗಿದ ಹಾಗೂ ಅದರಲ್ಲಿ ಆಸಕ್ತಿ ಹೊಂದಿದ ರೈತರಿಗೆ ಇದೊಂದು ಸಂಗ್ರಹಯೋಗ್ಯ ಕೃತಿ.

ಪುಟ: 114 ₹140

ಕರಾವಳಿ ತಟದಲ್ಲಿರುವ ಈ ಬೃಹತ್ ಶಿಲ್ಪಕೃತಿ ವಿಶ್ವಪಾರಂಪರಿಕ ತಾಣ. ಅಶ್ವಾರೂಢ ರಥದ ರೂಪದಲ್ಲಿ ನಿರ್ಮಿತವಾಗಿರುವ ಈ ದೇವಾಲಯದಲ್ಲಿ ನೋಡಿದಷ್ಟೂ ಮುಗಿಯದ ಅಚ್ಚರಿಗಳಿವೆ...

ಸೂರ್ಯನ ರಥದ ನೆರಳಲ್ಲಿ ಕೊನಾರ್ಕ್!

ಕೊನಾರ್ಕ್ ಸೂರ್ಯ ದೇಗುಲ

ಇದುವೇ ನೋಡಿ ಕಾಲಚಕ್ರ

ಪ್ರವಾಸ

• ವಾ.ಮುರಳೀಧರ, ತೀರ್ಥಹಳ್ಳಿ

ಒಡಿಶಾದ ಕರಾವಳಿಯ ಬಳಿ, ಕೊನಾರ್ಕ್ ಸೂರ್ಯದೇವಾಲಯದ ಬೃಹತ್ ಆವರಣಕ್ಕೆ ಕಾಲಿಟ್ಟ ಕ್ಷಣವೇ ಕಾಲಗರ್ಭದೊಳಗೆ ಪ್ರವೇಶಿಸಿದ ಭಾವ ಮೂಡುತ್ತದೆ. ಶ್ರೀಕೃಷ್ಣನ ಮಗ ಸಾಂಬ ತನ್ನ ಕುಷ್ಠರೋಗ ನಿವಾರಣೆಗೆ ಕಟ್ಟಿಸಿದನೆಂಬ ಪುರಾಣ ಕಥೆ ಜನಮಾನಸದಲ್ಲಿ ಜೀವಂತವಾಗಿದೆ. ಸುಮಾರು 24 ಎಕರೆ ವ್ಯಾಪ್ತಿಯಲ್ಲಿ ತಲೆಯೆತ್ತಿ ನಿಂತಿರುವ ಈ ಅದ್ಭುತ ಶಿಲ್ಪಕೃತಿ ವಿಶ್ವ ಪಾರಂಪರಿಕ ತಾಣವೆಂಬ ಗೌರವ ಪಡೆದಿದೆ.

ರಥಸಪ್ತಮಿಯಂದು ಸೂರ್ಯದೇವನು ಏರಿ ಬರುವ ಅಶ್ವಾರೂಢ ರಥದ ರೂಪದಲ್ಲಿ ನಿರ್ಮಿತವಾಗಿರುವ ಈ ದೇವಾಲಯದಲ್ಲಿ 24 ಮಹಾಚಕ್ರಗಳು ಶಿಲ್ಪಕಲೆಯ ಮೆರಗು ತೋರುತ್ತವೆ. ಪ್ರತಿ ಚಕ್ರದಲ್ಲೂ ಎಂಟು ಕಡ್ಡಿಗಳು ಕಾಲದ ಚಲನವಲನವನ್ನು ಸೂಚಿಸುವಂತೆ, ಇಂದಿಗೂ ಕಾಲಸೂಚಕಗಳೆಂದು ಅಭಿಮಾನದಿಂದ ಹೇಳಲಾಗುತ್ತದೆ. ಹಲವು ಪರಕೀಯ ದಾಳಿಗಳು, ಕರಾವಳಿಯ ಉಪ್ಪುಗಾಳಿಯ ನಿರಂತರ ಹೊಡೆತಗಳ ನಡುವೆಯೂ ಈ ದೇಗುಲ ಅವಶೇಷದ ಹಂತ ತಲುಪಿದರೂ ತನ್ನ ಗಾತ್ರ, ವಿನ್ಯಾಸ ಮತ್ತು ತಾಂತ್ರಿಕ ವೈಭವದಿಂದ ಜಗತ್ತಿನ ಅಚ್ಚರಿಯಾಗಿ ಉಳಿದಿದೆ.

ದೇವಾಲಯದ ಗೋಪುರದಲ್ಲಿ 52 ಟನ್ ಅಯಸ್ಕಾಂತ ಬಳಸಿ ಸೂರ್ಯನ ವಿಗ್ರಹವನ್ನು ಗಾಳಿಯಲ್ಲಿ ತೇಲುವಂತೆ ಮಾಡಿದ್ದರಂತೆ ಎಂಬ ಮಾತು ಜನರ ಬಾಯಲ್ಲಿದೆ. ಇಂದು ಆವರಣದಲ್ಲಿ ಕಾಣಸಿಗುವ ಬೃಹದಾಕಾರದ ಕಬ್ಬಿಣದ ತುಂಡುಗಳು ಆ ಕಥೆಯನ್ನು ತಣ್ಣಗೆ ಪುಷ್ಟೀಕರಿಸುತ್ತಿರುವಂತೆ ಭಾಸವಾಗುತ್ತದೆ.

ಇಲ್ಲಿದ್ದ ನಟ ಮಂಟಪ, ಭೋಗ ಮಂದಿರ, ಛಾಯಾದೇವಿ–ಮಾಯಾದೇವಿಯರ ದೇವಾಲಯಗಳು, ಸಿಂಹ–ಆನೆ–ಕುದುರೆ ಮೊದಲಾದ ಪ್ರಾಣಿಶಿಲ್ಪಗಳು, ಹಾಗೂ ಅಡುಗೆಮನೆಯ ಅವಶೇಷಗಳು–ಇವೆಲ್ಲವೂ ತಮ್ಮ ಶಿಥಿಲಾವಸ್ಥೆಯಲ್ಲೂ ಕಲೆ ಮತ್ತು ಸಂಸ್ಕೃತಿಯ ಘನತೆಯನ್ನು ಘೋಷಿಸುತ್ತವೆ. ಪ್ರತಿಯೊಂದು ಶಿಲ್ಪವೂ ಕೇವಲ ಕಲ್ಲಲ್ಲ; ಅದು ಕಾಲದ ದಾಖಲಾತಿ.

ಸಂಜೆಯ ಬೆಳಕಿನ ಅಲಂಕಾರಕ್ಕಾಗಿ ಬಳಸುವ ವಿದ್ಯುತ್ ಉತ್ಪಾದನೆಗೆ ಅಳವಡಿಸಿರುವ ಸೋಲಾರ್ ಘಟಕಗಳೂ ಗಿಡಮರಗಳ ಆಕಾರದಲ್ಲಿದ್ದು, ಪುರಾತನ ಮತ್ತು ಆಧುನಿಕ ಪರಿಸರ ಜಾಗೃತಿಯ ನಡುವಿನ ಸಂವಾದವನ್ನು ಕಟ್ಟಿಕೊಡುತ್ತವೆ.

ಒಳಗೆ ದೇವರಿಲ್ಲದಿದ್ದರೂ, ಗುಡಿಯೊಳಗೆ ಪ್ರವೇಶವಿಲ್ಲದಿದ್ದರೂ, ಲಕ್ಷಾಂತರ ಜನರನ್ನು ಪ್ರತಿನಿತ್ಯ ತನ್ನೆಡೆಗೆ ಸೆಳೆಯುವ ಅಪೂರ್ವ ತಾಣವೆಂದರೆ ಅದು ಕೊನಾರ್ಕ್‌ನ ಸೂರ್ಯದೇವಾಲಯ. ದಿನವಿಡೀ ನೋಡಿದರೂ ಮುಗಿಯದ ಅಚ್ಚರಿಗಳ ಲೋಕ. ಇಲ್ಲಿಗೆ ಬಂದವರು ಈ ಶಿಲ್ಪಕಲೆಯ ಬಲೆಗೆ ಸಿಲುಕಿ, ತಮಗರಿವಿಲ್ಲದೆ ಬಾಗಿಲಲ್ಲಿ ಕೈಮುಗಿಯುತ್ತಾರೆ. ❖

ಅಡುಗೆ ಕೋಣೆಯ ಅವಶೇಷ



ಮರದ ಆನೆ ಶಿಲ್ಪ

ಕಾಲ ಉರುಳಿದಂತೆ ಕಳೆ ಕಳೆದುಕೊಂಡ ಗಡಿಯಾರ...

ಏಷ್ಯಾದ ಬೃಹತ್ ಗಡಿಯಾರದ ವ್ಯಥೆ

• ಎಂ.ಆರ್.ಮಂಜುನಾಥ್

ಬೆಂಗಳೂರಿನ ನಗರದ ಅಂಚಿನಲ್ಲಿ, ಗುಡ್ಡದ ಮೇಲೊಂದು ಗಡಿಯಾರ ನಿಂತಿದೆ. ಅದು ಕೇವಲ ಗಂಟೆ-ನಿಮಿಷಗಳನ್ನು ಮಾತ್ರ ತೋರಿಸುವುದಿಲ್ಲ; ಕಾಲದ ಕದನಗಳನ್ನೂ, ನಿರ್ಲಕ್ಷ್ಯದ ಗುರುತುಗಳನ್ನೂ ಹೇಳುತ್ತದೆ. ಉತ್ತರಹಳ್ಳಿಯ ಶ್ರೀ ದ್ವಾದಶ ಜ್ಯೋತಿರ್ಲಿಂಗ ದೇವಸ್ಥಾನದ ಮಹಾದ್ವಾರದಲ್ಲಿರುವ ಆ ಗಡಿಯಾರ ಗೋಪುರ ಇಂದು ಕಾಲವನ್ನು ಮೀರಿ ನಿಂತಿರುವ ಮೌನಸಾಕ್ಷಿಯಾಗಿದೆ.

ಒಮ್ಮೆ ಪ್ರವಾಸಿಗರ ಕಣ್ಣುಗಳನ್ನು ಸೆಳೆಯಲು, ಸ್ಥಳದ ವೈಭವವನ್ನು ಮತ್ತಷ್ಟು ಬೆಳಗಲು ನಿರ್ಮಿಸಲಾದ ಈ ಗೋಪುರ, ಈಗ ತನ್ನದೇ ವೈಶಿಷ್ಟ್ಯ ಉಳಿಸಿಕೊಳ್ಳಲು ಹೋರಾಡುತ್ತಿದೆ. ಸುಮಾರು 40 ಅಡಿ ಎತ್ತರದ ಈ ಗೋಪುರ ಗಡಿಯಾರವನ್ನು ವಿನ್ಯಾಸಗೊಳಿಸಿದ್ದು ಎಚ್‌ಎಂಟಿ ವಾಚಸ್ ಲಿಮಿಟೆಡ್. ಏಷ್ಯಾದ ಬೃಹತ್ ಗೋಪುರ ಗಡಿಯಾರವೆಂಬ ಹೆಗ್ಗಳಿಕೆಯನ್ನು ಪಡೆದ ಈ ನಿರ್ಮಾಣ, 2002ರಲ್ಲಿ ಪ್ರವಾಸೋದ್ಯಮದ ಕನಸಿಗೆ ಕನ್ನಡಿ ಹಿಡಿದಂತೆ ನಿರ್ಮಾಣವಾಯಿತು.

ಗುಡ್ಡದ ಮೇಲಿರುವ ಈ ತಾಣ ತಲುಪಲು 50 ಮೆಟ್ಟಿಲುಗಳನ್ನು ಹತ್ತಬೇಕು. ಮೆಟ್ಟಿಲುಗಳ ಕೊನೆಯಲ್ಲೇ ಎದುರಾಗುವ ಮಹಾದ್ವಾರ, ಅದರ ಮಧ್ಯದಲ್ಲೇ ನಿಂತಿರುವ ಗಡಿಯಾರ– ಒಂದೇ ದೃಶ್ಯದಲ್ಲಿ ಸೌಂದರ್ಯ ಮತ್ತು ಶಿಲ್ಪಕಲೆಯ ಸಂಯೋಜನೆ. ಗಡಿಯಾರದ ಮೇಲ್ಭಾಗದಲ್ಲಿ ಎರಡು ಕಡೆ ಗಿಳಿಗಳ ಕಲಾಕೃತಿ ಇದೆ. ಅವು ಕಾಲದ ಗಾನದಂತೆ ಕಾಣುತ್ತವೆ. ಬಲಭಾಗ ಹಾಗೂ ಎಡಭಾಗಗಳಲ್ಲಿ ಗಂಧರ್ವ ಕನ್ಯೆಯರು ಗಡಿಯಾರವನ್ನು ತಬ್ಬಿಹಿಡಿದಿರುವ ಶಿಲ್ಪಗಳು ಮನಮೋಹಕ. ಶಿಲ್ಪಿಯ ಕಲ್ಪನೆಗೆ ಕಾಲವೇ ರೂಪ ನೀಡಿದಂತಿದೆ.

ಈ ಗೋಪುರದಿಂದ ನಿಂತು ನೋಡಿದರೆ, 16 ಎಕರೆಯಲ್ಲಿ ಹರಡಿಕೊಂಡಿರುವ ಶ್ವೇತವರ್ಣದ ಜ್ಯೋತಿರ್ಲಿಂಗ ದೇವಾಲಯ ಕಣ್ತುಂಬುತ್ತದೆ. ಆ ವಿಸ್ತಾರ, ಆ ನಿಶ್ಶಬ್ದ ಭಾವ, ಆ ಶಾಂತ ವಾತಾವರಣ ಎಲ್ಲವೂ ಸೇರಿ ಇದನ್ನು ಪ್ರವಾಸಿ ತಾಣವಾಗಿ ರೂಪಿಸುವ ಸಾಧ್ಯತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಒಂದು ಕಾಲದಲ್ಲಿ ಈ ಜಾಗ ಪ್ರವಾಸಿಗರ ಹೆಜ್ಜೆ ಗುರುತುಗಳಿಂದ ಕೂಡಿತ್ತು ಎಂಬುದನ್ನು ಸ್ಥಳೀಯರು ನೆನಪಿಸುತ್ತಾರೆ.

ಆದರೆ ಇಂದು ದೃಶ್ಯ ಬದಲಾಗಿದೆ. ಸುಣ್ಣ-ಬಣ್ಣಗಳ ಹೊಳಪು ಕಳೆದುಹೋಗಿದೆ. ಗೋಡೆಗಳ ಮೇಲೆ ಕಾಲದ ಮಚ್ಚೆಗಳು ಮೂಡಿವೆ. ಸಮಯವನ್ನು ಸಾರಿ ಹೇಳುತ್ತಿದ್ದ ಗಡಿಯಾರ, ಈಗ ನಿರ್ಲಕ್ಷ್ಯದ ಕಾಲವನ್ನು ಸೂಚಿಸುವಂತೆ ಧ್ವನಿ ಕಳೆದುಕೊಂಡಿದೆ. ನಿರ್ವಹಣೆಯ ಕೊರತೆಯಿಂದ ಗೋಪುರ ಸೊರಗಿದೆ.

‘ನಿರ್ವಹಣೆ ಉಸ್ತುವಾರಿ ಬದಲಾದ ನಂತರ ಈ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಿಸಿದವರು ಗಮನ ಹರಿಸುತ್ತಿಲ್ಲ’ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಾರೆ. ಅವರ ಮಾತಿನಲ್ಲಿ ಕೇವಲ ಬೇಸರವಲ್ಲ, ಒಂದು ಹೆಗ್ಗಳಿಕೆಯ ತಾಣವನ್ನು ಉಳಿಸಬೇಕೆಂಬ ಕಾಳಜಿಯೂ ಇದೆ.

ಕೆಲವು ಸ್ಥಳಗಳಿಗೆ ಐತಿಹಾಸಿಕ ಮಹತ್ವವಿರುತ್ತದೆ. ಇನ್ನೂ ಕೆಲವು ಸ್ಥಳಗಳಿಗೆ ಜಾಗತಿಕ ಮನ್ನಣೆ. ಆದರೆ ಯಾವ ತಾಣವಾಗಲಿ, ಅದರ ವೈಶಿಷ್ಟ್ಯವನ್ನು ಅರಿತು ಸಂರಕ್ಷಿಸುವ ಮನಸ್ಸು ಇಲ್ಲದಿದ್ದರೆ ಅದು ಪಾಳುಬಿದ್ದ ಕಟ್ಟಡವಾಗಿ ಉಳಿಯುತ್ತದೆ. ಉತ್ತರಹಳ್ಳಿಯ ಈ ಗಡಿಯಾರ ಗೋಪುರ ಕೂಡ ಅದೇ ದಾರಿಯಲ್ಲಿ ಸಾಗಬಾರದು.

ಕಾಲವನ್ನು ತೋರಿಸುವ ಗಡಿಯಾರಗಳು ಅನೇಕ. ಆದರೆ ಕಾಲದ ಮೌಲ್ಯವನ್ನು ನೆನಪಿಸುವ ಗೋಪುರಗಳು ವಿರಳ. ಈ ಗೋಪುರವನ್ನು ಉಳಿಸುವುದು ಕೇವಲ ಒಂದು ಕಟ್ಟಡವನ್ನು ಉಳಿಸುವುದಲ್ಲ; ಒಂದು ಕಾಲದ ಗೌರವವನ್ನು ಉಳಿಸುವ ಕಾರ್ಯವೂ ಹೌದು. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಗಣಿತದಲ್ಲಿ ಗರ್ದಿಗಮ್ಮತ್ತು



ಪ್ರತಿ ವಿಭಾಗದ ಎರಡು ಅಂಕಿಗಳಿಗೂ ಹಾಗೂ ತಲೆ ಮೇಲಿನ ಸಂಖ್ಯೆಗಳಿಗೂ ಸಂಬಂಧವಿದೆ. ತರ್ಕ ಮಾಡಿ ಬಿಟ್ಟ ಸಂಖ್ಯೆ ಗುರ್ತಿಸಿ.

ಡಕ್ಕ ಚಕ್ಕು ಕ್ಷೇತ್ರಸ್ಥ ಕಥೆಯ

ಕಲೆ–ಪರಿಕಲ್ಪನೆ:
ಸಂತೋಷ್ ಸಸಿಹಿತ್ಲು

ನೋಡಿದಂತೆ ನಡೆ!

ಗುಂಡ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ. ಆಗ ಅಲ್ಲಿ ಸರಣಿಯಾಗಿ ದಾರಿ ತೋರುವ ಫಲಕಗಳು ಕಂಡವು. ಆಗ ಗುಂಡನಿಗೆ ‘ನುಡಿದಂತೆ ನಡೆ’ ಎಂಬ ಮಾತು ನೆನಪಾಯಿತು. ತಾನೇಕೆ ‘ನೋಡಿದಂತೆ ನಡೆಯಬಾರದು’ ಎಂದುಕೊಂಡು ಫಲಕದಲ್ಲಿ ಇರುವ ಚಿಹ್ನೆಗಳಂತೆ ದೇಹವನ್ನು ಬಾಗಿಸಿಕೊಂಡು ನಡೆಯಲಾರಂಭಿಸಿದ...



ಬ್ರೇನ್‌ವ್ಹೀಟಾ ಆಟ

ನನ್ನ ಮೊಮ್ಮಗಳು ಮನಸ್ವಿನಿ ಕ್ಯಾಲೆಂಡರ್‌ನಲ್ಲಿದ್ದ ಒಬ್ಬ ರಾಷ್ಟ್ರೀಯ ಮಹಾಪುರುಷನ ಇಂಗ್ಲಿಷ್ ಅಕ್ಷರಗಳಲ್ಲಿ KANANDA ಎಂಬ ಅಕ್ಷರಗಳನ್ನು ಮಾತ್ರ ಕತ್ತರಿಸಿಕೊಂಡು ತನ್ನ ಪುಸ್ತಕಕ್ಕೆ ಕವರ್ ಹಾಕಿ ಅದರ ಮೇಲೆ ಅಂಟಿಸಿಕೊಂಡಿದ್ದಾಳೆ. ನೀವು KANANDA ಈ ಅಕ್ಷರಗಳಿಗೆ ಹಾಗೆ ಉಳಿದಿರುವ ಇನ್ನು ನಾಲ್ಕು ಅಕ್ಷರ ಸೇರಿಸಿ ಆ ಮಹಾಪುರುಷನ ಹೆಸರು ಪತ್ತೆ ಮಾಡಿ.

ಉತ್ತರ: ____________

ಶಬ್ದಾಟ

ಇಲ್ಲಿರುವ ಪದಗಳಿಗೆ ಒಂದಕ್ಷರ ಸೇರಿಸಿ ಇನ್ನೊಂದು ಪದ ಮಾಡಿ.

ರಾಮು + ಆದಾಯ + ಕ = ____________________

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಜಾಣಪದ ಆಟ

1. ಹೊಂದಿಸು ಆನಂದಿಸು, ಆಡುಭಾಷೆಯ ಸೊಗಡು
ಇಲ್ಲಿ ಕೆಲವು ಪದಗಳನ್ನು ಕೊಟ್ಟಿದೆ. ಆಡು ಭಾಷೆಯಲ್ಲಿ ಪದಕ್ಕೆ ಇನ್ನಷ್ಟು ಬಲ ಬರಲಿ ಎಂದು ಉಪಪದ ಸೇರಿಸಿ ಹೇಳುವುದುಂಟು. ಅಂಥ ಹತ್ತು ಪದಗಳಿವೆ. ಯಾವ ಪದಕ್ಕೆ ಯಾವ ಪದ ಸೇರಿಸುತ್ತೀರಿ. ಯೋಚಿಸಿ.

1	ಮರೇ	A	ಹುಪ್ಪಡಿ	
2	ನಿಕ್ಕಡಿ	B	ಸುಮ್ನೆ	
3	ಬಟಾ	C	ಬಯಲು	
4	ಹುಳಿ	D	ನಡುವೆ	
5	ಕಟ್ಟ	E	ಬಲ್ಲೆ	
6	ನಟ್ಟ	F	ಗೊಟ್ಟಿ	
7	ಸುಖಾ	G	ನೀರು	
8	ದಟ್ಟ	H	ದರಿದ್ರ	
9	ಬಿಟ್ಟ	I	ಕಡೆಗೆ	
10	ಹುಳ	J	ಬೀಕಲ	

2.ಇಲ್ಲಿ ಕೊಟ್ಟಿರುವ ‘ಮು ಖ’ ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಮು	ಖ			
2	ಮು	ಖ			
3	ಮು	ಖ			
4	ಮು	ಖ			
5	ಮು	ಖ			

ಅಕ್ಷರ ಪಟ್ಟಿ					
	ಗ	ಡ	ಭಂ	ವಾ	ತಿ
	ಸ್ತು	ರಿ	ರ್ಯ	ಮು	ಚ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಬಲ	+	ದಡ್ಡಿ	+	ಸಾ	=	
2	ಮರ	+	ಸತಿ	+	ಬ	=	
3	ಮಾವ	+	ನದಿ	+	ಆ	=	
4	ಗಾಳ	+	ಕುಳಿ	+	ಬೆ	=	
5	ಕಾವು	+	ಗದ	+	ಹೂ	=	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮೋಜಿನ ಇಂಗ್ಲಿಷ್

ಕೆಳಗೆ ಕೊಟ್ಟಿರುವ TOGETHER ಪದದ ಪ್ರತಿ ಅಕ್ಷರಕ್ಕೂ ಪದ ಪಟ್ಟಿಯಿಂದ ಒಂದು ಪದ ಸೇರಿಸಿದರೆ ಮತ್ತೊಂದ ಪದವಾಗುತ್ತದೆ. ಪ್ರಯತ್ನಿಸಿ.

1	T		
2	O		
3	G		
4	E		
5	T		
6	H		
7	E		
8	R		

ಪದ ಪಟ್ಟಿ				
	EAT	GO	IT	OWN
	PEN	AT	ROW	HIS

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕಟ್ಟಿದಬುತ್ತಿ 2.ಅಳುವಕೂಸು 3.ಗೂಳಿಯಕೋಡು 4.ಭಾರತಮಾತ 5.ಮನೆಕೆಲಸ

ಶಬ್ದಾಟ: ವಿಮಾನರದ್ದು

ವರ್ಡ್ ಗೇಮ್: YY-ಇವು ಟು ವೈಸ್. ಎಂದರೆ ಉಚ್ಚಾರದಲ್ಲಿ ಟೂವೈಸ್–ಅತೀಜಾಣ ಎಂದಾಗುತ್ತದೆ.

ಜಾಣಪದ ಆಟ 1: 1.ಜಂಜಾಟ 2.ಪಂದ್ಯಾಟ 3.ಮಂಗಾಟ 4.ರಂಪಾಟ 5.ಬಂಡಾಟ 6.ಚೆಂಡಾಟ 7.ಕುಂಟಾಟ 8.ತುಂಟಾಟ 9.ಮೊಂಡಾಟ 10.ಪುಂಡಾಟ

ಜಾಣಪದ ಆಟ 2: 1.ನವನೀತ 2.ನವರಂಗ 3.ನವರತ್ನ 4.ನವರಸ 5.ನವರಾತ್ರಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಅಭಿಮನ್ಯು, ಬೆಂಗಳೂರು

ಸಮೃದ್ಧಿ ಡಿ., ಹಾಸನ

ಆಯುಷ್ ಟಂಕಸಾಲೆ, ಬೀದರ್

ಯಶಸ್ವಿನಿ ಎಸ್.ಪಿ., ಮಂಡ್ಯ

ನಿಹಾಲ್ ಆರ್.ಎಸ್., ಚಾಮರಾಜನಗರ

ಪುನರ್ವಿಕ ಎಚ್., ಬೆಂಗಳೂರು

ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಐಎಸ್‌ಎಲ್: ಸಮಬಲದ ಹೋರಾಟ ಮಾಡಿದ ಬಾಗನ್– ಬೆಂಗಳೂರು ತಂಡಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಅಂಕಪಟ್ಟಿಯ ಅಗ್ರಸ್ಥಾನದಲ್ಲಿರುವ ಮೋಹನ್ ಬಾಗನ್ ಹಾಗೂ ಆತಿಥೇಯ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡಗಳು ಶನಿವಾರ ನಡೆದ ಪಂದ್ಯದಲ್ಲಿ ಡ್ರಾ ಸಾಧಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಉಭಯ ತಂಡಗಳ ಆಟಗಾರರೂ ಜಿದ್ದಾಜಿದ್ದಿಯ ಪೈಪೋಟಿ ನಡೆಸಿದರು. ಆದರೆ ಪಂದ್ಯವು ಒಂದೂ ಗೋಲು ಇಲ್ಲದೇ ಡ್ರಾ ಆಯಿತು.

ಬಾಗನ್ ತಂಡವು ಇದುವರೆಗೆ ಆಡಿರುವ ಐದು ಪಂದ್ಯಗಳಲ್ಲಿ 4ರಲ್ಲಿ ಜಯಿಸಿ, 1ರಲ್ಲಿ ಡ್ರಾ ಮಾಡಿಕೊಂಡಿದೆ. 13 ಅಂಕಗಳನ್ನು ಗಳಿಸಿದೆ. ಬಿಎಫ್‌ಸಿ ತಂಡವು ಐದು ಪಂದ್ಯಗಳಲ್ಲಿ ಎರಡು ಗೆದ್ದು, ಎರಡರಲ್ಲಿ ಡ್ರಾ ಮತ್ತು ಒಂದರಲ್ಲಿ ಸೋತಿದೆ. ಒಟ್ಟು 8 ಅಂಕಗಳೊಂದಿಗೆ ಆರನೇ ಸ್ಥಾನದಲ್ಲಿದೆ.

ಈ ಪಂದ್ಯದಲ್ಲಿ ಚೆಂಡು ಬಾಗನ್ ತಂಡದ ನಿಯಂತ್ರಣದಲ್ಲಿಯೇ ಹೆಚ್ಚು ಹೊತ್ತು ಇತ್ತು. ಬಿಎಫ್‌ಸಿ ತಂಡವು ಐದು ಸಲ ಗುರಿಯತ್ತ ಚೆಂಡನ್ನು ಕಿಕ್ ಮಾಡಿದರೂ ಫಲ ಸಿಗಲಿಲ್ಲ. ಬಿಎಫ್‌ಸಿ ತಂಡವು 15 ಹಾಗೂ ಬಾಗನ್ 10 ಫೌಲ್ ಮಾಡಿದವು. ಉಭಯ ತಂಡಗಳಿಗೆ ಒಟ್ಟು 7 ಕಾರ್ನರ್‌ಗಳು ಲಭಿಸಿದ್ದವು. ಆದರೆ ಎರಡೂ ತಂಡಗಳ ಆಟಗಾರರು ಗೋಲು ಗಳಿಸುವಲ್ಲಿ ಯಶಸ್ವಿಯಾಗಲಿಲ್ಲ.

ಬಿಎಫ್‌ಸಿ ತಂಡದ ಸುನಿಲ್ ಚೆಟ್ರಿ (ಬಲ) ಹಾಗೂ ಮೋಹನ್ ಬಾಗನ್ ತಂಡದ ಥಾಮಸ್ ಮೈಕಲ್ ಅಲ್ಡ್ರೆಡ್ ಅವರು ಚೆಂಡನ್ನು ಹೆಡ್ ಮಾಡಿದರು

ಬಿಎಫ್‌ಸಿ ತಂಡದ ರಯಾನ್ ವಿಲಿಯಮ್ಸ್ (ಬಲ) ಹಾಗೂ ಮೋಹನ್ ಬಾಗನ್ ತಂಡದ ಅಲ್ಬರ್ಟೊ ರಾಡ್ರಿಗಸ್ ಮಾರ್ಟಿನ್ ಅವರು ಚೆಂಡಿನ ಮೇಲೆ ನಿಯಂತ್ರಣಕ್ಕಾಗಿ ಸೆಣಸಿದರು ಚಿತ್ರಗಳು: ಬಿ.ಕೆ.ಜನಾರ್ದನ

ಡ್ರಾದಲ್ಲಿ ಕೇರಳ: ಕೋಲ್ಕತ್ತದ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯವೂ ಡ್ರಾ ಆಯಿತು. ಈಸ್ಟ್ ಬೆಂಗಾಲ್ ಮತ್ತು ಕೇರಳ ಬ್ಲಾಸ್ಟರ್ಸ್ 1–1 ಡ್ರಾ ಸಾಧಿಸಿದವು.

10ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿಯಲ್ಲಿ ಈಸ್ಟ್ ಬೆಂಗಾಲ್ ತಂಡದ ಯೂಸೂಫ್ ಇಝ್ಝೇಜಾರಿ ಗೋಲು ಗಳಿಸಿದರು.

ಅಲ್ಲಿಂದ ಬೆಂಗಾಲ್ ತಂಡ ಉತ್ತಮವಾಗಿ ಆಡಿ, ಎದುರಾಳಿಗಳು ಗೋಲು ಗಳಿಸದಂತೆ ತಡೆದಿತ್ತು. ಆದರೆ ಇಂಜುರಿ ಸಮಯದಲ್ಲಿ ಕೇರಳದ ಮೊಹಮ್ಮದ್ ಅಜ್ಸಾಲ್ (90+2ನಿ) ಅವರು ಗೋಲು ಹೊಡೆದು ತಮ್ಮ ತಂಡದ ಸೋಲು ತಪ್ಪಿಸಿದರು. ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು.

ಈಸ್ಟ್ ಬೆಂಗಾಲ್ ತಂಡವು (8) ಅಂಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಕೇರಳ (1 ಅಂಕ) 12ನೇ ಸ್ಥಾನದಲ್ಲಿದೆ.

ಭಾರತದ ಯುಕಿ ಭಾಂಬ್ರಿ

ಭಾಂಬ್ರಿ– ಗೊರಾನ್ಸನ್ ಯಶಸ್ಸಿನ ಓಟ ಅಂತ್ಯ

ಇಂಡಿಯನ್ ವೆಲ್ಸ್ (ಅಮೆರಿಕ), (ಪಿಟಿಐ): ಪಿಎನ್‌ಬಿ ಪರಿಬಾಸ್ (ಇಂಡಿಯನ್ಸ್ ವೆಲ್ಸ್) ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತದ ಯುಕಿ ಭಾಂಬ್ರಿ ಮತ್ತು ಅವರ ಸ್ವೀಡಿಷ್ ಜೊತೆಗಾರ ಆಂಡ್ರೆ ಗೊರಾನ್ಸನ್ ಅವರ ಯಶಸ್ಸಿನ ಓಟ ಸೆಮಿಫೈನಲ್‌ನಲ್ಲಿ ಕೊನೆಗೊಂಡಿತು.

ಶುಕ್ರವಾರ ರಾತ್ರಿ ನಡೆದ ತೀವ್ರ ಹೋರಾಟದ ಪಂದ್ಯದಲ್ಲಿ ಶ್ರೇಯಾಂಕರಹಿತ ಭಾಂಬ್ರಿ– ಗೊರಾನ್ಸನ್ ಜೋಡಿ 5–7, 7–6 (7), 5–10 ರಲ್ಲಿ ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್– ಮೊನಾಕೊದ ವೆಲೆಂಟಿನ್ ವೆಕ್ಯರಾಟ್ ಜೋಡಿಯೆದುರು ಸೋಲನುಭವಿತು.

33 ವರ್ಷದ ಭಾಂಬ್ರಿ ಈ ಸೋಲಿನ ಹೊರತಾಗಿಯೂ ವೃತ್ತಿ ಜೀವನದಲ್ಲಿ ಮಹತ್ವದ ಮೈಲುಗಲ್ಲು ಸಾಧಿಸಿದರು. ಎಟಿಪಿ ಮಾಸ್ಟರ್ಸ್ 1000 ದರ್ಜೆಯ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಸೆಮಿಫೈನಲ್ ತಲುಪಿದ್ದರು.

ಕ್ವಾರ್ಟರ್‌ಫೈನಲ್‌ನಲ್ಲಿ ಭಾಂಬ್ರಿ– ಗೊರಾನ್ಸನ್ ಜೋಡಿ 6–3, 7–6 (7) ರಿಂದ ಪ್ರಬಲ ಎದುರಾಳಿಗಳಾದ ಅಲೆಕ್ಸಾಂಡರ್ ಎರ್ಲರ್ (ಆಸ್ಟ್ರಿಯಾ)– ಆ್ಯಂಡ್ರಿಯಾ ವಾವಸೋರಿ (ಇಟಲಿ) ಅವರನ್ನು ಸೋಲಿಸಿತ್ತು.

ಎರಡು ವರ್ಷಗಳಿಂದ ಭಾರತದ ಯಾವುದೇ ಆಟಗಾರ ಮಾಸ್ಟರ್ಸ್ 1000 ಟೂರ್ನಿಯ ಸೆಮಿಫೈನಲ್ ತಲುಪಿರಲಿಲ್ಲ. 2024ರಲ್ಲಿ ರೋಹನ್ ಬೋಪಣ್ಣ ಅವರು ಮಯಾಮಿ ಓಪನ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರು.

ಸ್ವಿಸ್ ಓಪನ್: ಭಾರತದ ಸವಾಲು ಅಂತ್ಯ

ಕ್ವಾರ್ಟರ್‌ಫೈನಲ್‌ನಲ್ಲಿ ಜೆಂಟಿಂಗ್ ವಿರುದ್ಧ ತರುಣ್‌ಗೆ ಸೋಲು

ಬಾಸೆಲ್ (ಪಿಟಿಐ): ಭಾರತದ ತರುಣ್ ಮನ್ನೆಪಲ್ಲಿ ಅವರು ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ತೀವ್ರ ಹೋರಾಟದ ಕ್ವಾರ್ಟರ್‌ಫೈನಲ್‌ನಲ್ಲಿ ಇಂಡೊನೇಷ್ಯಾದ ಅಂಥೋನಿ ಸಿನಿಸುಕಾ ಜಿಂಟಿಂಗ್ ಎದುರು ಸೋತರು.

ಇದರೊಂದಿಗೆ ₹2.30 ಕೋಟಿ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು. ಶುಕ್ರವಾರ ತಡರಾತ್ರಿ ಮುಕ್ತಾಯಗೊಂಡ ಪಂದ್ಯದಲ್ಲಿ ಜಿಂಟಿಂಗ್ 21–19, 19–21, 21–13 ರಿಂದ ಮನ್ನೆಪಲ್ಲಿ ಅವರನ್ನು ಸೋಲಿಸಿದರು. ಮನ್ನೆಪಲ್ಲಿ ಅವರು ವಿಶ್ವ ಕ್ರಮಾಂಕದಲ್ಲಿ 43ನೇ ಸ್ಥಾನದಲ್ಲಿದ್ದಾರೆ.



ತರುಣ್ ಮನ್ನೆಪಲ್ಲಿ ಬಿಎಐ ಚಿತ್ರ

ಗಾಯಾಳಾಗಿದ್ದು ಪುನರಾಗಮನ ಮಾಡುತ್ತಿರುವ ಜಿಂಟಿಂಗ್ 17 ತಿಂಗಳಲ್ಲಿ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ಸೆಮಿಫೈನಲ್ ತಲುಪಿದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ (2020) ಕಂಚಿನ ಪದಕ ಗೆದ್ದುಕೊಂಡಿದ್ದ ಅವರು ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 51ನೇ ಸ್ಥಾನದಲ್ಲಿದ್ದಾರೆ.

2024ರಲ್ಲಿ ಹಾಂಗ್‌ಕಾಂಗ್ ಓಪನ್‌ನಲ್ಲಿ ಕೊನೆಯ ಬಾರಿ ಸೆಮಿಫೈನಲ್ ತಲುಪಿದ್ದ ಜಿಂಟಿಂಗ್ ಇಲ್ಲಿ ಅರ್ಹತಾ ಸುತ್ತಿನಲ್ಲಿ ಆಡಿ ಮುಖ್ಯ ಸುತ್ತಿಗೆ ಪ್ರವೇಶ ಪಡೆದಿದ್ದರು. 29 ವರ್ಷ ವಯಸ್ಸಿನ ಈ ಆಟಗಾರ ಸೆಮಿಫೈನಲ್ ಪಂದ್ಯದಲ್ಲಿ ಜಪಾನ್‌ನ ಯುಶಿ ತನಾಕ ಅವರನ್ನು ಎದುರಿಸಲಿದ್ದಾರೆ.

ದೇಶದ 94ನೇ ಗ್ರ್ಯಾಂಡ್‌ಮಾಸ್ಟರ್ ಆಗಿ ಮಯಂಕ್

ನವದೆಹಲಿ (ಪಿಟಿಐ): ಪ್ರತಿಭಾನ್ವಿತ ಆಟಗಾರ ಮಯಂಕ್ ಚಕ್ರವರ್ತಿ ಅವರು ಸ್ಟಾಕ್‌ಹೋಮ್ ಚೆಸ್ ಟೂರ್ನಿಯಲ್ಲಿ ತಮ್ಮ ಮೂರನೇ ಹಾಗೂ ಅಂತಿಮ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಪಡೆದರು. ಆ ಮೂಲಕ ದೇಶದ 94ನೇ ಹಾಗೂ ಈಶಾನ್ಯ ಭಾರತದ ಮೊದಲ ಗ್ರ್ಯಾಂಡ್ ಮಾಸ್ಟರ್ ಎಂಬ ಗೌರವಕ್ಕೆ ಪಾತ್ರರಾದರು.

ಗುವಾಹಟಿಯ 17 ವರ್ಷ ವಯಸ್ಸಿನ ಚಕ್ರವರ್ತಿ 2024ರಲ್ಲಿ ಇಂಟರ್‌ನ್ಯಾಷನಲ್ ಮಾಸ್ಟರ್ ಆಗಿದ್ದರು. ಸ್ವೀಡನ್‌ನ ಹೋಟೆಲ್ ಸ್ಟಾಕ್‌ಹೋಮ್ ನಾರ್ತ್ ಟೂರ್ನಿಯ ಎಂಟನೇ ಸುತ್ತಿನಲ್ಲಿ ಅವರು ಆತಿಥೇಯ ದೇಶದ ಐಎಂ ಫಿಲಿಕ್ ಲಿಂಡ್‌ಗ್ರೆನ್ ಅವರನ್ನು ಸೋಲಿಸಿದರು. ಅದರೊಂದಿಗೆ ಒಟ್ಟು 6.5 ಪಾಯಿಂಟ್ಸ್ ಕಲೆಹಾಕಿದರು. ಅಂತಿಮ ಸುತ್ತಿನಲ್ಲಿ ಅವರು ಇಂಗ್ಲೆಂಡ್‌ನ ಜೊನಾ ಬಿ ವಿಲೊ ಅವರ ಜೊತೆ ಡ್ರಾ ಮಾಡಿಕೊಂಡರು. ಆ ಹಾದಿಯಲ್ಲಿ ಅವರ ರೇಟಿಂಗ್ 2,500 ದಾಟಿತು.

ಫಿಡೆ ನಿಯಮದ ಪ್ರಕಾರ ಒಬ್ಬ ಆಟಗಾರ ಗ್ರ್ಯಾಂಡ್ ಮಾಸ್ಟರ್ ‘ಟೈಟಲ್’ ಪಡೆಯಬೇಕಾದರೆ, ಮೂರು ಜಿಎಂ ನಾರ್ಮ್‌ಗಳ ಜತೆಗೆ 2,500 ಇಎಲ್‌ಒ ಅಂಕ ಗಳಿಸಬೇಕು.

ರಾಷ್ಟ್ರೀಯ ಓಪನ್ ಜಂಪ್ ಸ್ಪರ್ಧೆ ದೇವಕುಮಾರ್, ನಿತ್ಯಾಶ್ರೀಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಪ್ರದೇಶದ ಪೋಲ್‌ವಾಲ್ಟ್ ಅಥ್ಲೀಟ್‌ಗಳಾದ ದೇವಕುಮಾರ್ ಮೀನಾ ಮತ್ತು ಕುಲದೀಪ್ ಕುಮಾರ್ ಅವರು ಶನಿವಾರ ಇಲ್ಲಿ ನಡೆದ ರಾಷ್ಟ್ರೀಯ ಓಪನ್ ಜಂಪ್ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆಯೊಂದಿಗೆ ಕಾಮನ್‌ವೆಲ್ತ್ ಗೇಮ್ಸ್‌ಗೆ ಅರ್ಹತೆ ಗಿಟ್ಟಿಸಿದರು.

ಅಂಜು ಬಾಬಿ ಜಾರ್ಜ್ ಕ್ರೀಡಾ ಪ್ರತಿಷ್ಠಾನದ ಮೈದಾನದಲ್ಲಿ ನಡೆದ ಸ್ಪರ್ಧೆಯ ಮೊದಲ ದಿನದಂದು ಇಬ್ಬರೂ ಸ್ಪರ್ಧಿಗಳು ಅರ್ಹತಾ ಮಟ್ಟ (5.25ಮೀ) ವನ್ನು ಪೂರೈಸಿದರು. ಮುಂಬರುವ ಜುಲೈ–ಆಗಸ್ಟ್‌ನಲ್ಲಿ ಗ್ಲಾಸ್ಗೊದಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯಲಿದೆ.

20 ವರ್ಷದೊಳಗಿನ ಮಹಿಳೆಯರ ವಿಭಾಗದ ಹೈಜಂಪ್‌ನಲ್ಲಿ ಕರ್ನಾಟಕದ ವಿ. ನಿತ್ಯಾಶ್ರಿ ಅವರು ಚಿನ್ನದ ಪದಕ ಜಯಿಸಿದರು.

ಫಲಿತಾಂಶಗಳು: ಪುರುಷರು: ಟ್ರಿಪಲ್ ಜಂಪ್: ಅಬ್ದುಲ್ಲಾ ಅಬೂಬಕ್ಕರ್ (ಐಎಎಫ್; 16.83 ಮೀ)–1, ಪ್ರವೀಣ್ ಚಿತ್ರವೇಲ್ (ತಮಿಳುನಾಡು)–2, ಗೇಲಿ ವೆನಿಸ್ಟರ್ (ತಮಿಳುನಾಡು)–3.

ಪೋಲ್‌ವಾಲ್ಟ್: ದೇವ್ ಮೀನಾ (ಮಧ್ಯಪ್ರದೇಶ; 5.25ಮೀ)–1, ಕುಲದೀಪ್ ಕುಮಾರ್ (ಮಧ್ಯಪ್ರದೇಶ)–2, ಎಂ. ಗೌತಮ್ –3

ಹೈಜಂಪ್: ಸರ್ವೇಶ್ ಖುಶಾರೆ (ಮಹಾರಾಷ್ಟ್ರ; 2.16 ಮೀ)–1, ಆದಿತ್ಯ ರಘುವಂಶಿ(ಮಧ್ಯಪ್ರದೇಶ)–2, ಸ್ವಾಧೀನ್ ಕೆಆರ್ ಮಝಿ (ಒಡಿಶಾ)–3

21 ವರ್ಷದೊಳಗಿನವರು: ಹೈಜಂಪ್: ಬಸಂತ್ (ರಾಜಸ್ಥಾನ– 2.14ಮೀ)–1, ಎನ್. ಶ್ರೀವತ್ಸನ್ (ತಮಿಳನಾಡು)–2, ಆಫ್ರೋಜ್ ಅಹಮದ್ (ಜಾರ್ಖಂಡ್)–3. ಟ್ರಿಪಲ್ ಜಂಪ್: ಎಂ. ಧನುಷ್ ರಾಜ್ (ಕೇರಳ; 15.08 ಮೀ)–1, ದಕ್ಷ್ ಬಿಷ್ಣೋಯಿ (ಪಂಜಾಬ್)–2, ಜಿ. ಕಾರ್ತಿಕೇಯನ್ (ತಮಿಳುನಾಡು)–3.

18 ವರ್ಷದೊಳಗಿನವರು: ಹೈಜಂಪ್: ದೇವಕ್ ಭೂಷಣ್ (ಕೇರಳ; 2.03 ಮೀ)–1, ಝುಬಿನ್ ಗೊಹೇನ್ (ಜೆಎಸ್‌ಡಬ್ಲ್ಯು)–2, ವೀರೇಂದ್ರ ರಣವಾರೆ (ಮಹಾರಾಷ್ಟ್ರ)–3

ಮಹಿಳೆಯರು: 20 ವರ್ಷದೊಳಗಿನವರು: ಹೈಜಂಪ್: ನಿತ್ಯಶ್ರೀ ವಿ (ಕರ್ನಾಟಕ; 12 ಮೀ)–1, ಪ್ರಮರ್ ಹೇಮಾಂಶಿ ಭೇನ್ (ಗುಜರಾತ್)–2. ಪೋಲ್‌ವಾಲ್ಟ್: ತನು ಯಾದವ್ (ಉತ್ತರಪ್ರದೇಶ; 3.55 ಮೀ)–1, ಪ್ರಿಯದರ್ಶಿನಿ ವೀರಾ (ತಮಿಳುನಾಡು)–2, ಚುಕಿ ಬಿರ್ದಾ (ರಾಜಸ್ಥಾನ)–3.

ದಾಖಲೆ ಜಿಗಿತ: ಲೋಕೇಶ್‌ಗೆ ಸ್ವರ್ಣ

ನವದೆಹಲಿ (ಪಿಟಿಐ): ಭಾರತದ ಯುವ ಅಥ್ಲೀಟ್ ಲೋಕೇಶ್ ಸತ್ಯನಾಥನ್ ಅವರು ಅಮೆರಿಕದ ಅರ್ಕಾನ್ಸಸ್‌ನ ಫಯೆಟ್‌ವಿಲೆಯಲ್ಲಿ ನಡೆದ ಎನ್‌ಸಿಎಎ ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಲಾಂಗ್‌ಜಂಪ್ ಚಿನ್ನ ಗೆಲ್ಲುವ ಮೂಲಕ ತಮ್ಮ ಕ್ರೀಡಾಜೀವನದ ಪ್ರಮುಖ ಮೈಲಿಗಲ್ಲು ಸಾಧಿಸಿದರು.

ಅವರು ಶುಕ್ರವಾರ ನಡೆದ ಕೂಟದಲ್ಲಿ 8.21 ಮೀ. ಜಿಗಿಯುವ ಮೂಲಕ ಹೊಸ ದಾಖಲೆ ಸ್ಥಾಪಿಸಿದರು. ದೇಶದ ಸಾರ್ವಕಾಲಿಕ ಲಾಂಗ್‌ಜಂಪ್ ಅಥ್ಲೀಟುಗಳ ಸಾಲಿನಲ್ಲಿ ಮೂರನೇ ಸ್ಥಾನಕ್ಕೇರಿದರು. ಜೆಸ್ವಿನ್ ಆಲ್ಡ್ರಿನ್ (8.42 ಮೀ) ಮತ್ತು ಮುರಳಿ ಶ್ರೀಶಂಕರ್ (8.41 ಮೀ.) ಮಾತ್ರ ಅವರಿಗಿಂತ ಹೆಚ್ಚು ದೂರ ಜಿಗಿದಿದ್ದಾರೆ.

ಟಾರ್ಲಟನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಲೋಕೇಶ್ ಫೈನಲ್‌ನ ನಾಲ್ಕನೇ ಯತ್ನದಲ್ಲಿ 8.21 ಮೀ. ಜಿಗಿದು ನೂತನ ದಾಖಲೆ (ಒಳಾಂಗಣ) ಸ್ಥಾಪಿಸಿದರು. ದಕ್ಷಿಣ ಮಿಸಿಸಿಪಿಯ ವಾರ್ಡ್ ವಿಶ್ವವಿದ್ಯಾಲಯದ ಡಿ‘ ಆಂಡ್ರೆ (8.20 ಮೀ.) ಎರಡನೇ ಸ್ಥಾನಕ್ಕೆ ಸರಿದರೆ, ಕನ್ಸಾಸ್ ಸ್ಟೇಟ್ ವಿಶ್ವವಿದ್ಯಾಲಯದ ತಫದ್‌ಝ್ವಾ ಚಿಕೊಂಬ (8.15 ಮೀ.) ಮೂರನೇ ಸ್ಥಾನ ಗಳಿಸಿದರು.

ಈ ಕೂಟವನ್ನು ಅಮೆರಿಕದ ನ್ಯಾಷನಲ್ ಕಾಲೇಜಿಯೇಟ್ ಅಥ್ಲೆಟಿಕ್ ಅಸೋಸಿಯೇಷನ್ (ಎನ್‌ಸಿಎಎ) ಆಯೋಜಿಸುತ್ತದೆ.

‘ನಾನು ದೇವರಿಗೆ ಕೃತಜ್ಞ. ನನಗೆ ಬೆಂಬಲವಾಗಿರುವ ಬೆಂಗಳೂರಿನಲ್ಲಿರುವ ನನ್ನ ಕುಟುಂಬಕ್ಕೆ, ಇಲ್ಲಿ ನನ್ನ ಕುಟುಂಬವೇ ಆಗಿರುವ ಕೋಚ್‌ಗೂ ಧನ್ಯವಾದ ಸಲ್ಲಿಸುತ್ತೇನೆ’ ಎಂದು ಅವರು ಹೇಳಿದರು.